ಶನಿವಾರ, ಸೆಪ್ಟೆಂಬರ್ 25, 2021 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರತಿಭಟನೆ
ಅಸ್ಸಾಂನ ದರ್‍ರಾಂಗ್ ಜಿಲ್ಲೆಯಲ್ಲಿ ಗುರುವಾರ ನಡೆದ ಹಿಂಸಾಚಾರವನ್ನು ವಿರೋಧಿಸಿ ನವದೆಹಲಿಯ ಅಸ್ಸಾಂ ಭವನದ ಎದುರು ಪ್ರತಿಭಟನೆ ನಡೆಸಿದ ಮಹಿಳೆಯೊಬ್ಬರನ್ನು ಪೊಲೀಸರು ತಡೆದರು

TATA

ಭಾರತದ ಮೊಟ್ಟಮೊದಲ:
- ಸಮಗ್ರ ಸ್ಟೀಲ್ ಕಂಪನಿ
- ವಾಣಿಜ್ಯ ವಿಮಾನಯಾನ
- ಸಾಫ್ಟ್‌ವೇರ್ ಸರ್ವಿಸಸ್ ಕಂಪನಿ
- ಐಯೋಡೈಸ್ ಮಾಡಿದ ಬ್ರಾಂಡೆಡ್ ಉಪ್ಪು
- ಸ್ಥಳೀಯವಾಗಿ ವಿನ್ಯಾಸಗೊಂಡು ತಯಾರಾದ ಸ್ವದೇಶಿ ಕಾರ್...

bigbasket
ಆನ್‌ಲೈನ್ ದಿನಸಿಯಲ್ಲಿ
ಭಾರತದಲ್ಲೇ ಪ್ರವರ್ತಕರು

ಬಿಗ್‌ಬಾಸ್ಕೆಟ್ ಈಗ ಟಾಟಾ ಗ್ರೂಪಿನ ಒಂದು ಭಾಗ

ಪ್ರವರ್ತಕರ
ಡಿಎನ್‌ಎ

bb bigbasket
A TATA Enterprise

P 8267

ಅಕ್ಷಯ್ ಸಿಂಹಗೆ 77ನೇ ರ‍್ಯಾಂಕ್

ಯುಪಿಎಸ್‌ಸಿ: ಫಲಿತಾಂಶ ಪ್ರಕಟ
ಶುಭಂ, ಜಾಗೃತಿ, ಅಂಕಿತಾ ಟಾಪರ್ಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ)ದ 2020ನೇ ಸಾಲಿನ ನಾಗರಿಕ ಸೇವೆಗಳ ನೇಮಕಾತಿ ಪರೀಕ್ಷೆಯ ಫಲಿತಾಂಶ ಶುಕ್ರವಾರ ಪ್ರಕಟವಾಗಿದೆ.

ಎಂಜಿನಿಯರಿಂಗ್ ಪದವೀಧರರಾದ ಶುಭಂ ಕುಮಾರ್, ಜಾಗೃತಿ ಅವಸ್ಥಿ ಹಾಗೂ ಅಂಕಿತಾ ಜೈನ್ ಅವರು ಕ್ರಮವಾಗಿ ಮೊದಲ ಮೂರು ರ‍್ಯಾಂಕ್‌ಗಳನ್ನು ಪಡೆದಿದ್ದಾರೆ.

ಬಾಂಬೆ ಐಐಟಿಯಿಂದ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಶುಭಂ ಐಚ್ಛಿಕ ವಿಷಯವನ್ನಾಗಿ ಮಾನವ ಶಾಸ್ತ್ರವನ್ನೂ, ಭೋಪಾಲದ ಮೌಲಾನಾ ಆಝಾದ್ ರಾಷ್ಟ್ರೀಯ ತಂತ್ರಜ್ಞಾನ ಸಂಸ್ಥೆಯಿಂದ ಎಲೆಕ್ಟ್ರಿಕಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಜಾಗೃತಿ, ಸಮಾಜಶಾಸ್ತ್ರವನ್ನು ಐಚ್ಛಿಕ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದರು.

545 ಪುರುಷರು ಮತ್ತು 216 ಮಹಿಳೆಯರು ಸೇರಿದಂತೆ ಒಟ್ಟು 761 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ವಿವಿಧ ನಾಗರಿಕ ಸೇವೆಗಳಿಗೆ ಸೇರ್ಪಡೆ ಆಗಲಿದ್ದಾರೆ. ಅಭ್ಯರ್ಥಿಗಳು ಪಡೆದ ಅಂಕಗಳ ಪಟ್ಟಿಯನ್ನು 15 ದಿನಗಳೊಳಗೆ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು ಎಂದು ಯುಪಿಎಸ್‌ಸಿ ಪ್ರಕಟಣೆ ತಿಳಿಸಿದೆ.

ಪ್ರಜಾವಾಣಿ ಸೆಲೆಬ್ರಿಟಿ LIVE
ಯುಪಿಎಸ್‌ಸಿ ಪರೀಕ್ಷೆಯ ರ‍್ಯಾಂಕ್ ವಿಜೇತರ ಜತೆ ಮುಖಾಮುಖಿ
- ಅಕ್ಷಯ್ ಸಿಂಹ ಕೆ.ಜೆ.– 77 ರ‍್ಯಾಂಕ್
- ಅನಿರುದ್ಧ ಜಿ ಗಂಗಾವರಂ–252 ರ‍್ಯಾಂಕ್

ಇಂದು ಮಧ್ಯಾಹ್ನ 2 ಗಂಟೆಗೆ ಫೇಸ್‌ಬುಕ್‌ನಲ್ಲಿ ನೇರ ಪ್ರಸಾರ
Fb.com/prajavani.net

ಯುಪಿಎಸ್‌ಸಿ: ತರಬೇತಿ ಕೇಂದ್ರಗಳಿಗೆ ಉತ್ತಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ 2020ನೇ ಸಾಲಿನ ನಾಗರಿಕ ಸೇವೆಗಳ ನೇಮಕಾತಿ ಪರೀಕ್ಷೆಯಲ್ಲಿ ನಗರದ ವಿವಿಧ ತರಬೇತಿ ಕೇಂದ್ರಗಳ ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ.

ಚಂದ್ರಾ ಲೇಔಟ್‌ನಲ್ಲಿರುವ 'ಇಂಡಿಯಾ 4 ಐಎಎಸ್'ಯಿಂದ ತರಬೇತಿ ಪಡೆದ ರಾಜ್ಯದ 24 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ ಎಂದು ಸಂಸ್ಥೆಯ ಪ್ರಕಟಣೆ ತಿಳಿಸಿದೆ.

ಇಲ್ಲಿನ ವಿಜಯನಗರದ 'ಯುನಿವರ್ಸಲ್ ಕೋಚಿಂಗ್ ಸೆಂಟರ್'ನಲ್ಲಿ ತರಬೇತಿ ಪಡೆದ 22 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ ಎಂದು ಕೇಂದ್ರದ ಆರ್. ಉಪೇಂದ್ರ ಶೆಟ್ಟಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಡಾ. ರಾಜಕುಮಾರ ಅಕಾಡೆಮಿಯಲ್ಲಿ ತರಬೇತಿ ಪಡೆದ ಒಂಬತ್ತು ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗ ನಡೆಸಿದ 2020ನೇ ಸಾಲಿನ ಕೇಂದ್ರ ನಾಗರಿಕ ಸೇವಾ (ಐಎಎಸ್) ಮುಖ್ಯ ಪರೀಕ್ಷೆಯ ಫಲಿತಾಂಶ ಪ್ರಕಟಗೊಂಡಿದ್ದು, 77ನೇ ರ‍್ಯಾಂಕ್ ಪಡೆದಿರುವ ಬೆಂಗಳೂರಿನ ಕೆ.ಜೆ. ಅಕ್ಷಯ್ ಸಿಂಹ ರಾಜ್ಯಕ್ಕೆ ಮೊದಲಿಗರಾಗಿದ್ದಾರೆ.

ಯತೀಶ್–115, ಪ್ರಿಯಾಂಕ ಕೆ.ಎಂ.–121, ನಿಶ್ಚಯ್ ಪ್ರಸಾದ್ –130, ಸಿರಿವೆನ್ನೆಲ–204, ಅನಿರುದ್ಧ ಜಿ ಗಂಗಾವರಂ – 252, ಡಿ. ಸೂರಜ್ – 255, ನೇತ್ರಾ ಮೇಟಿ – 326, ಮೇಘ ಜೈನ್–354, ಪ್ರಜ್ವಲ್–376, ಸಾಗರ್ ಎ ವಾಡಿ–385, ಅರ್ಜುನ್ ಜಿ.ಎಸ್.–452, ನಾಗರಗೋಜೆ ಶುಭಂ ಬಾಬುಸಾಹೇಬ್–453, ಬಿಂದುಮಣಿ–468, ಮಾಲಾಶ್ರೀ–504, ರಾಘವೇಂದ್ರ ಎನ್–555, ಶಾಕೀರಅಹ್ಮದ್– 583, ಪ್ರಮೋದ್ ಆರಾಧ್ಯ ಎಚ್.ಆರ್. –601, ಧರ್ಮವೀರ್ –657, ಕೆ.ಸೌರಭ್– 725, ಸಂದೀಪ್ ಪಿ.ಎಸ್–741, ವೈಶಾಖ್ ಭಾಗಿ–744, ಸಂತೋಷ್ ಎಚ್–751, ಅಮೃತ್ಎ ಚ್.ವಿ–752ನೇ ರ‍್ಯಾಂಕ್ ಪಡೆದಿದ್ದಾರೆ.

'ಪ್ರಜಾವಾಣಿ' ಜೊತೆ ಮಾತನಾಡಿದ ಅಕ್ಷಯ್ ಸಿಂಹ, 'ಮುಖ್ಯ ಪರೀಕ್ಷೆ ಚೆನ್ನಾಗಿ ಬರೆದಿದ್ದೆ. ಸಂದರ್ಶನವೂ ಚೆನ್ನಾಗಿಯೇ ಆಗಿತ್ತು. ಆದರೆ 77ನೇ ರ‍್ಯಾಂಕ್ ಗಳಿಸಬಹುದೆಂಬ ನಿರೀಕ್ಷೆ ಇರಲಿಲ್ಲ' ಎಂದರು.

'ಭಾರತೀಯ ವಿದೇಶಾಂಗ ಸೇವೆಗೆ (ಐಎಫ್‌ಎಸ್) ಸೇರುವ ಗುರಿ ಇದೆ. ಅದಕ್ಕೆ ಮೊದಲ ಆದ್ಯತೆ ನೀಡಿದ್ದೇನೆ. ಎಲ್ಲರೂ ಐಎಎಸ್‌ಗೆ ಪ್ರಾಧಾನ್ಯತೆ ನೀಡುವುದರಿಂದ ನನಗೆ ಐಎಫ್‌ಎಸ್ ಸಿಗಬಹುದೆಂಬ ನಿರೀಕ್ಷೆ ಇದೆ. ವಿದೇಶಗಳಲ್ಲಿ ನಡೆಯುವ ವಿವಿಧ ಕಾರ್ಯಕ್ರಮಗಳು, ಸಮ್ಮೇಳನಗಳಲ್ಲಿ ಭಾರತವನ್ನು ಪ್ರತಿನಿಧಿಸುವುದು ಹೆಮ್ಮೆಯ ವಿಷಯ. ಹೀಗಾಗಿ ಐಎಫ್‌ಎಸ್‌ನತ್ತ ಒಲವು ಹೊಂದಿದ್ದೇನೆ' ಎಂದರು.

'2018ರಿಂದಲೇ ಸಿದ್ಧತೆ ಆರಂಭಿಸಿದ್ದೆ. ಈ ಸಾಧನೆಯ ಶ್ರೇಯ ದೊಡ್ಡಪ್ಪ ಸತ್ಯನಾರಾಯಣ ಅವರಿಗೆ ಸಲ್ಲಬೇಕು. ಆದಾಯ ತೆರಿಗೆ ಇಲಾಖೆಯಲ್ಲಿ ಪ್ರಧಾನ ಮುಖ್ಯ ಆಯುಕ್ತರಾಗಿ ಕೆಲಸ ಮಾಡಿ ನಿವೃತ್ತರಾಗಿರುವ ಅವರು ಪ್ರತಿ ಹಂತದಲ್ಲೂ ಸಲಹೆ, ಮಾರ್ಗದರ್ಶನ ನೀಡಿದ್ದರು. ಇನ್‌ಸೈಟ್ ಅಕಾಡೆಮಿಯ ವಿನಯ್‌ಕುಮಾರ್, ವೆಂಕಟೇಶಪ್ಪ ಅವರ ಸಹಕಾರವನ್ನೂ ಮರೆಯುವಂತಿಲ್ಲ' ಎಂದು ಹೇಳಿದರು.

'ಕೋವಿಡ್, ಭಯೋತ್ಪಾದಕತೆ ಹೀಗೆ ನಾನಾ ಸಮಸ್ಯೆಗಳು ಈಗ ಕಾಡುತ್ತಿವೆ. ಇವುಗಳ ವಿರುದ್ಧ ಎಲ್ಲಾ ದೇಶಗಳೂ ಒಗ್ಗಟ್ಟಾಗಿ ಹೋರಾಡಬೇಕು. ಮುಂದೆ ಏನು ಮಾಡಬಹುದು ಎಂಬುದರ ಬಗ್ಗೆ ಹೆಚ್ಚು ಆಲೋಚಿಸಿಲ್ಲ. ಬೇರೆ ಬೇರೆ ದೇಶಗಳಿಗೆ ಭೇಟಿ ನೀಡಿ ಅವರಿಂದ ಹೊಸ ವಿಚಾರಗಳನ್ನು ಕಲಿಯಬೇಕಿದೆ' ಎಂದರು. ಅಕ್ಷಯ್ ಸಿಂಹ ಅವರು ಜಯಸಿಂಹ ಹಾಗೂ ಉಷಾ ದಂಪತಿಯ ಮಗ. ನಗರದ ಸಜ್ಜನ ರಾವ್ ವೃತ್ತದ ಬಳಿಯ ವಾಸವಿದ್ದಾರೆ.

ಕೆ.ಜೆ. ಅಕ್ಷಯ್ ಸಿಂಹ

ಕೆ. ಸೌರಭ್

ಪ್ರಮೋದ್ ಆರಾಧ್ಯ


ಧರ್ಮವೀರ್

'ಎಲ್ಲೂ ತರಬೇತಿ ಪಡೆದಿಲ್ಲ'

ಮೈಸೂರಿನ ಜೆಸಿಇ ಎಂಜಿನಿಯರಿಂಗ್ ಕಾಲೇಜಿನಲ್ಲಿ 2019ರಲ್ಲಿ ಎಂಜಿನಿಯರಿಂಗ್ ಮುಗಿಸಿದ್ದೆ. ಆ ಬಾರಿ, ಯುಪಿಎಸ್‌ಸಿ ಪರೀಕ್ಷೆ ಬರೆದಿದ್ದರೂ ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ, ಐಎಎಸ್ ಮಾಡಬೇಕು ಎಂದು ಅಂದುಕೊಂಡಿದ್ದೆ. ಹೀಗಾಗಿ ಈ ಬಾರಿ (2020) ಪರೀಕ್ಷೆಯನ್ನು ಗಂಭೀರವಾಗಿ ತೆಗೆದುಕೊಂಡು ಓದಿದೆ. ಆದರೆ, ಪರೀಕ್ಷೆಗೆಂದು ಎಲ್ಲೂ ತರಬೇತಿ ಪಡೆದುಕೊಂಡಿಲ್ಲ. ತರಬೇತಿ ಕೇಂದ್ರಗಳಲ್ಲಿ ಐಎಎಸ್ ಅಣಕು ಪರೀಕ್ಷೆಗಳಿಗೆ ಹಾಜರಾಗಿದ್ದೆ. ತಂದೆ ಪ್ರಸಾದ್ ಅವರು ಗುತ್ತಿಗೆದಾರ. ತಾಯಿ ಗಾಯತ್ರಿ ವೈದ್ಯೆ. ಪೋಷಕರ ಸಹಕಾರ, ಮಾರ್ಗದರ್ಶನದಿಂದ ಯಶಸ್ಸು ಸಾಧಿಸಲು ಸಾಧ್ಯವಾಗಿದೆ.

ನಿಶ್ಚಯ್, 130ನೇ ರ‍್ಯಾಂಕ್, ರಾಮಕೃಷ್ಣ ನಗರ, ಮೈಸೂರು.

'ಈ ಬಾರಿ ನಿರೀಕ್ಷೆ ಇತ್ತು'

'ಈ ಹಿಂದೆ ಎರಡು ಬಾರಿ ಪ್ರಯತ್ನಿಸಿದ್ದೆ. ಆದರೆ, ಮೂರನೇ ಯತ್ನದಲ್ಲಿ ಯಶಸ್ಸು ಕಂಡಿದ್ದೇನೆ. ಈ ಬಾರಿ ಐಎಎಸ್ ಪಾಸ್ ಮಾಡಲೇಬೇಕು ಎಂಬ ಗುರಿಯಿಂದ ಅಧ್ಯಯನ ಮಾಡಿದ್ದೆ. ಹೀಗಾಗಿ ನಿರೀಕ್ಷೆಯೂ ಇತ್ತು. ಶಂಕರ್ ಅಕಾಡೆಮಿಯಲ್ಲಿ ತರಬೇತಿ ಪಡೆದಿದ್ದೆ. ಎಲ್ಲ ಪರೀಕ್ಷೆಗಳಿಗೆ ಓದುವಂತೆ ಯುಪಿಎಸ್‌ಸಿ ಪರೀಕ್ಷೆಗೂ ಓದಿದ್ದೆ. ತಂದೆ ವಿ.ಎಸ್. ದಿಲೀಪ್‌ಕುಮಾರ್ ಅವರು ಪೊಲೀಸ್ ಇಲಾಖೆಯಲ್ಲಿದ್ದು, ತಾಯಿ ಎಚ್.ಎಲ್. ಮೈಥಿಲಿ ಕೇಂದ್ರ ಸರ್ಕಾರದ ಉದ್ಯೋಗಿ.

ಡಿ. ಸೂರಜ್, 255ನೇ ರ‍್ಯಾಂಕ್, ಗಿರಿನಗರ, ಬೆಂಗಳೂರು

'ಎರಡನೇ ಪ್ರಯತ್ನದಲ್ಲಿ ಯಶ'

ಪೋಷಕರು ಉದ್ಯಮಿಗಳಾಗಿದ್ದು, ಬಿಬಿಎ(ಆಡಳಿತ ವ್ಯವಹಾರ) ಪದವಿ ಪಡೆದಿದ್ದೇನೆ. ದಿನಕ್ಕೆ ಆರು ಗಂಟೆ ಮಾತ್ರ ಶ್ರದ್ಧೆಯಿಂದ ಓದುತ್ತಿದ್ದೆ. ಅದಕ್ಕೆ ಫಲ ಸಿಕ್ಕಿದೆ. ಎರಡನೇ ಪ್ರಯತ್ನದಲ್ಲಿ ಆಯ್ಕೆ ಆಗಿರುವುದು ಸಂಸತ ತಂದಿದೆ. ಇನ್‌ಸೈಟ್ ಅಕಾಡೆಮಿ ತರಬೇತಿ ಸಹಾಯ ಮಾಡಿತು.

ಅನಿರುದ್ಧ ಜಿ. ಗಂಗಾವರಂ, 252ನೇ ರ‍್ಯಾಂಕ್, ಬೆಂಗಳೂರು

'ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ನೆರವಾಯಿತು'

'ಆಡಳಿತದಲ್ಲಿ ತಂತ್ರಜ್ಞಾನ ಮತ್ತು ಭ್ರಷ್ಟಾಚಾರ ರಹಿತ ಆಡಳಿತ ನೀಡಬೇಕು ಎಂಬುದು ನನ್ನ ಮೊದಲ ಆದ್ಯತೆ. ಪರಿಸರ ಮತ್ತು ಮಹಿಳಾ ಪರ ಧ್ವನಿಯಾಗಬೇಕು ಎಂಬುದು ನನ್ನ ಹಂಬಲವಾಗಿದೆ. 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕೆಗಳ ಸಂಪಾದಯಕೀಯ ಪ್ರಚಲಿತ ವಿದ್ಯಾಮಾನ ವಿಭಾಗಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ ಉತ್ತರಿಸಲು ನನಗೆ ಹೆಚ್ಚಿನ ನೆರವಾಯಿತು'

'ಯುಪಿಎಸ್‌ಸಿ ಪರೀಕ್ಷೆಗಾಗಿ ಐದು ವರ್ಷಗಳಿಂದ ಸಿದ್ಧತೆ ನಡೆಸಿದ್ದೆ. ಹೋದ ವರ್ಷ ಸಂದರ್ಶನದವರೆಗೂ ಹೋಗಿ ಬಂದಿರುವೆ. ಬೆಂಗಳೂರಿನ ಎರಡು ಸಂಸ್ಥೆಗಳಲ್ಲಿ ಆನ್‌ಲೈನ್ ತರಬೇತಿ ಪಡೆದುಕೊಂಡಿರುವೆ. ಯುಪಿಎಸ್‌ಸಿ ರ‍್ಯಾಂಕಿಂಗ್ ಪ್ರಕಾರ ನನಗೆ ಐಎಎಸ್ ಅಥವಾ ಐಎಫ್‌ಎಸ್(ಭಾರತೀಯ ವಿದೇಶಾಂಗ ಸೇವೆ) ಹುದ್ದೆ ಲಭಿಸುವ ಸಾಧ್ಯತೆ ಇದೆ. ತಂದೆ ಎಸ್‌ಬಿಐ ನಿವೃತ್ತ ಉದ್ಯೋಗಿ ಬಾಲಚಂದ್ರ ಮೇಟಿ. ತಾಯಿ ಅಕ್ಕಮ್ಮ ಮೇಟಿ'

ನೇತ್ರಾ ಮೇಟಿ, 326ನೇ ರ‍್ಯಾಂಕ್, ಆಲಮಟ್ಟಿ, ವಿಜಯಪುರ

'ಪರಿಶ್ರಮಕ್ಕೆ ಫಲ ಸಿಕ್ಕಿದೆ'

'ಮುಖ್ಯ ಪರೀಕ್ಷೆ ಹಾಗೂ ಸಂದರ್ಶನ ಚೆನ್ನಾಗಿ ಆಗಿತ್ತು. ಮೊದಲ ಪ್ರಯತ್ನದಲ್ಲೇ ರ‍್ಯಾಂಕ್ ಗಳಿಸಿದ್ದು ಖುಷಿ ನೀಡಿದೆ. ಯುಪಿಎಸ್‌ಸಿ ಪರೀಕ್ಷೆಗಾಗಿ 2019ರಿಂದಲೇ ಸಿದ್ಧತೆ ಮಾಡಿಕೊಂಡಿದ್ದೆ. ಬೆಂಗಳೂರಿನ ರಾವ್ ಸರ್ ಬಳಿ ತರಬೇತಿ ಪಡೆದಿದ್ದೆ. ಎರಡು ವರ್ಷಗಳ ಕಠಿಣ ಪರಿಶ್ರಮಕ್ಕೆ ಫಲ ಸಿಕ್ಕಿದೆ'.

'ಅಪ್ಪ ಪೊಲೀಸ್ ಕಾನ್‌ಸ್ಟೆಬಲ್. ಅಮ್ಮ ಗೃಹಿಣಿ. ಈ ಸಾಧನೆಯಲ್ಲಿ ಅವರ ಪಾತ್ರವೂ ಪ್ರಮುಖವಾಗಿದೆ. ಅಗತ್ಯವಿರುವ ಎಲ್ಲಾ ಸಹಕಾರವನ್ನೂ ಅವರು ನೀಡಿದ್ದರು. ಮುಖ್ಯ ಪರೀಕ್ಷೆಯನ್ನೇ ಗಮನದಲ್ಲಿಟ್ಟುಕೊಂಡು ಅಭ್ಯಾಸ ಮಾಡುತ್ತಿದ್ದೆ. ಪೂರ್ವಭಾವಿ ಪರೀಕ್ಷೆ ಸಮೀಪಿಸಿದ್ದಾಗ ಅದಕ್ಕೆ ಸಿದ್ಧತೆ ಕೈಗೊಳ್ಳುವತ್ತ ಚಿತ್ತ ಹರಿಸಿದ್ದೆ. ದಿನಕ್ಕೆ 6ರಿಂದ 8 ಗಂಟೆ ಸಮಯ ಓದುವುದಕ್ಕೆ ಮೀಸಲಿಟ್ಟಿದ್ದೆ'.

'ಆಡಳಿತಾತ್ಮಕ ಸೇವೆಗೆ ಸೇರುವ ಆಸೆ ಇದೆ. ಐಎಎಸ್ ಸಿಗುವುದು ಕಷ್ಟ ಅಂದುಕೊಂಡಿದ್ದೇನೆ. ಬೇರೆ ಯಾವುದೇ ಹುದ್ದೆ ಸಿಕ್ಕಿದರೂ ನಿಭಾಯಿಸುತ್ತೇನೆ'

ಆರ್.ಎನ್.ಬಿಂದು ಮಣಿ, 468 ರ‍್ಯಾಂಕ್ ಪಡೆದ ಅಭ್ಯರ್ಥಿ

'ಹಲವು ಬಾರಿ ಪ್ರಯತ್ನ ನೆರವಾಯಿತು'

'ಪೋಷಕರ ಪ್ರೋತ್ಸಾಹ ಮತ್ತು ತ್ಯಾಗ ಹಾಗೂ ಗುರುಗಳ ಮಾರ್ಗದರ್ಶನದಿಂದ ಈ ಸಾಧನೆ ಸಾಧ್ಯವಾಗಿದೆ. ಎಂಎನ್‌ಸಿ ಕಂಪನಿಯಲ್ಲಿ ಕೆಲಸ ಸಿಕ್ಕಿತ್ತು. ಆದರೆ, ಸರ್ಕಾರಿ ಸೇವೆಗೆ ಸೇರಬೇಕು ಮತ್ತು ಜನರಿಗೆ ಅನುಕೂಲ ಮಾಡಿಕೊಡಬೇಕು ಎಂಬ ಬಯಕೆ ಇತ್ತು. ಹೀಗಾಗಿ, ಆ ಕೆಲಸ ಬಿಟ್ಟು ಕೆಪಿಎಸ್‌ಸಿ ಮತ್ತು ಯುಪಿಎಸ್‌ಸಿ ಪರೀಕ್ಷೆಗಳನ್ನು ಎದುರಿಸಿದೆ'

'ಯುಪಿಎಸ್‌ಸಿಯಲ್ಲಿ ಹಲವು ಬಾರಿ ಪ್ರಯತ್ನ ಮಾಡಿದ್ದೇನೆ. ಆದರೆ, ಧೃತಿಗೆಡಲಿಲ್ಲ. ಸತತ ಪ್ರಯತ್ನ ಮಾಡಿದ್ದರಿಂದ ಸಾಧನೆ ಮಾಡಲು ಸಾಧ್ಯವಾಯಿತು. ಕೆಎಎಸ್ ಅಧಿಕಾರಿಯಾಗಿ ಕೆಲಸದ ನಡುವೆಯೂ ಯುಪಿಎಸ್‌ಸಿ ಪರೀಕ್ಷೆಗೆ ಪ್ರಯತ್ನ ಮುಂದುವರಿಸಿದ್ದೆ. ಹಲವು ಬಾರಿ ಪ್ರಯತ್ನದಿಂದ ನೆರವಾಯಿತು. ಹಿಂದೆ ಮಾಡಿದ ತಪ್ಪುಗಳನ್ನು ಸರಿಪಡಿಸಿಕೊಳ್ಳುತ್ತಾ ಸುಧಾರಿಸಿಕೊಂಡೆ. ಆರಂಭದಲ್ಲಿ ಮಾತ್ರ ದೆಹಲಿಯಲ್ಲಿ ಕೋಚಿಂಗ್ ಪಡೆದಿದ್ದೆ. ಬಳಿಕ ಅನುಭವಗಳೇ ನನಗೆ ಕಲಿಸಿದವು'.

ಶಾಕೀರಅಹ್ಮದ್, 583ನೇ ರ‍್ಯಾಂಕ್, ಸವದತ್ತಿ, ಬೆಳಗಾವಿ

'ವಿಧಾನಮಂಡಲದ ಪಾವಿತ್ರ್ಯಕ್ಕೆ ಧಕ್ಕೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿಧಾನಸಭೆಯ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ ಅವರಿಂದ ಜಂಟಿ ಅಧಿವೇಶನದಲ್ಲಿ ಭಾಷಣ ಮಾಡಿಸುವ ಮೂಲಕ ರಾಜ್ಯದ ವಿಧಾನಮಂಡಲದ ಪಾವಿತ್ರ್ಯತೆಗೆ ಧಕ್ಕೆ ತಂದಿದ್ದಾರೆ' ಎಂದು ಕರ್ನಾಟಕ ನವನಿರ್ಮಾಣ ಸೇನೆ ಅಧ್ಯಕ್ಷ ಭೀಮಾಶಂಕರ ಪಾಟೀಲ ಆರೋಪಿಸಿದ್ದಾರೆ.

'ಶುಕ್ರವಾರ ನಡೆದ ಕಾರ್ಯಕ್ರಮದ ವೇಳೆ ಲೋಕಸಭೆ ಸ್ಪೀಕರ್ ಅವರ ಅಂಗರಕ್ಷಕರು, ಆಪ್ತ ಸಹಾಯಕರು, ಛಾಯಾಗ್ರಾಹಕರೂ ವಿಧಾನಸಭೆಯ ಒಳಕ್ಕೆ ಪ್ರವೇಶಿಸಿದ್ದರು. ವಿಧಾನಸಭೆಯ ನಿಯಮಾವಳಿಗಳನ್ನು ಗಾಳಿಗೆ ತೂರಿ ವರ್ತಿಸಿದ್ದಾರೆ. ಇದು ರಾಜ್ಯದ ವಿಧಾನಮಂಡಲದ ಮೇಲೆ ದೆಹಲಿ ದೊರೆಗಳಿಂದ ನಡೆದ ದಾಳಿ. ಇದಕ್ಕಾಗಿ ವಿಧಾನಸಭೆಯ ಅಧ್ಯಕ್ಷರು ಕ್ಷಮೆ ಯಾಚಿಸಬೇಕು' ಎಂದು ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಅಕ್ರಮ ಬಡಾವಣೆ: ಸಚಿವರ ಭಿನ್ನ ನಿಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಅಕ್ರಮ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸುವುದಿಲ್ಲ ಎಂದು ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಹೇಳಿದರೆ, ನಗರ ಸ್ಥಳೀಯ ಸಂಸ್ಥೆಗಳ ಅಕ್ರಮ ಬಡಾವಣೆಗಳಿಗೆ ಮೂಲಸೌಕರ್ಯ ಒದಗಿಸಲಾಗುತ್ತದೆ ಎಂದು ಎಂಟಿಬಿ ನಾಗರಾಜ್ ಹೇಳಿದರು.

ಇಬ್ಬರು ಸಚಿವರ ಹೇಳಿಕೆಗಳು ಸದಸ್ಯರ ತೀವ್ರ ಆಕ್ರೋಶಕ್ಕೆ ಕಾರಣವಾಯಿತು. 'ಈ ಎರಡು ಇಲಾಖೆಗಳು ಸರ್ಕಾರದ ಒಳಗೆ ಇವೆಯೋ ಇಲ್ಲವೇ. ಈ ಸರ್ಕಾರದಲ್ಲಿ ಏನು ನಡೆಯುತ್ತಿದೆ' ಎಂದು ಸದಸ್ಯರು ಪ್ರಶ್ನಿಸಿದರು.

ವಿಧಾನಸಭೆಯಲ್ಲಿ ಶುಕ್ರವಾರ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿಯ ಅಮೃತ್ ದೇಸಾಯಿ ಪ್ರಶ್ನೆಗೆ ಉತ್ತರಿಸಿದ ಬೈರತಿ ಬಸವರಾಜ, 'ಅಕ್ರಮ ಬಡಾವಣೆಗಳಿಗೆ ವಿದ್ಯುತ್ ಸಂಪರ್ಕ, ನೀರು ಸರಬರಾಜು ಹಾಗೂ ಇನ್ನಿತರ ಮೂಲಸೌಕರ್ಯ ಒದಗಿಸಬಾರದು ಎಂದು ಸೂಚಿಸಲಾಗಿದೆ' ಎಂದರು.

ಜೆಡಿಎಸ್‌ನ ಎ.ಟಿ.ರಾಮಸ್ವಾಮಿ, 'ರಾಜ್ಯದಾದ್ಯಂತ ಸಾವಿರಾರು ಅಕ್ರಮ ಬಡಾವಣೆಗಳು ನಿರ್ಮಾಣವಾಗಿವೆ. ಅವುಗಳ ವಿರುದ್ಧ ಕ್ರಮ ಕೈಗೊಂಡಿಲ್ಲ. ಸಚಿವರ ಇಂತಹ ಉತ್ತರ ಕೇಳಲು ನಾವು ಇಲ್ಲಿಗೆ ಬರಬೇಕಾ' ಎಂದು ಪ್ರಶ್ನಿಸಿದರು.

ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, 'ಸ್ಥಳೀಯ ಅಧಿಕಾರಿಗಳು ಸರ್ಕಾರದ ನಿಯಂತ್ರಣಕ್ಕೆ ಸಿಗುತ್ತಿಲ್ಲ. ಅವರು ಸ್ಥಳೀಯರ ಒತ್ತಡಕ್ಕೆ ಮಣಿಯುತ್ತಿದ್ದಾರೆ. ಅಂತಹವರ ವಿರುದ್ಧ ಕ್ರಮ ಕೈಗೊಳ್ಳಬೇಕು' ಎಂದು ಸಲಹೆ ನೀಡಿದರು. ಕಾಂಗ್ರೆಸ್‌ನ ಶಿವಾನಂದ ಪಾಟೀಲ, 'ಬಡಾವಣೆ ನಿರ್ಮಿಸುವವರ ಹಾಗೂ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಿ' ಎಂದು ಆಗ್ರಹಿಸಿದರು.

ಕಾಂಗ್ರೆಸ್‌ನ ರಾಘವೇಂದ್ರ ಹಿಟ್ನಾಳ್ ಪ್ರಶ್ನೆಗೆ ಉತ್ತರಿಸಿದ ಪೌರಾಡಳಿತ ಸಚಿವ ಎಂಟಿಬಿ ನಾಗರಾಜ್, 'ಈ ಬಡಾವಣೆಗಳಿಗೆ ಮೂಲಸೌಕರ್ಯ ನೀಡಲಾಗುತ್ತದೆ. ಆದರೆ, ಫಾರಂ 3 ನೀಡುವುದಿಲ್ಲ. ಅಕ್ರಮ–ಸಕ್ರಮ ಪ್ರಕರಣ ಸುಪ್ರೀಂ ಕೋರ್ಟ್ ಮೆಟ್ಟಿಲೇರಿರುವುದರಿಂದ ಸದ್ಯ ಯಾವುದೇ ತೀರ್ಮಾನ ಕೈಗೊಳ್ಳುವಂತಿಲ್ಲ' ಎಂದರು.

'ಅಕ್ರಮ ಬಡಾವಣೆಗಳಿಂದ ಆಗುವ ಸಮಸ್ಯೆಗಳ ಬಗ್ಗೆ ಸದಸ್ಯರಾದ ಕುಮಾರ ಬಂಗಾರಪ್ಪ, ಶಿವಾನಂದ ಪಾಟೀಲ ಮತ್ತಿತರರು ಗಮನ ಸೆಳೆದರು. ಅಧಿಕಾರಿಗಳ ಧೋರಣೆಯಿಂದಾಗಿ ಜನರು ಮನೆ ನಿರ್ಮಾಣದ ವೇಳೆ ಹಲವು ಬಗೆಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಅಧಿಕಾರಿಗಳ ಪ್ರವೃತ್ತಿಗೆ ಕಡಿವಾಣ ಹಾಕಬೇಕು' ಎಂದು ವಿಶ್ವೇಶ್ವರ ಹೆಗಡೆ ಕಾಗೇರಿ ಸೂಚಿಸಿದರು.

> **ಅಕ್ರಮ ಬಡಾವಣೆಗಳ ಬಗ್ಗೆ ವರದಿ ತರಿಸಿಕೊಂಡು ಕ್ರಮ ಕೈಗೊಳ್ಳಲಾಗುವುದು. ಇದಕ್ಕೆ ಅವಕಾಶ ನೀಡಿದ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವ ಪರಿಶೀಲಿಸಲಾಗುವುದು.**
> **ಬೈರತಿ ಬಸವರಾಜ,** ನಗರಾಭಿವೃದ್ಧಿ ಸಚಿವ

> **ಒಂದೊಂದು ಇಲಾಖೆ ಒಂದೊಂದು ರೀತಿ ತೀರ್ಮಾನ ಕೈಗೊಳ್ಳುತ್ತಿವೆ. ಇಲ್ಲಿ ಏನು ನಡೆಯುತ್ತಿದೆ. ಒಂದೇ ಸರ್ಕಾರದ ಎರಡು ಇಲಾಖೆಗಳು ಈ ರೀತಿ ತೀರ್ಮಾನ ಕೈಗೊಳ್ಳಲು ಸಾಧ್ಯವೇ**
> **ಎ.ಟಿ.ರಾಮಸ್ವಾಮಿ,** ಜೆಡಿಎಸ್ ಸದಸ್ಯ

> **ರಾಜ್ಯದಲ್ಲಿ ಅಕ್ರಮ ಬಡಾವಣೆಗಳು ತಲೆ ಎತ್ತಲು ಕಂದಾಯ ಇಲಾಖೆಯ ಅಧಿಕಾರಿಗಳೇ ಕಾರಣ**
> **ಕುಮಾರ ಬಂಗಾರಪ್ಪ,** ಬಿಜೆಪಿ ಸದಸ್ಯ

> **ಗ್ರಾ.ಪಂ ವ್ಯಾಪ್ತಿಯೊಳಗೆ ಇದ್ದಾಗ ಅಕ್ರಮ ಬಡಾವಣೆಗಳು ನಿರ್ಮಾಣವಾಗಿದ್ದವು. ಗ್ರಾ.ಪಂ.ಗಳು ಮೇಲ್ದರ್ಜೆಗೆ ಏರಿದ್ದರಿಂದ ಇವುಗಳು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಗೆ ಬಂದಿವೆ. ಈಗ ಇವುಗಳ ಸಂಖ್ಯೆ ಕಡಿಮೆಯಾಗಿದೆ**
> **ಎಂಟಿಬಿ ನಾಗರಾಜ್,** ಪೌರಾಡಳಿತ ಸಚಿವ

> **ನಿಮ್ಮ ಅಧಿಕಾರಿಗಳಿಗೆ ಸ್ವಲ್ಪ ಬುದ್ಧಿ ಹೇಳಿ. ಅವರ ಬೇಜವಾಬ್ದಾರಿತನದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುತ್ತಿದೆ. ಅವರಿಗೆ ಸ್ವಲ್ಪವೂ ಜವಾಬ್ದಾರಿ ಬೇಡವೇ**
> **ವಿಶ್ವೇಶ್ವರ ಹೆಗಡೆ ಕಾಗೇರಿ**
> ವಿಧಾನಸಭಾಧ್ಯಕ್ಷ

ಕ್ವಾಡ್ ಸಭೆಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ವಾಷಿಂಗ್ಟನ್‌ನಲ್ಲಿ ಮಾತುಕತೆ ನಡೆಸಿದರು – ರಾಯಿಟರ್ಸ್ ಚಿತ್ರ

ಭಾರತ ಅಮೆರಿಕ ನಂಟು ಬಲವಾಗಲಿ: ಬೈಡನ್

ವಾಷಿಂಗ್ಟನ್ (ಪಿಟಿಐ): 'ಭಾರತದ ಜತೆಗೆ ನಮ್ಮ ದ್ವಿಪಕ್ಷೀಯ ಸಂಬಂಧವನ್ನು ಬಲಪಡಿಸಲು ಎದುರು ನೋಡುತ್ತಿದ್ದೇವೆ' ಎಂದು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಹೇಳಿದ್ದಾರೆ.

ಕ್ವಾಡ್ ಸಭೆಗೂ ಮುನ್ನ ಪ್ರಧಾನಿ ನರೇಂದ್ರ ಮೋದಿ ಮತ್ತು ಬೈಡನ್ ಮಧ್ಯೆ ನಡೆದ ಮಾತುಕತೆಯ ವೇಳೆ ಅವರು ಈ ಮಾತು ಹೇಳಿದ್ದಾರೆ.

'ಎರಡೂ ದೇಶಗಳು ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಗೌರವಿಸುತ್ತವೆ. ಎರಡೂ ದೇಶಗಳ ಸ್ನೇಹ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸುವ ಬೀಜವನ್ನು ಬಿತ್ತಲಾಗಿದೆ. ಈ ಶತಮಾನದ ಮೂರನೇ ದಶಕದ ಆರಂಭದಲ್ಲಿ ನಡೆಯುತ್ತಿರುವ ಈ ದ್ವಿಪಕ್ಷೀಯ ಸಭೆಯು ಮಹತ್ವದ್ದಾಗಿದೆ' ಎಂದು ಮೋದಿ ಹೇಳಿದ್ದಾರೆ.

ಕ್ವಾಡ್ ಸಭೆ: ಕ್ವಾಡ್ ಒಕ್ಕೂಟದ ದೇಶಗಳ ನಡುವೆ ನೂತನ ವಾಣಿಜ್ಯ ಸಹಕಾರ ಮತ್ತು 5ಜಿ ತಂತ್ರಜ್ಞಾನ ಅಳವಡಿಕೆ ಕುರಿತು ಕ್ವಾಡ್ ಒಕ್ಕೂಟದ ನಾಯಕರು ಘೋಷಿಸುವ ಸಾಧ್ಯತೆ ಇದೆ.

ಕ್ವಾಡ್ ಸಭೆಯ ನಂತರ ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಕ್ವಾಡ್ ಒಕ್ಕೂಟದ ಉಳಿದ ಮೂರೂ ದೇಶಗಳ ಪ್ರಧಾನಿಗಳ ಜತೆ ಸಭೆ ನಡೆಸಲಿದ್ದಾರೆ.

ಭಾರತ-ಚೀನಾ ವಾಕ್ಸಮರ

ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಜತೆ ಸಭೆ ನಡೆಸುವ ಕೆಲವೇ ಗಂಟೆಗಳ ಮೊದಲು ಚೀನಾವು ಗಾಲ್ವನ್ ಕಣಿವೆ ಸಂಘರ್ಷದ ಬಗ್ಗೆ ಕಿಡಿಕಾರಿದೆ. ಭಾರತವು ಅದಕ್ಕೆ ತಕ್ಕ ಪ್ರತ್ಯುತ್ತರ ನೀಡಿದೆ.

'ಗಡಿಗೆ ಸಂಬಂಧಿಸಿದಂತೆ ಭಾರತವು ನಮ್ಮೊಂದಿಗೆ ಹಲವು ಒಪ್ಪಂದಗಳನ್ನು ಮಾಡಿಕೊಂಡಿದೆ. ಆದರೆ ಗಾಲ್ವನ್‌ನಲ್ಲಿ ಆ ಒಪ್ಪಂದಗಳನ್ನು ಉಲ್ಲಂಘಿಸಿ, ನಮ್ಮ ನೆಲವನ್ನು ಅತಿಕ್ರಮಿಸಿದ್ದರಿಂದಲೇ ಸಂಘರ್ಷ ನಡೆಯಿತು. ಅಲ್ಲಿ ನಡೆದ ಸೈನಿಕರ ಸಾವುಗಳಿಗೆ ಭಾರತವೇ ಹೊಣೆ' ಎಂದು ಚೀನಾ ಆರೋಪ ಮಾಡಿದೆ.

'ಇಂತಹ ಹೇಳಿಕೆಗಳನ್ನು ನಾವು ಖಡಾಖಂಡಿತವಾಗಿ ತಿರಸ್ಕರಿಸುತ್ತೇವೆ. ಪೂರ್ವ ಲಡಾಖ್‌ನಲ್ಲಿ ಕಳೆದ ವರ್ಷ ನಡೆದ ಬೆಳವಣಿಗೆಗಳ ಬಗ್ಗೆ ನಮ್ಮ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಚೀನಾ ಏಕಪಕ್ಷೀಯವಾಗಿ ಗಡಿಯನ್ನು ಬದಲಿಸಿದ್ದರಿಂದ ಮತ್ತು ನಮ್ಮ ನೆಲವನ್ನು ಅತಿಕ್ರಮಿಸಿ ಪ್ರಚೋದಿಸಿದ ಕಾರಣ ಸಂಘರ್ಷ ನಡೆಯಿತು' ಎಂದು ವಿದೇಶಾಂಗ ಸಚಿವಾಲಯವು ತಿರುಗೇಟು ನೀಡಿದೆ.

ಇನ್ನಷ್ಟು ಸುದ್ದಿಗಳು 10



ದಬ್ಬಾಳಿಕೆಗೆ ಹೆದರಲ್ಲ: ಕ್ವಾಡ್

ವಾಷಿಂಗ್ಟನ್ (ಪಿಟಿಐ): ನಾಲ್ಕು ರಾಷ್ಟ್ರಗಳ 'ಕ್ವಾಡ್' ಗುಂಪಿನ ನಾಯಕರು ವಾಷಿಂಗ್ಟನ್ ಡಿಸಿಯಲ್ಲಿ ಮೊದಲ ಬಾರಿಗೆ ಇಲ್ಲಿ ಶುಕ್ರವಾರ ಖುದ್ದು ಭೇಟಿಯಾಗಿ, ಕೋವಿಡ್ -19ರಿಂದ ಹಿಡಿದು ಹವಾಮಾನ ಬದಲಾವಣೆಯವರೆಗೆ ಜಗತ್ತು ಎದುರಿಸುತ್ತಿರುವ ಪ್ರಮುಖ ಸವಾಲುಗಳ ಬಗ್ಗೆ ಚರ್ಚೆ ನಡೆಸಿದರು.

ಇಂಡೋ-ಪೆಸಿಫಿಕ್ ಪ್ರದೇಶವು ದಬ್ಬಾಳಿಕೆಯಿಂದ ಮುಕ್ತವಾಗಿರಬೇಕು ಎಂದು ಪ್ರತಿಪಾದಿಸಿದ ಕ್ವಾಡ್ ರಾಷ್ಟ್ರಗಳ ನಾಯಕರು, ಪರೋಕ್ಷವಾಗಿ ಚೀನಾಕ್ಕೆ ಎಚ್ಚರಿಕೆ ನೀಡಿದರು.

ಪ್ರಧಾನಿ ನರೇಂದ್ರ ಮೋದಿ, 'ನಮ್ಮ ನಾಲ್ಕು ರಾಷ್ಟ್ರಗಳು 2004 ರ ಸುನಾಮಿಯ ನಂತರ ಇಂಡೋ-ಪೆಸಿಫಿಕ್ ಪ್ರದೇಶಕ್ಕೆ ಸಹಾಯ ಮಾಡಲು ಮೊದಲ ಬಾರಿಗೆ ಭೇಟಿಯಾದವು. ಇಂದು, ಕೋವಿಡ್ -19 ಸಾಂಕ್ರಾಮಿಕ ರೋಗದ ವಿರುದ್ಧ ಜಗತ್ತು ಹೋರಾಡುತ್ತಿರುವಾಗ, ನಾವು ಮತ್ತೊಮ್ಮೆ ಮನುಕುಲದ ಕಲ್ಯಾಣಕ್ಕಾಗಿ ಇಲ್ಲಿ ಸೇರಿದ್ದೇವೆ. ನಮ್ಮ ಕ್ವಾಡ್ ಲಸಿಕೆ ಉಪಕ್ರಮವು ಇಂಡೋ-ಪೆಸಿಫಿಕ್ ದೇಶಗಳಿಗೆ ಹೆಚ್ಚು ಸಹಾಯ ಮಾಡುತ್ತಿದೆ' ಎಂದರು.

ಅಮೆರಿಕ ಅಧ್ಯಕ್ಷ ಜೋ ಬೈಡನ್, 'ಎಲ್ಲ ಸವಾಲುಗಳನ್ನು ಎದುರಿಸಲು ಒಟ್ಟಾಗಿದ್ದೇವೆ. ಇವುಗಳನ್ನು ನಿಭಾಯಿಸುವುದು ನಮಗೆ ತಿಳಿದಿದೆ. ಅಲ್ಲದೇ ನಮಗೆ ಎದುರಾಗುವ ಸವಾಲುಗಳನ್ನು ಮೆಟ್ಟಿ ನಿಲ್ಲುತ್ತೇವೆ' ಎಂದು ಹೇಳಿದರು.

'ಲೋಕಸಭಾಧ್ಯಕ್ಷರಿಗೆ ಅಗೌರವ ಸಲ್ಲದು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾಧ್ಯಕ್ಷರು ಮತ್ತು ಅವರು ಅಲಂಕರಿಸಿರುವ ಪೀಠಕ್ಕೆ ಅಗೌರವ ತೋರಬಾರದು ಎನ್ನುವ ಕಾರಣಕ್ಕೆ ಓಂ ಬಿರ್ಲಾ ಅವರ ಭಾಷಣದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

ಕಾರ್ಯಕ್ರಮದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯದ ಸಂಸದೀಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ವಿಧಾನಸಭಾಧ್ಯಕ್ಷರು ಲೋಕಸಭೆಯ ಸಭಾಧ್ಯಕ್ಷರನ್ನು ಕರೆಸಿದ್ದಾರೆ. ಇಂತಹ ಅಪರೂಪದ ಸಂದರ್ಭದಲ್ಲಿ ಗೈರಾಗುವುದು ಲೋಕಸಭಾಧ್ಯಕ್ಷರ ಪೀಠಕ್ಕೆ ಅಗೌರವ ತೋರಿದಂತೆ. ಆ ರೀತಿ ಆಗುವುದು ಬೇಡ ಮತ್ತು ಸಂಸದೀಯ, ಪ್ರಜಾಪ್ರಭುತ್ವದ ಮೌಲ್ಯ ಎತ್ತಿ ಹಿಡಿಯುವ ಏಕೈಕ ಉದ್ದೇಶದಿಂದ ಕಲಾಪದಲ್ಲಿ ನಮ್ಮ ಪಕ್ಷ ಭಾಗವಹಿಸಿತ್ತು' ಎಂದರು.

'ಕಾಂಗ್ರೆಸ್ ಪಕ್ಷದ ಸದಸ್ಯರು ಕಲಾಪ ಬಹಿಷ್ಕರಿಸಿದ್ದು, ಆ ಪಕ್ಷಕ್ಕೆ ಬಿಟ್ಟ ವಿಚಾರ. ನಮ್ಮ ಪಕ್ಷದ ನಿಲುವನ್ನು ನಾವು ತೆಗೆದುಕೊಂಡಿದ್ದೇವೆ' ಎಂದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹ

ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನಿಷ್ಠ ವೇತನ ನಿಗದಿಪಡಿಸಿ, ಸರ್ಕಾರಿ ನೌಕರರ ಮಾನ್ಯತೆ ನೀಡಬೇಕು' ಎಂಬುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ನಗರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು.

ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘ ಹಾಗೂ ಆಲ್ ಇಂಡಿಯಾ ಯುನೈಟೆಡ್ ಟ್ರೇಡ್ ಯೂನಿಯನ್ ಸೆಂಟರ್ (ಎಐಯುಟಿಯುಸಿ) ಸಹಯೋಗದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ರಾಜ್ಯದ ಹಲವು ಜಿಲ್ಲೆಗಳ ಆಶಾ ಕಾರ್ಯಕರ್ತೆಯರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

'ಕೋವಿಡ್ ಕಾಲದಲ್ಲಿ ಜೀವವನ್ನು ಪಣಕ್ಕಿಟ್ಟು ಕೆಲಸ ಮಾಡುತ್ತಿರುವ ಆಶಾ ಕಾರ್ಯಕರ್ತೆಯರಿಗೆ ಸಾಮಾಜಿಕ ಭದ್ರತೆ ಒದಗಿಸಬೇಕು. ಕನಿಷ್ಠ ವೇತನ ನಿಗದಿಪಡಿಸಿ, ಸರ್ಕಾರಿ ನೌಕರರ ಮಾನ್ಯತೆ ನೀಡಬೇಕು' ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಆಶಾ ಕಾರ್ಯಕರ್ತೆಯರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಸಂಘದ ರಾಜ್ಯ ಘಟಕದ ಕಾರ್ಯದರ್ಶಿ ಡಿ. ನಾಗಲಕ್ಷ್ಮಿ, 'ಕೋವಿಡ್ ಕಾಲದಲ್ಲಿ ಹಲವು ಆಶಾ ಕಾರ್ಯಕರ್ತೆಯರು ಹಾಗೂ ಅವರ ಕುಟುಂಬಕ್ಕೆ ಸೋಂಕು ತಗುಲಿದೆ. ಅವರಿಗೆಲ್ಲ ಚಿಕಿತ್ಸೆ ಸಿಗುವುದೇ ದುಸ್ತರವಾಯಿತು. ಕೆಲವರು ಸೂಕ್ತ ಚಿಕಿತ್ಸೆ ಸಿಗದೇ ಮೃತಪಟ್ಟರು. ಅಂಥವರ ಕುಟುಂಬಗಳು ಇಂದು ಬೀದಿಗೆ ಬಿದ್ದಿವೆ. ಮೃತರ ಕುಟುಂಬಗಳಿಗೆ ಸರ್ಕಾರ ಘೋಷಿಸಿದ್ದ ₹ 50 ಲಕ್ಷ ಇದುವರೆಗೂ ಬಂದಿಲ್ಲ' ಎಂದರು.

ಎಐಯುಟಿಯುಸಿ ಟಿ.ಸಿ. ರಮಾ, 'ಆಶಾ ಕಾರ್ಯಕರ್ತೆಯರಿಗೆ ಸರ್ಕಾರ ಮನ್ನಣೆ ನೀಡಬೇಕು. ಮೂಲ ಸೇವೆಗಳನ್ನು ಬಲಪಡಿಸಲು ಸರ್ಕಾರ ಗಮನ ಹರಿಸಬೇಕು' ಎಂದರು.

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮಳೆಯಿಂದ ರಕ್ಷಣೆ
ನೋಯಿಡಾದಲ್ಲಿ ಶುಕ್ರವಾರ ಭಾರಿ ಮಳೆಯಾಗಿದ್ದು, ವ್ಯಕ್ತಿಯೊಬ್ಬರು ಪ್ಲಾಸ್ಟಿಕ್ ಕವರ್ ರಕ್ಷಣೆ ಮೂಲಕ ಮುಂದೆ ಸಾಗಿದರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ

ಜಲಜೀವನ್ ಮಿಷನ್: 97.91 ಲಕ್ಷ ಮನೆಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಜಲ ಜೀವನ್ ಮಿಷನ್ ಯೋಜನೆ ಅಡಿಯಲ್ಲಿ 2023ರ ಅಂತ್ಯದೊಳಗೆ 97.91 ಲಕ್ಷ ಮನೆಗಳಿಗೆ ಕೊಳವೆ ಮೂಲಕ ಶುದ್ಧ ಕುಡಿಯುವ ನೀರು ಪೂರೈಸುವ ಗುರಿ ಇದೆ. ಇದಕ್ಕಾಗಿ ₹ 41,800 ಕೋಟಿ ವೆಚ್ಚ ಮಾಡಲಾಗುವುದು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ವಿಧಾನ ಪರಿಷತ್ತಿನಲ್ಲಿ ಶುಕ್ರವಾರ ಜೆಡಿಎಸ್‌ನ ಕೆ.ಎ. ತಿಪ್ಪೇಸ್ವಾಮಿ ಪ್ರಶ್ನೆಗೆ ಉತ್ತರಿಸಿದ ಅವರು, 'ಈವರೆಗೆ 34.90 ಲಕ್ಷ ಮನೆಗಳಿಗೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ. ಎರಡು ವರ್ಷದೊಳಗೆ ಇನ್ನೂ 69.75 ಲಕ್ಷ ಮನೆಗಳಿಗೆ ಕೊಳವೆ ಮೂಲಕ ಶುದ್ಧ ನೀರು ಪೂರೈಕೆ ಮಾಡಲಾಗುವುದು' ಎಂದರು.

ಜಲ ಜೀವನ್ ಮಿಷನ್ ಯೋಜನೆಯಡಿ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕ ಕಲ್ಪಿಸಲು ₹ 11,010 ಕೋಟಿ ಮತ್ತು ಸುಸ್ಥಿರ ಜಲಮೂಲಗಳಿಂದ ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಮೂಲಕ ನೀರು ಪೂರೈಸಲು ₹ 30,790 ಕೋಟಿ ವೆಚ್ಚ ಮಾಡಲಾಗುವುದು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಶೇಕಡ 50ರ ಅನುಪಾತದಲ್ಲಿ ವೆಚ್ಚ ಭರಿಸಲಿವೆ ಎಂದು ತಿಳಿಸಿದರು.

₹ 2,894 ಕೋಟಿ ಮೊತ್ತದ ಹಾನಿ

2019–20 ಮತ್ತು 2020–21ರಲ್ಲಿ ಮಳೆ ಮತ್ತು ಪ್ರವಾಹದಿಂದ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ರಸ್ತೆಗಳು, ಸೇತುವೆಗಳು ಮತ್ತು ಕೆರೆಗಳಿಗೆ ₹ 2,894 ಕೋಟಿಯಷ್ಟು ಹಾನಿಯಾಗಿದೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಕೆ.ಎಸ್. ಈಶ್ವರಪ್ಪ ತಿಳಿಸಿದರು.

ಕಾಂಗ್ರೆಸ್‌ನ ಬಿ.ಕೆ. ಹರಿಪ್ರಸಾದ್ ಪ್ರಶ್ನೆಗೆ ಉತ್ತರಿಸಿದ ಸಚಿವರು, '2019–20ರಲ್ಲಿ ₹ 988.44 ಕೋಟಿ ಮತ್ತು 2020–21ರಲ್ಲಿ ₹ 1,905.67 ಕೋಟಿಯಷ್ಟು ಹಾನಿಯಾಗಿದೆ. ದುರಸ್ತಿಗಾಗಿ ₹ 260.72 ಕೋಟಿ ಬಿಡುಗಡೆಯಾಗಿದ್ದು, ₹ 182.87 ಕೋಟಿ ವೆಚ್ಚ ಮಾಡಲಾಗಿದೆ. ಇನ್ನೂ ₹ 1,905.58 ಕೋಟಿ ಅನುದಾನದ ಅಗತ್ಯವಿದೆ' ಎಂದರು.

ಸಚಿವ ಕೆ.ಎಸ್. ಈಶ್ವರಪ್ಪ ಅವರು ವಿಧಾನಪರಿಷತ್ತಿನಲ್ಲಿ ಶುಕ್ರವಾರ ಮಾತನಾಡಿದರು. ಸಚಿವರಾದ ಜೆ.ಸಿ. ಮಾಧುಸ್ವಾಮಿ, ಸಭಾನಾಯಕ ಕೋಟ ಶ್ರೀನಿವಾಸ ಪೂಜಾರಿ(ಮುಂದಿನ ಸಾಲು), ಬಿಜೆಪಿಯ ಶಶಿಲ್ ನಮೋಶಿ, ಸಚಿವ ವಿ. ಸೋಮಣ್ಣ, ಬಿಜೆಪಿಯ ಎಚ್. ವಿಶ್ವನಾಥ್ ಇದ್ದರು

ಈ ಯೋಜನೆಯಡಿ 2021–22ರಲ್ಲಿ 25.17 ಲಕ್ಷ, 2022–23ರಲ್ಲಿ 27.14 ಲಕ್ಷ ಮತ್ತು 2023ರಲ್ಲಿ 17.45 ಲಕ್ಷ ಮನೆಗಳಿಗೆ ನೀರು ಪೂರೈಕೆ ಸಂಪರ್ಕ ಕಲ್ಪಿಸಲಾಗುವುದು. ಬೆಂಗಳೂರು ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಎತ್ತಿನಹೊಳೆ ಯೋಜನೆಯ ನೀರನ್ನು ಬಳಸಿಕೊಂಡು ಬಹುಗ್ರಾಮ ಕುಡಿಯುವ ನೀರು ಪೂರೈಕೆ ಯೋಜನೆ ಅನುಷ್ಠಾನಕ್ಕೆ ತರಲಾಗುವುದು ಎಂದರು.

ಜಲಧಾರೆ ಸ್ಥಗಿತ: 2018–19ರ ಬಜೆಟ್‌ನಲ್ಲಿ ₹ 53,000 ಕೋಟಿ ವೆಚ್ಚದ 'ಜಲಧಾರೆ' ಯೋಜನೆ ಪ್ರಕಟಿಸಲಾಗಿತ್ತು. ಆದರೆ, ಯೋಜನೆ ಅನುಷ್ಠಾನಕ್ಕೆ ಬಂದಿಲ್ಲ. ಆ ಯೋಜನೆಯಡಿ ಕೈಗೆತ್ತಿಕೊಂಡಿದ್ದ ಕೆಲವು ಕಾಮಗಾರಿಗಳನ್ನು ಜಲ ಜೀವನ್ ಮಿಷನ್ ಅಡಿಯಲ್ಲಿ ಅನುಷ್ಠಾನಕ್ಕೆ ತರಲಾಗುತ್ತಿದೆ ಎಂದು ಕಾಂಗ್ರೆಸ್‌ನ ಕೆ.ಸಿ. ಕೊಂಡಯ್ಯ ಅವರ ಪ್ರಶ್ನೆಗೆ ಉತ್ತರಿಸಿದರು.

ಸುದ್ದಿ 2 ನಿಮಿಷ

ಬಾಯ್ಲರ್ ಸ್ಫೋಟ: ಮೂವರು ಕಾರ್ಮಿಕರಿಗೆ ಗಾಯ

ಆನೇಕಲ್: ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶ ವ್ಯಾಪ್ತಿಯ ವಡ್ಡರಪಾಳ್ಯದ ಲೇಕ್ ಕೆಮಿಕಲ್ ಕಾರ್ಖಾನೆಯಲ್ಲಿ ಶುಕ್ರವಾರ ಬಾಯ್ಲರ್ ಸ್ಫೋಟಗೊಂಡು, ಮೂವರು ಕಾರ್ಮಿಕರು ಗಾಯಗೊಂಡಿದ್ದಾರೆ.

ಅಸ್ಸಾಂ ಮೂಲದ ಸೂರ್ಯನಾಥ್ (27), ಹೊಸೂರಿನ ಮುಕುಂದ ಪಲ್ಲಿಯ ಜ್ಞಾನವೇಲ್ (22), ಆನೇಕಲ್‌ನ ಮನೋಜ್ (30) ಗಾಯಗೊಂಡವರು. ಈ ಮೂವರು ಕೂದಲೆಳೆ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದು, ಅತ್ತಿಬೆಲೆಯ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಕಾರ್ಖಾನೆಯಲ್ಲಿ ಮಧ್ಯಾಹ್ನ 1.10ರ ಸುಮಾರಿಗೆ ಕಾರ್ಮಿಕರು ಕಾರ್ಯ ನಿರ್ವಹಿಸುತ್ತಿದ್ದ ಸಂದರ್ಭದಲ್ಲಿ ಬಾಯ್ಲರ್ ಸ್ಫೋಟಗೊಂಡಿದೆ. ಇದರಿಂದ ಕೆಮಿಕಲ್ ಹೊಗೆ ಕಾರ್ಖಾನೆಯನ್ನು ಆವರಿಸಿಕೊಂಡು ಕಾರ್ಮಿಕರು ಉಸಿರಾಡಲು ಪರದಾಡುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಸ್ಫೋಟದ ರಭಸಕ್ಕೆ ಚಾವಣಿ ಹಾರಿಹೋಗಿದೆ. ಕಾರ್ಖಾನೆಯಲ್ಲಿನ ರಾಸಾಯನಿಕ ದ್ರವ್ಯ ಗ್ರಾಮದ ಒಳಗಿನ ಮನೆ ಮೇಲೆ ಹಾರಿ ಬಿದ್ದಿದ್ದು, ಗ್ರಾಮಸ್ಥರು ಭಯಗೊಂಡಿದ್ದಾರೆ.

ಮಹಂತ ಗಿರಿ ಸಾವು: ಎಫ್‌ಐಆರ್ ದಾಖಲಿಸಿದ ಸಿಬಿಐ

ನವದೆಹಲಿ (ಪಿಟಿಐ): ಅಖಿಲ ಭಾರತೀಯ ಅಖಾಡ ಪರಿಷತ್ ಅಧ್ಯಕ್ಷ ಮಹಂತ ನರೇಂದ್ರ ಗಿರಿ ಅವರ ನಿಗೂಢ ಸಾವಿಗೆ ಸಂಬಂಧಿಸಿದಂತೆ ಸಿಬಿಐ ಶುಕ್ರವಾರ ಎಫ್‌ಐಆರ್ ದಾಖಲಿಸಿದೆ. ಎಫ್‌ಐಆರ್‌ನಲ್ಲಿ ಐಪಿಸಿ ಸೆಕ್ಷನ್ 306 (ಆತ್ಮಹತ್ಯೆಗೆ ಕುಮ್ಮಕ್ಕು) ಉಲ್ಲೇಖಿಸಲಾಗಿದೆ.

ಸ್ವಾಮೀಜಿ ಮೃತದೇಹವು ಅಲಹಾಬಾದ್‌ನ ಬಘಂಬರಿ ಮಠದಲ್ಲಿ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ಇದಾದ ಎರಡು ದಿನಗಳ ಬಳಿಕ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು ಈ ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಿದ್ದರು.

PUBLIC NOTICE

My client Sri M. Nagaraj Reddy, aged about 72 years, Residing at No. 1089, 12th Main, Indiranagar, Bangalore- 560 038informs the general public that he had terminated the Joint Development Agreement entered by him with M/s Jain Heights & Structures Private Limited dated 17.10.2012 registered as Document No. MLR-1-04256-2012-12 in C.D. No. MLRD82, in Book 1 of the Office of the Sub- Registrar, Malur and also revoked the General Power of Attorney made in favour of M/s Jain Heights & Structures Private Limited dated 17.10.2012 registered as Document No. MLR-4-00164-2012-12 in C.D. No. MLRD82, in Book 4 of the Office of the Sub-Registrar, Malur vide legal notice dated 15.11.2018. As, a dispute arose between my client and M/s Jain Heights & Structures Private Limited, in regard to schedule properties, my client had filed a claim petition before The Hon'ble Arbitral Tribunal of (Retd) High Court Justice ShriChandrashekaraiah, Sole Arbitrator at Arbitration and Conciliation Centre, Bengaluru which was numbered as AC No. 72/2020. After hearing both the parties,The Hon'ble Arbitral Tribunal passed an award dated 15.09.2021 and has declared that the termination and revocation of the above-mentioned Joint Development Agreementdated 17.10.2012 and General Power of Attorneydated 17.10.2012 are valid. My client herby brings to the notice of the public that any transaction done or to be done by M/s Jain Heights & Structures Private Limited with regards to the Schedule Properties as my client's power of attorney holder or as a Developer in pursuance of the of the Joint Development Agreementdated 17.10.2012 and General Power of Attorneydated 17.10.2012 will be invalid, void and not binding on my client.

SCHEDULE PROPERTY

Item No. I
All that piece and parcel of the residential converted land bearing old No.101/1, New Sy No.101/11, measuring 1 Acre 20 Guntas, situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:297/2009-10, dated 27/04/2010 and bounded on:
East by : Land bearing Sy No.101/10 **West by** : Land bearing Sy No.101/15 of Venkatesh
North by : Land bearing S No.99 **South by** : Land bearing Sy No.101/12 of Subbappa

Item No.II:
All that piece and parcel of the residential converted land bearing old No.101/1, New Sy No.101/12, measuring 05 Acres situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:285/2009-10, dated 27/04/2010 and No.ALN.SR.288/2009-10 dated 30/04/2010 and bounded on:
East by : Land bearing Sy No.101/8 **West by** : Land bearing Sy No.101/13
North by: Land of Muniyappa **South by:** Land of Munishamappa

Item No. III:
All that piece and parcel of the residential converted land bearing old No.101/1, New Sy No.101/13, measuring 02 Acres situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:291/2009-10, dated 27/04/2010 and bounded on:
East by : Land bearing Sy No.101/12 of Subbappa
West by : Land bearing Sy No.101/14 of G.Uma
North by : Land bearing Sy No.101/15 of Venkatesh
South by : Land bearing Sy No.101/09 of Muniswamappa

Item No.IV:
All that piece and parcel of the residential converted land bearing old No.101/1, New Sy No.101/06, measuring 03 Acres 13 Guntas situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:290/2009-10, dated 30/04/2010 and bounded on:
East by : Land bearing Sy No.89 **West by** : Land bearing Sy No.101/10
North by : Land bearing Sy No.101/01 **South by** : Land bearing Sy No.101/07

ITEM NO.V:
All that piece and parcel of the residential converted land bearing old No.101/1, New Sy No.101/19, measuring 02 Acres 17 Guntas, situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:325/2009-10, dated 30/04/2010 and bounded on:
East by : Land belonging to Munishamappa in Sy No.101/17
West by : Land belonging to K.P.Moosa&Chinnamma in Sy No.101/3 & Sy No.101/21
North by : Sy No.98 and Sy No.99
South by : Remaining land in the same Sy No. belongs to Lokesh

ITEM NO.VI:
All that piece and parcel of the residential converted land bearing old No.101/1, New Sy No.101/21, measuring 02 Acres 30 Guntas, situated at Aalambadi Village, LakkurHobli, Malur Taluk, Kolar District, residentially converted vide Official memorandum No.ALN.SR:292/2009-10, dated 30/04/2010 and bounded on:
East by : Land belonging to Susheelamma in Sy No.101/19
West by : Land bearing Sy No.101/2, 101/13, 101/4 & 186
North by : Land bearing Sy No.98
South by : Land bearing Sy No.101/20 belongs to K.P.Moosa

S.K. MITHUN (Advocate)
No.24, 4th Model House Street, Basavanagudi, Bangalore – 560004.

'ಆನೆಗಳನ್ನು ಸೆರೆ ಹಿಡಿಯುವಂತಿಲ್ಲ'

ಚೆನ್ನೈ (ಪಿಟಿಐ): ಸರ್ಕಾರವಾಗಲೀ, ವ್ಯಕ್ತಿಗಳಾಗಲಿ ಇನ್ನು ಮುಂದೆ ಆನೆಗಳನ್ನು ಸೆರೆಹಿಡಿಯಬಾರದು ಹಾಗೂ ತಮ್ಮ ವಶದಲ್ಲಿ ಇಟ್ಟುಕೊಳ್ಳಬಾರದು ಎಂದು ಮದ್ರಾಸ್ ಹೈಕೋರ್ಟ್, ಶುಕ್ರವಾರ ಮಹತ್ವದ ಆದೇಶ ನೀಡಿದೆ.

ಚಿಕಿತ್ಸೆ ಕಾರಣವೊಂದನ್ನು ಬಿಟ್ಟರೆ, ಬೇರಾವುದೇ ಕಾರಣಕ್ಕೂ ಆನೆಗಳನ್ನು ಸೆರೆ ಹಿಡಿಯದಂತೆ ಸರ್ಕಾರ ನೋಡಿಕೊಳ್ಳಬೇಕು. ಯಾವುದೇ ವ್ಯಕ್ತಿಯು, ಈಗಾಗಲೇ ತನ್ನಲ್ಲಿರುವ ಆನೆ ಹೊರತುಪಡಿಸಿ ಮತ್ತೆ ಬೇರೆ ಆನೆಗಳನ್ನು ಹಿಡಿದು ಸಾಕುವಂತಿಲ್ಲ ಎಂದು ಮುಖ್ಯ ನ್ಯಾಯಮೂರ್ತಿಗಳಾದ ಸಂಜೀವ್ ಬ್ಯಾನರ್ಜಿ, ಪಿ.ಡಿ. ಆದಿಕೇಶವುಲು ಅವರಿದ್ದ ಪೀಠ ಹೇಳಿದೆ.

ಪಟಾಕಿ ಸ್ಫೋಟ; ಮತ್ತೊಬ್ಬ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆಯ ಸೀತಾಪತಿ ಅಗ್ರಹಾರದಲ್ಲಿ ಸಂಭವಿಸಿದ್ದ ಪಟಾಕಿ ಸ್ಫೋಟದಲ್ಲಿ ತೀವ್ರ ಗಾಯಗೊಂಡಿದ್ದ ರಂಗಸ್ವಾಮಿ ಅಲಿಯಾಸ್ ಅಂಬೂಸ್ವಾಮಿ (72) ಎಂಬುವರು ಶುಕ್ರವಾರ ಮೃತಪಟ್ಟಿದ್ದು, ಸಾವಿನ ಸಂಖ್ಯೆ ಮೂರಕ್ಕೆ ಏರಿದೆ.

'ಮೃತ ಅಂಬೂಸ್ವಾಮಿ, ತಳ್ಳುಗಾಡಿಯಲ್ಲಿ ತಿನಿಸು ಮಾರಾಟ ಮಾಡುತ್ತಿದ್ದರು. ಅವಘಡದಿಂದ ಗಾಯಗೊಂಡಿದ್ದ ಅವರನ್ನು ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಅಸುನೀಗಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ತಳ್ಳುಗಾಡಿಯಲ್ಲಿ ತಿನಿಸು ಇಟ್ಟುಕೊಂಡಿದ್ದ ಅಂಬೂಸ್ವಾಮಿ, ವ್ಯಾಪಾರಕ್ಕೆಂದು ಸೀತಾಪತಿ ಅಗ್ರಹಾರಕ್ಕೆ ಹೋಗಿದ್ದರು. ಅದೇ ವೇಳೆಯೇ ಪಟಾಕಿ ಸ್ಫೋಟಗೊಂಡಿತ್ತು. ಅಂಬೂಸ್ವಾಮಿ ತೀವ್ರವಾಗಿ ಗಾಯಗೊಂಡಿದ್ದರು' ಎಂದೂ ತಿಳಿಸಿದರು.

ಅವಘಡದಲ್ಲಿ ಮನೋಹರ್ ಹಾಗೂ ಅಸ್ಲಂಪಾಷಾ ಗುರುವಾರವೇ ಮೃತಪಟ್ಟಿದ್ದರು. ಗಾಯಗೊಂಡಿರುವ ಗಣಪತಿ, ಮಂಜುನಾಥ್, ಜೇಮ್ಸ್ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ತನಿಖೆ ಮುಂದುವರಿಕೆ, ಮಾದರಿ ಪರೀಕ್ಷೆ: ಪಟಾಕಿ ಸ್ಫೋಟದ ಬಗ್ಗೆ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ಘಟನಾ ಸ್ಥಳದಲ್ಲಿ ಮಾದರಿ ಸಂಗ್ರಹಿಸಿರುವ ವಿಧಿವಿಜ್ಞಾನ ಪ್ರಯೋಗಾಲಯದ ತಜ್ಞರು ಪರೀಕ್ಷೆ ನಡೆಸುತ್ತಿದ್ದಾರೆ.

'ಸ್ಫೋಟಕ್ಕೆ ಪಟಾಕಿ ಕಾರಣವೆಂಬುದು ಗೊತ್ತಾಗಿದೆ. ಆದರೆ, ಬಾಕ್ಸ್‌ನಲ್ಲಿಟ್ಟಿದ್ದ ಪಟಾಕಿಗೆ ಬೆಂಕಿ ಹೇಗೆ ತಗುಲಿತು ಎಂಬ ಪ್ರಶ್ನೆ ಕಾಡುತ್ತಿದೆ. ತನಿಖೆಯಿಂದಲೇ ಇದಕ್ಕೆ ಉತ್ತರ ಸಿಗಬೇಕಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು. 'ಗಾಯಾಳುಗಳ ಹೇಳಿಕೆ ಆಧರಿಸಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪಟಾಕಿ ಸಂಗ್ರಹಿಸಿದ್ದ ಗೋದಾಮು ಮಾಲೀಕ ಬಾಬುನನ್ನು ಬಂಧಿಸಲಾಗಿದೆ' ಎಂದೂ ಅಧಿಕಾರಿ ತಿಳಿಸಿದರು.

ಗೋದಾಮುಗಳ ಮೇಲೆ ದಾಳಿ: ಅವಘಡದಿಂದ ಎಚ್ಚೆತ್ತ ಪೊಲೀಸರು, ಸಿಟಿ ಮಾರುಕಟ್ಟೆ ಹಾಗೂ ಸುತ್ತಮುತ್ತಲಿನ ಸ್ಥಳಗಳಲ್ಲಿರುವ ಹಲವು ಗೋದಾಮುಗಳ ಮೇಲೆ ಶುಕ್ರವಾರ ದಾಳಿ ನಡೆಸಿದರು.

ಎಲ್ಲ ಮಾಹಿತಿಗಳನ್ನು ಪೊಲೀಸರು ದಾಖಲಿಸಿಕೊಂಡರು. ಕಾಫಿ ಮಾರಾಟ ಕಂಪನಿಯೊಂದರ ಗೋದಾಮು ಮೇಲೆ ದಾಳಿ ಮಾಡಿದಾಗ, ಅಕ್ರಮವಾಗಿ ಸಂಗ್ರಹಿಸಿದ್ದ ಅಡುಗೆ ಅನಿಲದ 16 ಸಿಲಿಂಡರ್‌ಗಳು ಸಿಕ್ಕವು. ಅವುಗಳನ್ನು ಪೊಲೀಸರು ಜಪ್ತಿ ಮಾಡಿದರು.

ವಾರದಲ್ಲಿ ಬರಲಿದೆ ಮೊದಲ ಇ-ಬಸ್

ಬೆಂಗಳೂರು: ನಗರದಲ್ಲಿ ಎಲೆಕ್ಟ್ರಿಕ್ ಬಸ್ ಸಂಚಾರದ ಕನಸು ಸಾಕಾರವಾಗುವ ಕಾಲ ಸನ್ನಿಹಿತವಾಗಿದ್ದು, ಮುಂದಿನ ವಾರದಲ್ಲಿ ನಗರಕ್ಕೆ ಮೊದಲ ಎಲೆಕ್ಟ್ರಿಕ್ ಬಸ್ ಬರಲಿದೆ.

'ಮೊದಲ ಹಂತದಲ್ಲಿ ಒಂದು ಬಸ್ ಬೆಂಗಳೂರಿಗೆ ಸೆ.30ರಂದು ಬರಲಿದೆ ಎಂದು ಕಂಪನಿ ತಿಳಿಸಿದೆ. ಉಳಿದ ಬಸ್‌ಗಳು ಹಂತ- ಹಂತವಾಗಿ ಬರಲಿವೆ' ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

ಸ್ಮಾರ್ಟ್‌ಸಿಟಿ ಯೋಜನೆಯಡಿ 90 ಬಸ್‌ಗಳನ್ನು ಗುತ್ತಿಗೆ ಆಧಾರದಲ್ಲಿ ಪಡೆಯಲು 2020 ಫೆಬ್ರುವರಿಯಲ್ಲಿ ಟೆಂಡರ್ ಆಹ್ವಾನಿಸಲಾಗಿತ್ತು. ಅದರ ಪ್ರಕಾರ ಆರು ತಿಂಗಳಲ್ಲೇ ಬಸ್‌ಗಳು ರಸ್ತೆಗೆ ಇಳಿಯಬೇಕಿತ್ತು. ಕೋವಿಡ್ ಕಾರಣದಿಂದ ಟೆಂಡರ್ ಪ್ರಕ್ರಿಯೆ ವಿಳಂಬವಾಗಿ 2021ರ ಫೆಬ್ರುವರಿಯಲ್ಲಿ ಎನ್‌ಟಿಪಿಸಿ-ಜೆಬಿಎಂ ಕಂಪನಿಗೆ ಕಾರ್ಯಾದೇಶ ನೀಡಲಾಗಿದೆ. ಗುತ್ತಿಗೆ ಆಧಾರದಲ್ಲಿ 12 ವರ್ಷಗಳ ಅವಧಿಗೆ ಬಸ್‌ಗಳನ್ನು ಪಡೆಯಲಾಗುತ್ತಿದೆ.

30ರಿಂದ 35 ಸೀಟುಗಳನ್ನು ಹೊಂದಿರುವ 9 ಮೀಟರ್ ಉದ್ದದ ಈ ಬಸ್‌ಗಳನ್ನು ಪ್ರತಿ ಕಿಲೋ ಮೀಟರ್‌ಗೆ ₹51 ದರದಲ್ಲಿ ಪಡೆಯಲಾಗುತ್ತಿದೆ. ಒಂದು ಬಾಗಿಲನ್ನು ಹೊಂದಿರುವ ಈ ಬಸ್‌ಗಳು ಎಲ್ಲ ಮೆಟ್ರೊ ನಿಲ್ದಾಣಗಳಿಂದ ಫೀಡರ್ ಸೇವೆಗಳಾಗಿ ಮಾತ್ರ ಬಳಕೆ ಮಾಡಲು ಈ ಹಿಂದೆಯೇ ಬಿಎಂಟಿಸಿ ನಿರ್ಧರಿಸಿದೆ.

ಕೋವಿಡ್: 29.71 ಲಕ್ಷಕ್ಕೆ ಏರಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೊಸ ಪ್ರಕರಣಗಳ ಸಂಖ್ಯೆ ವಾರದಿಂದ ಸಾವಿರದ ಗಡಿಯೊಳಗೆ ಇದ್ದು, 789 ಮಂದಿ ಕೋವಿಡ್ ಪೀಡಿತರಾಗಿರುವುದು ಶುಕ್ರವಾರ ದೃಢಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 29.71 ಲಕ್ಷ ದಾಟಿದೆ.

ಒಂದು ದಿನದ ಅವಧಿಯಲ್ಲಿ 1.35 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 0.58 ರಷ್ಟು ವರದಿಯಾಗಿದೆ. 10 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ, 14 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ಬಾಗಲಕೋಟೆ, ಕೊಪ್ಪಳ, ರಾಯಚೂರು ಹಾಗೂ ಯಾದಗಿರಿಯಲ್ಲಿ ಹೊಸ ಪ್ರಕರಣ ವರದಿಯಾಗಿಲ್ಲ.

ಕೇರಳಕ್ಕೆ ಹೊಂದಿಕೊಂಡಿರುವ ಗಡಿ ಜಿಲ್ಲೆಗಳಾದ ದಕ್ಷಿಣ ಕನ್ನಡದಲ್ಲಿ 108, ಮೈಸೂರಿನಲ್ಲಿ 71 ಹಾಗೂ ಕೊಡಗಿನಲ್ಲಿ 37 ಪ್ರಕರಣಗಳು ಪತ್ತೆಯಾಗಿವೆ. ಬೆಂಗಳೂರಿನಲ್ಲಿ 285 ಹಾಗೂ ಉಡುಪಿಯಲ್ಲಿ 69 ಮಂದಿ ಸೋಂಕಿತರಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳು 50ರ ಗಡಿಯೊಳಗೆ ಇವೆ.

ಸೋಂಕಿತರಲ್ಲಿ 1,050 ಮಂದಿ ಚೇತರಿಸಿಕೊಂಡಿದ್ದಾರೆ. ಗುಣಮುಖರಾದವರ ಒಟ್ಟು ಸಂಖ್ಯೆ 29.20 ಲಕ್ಷ ದಾಟಿದೆ. ಕೋವಿಡ್ ಸಕ್ರಿಯ ಪ್ರಕರಣಗಳ ಸಂಖ್ಯೆ 13,306ಕ್ಕೆ ಇಳಿಕೆಯಾಗಿದೆ.

ಕೋವಿಡ್ ಪೀಡಿತರಲ್ಲಿ 23 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ.

ನಗರದ ಕೋವಿಡ್ ಅಂಕಿ–ಅಂಶ

12,44,959 ▲ ಒಟ್ಟು ಪ್ರಕರಣಗಳು (12,44,674 ನಿನ್ನೆಯ ವಿವರ)
7,443 ▲ ಸಕ್ರಿಯ ಪ್ರಕರಣಗಳು
12,21,390 ▲ ಗುಣಮುಖರಾದವರು
16,125 ▲ ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	285	▼
ಗುಣಮುಖ	273	▲
ಸಾವು	08	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಕೋವಿಡ್ ಅಂಕಿ–ಅಂಶ
ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	23.16 ಕೋಟಿ ▲	3.36 ಕೋಟಿ ▲
ಸಕ್ರಿಯ ಪ್ರಕರಣ	1.85 ಕೋಟಿ	2.96 ಲಕ್ಷ ▲
ಗುಣಮುಖ	20.83 ಕೋಟಿ ▲	3.28 ಕೋಟಿ
ಸಾವು	47.45 ಲಕ್ಷ ▲	4.46 ಲಕ್ಷ

ದಿನದ ಮಾಹಿತಿ

	ವಿಶ್ವ	ಭಾರತ
ಹೊಸ ಪ್ರಕರಣ	5.17 ಲಕ್ಷ ▼	29,519 ▼
ಗುಣಮುಖ	4.90 ಲಕ್ಷ ▼	28,014 ▼
ಸಾವು	8,707 ▼	290 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ)
1.27 ಲಕ್ಷ ▼ ಅಮೆರಿಕ; 36,709 ▲ ಬ್ರಿಟನ್; 24,611 ಬ್ರೆಜಿಲ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ)
97.95 ▲ ಅಮೆರಿಕ; 13.25 ▲ ಬ್ರಿಟನ್; 3.95 ಬ್ರೆಜಿಲ್
(*ರಾತ್ರಿ 12 ಗಂಟೆಯವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು)
1.38 ಲಕ್ಷ ಮಹಾರಾಷ್ಟ್ರ; 35,427 ತಮಿಳುನಾಡು; 25,085 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ)
65.34 ಮಹಾರಾಷ್ಟ್ರ; 45.97 ಕೇರಳ ▲; 26.52 ತಮಿಳುನಾಡು

ಪ್ರಜಾವಾಣಿ ಗ್ರಾಫಿಕ್ಸ್

2019–20ನೇ ಸಾಲಿನ ಎನ್‌ಎಸ್‌ಎಸ್ ರಾಷ್ಟ್ರ ಪ್ರಶಸ್ತಿಯನ್ನು ರಾಷ್ಟ್ರಪತಿ ರಾಮನಾಥ ಕೋವಿಂದ ಅವರು ಶುಕ್ರವಾರ ಪ್ರದಾನ ಮಾಡಿದರು. ಅತ್ಯುತ್ತಮ ವಿಶ್ವವಿದ್ಯಾಲಯ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುವ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಪರವಾಗಿ ಕುಲಪತಿ ಡಾ. ಎಸ್‌.ಎಂ. ಜಯಕರ ಮತ್ತು ಅತ್ಯುತ್ತಮ ಕಾರ್ಯಕ್ರಮ ಸಂಯೋಜನಾಧಿಕಾರಿ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿರುವ ಬಿ. ವಸಂತಶೆಟ್ಟಿ ಪ್ರಶಸ್ತಿ ಸ್ವೀಕರಿಸಿದರು

ಭಾರತ ಸರ್ಕಾರ, ರಕ್ಷಣಾ ಸಚಿವಾಲಯ
ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ
ಮಿಲಿಟರಿ ಉಡ್ಡಯನ ಕ್ಷಮತೆ ಮತ್ತು ಪ್ರಮಾಣೀಕರಣ ಕೇಂದ್ರ
ಮಾರತಹಳ್ಳಿ ಕಾಲೋನಿ ಅಂಚೆ, ಬೆಂಗಳೂರು–560 037

ಕೆಳಕಂಡ ಫೆಲೋಶಿಪ್ ಹುದ್ದೆಯು ಸೆಮಿಲ್ಯಾಕ್, ರಕ್ಷಣಾ ಆರ್&ಡಿ ಸಂಸ್ಥೆ, ರಕ್ಷಣಾ ಸಚಿವಾಲಯ, ಬೆಂಗಳೂರು ಇವರಲ್ಲಿ ಎರಡು ವರ್ಷಗಳ ಅವಧಿಗೆ (ನಿಯಮಗಳನ್ವಯ ವಿಸ್ತರಿಸಬಹುದಾಗಿರುತ್ತದೆ) ಲಭ್ಯವಿದ್ದು, ಮಾಸಿಕ ರೂ. 25,000/– ಸಂಭಾವನೆ (ನಿಯಮಗಳನ್ವಯ ಮನೆ ಬಾಡಿಗೆ ಭತ್ಯೆ ಕೂಡ ಲಭ್ಯವಿರುತ್ತದೆ) ನೀಡಲಾಗುತ್ತದೆ. ಕೆಳಕಂಡ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ:–

ಕ್ರ.ಸಂ.	ಫೆಲೋಶಿಪ್ ಮಾದರಿ	ಫೆಲೋಶಿಪ್‌ಗಳ ಸಂಖ್ಯೆ	ವಿಷಯ ಡಿಸಿಪ್ಲೀನ್
1	ಜೂನಿಯರ್ ರಿಸರ್ಚ್ ಫೆಲೋ	01	ಮೆಕ್ಯಾನಿಕಲ್ ಇಂಜಿನಿಯರ್
ಶೈಕ್ಷಣಿಕ ವಿದ್ಯಾರ್ಹತೆ: ಎನ್‌ಇಟಿ/ಗೇಟ್ ಜೊತೆಗೆ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಿಕಾಯದಲ್ಲಿ ಪ್ರಥಮ ದರ್ಜೆಯ ವೃತ್ತಿಪರ ಕೋರ್ಸ್ (ಬಿ.ಇ/ಬಿ.ಟೆಕ್) ಗ್ರಾಜುಯೇಟ್ ಪದವಿ ಅಥವಾ ಪದವಿ ಮತ್ತು ಸ್ನಾತಕೋತ್ತರ ಪದವಿ ಎರಡೂ ಹಂತಗಳಲ್ಲಿ ಮೆಕ್ಯಾನಿಕಲ್ ಇಂಜಿನಿಯರಿಂಗ್ ನಿಕಾಯದಲ್ಲಿ ಪ್ರಥಮ ದರ್ಜೆಯ ವೃತ್ತಿಪರ ಕೋರ್ಸ್ (ಎಂ.ಇ/ಎಂ.ಟೆಕ್) ಸ್ನಾತಕೋತ್ತರ ಪದವಿ ಹೊಂದಿರಬೇಕು.			
2	ಜೂನಿಯರ್ ರಿಸರ್ಚ್ ಫೆಲೋ	01	ಏರೋನಾಟಿಕಲ್ ಇಂಜಿನಿಯರ್
ಶೈಕ್ಷಣಿಕ ವಿದ್ಯಾರ್ಹತೆ: ಎನ್‌ಇಟಿ/ಗೇಟ್ ಜೊತೆಗೆ ಏರೋನಾಟಿಕಲ್ ಇಂಜಿನಿಯರಿಂಗ್ ನಿಕಾಯದಲ್ಲಿ ಪ್ರಥಮ ದರ್ಜೆಯ ವೃತ್ತಿಪರ ಕೋರ್ಸ್ (ಬಿ.ಇ/ಬಿ.ಟೆಕ್) ಗ್ರಾಜುಯೇಟ್ ಪದವಿ ಅಥವಾ ಪದವಿ ಮತ್ತು ಸ್ನಾತಕೋತ್ತರ ಪದವಿ ಎರಡೂ ಹಂತಗಳಲ್ಲಿ ಏರೋನಾಟಿಕಲ್ ಇಂಜಿನಿಯರಿಂಗ್ ನಿಕಾಯದಲ್ಲಿ ಪ್ರಥಮ ದರ್ಜೆಯ ವೃತ್ತಿಪರ ಕೋರ್ಸ್ (ಎಂ.ಇ/ಎಂ.ಟೆಕ್) ಸ್ನಾತಕೋತ್ತರ ಪದವಿ ಹೊಂದಿರಬೇಕು.			

ಷರತ್ತುಗಳು:–

1) **ಗರಿಷ್ಠ ವಯೋಮಿತಿ:** ಮೇಲ್ಕಂಡ ಫೆಲೋಶಿಪ್‌ಗೆ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕದಂದು 28 ವರ್ಷ ಮೀರಕೂಡದು. ಭಾರತ ಸರ್ಕಾರದ ಆದೇಶಗಳ ಪ್ರಕಾರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಅಭ್ಯರ್ಥಿಗಳಿಗೆ ಮೇಲ್ಕಂಡ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ.
2) ಲಕೋಟೆಯ ಮೇಲೆ ದಪ್ಪ ಮತ್ತು ಸ್ಪಷ್ಟವಾದ ಅಕ್ಷರಗಳಲ್ಲಿ **"ಜೆಆರ್‌ಎಫ್ ಹುದ್ದೆಗಾಗಿ ಅರ್ಜಿ"** ಎಂದು ನಮೂದಿಸತಕ್ಕದ್ದು.
3) ಸಂಪೂರ್ಣ **ವೈಯಕ್ತಿಕ ವಿವರಗಳನ್ನು** ಟೈಪ್ ಮಾಡಲಾದ ಅರ್ಜಿಯೊಂದಿಗೆ ಪ್ರಮಾಣಪತ್ರಗಳ **ನಕಲು ಪ್ರತಿಗಳನ್ನು** ಲಗತ್ತಿಸಿ, ಈ ಜಾಹೀರಾತು ಪ್ರಕಟಗೊಂಡ ದಿನಾಂಕದಿಂದ 21 ದಿನಗಳೊಳಗೆ ತಲುಪುವಂತೆ **"ದಿ ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್), ಸೆಮಿಲ್ಯಾಕ್, ಡಿಆರ್‌ಡಿಒ, ರಕ್ಷಣಾ ಸಚಿವಾಲಯ, ಮಾರತಹಳ್ಳಿ ಕಾಲೋನಿ ಅಂಚೆ, ಬೆಂಗಳೂರು–560 037"** ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು.
4) ಅರ್ಜಿಯ ಮೊದಲ ಪುಟದ ಬಲಗಡೆ ಮೇಲ್ಭಾಗದ ಮೂಲೆಯಲ್ಲಿ ಇತ್ತೀಚೆಗಿನ ಒಂದು ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅಂಟಿಸತಕ್ಕದ್ದು.
5) ದಯವಿಟ್ಟು, ಅರ್ಜಿಯ ಜೊತೆಗೆ "ಚೀಫ್ ಎಕ್ಸಿಕ್ಯೂಟಿವ್ (ಏರ್‌ವರ್ದಿನೆಸ್), ಸೆಮಿಲ್ಯಾಕ್" ಇವರ ಹೆಸರಿಗೆ ಪಡೆದಿರುವ ಮತ್ತು ಭಾರತೀಯ ಸ್ಟೇಟ್ ಬ್ಯಾಂಕ್, ಹೆಚ್‌ಎಎಲ್ ಶಾಖೆ, ಬೆಂಗಳೂರು (ಐಎಫ್‌ಎಸ್‌ಸಿ ಕೋಡ್ SBIN0001114) (ಎಂಐಸಿಆರ್ ನಂ. 560002018) ಇಲ್ಲಿ ಸಂದಾಯ ಆಗಬಲ್ಲ ರೂ.10/– ಮೌಲ್ಯದ ಕ್ರಾಸ್ ಮಾಡಲಾಗಿರುವ ಇಂಡಿಯನ್ ಪೋಸ್ಟಲ್ ಆರ್ಡರ್/ ಬ್ಯಾಂಕ್ ಡ್ರಾಫ್ಟ್ ಲಗತ್ತಿಸಿರಿ.
6) **ಸಂದರ್ಶನದ** ಮುಖಾಂತರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಅರ್ಜಿ ಸಲ್ಲಿಸಿದ ಹುದ್ದೆಗೆ ನಿಗದಿಪಡಿಸಲಾಗಿರುವ ನಿಯಮಗಳ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ.
7) ಸರ್ಕಾರಿ/ಸಾರ್ವಜನಿಕ ಕ್ಷೇತ್ರ ಅಂಡರ್‌ಟೇಕಿಂಗ್‌ಗಳಲ್ಲಿ/ಸ್ವಾಯುತ್ತ ಅಂಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಭ್ಯರ್ಥಿಗಳು ಕಡ್ಡಾಯವಾಗಿ ಸೂಕ್ತ ವಿಧಾನದ ಮೂಲಕ ಅರ್ಜಿ ಸಲ್ಲಿಸತಕ್ಕದ್ದು.
8) ಅಭ್ಯರ್ಥಿಗಳು ಸಂದರ್ಶನದ ಸಮಯದಲ್ಲಿ ಮೂಲ ಪ್ರಮಾಣಪತ್ರಗಳನ್ನು/ದಾಖಲಾತಿಗಳನ್ನು ಹಾಜರುಪಡಿಸತಕ್ಕದ್ದು.
9) ದಯವಿಟ್ಟು ಗಮನದಲ್ಲಿರಲಿ, ಸದರಿ ಫೆಲೋಶಿಪ್ ಆಫರ್ ಲಭಿಸಿದ ಮಾತ್ರಕ್ಕೆ ಡಿಆರ್‌ಡಿಒ ಸಂಸ್ಥೆಯಲ್ಲಿ ವಿಲೀನಕ್ಕೆ ಹಕ್ಕು ಲಭಿಸಿದಂತಾಗುವುದಿಲ್ಲ.
10) ಜೂನಿಯರ್ ರಿಸರ್ಚ್ ಫೆಲೋಶಿಪ್ ಪಡೆದ ಅಭ್ಯರ್ಥಿಗಳು, ಹುದ್ದೆಗೆ ಸೇರಿದ ಬಳಿಕ ಆರು ತಿಂಗಳೊಳಗೆ ಕಡ್ಡಾಯವಾಗಿ ಪಿಹೆಚ್.ಡಿ ನೋಂದಣಿ ಮಾಡಿಕೊಳ್ಳತಕ್ಕದ್ದು.

ಸಹಿ/–
ಕಾಮೇಶ್ ಗೋಯಲ್, ವಿಜ್ಞಾನಿ 'ಜಿ'
ನಿರ್ದೇಶಕರು (ಏರ್‌ಕ್ರಾಫ್ಟ್ & ಹೆಚ್‌ಆರ್)
ಚೀಫ್ ಎಕ್ಸಿಕ್ಯೂಟಿವ್ ಪರವಾಗಿ (ಏರ್‌ವರ್ದಿನೆಸ್)

davp 10301/11/0056/2122

ಬಾಟಲಿಯಲ್ಲಿ ₹ 2.50 ಕೋಟಿ ಮೌಲ್ಯದ ಡ್ರಗ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪ್ರಕರಣದಲ್ಲಿ ಭಾಗಿಯಾದ ಆರೋಪದಡಿ ಡೋಸ್ಸಾ ಖಲೀಫಾ (28) ಎಂಬಾತನನ್ನು ಬಂಧಿಸಿರುವ ಗೋವಿಂದಪುರ ಪೊಲೀಸರು, ₹ 2.50 ಕೋಟಿ ಮೌಲ್ಯದ ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಿದ್ದಾರೆ.

'ಐವರಿಕೋಸ್ಟ್ ಪ್ರಜೆ ಡೋಸ್ಸಾ, ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ. ಎಚ್‌ಬಿಆರ್ ಲೇಔಟ್‌ನ 4ನೇ ಹಂತದಲ್ಲಿ ವಾಸವಿದ್ದ. ಆದರೆ, ಆತನ ಬಳಿ ಸದ್ಯ ಯಾವುದೇ ದಾಖಲೆಗಳು ಸಿಕ್ಕಿಲ್ಲ. ಎನ್‌ಡಿಪಿಎಸ್ ಹಾಗೂ ವಿದೇಶಿ ಕಾಯ್ದೆಯಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ಡ್ರಗ್ಸ್ ಪ್ರಕರಣದಲ್ಲಿ ಮಹಿಳಾ ಉದ್ಯಮಿ ಸೋನಿಯಾ ಅಗರವಾಲ್ ಸೇರಿ ಹಲವರನ್ನು ಇತ್ತೀಚೆಗಷ್ಟೇ ಬಂಧಿಸಲಾಗಿತ್ತು. ಅವರ ವಿಚಾರಣೆಯಿಂದ ಡೋಸ್ಸಾ ಬಗ್ಗೆ ಮಾಹಿತಿ ಸಿಕ್ಕಿತ್ತು. ಆತನೇ ಡ್ರಗ್ಸ್ ಪೂರೈಕೆ ಮಾಡುತ್ತಿದ್ದ ಪ್ರಮುಖ ಪೆಡ್ಲರ್ ಎಂಬುದು ಗೊತ್ತಾಗಿತ್ತು. ಅದೇ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿ ಡೋಸ್ಸಾನನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

'ಗೋವಾದಿಂದ ಡ್ರಗ್ಸ್ ತರಿಸುತ್ತಿದ್ದ ಆರೋಪಿ ಡೋಸ್ಸಾ, ನಗರದ ಕೆಲ ಹೋಟೆಲ್‌ಗಳಲ್ಲಿ ನಡೆಯುತ್ತಿದ್ದ ಪಾರ್ಟಿಗಳಿಗೆ ಸರಬರಾಜು ಮಾಡುತ್ತಿದ್ದ. ಕೆಲ ಕಾಲೇಜು ವಿದ್ಯಾರ್ಥಿಗಳು, ಕೆಲ ಖಾಸಗಿ ಕಂಪನಿ ಉದ್ಯೋಗಿಗಳು, ಕೆಲ ಉದ್ಯಮಿಗಳಿಗೂ ಡ್ರಗ್ಸ್ ನೀಡುತ್ತಿದ್ದ.'

'ಶಾಂಪೇನ್ ಬಾಟಲಿಗಳಲ್ಲಿ ಡ್ರಗ್ಸ್ ಮಾತ್ರೆಗಳನ್ನು ಬಚ್ಚಿಟ್ಟು ಗ್ರಾಹಕರಿಗೆ ತಲುಪಿಸುತ್ತಿದ್ದ. ಹೀಗಾಗಿ, ಯಾರಿಗೂ ಅನುಮಾನ ಬರುತ್ತಿರಲಿಲ್ಲ. ಆರೋಪಿ ಜೊತೆ ಒಡನಾಟ ಹೊಂದಿದ್ದ ಕೆಲವರು ಗೋವಾದಲ್ಲಿದ್ದು, ಅವರ ಬಗ್ಗೆ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದೂ ಹೇಳಿದರು.

₹ 5 ಲಕ್ಷ ಮೌಲ್ಯದ ಗಾಂಜಾ ಜಪ್ತಿ

ಬೆಂಗಳೂರು: ರಾಮಮೂರ್ತಿನಗರ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರುತ್ತಿದ್ದ ಮೂವರು ಆರೋಪಿಗಳನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. 'ಎಸ್.ಪಿ. ನಾಯ್ಡು ಬಡಾವಣೆಯಲ್ಲಿ ₹ 5 ಲಕ್ಷ ಮೌಲ್ಯದ 3 ಕೆ.ಜಿ. 500 ಗ್ರಾಂ ಗಾಂಜಾ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಡ್ರಗ್ಸ್ ಮಾರಾಟದ ವ್ಯವಹಾರಕ್ಕೆ ಬಳಸುತ್ತಿದ್ದ ಮೂರು ಮೊಬೈಲ್‌ಗಳು, ಕಾರು ಹಾಗೂ ದ್ವಿಚಕ್ರ ವಾಹನಗಳನ್ನೂ ಜಪ್ತಿ ಮಾಡಲಾಗಿದೆ. ಕೃತ್ಯದಲ್ಲಿ ಮತ್ತಷ್ಟು ಮಂದಿ ಭಾಗಿಯಾಗಿದ್ದ ಮಾಹಿತಿ ಇದೆ' ಎಂದೂ ಪೊಲೀಸರು ತಿಳಿಸಿದರು.

ವಿದೇಶಿ ಪ್ರಜೆ ಬಂಧನ: ಡ್ರಗ್ಸ್ ವಿರುದ್ಧ ಸುಬ್ರಹ್ಮಣ್ಯನಗರ ಪೊಲೀಸರು ಕಾರ್ಯಾಚರಣೆ ನಡೆಸಿದ್ದು, ವಿದೇಶಿ ಪ್ರಜೆಯೊಬ್ಬನನ್ನು ಬಂಧಿಸಿದ್ದಾರೆ. ಆತನಿಂದ 5 ಗ್ರಾಂ ಎಂಡಿಎಂಎ ಹಾಗೂ 350 ಗ್ರಾಂ ಗಾಂಜಾ ಎಣ್ಣೆ ಜಪ್ತಿ ಮಾಡಿದ್ದಾರೆ. 'ಠಾಣೆ ವ್ಯಾಪ್ತಿಯ ನಾಗಪ್ಪ ಬ್ಲಾಕ್‌ನಲ್ಲಿ ಸುತ್ತಾಡುತ್ತಿದ್ದ ಆರೋಪಿ, ಡ್ರಗ್ಸ್ ಮಾರುತ್ತಿದ್ದ. ಈ ಬಗ್ಗೆ ಮಾಹಿತಿ ತಿಳಿಯುತ್ತಿದ್ದಂತೆ ದಾಳಿ ಮಾಡಲಾಯಿತು' ಎಂದು ಪೊಲೀಸರು ಹೇಳಿದರು.

ನಾರಾಯಣ ನೇತ್ರಾಲಯದಲ್ಲಿ 'ರಿವರ್ಸಿಂಗ್ ಡಯಾಬಿಟಿಸ್' ಕ್ಲಿನಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾರಾಯಣ ನೇತ್ರಾಲಯದ ರಾಜಾಜಿನಗರ ಮತ್ತು ಎಲೆಕ್ಟ್ರಾನಿಕ್ ಸಿಟಿ ಶಾಖೆಗಳಲ್ಲಿ 'ರಿವರ್ಸಿಂಗ್ ಡಯಾಬಿಟಿಸ್' ಕ್ಲಿನಿಕ್ ಸ್ಥಾಪಿಸಲಾಗಿದೆ.

'ಈ ಕ್ಲಿನಿಕ್‌ನಿಂದ ಸಾರ್ವಜನಿಕರಿಗೆ ಅಪಾರ ಅನುಕೂಲವಾಗಲಿದೆ. ಮಧುಮೇಹವನ್ನು ನಿಯಂತ್ರಿಸುವ ವಿಧಾನಗಳ ಬಗ್ಗೆ ಇಲ್ಲಿ ಅರಿವು ಮೂಡಿಸುವ ಪ್ರಯತ್ನ ಮಾಡಲಾಗುವುದು' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಭುಜಂಗ ಶೆಟ್ಟಿ ಗುರುವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'20ರಿಂದ 75 ವಯೋಮಾನದ ವ್ಯಕ್ತಿಗಳಲ್ಲಿ ಮಧುಮೇಹದಿಂದ ಅಂಧತ್ವಕ್ಕೆ ಕಾರಣವಾಗುತ್ತಿದೆ. ಅಧಿಕ ಸಕ್ಕರೆ ಅಂಶದಿಂದ ಗ್ಲುಕೋಮಾ ಸೇರಿದಂತೆ ವಿವಿಧ ಕಾಯಿಲೆಗಳಿಗೆ ಕಾರಣವಾಗಬಹುದು. ಮಧುಮೇಹದಿಂದ ಉಂಟಾಗುವ ಕಣ್ಣಿನ ಕಾಯಿಲೆಗಳನ್ನು ನಿರ್ದಿಷ್ಟವಾಗಿ ಪರಿಹರಿಸಲು ಮತ್ತು ಚಿಕಿತ್ಸೆ ನೀಡಲು 15 ತಜ್ಞರ ತಂಡವನ್ನು ನಾರಾಯಣ ನೇತ್ರಾಲಯ ನಿಯೋಜಿಸಿದೆ' ಎಂದು ವಿವರಿಸಿದರು.

'ನಾರಾಯಣ ನೇತ್ರಾಲಯದಲ್ಲಿ ಪ್ರತಿ ದಿನ ಸರಾಸರಿ 1500 ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದು, ಇವರಲ್ಲಿ ಶೇಕಡ 60ರಿಂದ 70ರಷ್ಟು ರೋಗಿಗಳು ಮಧುಮೇಹದಿಂದ ಬಳಲುತ್ತಿರುವುದು ಕಂಡು ಬಂದಿದೆ. ಮಧುಮೇಹದಿಂದ ಜೀವನದಲ್ಲಿ ಅಪಾರ ನೋವು ಸಹ ಅನುಭವಿಸುತ್ತಿದ್ದಾರೆ. ರೋಗಿಗಳಲ್ಲಿನ ಅಂಧತ್ವ ಭಯವನ್ನು ಹೋಗಲಾಡಿಸುವ ನಿಟ್ಟಿನಲ್ಲಿ ರಿವರ್ಸಿಂಗ್ ಡಯಾಬಿಟಿಸ್ ಚಿಕಿತ್ಸೆ ವಿಧಾನ ಕಂಡು ಹಿಡಿಯಲಾಯಿತು. ಈ ಮೂಲಕ ಮಧುಮೇಹ ಕಣ್ಣಿನ ಕಾಯಿಲೆಯಿಂದ ಲಕ್ಷಾಂತರ ಜನರನ್ನು ಉಳಿಸುವ ಪ್ರಯತ್ನ ಕೈಗೊಳ್ಳಲಾಗಿದೆ' ಎಂದು ಭುಜಂಗ ಶೆಟ್ಟಿ ವಿವರಿಸಿದರು.

ನಗರದಲ್ಲಿ ಇಂದು

ಪ್ರಥಮ ವರ್ಷದ ಬಿ.ಟೆಕ್, ಬಿ.ಆರ್ಕ್ ಮತ್ತು ಬಿ.ಫಾರ್ಮ ತರಗತಿಗಳ ಉದ್ಘಾಟನಾ ಸಮಾರಂಭ: ಮುಖ್ಯ ಅತಿಥಿ: ಡಾ. ಪ್ರದೀಪ್ ಕುಮಾರ್ ಥಾಕರ್, ಗೌರವ ಅತಿಥಿ: ಪ್ರೊ.ಡಿ. ಜವಹರ್, ಅಧ್ಯಕ್ಷತೆ: ಡಾ.ಎಂ.ಆರ್. ದೊರೆಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಿಇಎಸ್ ವಿಶ್ವವಿದ್ಯಾಲಯ, ಬನಶಂಕರಿ 3ನೇ ಹಂತ, ಬೆಳಿಗ್ಗೆ 10

ಪ್ರಭುಚನ್ನಬಸವ ಸ್ವಾಮೀಜಿ ರಚಿಸಿರುವ 'ಮಹಾತ್ಮರ ಚರಿತಾಮೃತ' ಗ್ರಂಥ ಲೋಕಾರ್ಪಣೆ: ಸಾನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ತೋಂಟದ ಸಿದ್ಧರಾಮ ಸ್ವಾಮೀಜಿ, ಶಿವಮೂರ್ತಿ ಮುರುಘಾ ಶರಣರು, ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಬಸವಲಿಂಗ ಪಟ್ಟದೇವರು, ಶಿವರುದ್ರ ಸ್ವಾಮೀಜಿ, ಉದ್ಘಾಟನೆ: ನ್ಯಾ. ಶಿವರಾಜ ವಿ. ಪಾಟೀಲ, ಪುಸ್ತಕ ಲೋಕಾರ್ಪಣೆ: ಬಸವರಾಜ ಬೊಮ್ಮಾಯಿ, ಅಧ್ಯಕ್ಷತೆ: ವಿ. ಸೋಮಣ್ಣ, ಮುಖ್ಯ ಅತಿಥಿ: ಜಿ.ಎಸ್. ಪರಮಶಿವಯ್ಯ, ಗ್ರಂಥ ಕುರಿತು ಮಾತನಾಡುವವರು: ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಆಶಯ ನುಡಿ: ಡಾ.ಸಿ. ಸೋಮಶೇಖರ, ಆಯೋಜನೆ: ಮೋಟಗಿಮಠ, ಸ್ಥಳ: ಶ್ರೀ ಬಸವೇಶ್ವರ ಸುಜ್ಞಾನಮಂಟಪ, ವಿಜಯನಗರ, ಬೆಳಿಗ್ಗೆ 10.30

ಸಾಂಸ್ಕೃತಿಕ ಸಂಘಟಕ, ಸಾಹಿತಿ ರಾಂ. ಕೆ. ಹನುಮಂತಯ್ಯ ಅವರ 61ರ ಅಭಿನಂದನಾ ಸಮಾರಂಭ: ಉದ್ಘಾಟನೆ: ಗುರುರಾಜ ಕರಜಗಿ, ಅಧ್ಯಕ್ಷತೆ: ಎಂ. ತಿಮ್ಮಯ್ಯ, ಲೋಕಾರ್ಪಣೆ: ವರದಾ ಶ್ರೀನಿವಾಸ್, ಮುಖ್ಯ ಅತಿಥಿ: ಡಿ.ಸಿ. ರಾಜಪ್ಪ, ಡಾ.ಟಿ.ಎಚ್. ಆಂಜನಪ್ಪ, ಸ್ಥಳ: ಸೆಮಿನಾರ್ ಹಾಲ್, ಶೇಷಾದ್ರಿಪುರ ಕಾಲೇಜು, ಬೆಳಿಗ್ಗೆ 10.45

ರಾಜ್ಯಮಟ್ಟದ ವಿಚಾರ ಸಂಕಿರಣ: 'ಧರ್ಮ ಮತ್ತು ಲಿಂಗತ್ವ/ಲೈಂಗಿಕತೆ', ದಿವ್ಯ ಸಾನಿಧ್ಯ: ಜ್ಞಾನ ಪ್ರಕಾಶ ಸ್ವಾಮೀಜಿ, ಅಕ್ಬರ್ ಅಲಿ, ಫಾ. ಜಾರ್ಜ್,

ನಾಟಕ ಪ್ರದರ್ಶನ: 'ವಾರಸುದಾರ', ನಿರ್ದೇಶನ: ಎಂ.ಎಸ್. ಸತ್ಯು, ರಚನೆ: ಜಯರಾಮ್ ರಾಯಪುರ, ಸಹ ನಿರ್ದೇಶನ: ಎಂ.ಸಿ. ಆನಂದ್, ಸಂಗೀತ: ಸಮೀರ್ ಕುಲಕರ್ಣಿ, ನೃತ್ಯ ಸಂಯೋಜನೆ: ನಂದಿನಿ ಮೆಹ್ತಾ, ವಸ್ತ್ರ ವಿನ್ಯಾಸ: ಜಯಂತಿ ಮರುಳಸಿದ್ದಪ್ಪ, ಆಯೋಜನೆ: ಸಮುದಾಯ ಬೆಂಗಳೂರು, ಸ್ಥಳ: ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್, ದೊಮ್ಮಲೂರು, ಸಂಜೆ 6

'ಸಮುದಾಯದ ಸವಾಲುಗಳು ಮತ್ತು ಕಾನೂನುಗಳು': ರೇವತಿ ಎ., ಅಕ್ಷತ ಕೆ.ಸಿ., ಆಯೋಜನೆ: ಅನೇಕ ಸಂಸ್ಥೆ, ಸ್ಥಳ: ಎಸ್‌ಸಿಎಂ ಹೌಸ್, 2ನೇ ಕ್ರಾಸ್, ಮಿಷನ್ ರಸ್ತೆ, ಸಂಪಂಗಿರಾಮ ನಗರ, ಬೆಳಿಗ್ಗೆ 11

ಮಾಸದ ಮಾತುಕತೆ-ವಿಚಾರ ಸಂಕಿರಣ: 'ಕನ್ನಡ ಪುಸ್ತಕೋದ್ಯಮ ಮತ್ತು ಮಾಧ್ಯಮ–ಒಂದು ಅರ್ಥಪೂರ್ಣ ಸಂವಾದ', ಉದ್ಘಾಟನೆ: ಕಮಲಾ ಹಂಪನಾ, ಅಧ್ಯಕ್ಷತೆ: ನಿಡಸಾಲೆ ಪುಟ್ಟಸ್ವಾಮಯ್ಯ, ಭಾಗವಹಿಸುವವರು: ಹರಿಪ್ರಕಾಶ್ ಕೋಣೆಮನೆ, ಸೂರ್ಯಪ್ರಕಾಶ್ ಪಂಡಿತ್, ಜೋಗಿ, ನಾಗರಾಜ ಇಳೆಗುಂಡಿ, ಉಪಸ್ಥಿತಿ: ಆರ್. ದೊಡ್ಡೇಗೌಡ, ಆಯೋಜನೆ: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘ, ಸ್ಥಳ: ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಸಂಜೆ 4

ಜಯರಾಮ್ ರಾಯಪುರ ಅವರ 'ವಾರಸುದಾರ' ಕೃತಿ ಬಿಡುಗಡೆ: ಅತಿಥಿಗಳು: ಎಚ್.ಎಸ್. ಪ್ರಕಾಶ್, ಬಿ.ಎನ್. ಬಚ್ಚೇಗೌಡ, ಐ.ಎಂ. ವಿಠಲ ಮೂರ್ತಿ, ಆಯೋಜನೆ: ಸಮಾಜಮುಖಿ ಪ್ರಕಾಶನ, ಸ್ಥಳ: ಬೆಂಗಳೂರು ಇಂಟರ್ ನ್ಯಾಷನಲ್ ಸೆಂಟರ್ (ಬಿಐಸಿ), ದೊಮ್ಮಲೂರು, ಸಂಜೆ 5

'ಅಖಂಡ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ತೃತೀಯ ಆಂದೋಲನ' ವಿಚಾರ ಸಂಕಿರಣ,

ವಿಶ್ವೇಶ್ವರಯ್ಯ ರಾಷ್ಟ್ರೀಯ ಸಾಹಿತ್ಯ ಪ್ರಶಸ್ತಿ ಪ್ರದಾನ: ದಿವ್ಯ ಸಾನಿಧ್ಯ: ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಆಶೀರ್ವಚನ: ರಮಾನಂದ ಗುರೂಜಿ, ಉದ್ಘಾಟನೆ: ಎಚ್. ವಿಶ್ವನಾಥ್, ಪುಸ್ತಕ ಲೋಕಾರ್ಪಣೆ: ಡಾ.ಸಿ. ಸೋಮಶೇಖರ್, ಪ್ರಶಸ್ತಿ ವಿತರಣೆ: ನೆ.ಲ. ನರೇಂದ್ರಬಾಬು, ಸಿ.ವಿ. ಚಂದ್ರಶೇಖರ್, ಶಂಕರ್ ಭಟ್, ಶೇಖರಗೌಡ ಮಾಲಿಪಾಟೀಲ್, ಮುಖ್ಯ ಅತಿಥಿ: ಮೀನಾ, ಆಯೋಜನೆ: ಭಾರತರತ್ನ ಸರ್.ಎಂ. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಸಂಜೆ 5.30

ಉಪನ್ಯಾಸ: ಪಂಡಿತ್ ದೀನ್ ದಯಾಳ್ ಉಪಾಧ್ಯಾಯ ಚಿಂತನೆ, ಉದ್ಘಾಟನೆ: ವಿ. ನಾಗರಾಜ್, ಉಪನ್ಯಾಸ: ಡಾ. ಸಂತೋಷ್ ಕುಮಾರ್ ಪಿ.ಕೆ., ಅಧ್ಯಕ್ಷತೆ: ಡಾ. ಅಜಕ್ಕಳ ಗಿರೀಶ್ ಭಟ್, ಆಯೋಜನೆ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಶನಿವಾರ, ಸೆಪ್ಟೆಂಬರ್ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 267 | ಪುಟ 24
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ

ಕೋವಿಡ್ ಕಾಲದಲ್ಲಿ ‘ಪಾಸಿಟಿವ್’ ಎನ್ನುವ ಪದ ನೆಗೆಟಿವ್ ಆಗಿ ಕಾಡುತ್ತಿರುವ ದಿನಗಳಲ್ಲಿ ಜಾಹೀರಾತು ಪ್ರಪಂಚದಲ್ಲಿ ಬದಲಾಗುತ್ತಿರುವ ಹೆಣ್ಣಿನ ಸ್ಥಾನಮಾನಗಳು ಒಂದರ್ಥದಲ್ಲಿ ‘ಪಾಸಿಟಿವ್’ ಆಗಿ ಕಾಣುತ್ತಿವೆ.



ಚರ್ಚೆ
ಅಕ್ರಮ ಧಾರ್ಮಿಕ ಕಟ್ಟಡಗಳ ರಕ್ಷಣೆಗೆ ಕಾಯ್ದೆ ರೂಪಿಸಿರುವ ಕರ್ನಾಟಕ ಸರ್ಕಾರದ ಕ್ರಮ ಸರಿಯೇ? 5

ಎನ್‌ಡಿಎ ಪರೀಕ್ಷೆ: ಮಹಿಳೆಯರಿಗೆ ಅವಕಾಶ ನೀಡಿದ ಯುಪಿಎಸ್‌ಸಿ 10

ಜಾತಿಗಣತಿಗೆ ಆಗ್ರಹ: ಬಿಜೆಪಿ ಆಕ್ರೋಶ 10

ಸೆನ್ಸೆಕ್ಸ್	ನಿಫ್ಟಿ	₹/$
60,048 ▲	17,853 ▲	73.68 ▼

ಶಾಂತಿಭಂಗ ತಡೆಗಾಗಿ ಮಸೂದೆ: ಸಚಿವ ಜೆ.ಸಿ. ಮಾಧುಸ್ವಾಮಿ ಸ್ಪಷ್ಟನೆ

‘ಧಾರ್ಮಿಕ ಕಟ್ಟಡ ರಕ್ಷಣೆ ತಾತ್ಕಾಲಿಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ಧಾರ್ಮಿಕ ಕಟ್ಟಡಗಳ (ಸಂರಕ್ಷಣೆ) ಮಸೂದೆ –2021’ರ ಅಡಿಯಲ್ಲಿ ಯಾವುದೇ ರೀತಿಯ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನೂ ಸಕ್ರಮಗೊಳಿಸುವುದಿಲ್ಲ. ಅಂತಹ ರಚನೆಗಳಿಗೆ ತಾತ್ಕಾಲಿಕ ರಕ್ಷಣೆಯನ್ನಷ್ಟೇ ಈ ಮಸೂದೆ ನೀಡಲಿದೆ’ ಎಂದು ಕಾನೂನು ಸಚಿವ ಜೆ.ಸಿ. ಮಾಧುಸ್ವಾಮಿ ಸ್ಪಷ್ಟಪಡಿಸಿದರು.

ಮಾಧುಸ್ವಾಮಿ

ವಿಧಾನ ಪರಿಷತ್‌ನಲ್ಲಿ ಶುಕ್ರವಾರ ಮಸೂದೆ ಮಂಡಿಸಿ ಮಾತನಾಡಿದ ಅವರು, ‘ಸುಪ್ರೀಂಕೋರ್ಟ್ ಆದೇಶ ಪಾಲನೆಗೆ ಧಾರ್ಮಿಕ ಕಟ್ಟಡಗಳ ತೆರವು ಕಾರ್ಯಾಚರಣೆಯನ್ನು ಅಧಿಕಾರಿಗಳು ಆರಂಭಿಸಿದ್ದರು. ಇದರಿಂದ ಸಮಾಜದಲ್ಲಿ ಶಾಂತಿಭಂಗ ಆಗುವ ಅಪಾಯ ಎದುರಾಗಿದೆ. ಈ ಸಮಸ್ಯೆಯನ್ನು ಪರಿಹರಿಸಲು ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ತಾತ್ಕಾಲಿಕವಾಗಿ ರಕ್ಷಣೆ ಒದಗಿಸುವುದಕ್ಕೆ ಸೀಮಿತವಾಗಿ ಮಸೂದೆ ತರಲಾಗಿದೆ’ ಎಂದು ವಿವರಿಸಿದರು.

ಸಾರ್ವಜನಿಕ ಸ್ಥಳಗಳಲ್ಲಿರುವ ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಸುಪ್ರೀಂಕೋರ್ಟ್‌ನಲ್ಲಿ ಇನ್ನೂ ಬಾಕಿ ಇದೆ. ನ್ಯಾಯಾಲಯದ ಅಂತಿಮ ಆದೇಶ ಬರುವವರೆಗೆ ಅಥವಾ ರಾಜ್ಯ ಸರ್ಕಾರದ ಮುಂದಿನ ತೀರ್ಮಾನದವರೆಗೆ ಅಂತಹ ಧಾರ್ಮಿಕ ಕಟ್ಟಡಗಳಿಗೆ ಈ ಮಸೂದೆ ರಕ್ಷಣೆ ನೀಡಲಿದೆ ಎಂದರು.

ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ಸಂಬಂಧಿಸಿದಂತೆ ಸರ್ಕಾರ ನಿರ್ದಿಷ್ಟವಾಗಿ ಒಂದು ತೀರ್ಮಾನಕ್ಕೆ ಬರಲೇಬೇಕಿದೆ.

> **ದೇವಸ್ಥಾನ ತೆರವುಗೊಳಿಸುವ ಸರ್ಕಾರದ ಕ್ರಮಕ್ಕೆ ಆಕ್ರೋಶ ವ್ಯಕ್ತವಾಗಿದೆ. ಈಗ ಮುಖ ಉಳಿಸಿಕೊಳ್ಳಲು ಮಸೂದೆ ತರಲಾಗಿದೆ**
> **ಎಸ್‌.ಆರ್‌. ಪಾಟೀಲ,** ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕ

ಪ್ರತಿ ಪ್ರಕರಣವನ್ನೂ ಪ್ರತ್ಯೇಕವಾಗಿ ಪರಿಶೀಲಿಸಿ ತೀರ್ಮಾನ ಕೈಗೊಳ್ಳುವ ಯೋಚನೆಯಿದೆ. ಅಲ್ಲಿಯವರೆಗೂ ಧಾರ್ಮಿಕ ಕಟ್ಟಡಗಳನ್ನು ತೆರವು ಮಾಡದಂತೆ ಈ ಮಸೂದೆ ತಡೆಯಲಿದೆ. ಸಾರ್ವಜನಿಕ ಸ್ಥಳಗಳಲ್ಲಿ ಹೊಸದಾಗಿ ಯಾವುದೇ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ನಿರ್ಮಿಸದಂತೆಯೂ ಮಸೂದೆ ನಿರ್ಬಂಧಿಸಲಿದೆ ಎಂದು ಮಾಧುಸ್ವಾಮಿ ಹೇಳಿದರು.

2009ರಲ್ಲಿ ಗುಜರಾತ್‌ನ ಅಹಮದಾಬಾದ್‌ನಲ್ಲಿ ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವು ಮಾಡಲಾಗಿತ್ತು. ಅದನ್ನು ಪ್ರಶ್ನಿಸಿ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಕೆಯಾಗಿದ್ದ ಅರ್ಜಿಯ ವಿಚಾರಣೆ ವೇಳೆ ಇಡೀ ದೇಶಕ್ಕೆ ಅನ್ವಯಿಸುವಂತೆ ಸುಪ್ರೀಂಕೋರ್ಟ್ ನಿರ್ದೇಶನಗಳನ್ನು ನೀಡಿದೆ. ಸುಪ್ರೀಂಕೋರ್ಟ್ ಸೂಚನೆಯನ್ನು ಪಾಲಿಸಬೇಕೆಂಬ ಅಧಿಕಾರಿಗಳ ತೀರ್ಮಾನದಿಂದ ಈಗ ರಾಜ್ಯದಲ್ಲಿ ಸಮಸ್ಯೆ ಸೃಷ್ಟಿಯಾಗಿದೆ. ಸೌಹಾರ್ದ ಕಾಯುವುದಕ್ಕೆ ಪೂರಕವಾಗಿ ಮಸೂದೆ ತರಲಾಗಿದೆ ಎಂದರು.

ಇದಕ್ಕೆ ಕಾಂಗ್ರೆಸ್‌ನ ಪಿ.ಆರ್. ರಮೇಶ್ ಅವರು, ‘ಈ ಮಸೂದೆ ದುರ್ಬಳಕೆ ಆಗದಂತೆ ತಡೆಯಬೇಕು. ರಕ್ಷಣೆ ಒದಗಿಸಲಾಗುತ್ತದೆ ಎಂಬ ಭಾವನೆಯಿಂದ ರಾತ್ರೋರಾತ್ರಿ ಹೊಸದಾಗಿ ಧಾರ್ಮಿಕ ಕಟ್ಟಡಗಳನ್ನು ಕಟ್ಟುವ ಅಪಾಯವಿದೆ’ ಎಂದರು.

ಧ್ವನಿಮತದ ಮೂಲಕ ಅಂಗೀಕಾರ: ಚರ್ಚೆಯ ಬಳಿಕ ಧ್ವನಿಮತದ ಮೂಲಕ ಮಸೂದೆಯನ್ನು ಅಂಗೀಕರಿಸಲಾಯಿತು. ವಿಧಾನಸಭೆ ಈ ಮಸೂದೆಗೆ ಮಂಗಳವಾರ ಒಪ್ಪಿಗೆ ನೀಡಿತ್ತು.

‘ಮೌಢ್ಯ ಬಿತ್ತುವ ತಾಣಗಳು’

ಅನಧಿಕೃತ ಧಾರ್ಮಿಕ ಕಟ್ಟಡಗಳಿಗೆ ರಕ್ಷಣೆ ಒದಗಿಸಲು ನಾಗರಿಕ ಸರ್ಕಾರವೊಂದು ಮಸೂದೆ ಮಂಡಿಸುವುದು ಸಂವಿಧಾನ ವಿರೋಧಿ ನಡೆ. ಎಲ್ಲ ಧರ್ಮಗಳ ಧಾರ್ಮಿಕ ಕಟ್ಟಡಗಳೂ ಮೌಢ್ಯ ಬಿತ್ತುವ ತಾಣಗಳಾಗಿವೆ. ಅಸಮಾನತೆ, ಅಸ್ಪೃಶ್ಯತೆಯನ್ನು ಪೋಷಿಸುತ್ತಿವೆ. ಅಂತಹ ಅಕ್ರಮ ಕಟ್ಟಡಗಳನ್ನು ಏಕೆ ರಕ್ಷಿಸಬೇಕು’ ಎಂದು ಜೆಡಿಎಸ್‌ನ ಮರಿತಿಬ್ಬೇಗೌಡ ಆಕ್ರೋಶದಿಂದ ಪ್ರಶ್ನಿಸಿದರು. ಸುಪ್ರೀಂಕೋರ್ಟ್ ಆದೇಶ ಪಾಲಿಸಿ, ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ತೆರವು ಮಾಡಬೇಕು. ಅಸಮಾನತೆಯನ್ನು ತೊಡೆದುಹಾಕಲು ಸರ್ಕಾರ ಕಾನೂನು ಮಾಡಬೇಕು. ಅನಧಿಕೃತ ಧಾರ್ಮಿಕ ಕಟ್ಟಡಗಳನ್ನು ರಕ್ಷಿಸುವುದರಿಂದ ಸಮಾಜಕ್ಕೆ ಯಾವುದೇ ರೀತಿಯಲ್ಲೂ ಒಳಿತಾಗುವುದಿಲ್ಲ ಎಂದು ಹೇಳಿದರು.

ಮಸೂದೆಯಲ್ಲಿ ಏನಿದೆ?

‘ಕೋಮು ಸೌಹಾರ್ದ ಕಾಪಾಡುವ ಸಲುವಾಗಿ ಮತ್ತು ಸಾರ್ವಜನಿಕರ ಯಾವುದೇ ಧಾರ್ಮಿಕ ಭಾವನೆಗಳಿಗೆ ನೋವುಂಟಾಗದಂತೆ ತಡೆಯುವ ಉದ್ದೇಶದಿಂದ ಈ ಕಾಯ್ದೆಯ ಜಾರಿಯಾದ ದಿನಾಂಕಕ್ಕೆ ಮುಂಚೆ ಸಾರ್ವಜನಿಕ ಸ್ಥಳದಲ್ಲಿ ನಿರ್ಮಿಸಲಾದ ಧಾರ್ಮಿಕ ಕಟ್ಟಡಗಳ ಸಂರಕ್ಷಣೆಗೆ ನಿಯಮಗಳನ್ನು ರೂಪಿಸಲು ಅವಕಾಶ ಕಲ್ಪಿಸುವುದು ಈ ಮಸೂದೆಯ ಪ್ರಮುಖ ಉದ್ದೇಶ’ ಎಂದು ತಿಳಿಸಲಾಗಿದೆ.

ಈ ಮಸೂದೆ ಕಾಯ್ದೆಯ ರೂಪದಲ್ಲಿ ಜಾರಿಯಾದ ದಿನದಿಂದ ಸಾರ್ವಜನಿಕ ಸ್ಥಳಗಳಲ್ಲಿ ಅಂತಹ ಅನಧಿಕೃತ ಧಾರ್ಮಿಕ ಕಟ್ಟಡಗಳ ನಿರ್ಮಾಣವನ್ನು ನಿರ್ಬಂಧಿಸುವುದು ಕೂಡ ಉದ್ದೇಶಗಳಲ್ಲಿ ಸೇರಿದೆ.

ರಾತ್ರಿ 10ರಿಂದ ಬೆಳಿಗ್ಗೆ 5ವರೆಗೆ ಕರ್ಫ್ಯೂ: ದಸರಾ ಆಚರಣೆಗೆ ಪ್ರತ್ಯೇಕ ಮಾರ್ಗಸೂಚಿ

ಅ.1ರಿಂದ ಪೂರ್ಣ ತರಗತಿ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪ್ರಕರಣಗಳ ದೃಢಪ್ರಮಾಣ ದರ ಶೇಕಡ 0.66ಕ್ಕೆ ಕುಸಿದಿರುವುದರಿಂದ ಅಕ್ಟೋಬರ್ 1ರಿಂದ ಆರನೇ ತರಗತಿಯಿಂದ ದ್ವಿತೀಯ ಪಿಯುಸಿವರೆಗಿನ ವಿದ್ಯಾರ್ಥಿಗಳಿಗೆ ಪೂರ್ಣ ಪ್ರಮಾಣದ ತರಗತಿಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ.



ಬಸವರಾಜ ಬೊಮ್ಮಾಯಿ

ಶುಕ್ರವಾರ ಕೋವಿಡ್ ನಿಯಂತ್ರಣ ಕಾರ್ಯಪಡೆ ಸಭೆ ನಡೆಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ‘ಕೋವಿಡ್ ದೃಢಪ್ರಮಾಣ ದರ ಶೇ 1ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ವಾರದಲ್ಲಿ ಐದು ದಿನಗಳ ಕಾಲ ಆರರಿಂದ ದ್ವಿತೀಯ ಪಿಯುಸಿವರೆಗಿನ ಶೇ 100ರಷ್ಟು ವಿದ್ಯಾರ್ಥಿಗಳಿಗೆ ತರಗತಿ ನಡೆಸಲಾಗುವುದು. ಶನಿವಾರ ಮತ್ತು ಭಾನುವಾರ ತರಗತಿ ಕೊಠಡಿಗಳನ್ನು ಸ್ಯಾನಿಟೈಸ್ ಮಾಡಲಾಗುವುದು. ದೃಢಪ್ರಮಾಣ ದರ ಶೇ 1ಕ್ಕಿಂತ ಹೆಚ್ಚಿರುವ ಜಿಲ್ಲೆಗಳಲ್ಲಿ ಈಗಿರುವಂತೆ ದಿನ ಬಿಟ್ಟು ದಿನ ಅರ್ಧದಷ್ಟು ವಿದ್ಯಾರ್ಥಿಗಳಿಗೆ ಸರದಿಯ ಮೇಲೆ ತರಗತಿಗಳು ನಡೆಯಲಿವೆ’ ಎಂದರು.

ಪಬ್ ಆರಂಭಕ್ಕೂ ಒಪ್ಪಿಗೆ: ಅ.3ರಿಂದ ಪಬ್‌ಗಳ ಆರಂಭಕ್ಕೆ ಅನುಮತಿ ನೀಡಲಾಗಿದೆ. ಚಿತ್ರಮಂದಿರಗಳಿಗೆ ಅನ್ವಯವಾಗುವ ಮಾರ್ಗಸೂಚಿಗಳು ಪಬ್‌ಗಳಿಗೂ ಅನ್ವಯವಾಗುತ್ತವೆ ಎಂದು ಮುಖ್ಯಮಂತ್ರಿ ಪ್ರಕಟಿಸಿದರು.

ದಸರಾ ಹಬ್ಬಕ್ಕೆ ಸಂಬಂಧಿಸಿದಂತೆಯೂ ಸಭೆಯಲ್ಲಿ ಚರ್ಚಿಸಲಾಗಿದೆ. ದಸರಾ ಆಚರಣೆಗೆ ಸಂಬಂಧಿಸಿದಂತೆ ಪ್ರತ್ಯೇಕ ಮಾರ್ಗಸೂಚಿಗಳನ್ನು ಹೊರಡಿಸಲಾಗುವುದು ಎಂದು ಹೇಳಿದರು.

ಯಾದಗಿರಿ, ರಾಯಚೂರು, ಕಲಬುರ್ಗಿ ಹಾಗೂ ಮೈಸೂರು ಜಿಲ್ಲೆಗಳಲ್ಲಿ ಕೋವಿಡ್ ಲಸಿಕೆ ನೀಡುವುದನ್ನು ಹೆಚ್ಚಿಸಲಾಗುವುದು. ಅಂತರ ರಾಜ್ಯ ಗಡಿ ಭಾಗದ ಜಿಲ್ಲೆಗಳಲ್ಲಿ ನಿಗಾ ವಹಿಸಲಾಗುವುದು ಎಂದರು.

ರಾತ್ರಿ ಕರ್ಫ್ಯೂ ಸಡಿಲ: ರಾತ್ರಿ ಕರ್ಫ್ಯೂ ಅವಧಿಯನ್ನು ಇನ್ನೂ ಒಂದು ಗಂಟೆ ಸಡಿಲಿಕೆ ಮಾಡಲಾಗಿದೆ. ರಾತ್ರಿ 10ರಿಂದ ಬೆಳಿಗ್ಗೆ 5ರವರೆಗೆ ಮಾತ್ರ ರಾತ್ರಿ ಕರ್ಫ್ಯೂ ಜಾರಿಯಲ್ಲಿರಲಿದೆ ಎಂದು ಬೊಮ್ಮಾಯಿ ಹೇಳಿದರು.

ಚಿತ್ರಮಂದಿರ ಶೇ 100ರಷ್ಟು ಆಸನ ಭರ್ತಿಗೆ ಅನುಮತಿ

ಕೋವಿಡ್ ದೃಢಪ್ರಮಾಣ ದರ ಶೇ 1ಕ್ಕಿಂತ ಕಡಿಮೆ ಇರುವ ಜಿಲ್ಲೆಗಳಲ್ಲಿ ಅ. 1ರಿಂದ ಚಿತ್ರಮಂದಿರ, ಮಲ್ಟಿಪ್ಲೆಕ್ಸ್, ರಂಗಮಂದಿರ, ಸಭಾಂಗಣಗಳಲ್ಲಿ ಪೂರ್ಣ ಪ್ರಮಾಣದ ಆಸನಗಳನ್ನು ಭರ್ತಿಮಾಡಲು ಅನುಮತಿ ನೀಡಲಾಗಿದೆ.

ಕೋವಿಡ್ ದೃಢಪ್ರಮಾಣ ದರ ಶೇ 1ಕ್ಕಿಂತ ಹೆಚ್ಚಿದ್ದರೆ ಈಗ ಇರುವಂತೆ ಶೇ 50ರಷ್ಟು ಆಸನಗಳನ್ನು ಮಾತ್ರ ಭರ್ತಿ ಮಾಡಬೇಕು. ಶೇ 2ಕ್ಕಿಂತ ಹೆಚ್ಚು ಪ್ರಕರಣ ಕಂಡುಬಂದರೆ ಚಿತ್ರಮಂದಿರಗಳನ್ನು ಬಂದ್ ಮಾಡಬೇಕು ಎಂದು ಬೊಮ್ಮಾಯಿ ತಿಳಿಸಿದರು.

ಗರ್ಭಿಣಿಯರು ಮತ್ತು ಹಿರಿಯ ನಾಗರಿಕರು ಚಿತ್ರಮಂದಿರಗಳಿಗೆ ಬರಬಾರದು. ಚಿತ್ರಮಂದಿರದ ಪ್ರವೇಶ ದ್ವಾರದಲ್ಲಿ ದೇಹದ ಉಷ್ಣಾಂಶ ತಪಾಸಣೆ ನಡೆಸಬೇಕು. ಪ್ರತಿ ಪ್ರದರ್ಶನದ ಬಳಿಕ ಶೌಚಾಲಯಗಳೂ ಸೇರಿದಂತೆ ಇಡೀ ಚಿತ್ರಮಂದಿರವನ್ನು ಸ್ವಚ್ಛಗೊಳಿಸಬೇಕು ಎಂದು ಶುಕ್ರವಾರ ಹೊರಡಿಸಿರುವ ಕೋವಿಡ್ ನಿಯಂತ್ರಣ ಮಾರ್ಗಸೂಚಿಯಲ್ಲಿ ಸ್ಪಷ್ಟಪಡಿಸಲಾಗಿದೆ.

60 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ (ಬಿಎಸ್‌ಇ)ಸಂವೇದ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರದ ವಹಿವಾಟಿನಲ್ಲಿ ಇತಿಹಾಸ ಸೃಷ್ಟಿಸಿತು. ಬ್ಯಾಂಕಿಂಗ್, ಹಣಕಾಸು ಮತ್ತು ಆಟೊ ಮೊಬೈಲ್ ವಲಯದ ಷೇರುಗಳ ಖರೀದಿಯಲ್ಲಿ ಹೂಡಿಕೆದಾರರು ಹೆಚ್ಚಿನ ಆಸಕ್ತಿ ತೋರಿಸಿದ ಕಾರಣದಿಂದಾಗಿ ಸೂಚ್ಯಂಕವು 163 ಅಂಶ ಏರಿಕೆ ಕಂಡಿತು. ಇದೇ ಮೊದಲ ಬಾರಿಗೆ 60 ಸಾವಿರ ಅಂಶದ ಗಡಿಯನ್ನು ದಾಟಿ ವಹಿವಾಟು ಕೊನೆಗೊಳಿಸಿತು. 8



ಒಳ ಪುಟಗಳು

ಟಾಂಗಾ ಏರಿ ಕಾಂಗ್ರೆಸ್ ನಾಯಕರ ಪ್ರತಿಭಟನೆ 6
ಗೂಗಲ್ ಪರ ಆದೇಶ ಹೊರಡಿಸಲು ಹೈಕೋರ್ಟ್ ನಕಾರ 10

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ಸಂ: ಬೆಂಅಪ್ರಾ/ಕಾಅ-1/(ಡಿಎಸ್‌ಕೆಎಲ್)/ಟೆಂ/01/2021-2022 ದಿನಾಂಕ : 23.09.2021

ಅಲ್ಪಾವಧಿ ಟೆಂಡರ್‌ಗೆ ಆಹ್ವಾನ (ಐಎಫ್‌ಟಿ)

(ಜಿಓಕೆ ಇ-ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ http://eproc.karnataka.gov.in ಮೂಲಕ)

ಆಯುಕ್ತರು, ಬೆಂ.ಅ.ಪ್ರಾ., ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಶಿವರಾಮ ಕಾರಂತ ಲೇಔಟ್ ವಿಭಾಗ-1, ಬೆಂಅಪ್ರಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಾಗಿ ಸಲಹಾ ಸೇವೆಗಳನ್ನು ಒದಗಿಸಲು ಅರ್ಹ ಸಲಹೆಗಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ. **ಕಾಮಗಾರಿಯ ಹೆಸರು : ಬೆಂಗಳೂರಿನ ಡಾ. ಶಿವರಾಮ ಕಾರಂತ ಲೇಔಟ್‌ಗೆ ರಸ್ತೆಗಳು, ಸಿ.ಡಿ. ಕಾಮಗಾರಿಗಳು, ಮಳೆ ನೀರು ಚರಂಡಿಗಳು, ಉಪಯೋಗಕಾರಿ ನಾಲೆಗಳು, ಒಳಚರಂಡಿ ವ್ಯವಸ್ಥೆ, ನೀರು ಸರಬರಾಜು ಮತ್ತು ವಿದ್ಯುತ್ ಸರಬರಾಜು ವ್ಯವಸ್ಥೆಗಳ ನಿರ್ಮಾಣಕ್ಕಾಗಿ ವಿನ್ಯಾಸ, ಡ್ರಾಯಿಂಗ್ ಮತ್ತು ಮೇಲ್ವಿಚಾರಣೆಗಾಗಿ ಯೋಜನಾ ನಿರ್ವಹಣೆ ಸಲಹಾ ಸೇವೆ.** ಇಎಂಡಿ: **ರೂ. 5.00 ಲಕ್ಷಗಳು.** ಇನ್ನಿತರೆ ಯಾವುದೇ ಮಾಹಿತಿಗೆ ವೆಬ್‌ಸೈಟ್ **https://eproc.karnataka.gov.in** ಗೆ ಲಾಗಿನ್ ಆಗಿ ಅಥವಾ ಈ ಕಛೇರಿಯನ್ನು ಸಂಪರ್ಕಿಸಿ.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಡಾ. ಶಿವರಾಮ ಕಾರಂತ ಬಡಾವಣೆ

BDA/PRO/TN/10/2021-22 ವಿಭಾಗ-1, ಬೆಂಅಪ್ರಾ, ಬೆಂಗಳೂರು

ಮಕ್ಕಳ ರಕ್ಷಣಾ ನಿರ್ದೇಶನಾಲಯ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು (ನ) ಜಿಲ್ಲೆ

ಡಾ|| ಎಂ. ಹೆಚ್. ಮರಿಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಹತ್ತಿರ, ಬೆಂಗಳೂರು-560029.

ದೂರವಾಣಿ: 080-26569344/9986264898. ವೆಬ್‌ಸೈಟ್: https://icps.karnataka.gov.in

ಕ್ರಮಾಂಕ: ಸ.ಶಿ.ಮಂ.ಬೆಂ(ನ).ಪ್ರಚಾರ.ನಿವಾಸಿ/2021-22 ದಿನಾಂಕ: 16-09-2021

ತಂದೆ ತಾಯಿಯ ಪತ್ತೆಗೆ ನೆರವು ನೀಡಿ



ದಾಲಿತ್



ಕೈಫ್

ಮಕ್ಕಳ ಹೆಸರು: ಕೈಫ್ ಮತ್ತು ದಾಲಿತ್. **ವಯಸ್ಸು:** 4 ವರ್ಷ ಹಾಗೂ 3 ವರ್ಷದ, **ತಂದೆ ಅಥವಾ ತಾಯಿಯ ಹೆಸರು:** ಗೊತ್ತಿಲ್ಲ. **ಯಾರಿಂದ ದಾಖಲು:** ದಿನಾಂಕ 30-10-2019 ರಂದು ಸಿಟಿ ಮಾರ್ಕೆಟ್ ಪೊಲೀಸ್ ಠಾಣಾ ಸರಹದ್ದಿನಲ್ಲಿ ವಾರಸುದಾರರು ಇಲ್ಲದೆ ನಿಂತಿದ್ದ 4 ವರ್ಷದ ಹಾಗೂ 3 ವರ್ಷದ ಕೈಫ್ ಮತ್ತು ದಾಲಿತ್ ಎಂಬ ಅಣ್ಣತಮ್ಮಂದಿರನ್ನು ಸಿಟಿ ಮಾರ್ಕೆಟ್ ಪೊಲೀಸ್ ಠಾಣಾ ಸಿಬ್ಬಂದಿ ಸರ್ಕಾರಿ ಶಿಶುಮಂದಿರ ಸಂಸ್ಥೆಗೆ ಪಾಲನೆ ಪೋಷಣೆಗೆಂದು ದಾಖಲಿಸಿರುತ್ತಾರೆ. **ಹುಟ್ಟಿದ ಸ್ಥಳ:** ಗೊತ್ತಿಲ್ಲ. **ಎತ್ತರ:** 92 ಸೆಂ.ಮೀ ಮತ್ತು 91 ಸೆಂ.ಮೀ, **ದೇಹದ ಬಣ್ಣ:** ಸಾಧಾರಣ ಗೋಧಿ ಬಣ್ಣ, **ಗುರುತಿಸುವ ಚಹರೆ:** -, **ಮಾನಸಿಕ ಮತ್ತು ದೈಹಿಕ ಸ್ಥಿತಿ:** ಸಾಧಾರಣ. ಮಗುವಿನ ಪೋಷಕರ ಬಗ್ಗೆ ತಿಳಿದವರು ಮೇಲ್ಕಂಡ ವಿಳಾಸ ಮತ್ತು ದೂರವಾಣಿ ಸಂಖ್ಯೆಯನ್ನು ಸಂಪರ್ಕಿಸಬಹುದು.

ಸಹಿ/-ಅಧೀಕ್ಷಕರು,
ಶಿಶುಮಂದಿರ, ಮ&ಮ.ಅ.ಇ.ಬೆಂ(ನ)ಜಿಲ್ಲೆ

ವಾ.ಸಾ.ಸಂ.ಇ/ಬೆಂ.ನಗರ/1628/ಆಕಾರ್/2021-22

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ

ಹಾಸನ ವಿಭಾಗ, ಬಿ.ಎಂ. ರಸ್ತೆ, ಹಾಸನ – 573 201.

ಸಂಖ್ಯೆ:ಕರಾಸ/ಹಾವಿ/ಸಂಚಾರ/ವಾಣಿಜ್ಯ/775,776,777 ದಿನಾಂಕ: 21-09-2021

ಇ-ಟೆಂಡರ್ ಪ್ರಕಟಣೆ ಸಂಖ್ಯೆ: 03/2021-21
ಮ್ಯಾನುಯಲ್ & ಸಂಧಾನ ಪ್ರಕಟಣೆ ಸಂಖ್ಯೆ: 02/2020-21

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಹಾಸನ ವಿಭಾಗದ ವ್ಯಾಪ್ತಿಗೆ ಬರುವ ಬಸ್ ನಿಲ್ದಾಣಗಳಲ್ಲಿ ಖಾಲಿಯಿರುವ / ಖಾಲಿಯಾಗಲಿರುವ ವಾಣಿಜ್ಯ ಮಳಿಗೆ, ತೆರದ ಜಾಗ, ಖಾಲಿ ನಿವೇಶನಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಪ್ರಕಟಣೆ ಸಂಖ್ಯೆ: **03/2021-22** ಹೊರಡಿಸಿದ್ದು, ಆನ್‌ಲೈನ್ ಮೂಲಕ ದಿನಾಂಕ: **18-10-2021ರಂದು 16.00 ಗಂಟೆಯೊಳಗೆ** ಅರ್ಜಿ ಸಲ್ಲಿಸಲು ಕೊನೆಯ ದಿನಾಂಕವಾಗಿರುತ್ತದೆ. ಇ-ಟೆಂಡರ್ ತೆರೆಯುವ ದಿನಾಂಕ: **22-10-2021ರಂದು 12.00 ಗಂಟೆಗೆ ನಿಗದಿಯಾಗಿರುತ್ತದೆ.** ಅದೇ ರೀತಿ ಮ್ಯಾನುಯಲ್ ಟೆಂಡರ್ ಪ್ರಕಟಣೆ ಸಂಖ್ಯೆ:**02/2021-22** ಹೊರಡಿಸಿದ್ದು, ದಿನಾಂಕ: **18-10-2021ರಂದು 16.00 ಗಂಟೆಯೊಳಗೆ** ಅರ್ಜಿ ಪಡೆದುಕೊಂಡು ದಿನಾಂಕ: **21-10-2021ರಂದು 12.00 ಗಂಟೆಯೊಳಗೆ** ಮುಚ್ಚಿದ ಲಕೋಟೆಯಲ್ಲಿ ಅರ್ಜಿಗಳನ್ನು **ವಿಭಾಗೀಯ ಕಛೇರಿ, ಸಂಚಾರ ಶಾಖೆ, ಹಾಸನ** ಇಲ್ಲಿ ಸಲ್ಲಿಸಬಹುದಾಗಿರುತ್ತದೆ. ಅದೇ ರೀತಿ ಖಾಲಿಯಿರುವ ವಾಣಿಜ್ಯ ಮಳಿಗೆ ಹಾಗೂ ಜಾಹೀರಾತು ಹೋರ್ಡಿಂಗ್ಸ್ ಮತ್ತು ಗ್ಲೋಸೈನ್ ಪ್ಯಾಕೇಜ್‌ಗಳಿಗೆ ವೈಯಕ್ತಿಕ ಸಂಧಾನ ಪ್ರಕಟಣೆ ಸಂಖ್ಯೆ: **02/2021-22** ಹೊರಡಿಸಿದ್ದು, ದಿನಾಂಕ: **07-10-2021ರಂದು 15.00 ಗಂಟೆಗೆ ವಿಭಾಗ ಮಟ್ಟದಲ್ಲಿ ಸಂಧಾನವನ್ನು ನಿಗದಿಪಡಿಸಲಾಗಿದೆ.**

ಹೆಚ್ಚಿನ ವಿವರಗಳಿಗಾಗಿ **ವಿಭಾಗೀಯ ಕಛೇರಿ,** ಕ.ರಾ.ರ.ಸಾ. ನಿಗಮ, **ಹಾಸನ ವಿಭಾಗ** ಇಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಲು ಕೋರಲಾಗಿದೆ. ದೂರವಾಣಿ ಸಂಖ್ಯೆ: **7760990511 / 9148813238 / 7353333336.**

ಸಹಿ/- ಹಿರಿಯ ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ. ನಿಗಮ, ಹಾಸನ ವಿಭಾಗ, ಹಾಸನ

ವಾಸಾಸಂಇ/ಬೆಂ.ನ/ಅಡ್ವರ್ಟೋರ್/1680/2021-22

ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಶಿವಮೊಗ್ಗ ಮಹಾನಗರ ಪಾಲಿಕೆ, ಶಿವಮೊಗ್ಗ.

ಕ್ರಮಾಂಕ:ಶಿಮನಪಾಶಿ:ಕಾವಿ-1:ಟೆಂಡರ್:28/21-22 ದಿನಾಂಕ:23.09.2021

ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಶಿವಮೊಗ್ಗ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಕಾಮಗಾರಿಗಳನ್ನು ನಿರ್ವಹಿಸಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧ್ಯಾದೇಶ 1999-2000ರ ಪ್ರಕಾರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ನಿಯಮದನ್ವಯ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ದ್ವಿ-ಲಕೋಟೆ ಟೆಂಡರ್ ಆಹ್ವಾನಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಗುತ್ತಿಗೆದಾರರು ವಿವರಗಳನ್ನು ವೆಬ್‌ಸೈಟ್ www.eproc.karnataka.gov.inನಲ್ಲಿ ಪಡೆದುಕೊಳ್ಳಬಹುದು.

1. ಪ್ರಿ ಬಿಡ್ ಮೀಟಿಂಗ್ ದಿನಾಂಕ: 01.10.2021 (ಬೆಳಗ್ಗೆ: 11.00 ಗಂಟೆಯ ನಂತರ) **2.** ಹೆಚ್ಚಿನ ವಿವರಗಳನ್ನು ಇ-ಪೋರ್ಟಲ್ ಮುಖಾಂತರ ಪಡೆಯಬಹುದು ಮತ್ತು ಇತರೇ ವಿವರಗಳನ್ನು ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.

ಕ್ರ.ಸಂ. 1. ಇಡೆಂಟ್ ಸಂಖ್ಯೆ: 116744 **ಕಾಮಗಾರಿಯ ವಿವರ:** Construction of Commercial Complex Building at Gandhi Nagar in Shivamogga District. **ಮೊತ್ತ (ರೂ.ಲಕ್ಷಗಳಲ್ಲಿ):** 300.00 **ಇ.ಎಂ.ಡಿ (ರೂ.ಗಳಲ್ಲಿ):** 450000.00 **ಕೆಲಸದ ಅವಧಿ:** 12 ತಿಂಗಳು **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 11.10.2021 **ಟೆಂಡರೆ ತೆರೆಯುವ ದಿನಾಂಕ:** 12.10.2021 **ಗುತ್ತಿಗೆದಾರರ ದರ್ಜೆ:** Class II and above

ಕ್ರ.ಸಂ. 2. ಇಡೆಂಟ್ ಸಂಖ್ಯೆ: 120551 **ಕಾಮಗಾರಿಯ ವಿವರ:** ಶಿವಮೊಗ್ಗ ನಗರದ ವಿವಿಧ ವಾರ್ಡ್ ಗಳಲ್ಲಿ ಮಳೆಯಿಂದ ಹಾನಿಗೊಳಗಾದ ರಸ್ತೆಗಳ ಗುಂಡಿಗಳನ್ನು ತುರ್ತಾಗಿ ವೆಟ್ ಮಿಕ್ಸ್ ಬಳಸಿ ಮುಚ್ಚುವ ಕಾಮಗಾರಿ **ಮೊತ್ತ (ರೂ.ಲಕ್ಷಗಳಲ್ಲಿ):** 18.80 **ಇ.ಎಂ.ಡಿ (ರೂ.ಗಳಲ್ಲಿ):** 47000.00 **ಕೆಲಸದ ಅವಧಿ:** 2 ತಿಂಗಳು **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:** 01.10.2021 **ಟೆಂಡರೆ ತೆರೆಯುವ ದಿನಾಂಕ:** 04.10.2021 **ಗುತ್ತಿಗೆದಾರರ ದರ್ಜೆ:** Class IV and above

ಸೂಚನೆ: ಟೆಂಡರ್‌ಗೆ ಸಂಬಂಧಪಟ್ಟ ಯಾವುದೇ ರೀತಿಯ ಬದಲಾವಣೆ ಅಥವಾ ತಿದ್ದುಪಡಿಯನ್ನು ಇ-ಪೋರ್ಟಲ್ ಮುಖಾಂತರ ಸೂಚಿಸಲಾಗುವುದು.

ಸಹಿ/- ಕಾರ್ಯಪಾಲಕ ಅಭಿಯಂತರರು,
ಶಿವಮೊಗ್ಗ ಮಹಾನಗರ ಪಾಲಿಕೆ ಶಿವಮೊಗ್ಗ.

ವಾ.ಸಾ.ಸಂ.ಇ/ಶಿ/ನಂ-94/09/ಎಂಸಿಎ/21-22/628

ಕರ್ನಾಟಕ ಜಾನಪದ ಅಕಾಡೆಮಿ

ಕನ್ನಡ ಭವನ, 2ನೇ ಮಹಡಿ, ಜೆ.ಸಿ. ರಸ್ತೆ,
ಬೆಂಗಳೂರು-560002. ಟೆಲಿಫ್ಯಾಕ್ಸ್. 080-22215509
ಇ-ಮೇಲ್ : registrar.janapada@gmail.com

ಕ್ರಮಾಂಕ: ಅರಿಕಾ/ಕಜಾಅ/ಇ-ಟೆಂಡರ್‌ವಿ.ಘ/ಗಿ.ಉ.ಯೋ/25/2021-22 ದಿನಾಂಕ: 23-09-2021

ಟೆಂಡರ್ ಪ್ರಕಟಣೆ

2015-16ನೇ ಸಾಲಿಗೆ ಸಂಬಂಧಪಟ್ಟಂತೆ 2021-22ನೇ ಸಾಲಿನಲ್ಲಿ ಕರ್ನಾಟಕ ಜಾನಪದ ಅಕಾಡೆಮಿ ವತಿಯಿಂದ ವಿಶೇಷ ಘಟಕ ಹಾಗೂ ಗಿರಿಜನ ಉಪಯೋಜನೆಯಡಿಯಲ್ಲಿ ಜಾನಪದ ಕಲಾವಿದರುಗಳ ಸಾಕ್ಷ್ಯಚಿತ್ರವನ್ನು ಉತ್ತಮ ಗುಣಮಟ್ಟದಲ್ಲಿ ನಿರ್ಮಾಣ ಮಾಡುವ ಸಂಬಂಧ ಅರ್ಹ ಆಸಕ್ತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಸ್ಥೆ/ನಿರ್ದೇಶಕರುಗಳಿಂದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ನಿಗದಿತ ನಮೂನೆಯಲ್ಲಿ ದ್ವಿ-ಲಕೋಟೆ (Technical & Financial) ವಿಧಾನದಲ್ಲಿ ಇ-ಟೆಂಡರ್ ಆಹ್ವಾನಿಸಲಾಗಿದೆ. ಸಾಕ್ಷ್ಯಚಿತ್ರವನ್ನು ಸಿದ್ಧಪಡಿಸಿಕೊಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಸಂಸ್ಥೆ/ನಿರ್ದೇಶಕರುಗಳಿಗೆ ಅವಕಾಶ ಇರುತ್ತದೆ. ಸಾಕ್ಷ್ಯಚಿತ್ರವನ್ನು ನಿರ್ಮಾಣ ಮಾಡುವ ನಿರ್ದೇಶಕರು/ಸಂಸ್ಥೆಯವರು ಆಯಾ ಸಮುದಾಯಕ್ಕೆ ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸಬೇಕು.

ಕ್ರ. ಸಂ.	ಸಾಕ್ಷ್ಯಚಿತ್ರ ನಿರ್ಮಾಣ ಮಾಡಬೇಕಾದ ಕಲಾವಿದರ ವಿವರ	ಸಮುದಾಯ	ಟೆಂಡರ್‌ಗೆ ನಿಗದಿಪಡಿಸಿದ ಅಂದಾಜು ಮೊತ್ತ	ಸಲ್ಲಿಸಬೇಕಾದ ಇಎಂಡಿ ಮೊತ್ತ
1	1) ಶ್ರೀ ಚಂದ್ರ ಶಾ. ಬೀದರ್ ಜಿಲ್ಲೆ- **ಹಾಡುಗಾರರು.** 2) ಶ್ರೀ ಹಗಲುವೇಷ ಅಶ್ವರಾಮಣ್ಣ, ಬಳ್ಳಾರಿ ಜಿಲ್ಲೆ – **ಹಗಲುವೇಷ.** 3) ಶ್ರೀಮತಿ ಹಲಗೆ ದುರ್ಗಮ್ಮ ಚಿತ್ರದುರ್ಗ ಜಿಲ್ಲೆ – **ಮಹಿಳಾತಮಟೆ** 4) ಶ್ರೀ ವೆಂಕಟರಮಣಸ್ವಾಮಿ, ಚಾಮರಾಜನಗರ ಜಿಲ್ಲೆ-**ಬೇಟೆಮನೆ ಸೇವೆ.** 5) ಶ್ರೀ ತಿಮ್ಮಯ್ಯ, ರಾಮನಗರ ಜಿಲ್ಲೆ- **ತಮಟೆ ವಾದನ**	ಪರಿಶಿಷ್ಟ ಜಾತಿ	ರೂ.5,00,000/-	ರೂ.10,000/- (ಹತ್ತು ಸಾವಿರ ರೂಪಾಯಿ)
2	1) ಶ್ರೀ ತೇಜು, ಉಡುಪಿ ಜಿಲ್ಲೆ-**ಕೊರಗರ ಡೋಲು/ಕೊಳಲು** 2) ಶ್ರೀ ಸೋಮಯ್ಯಗೊಂಡ, ಕಾರವಾರ ಜಿಲ್ಲೆ -**ಗೊಂಡರಢಕ್ಕೆ**	ಪರಿಶಿಷ್ಟ ಪಂಗಡ	ರೂ.2,00,000/-	ರೂ.4,000/- (ನಾಲ್ಕು ಸಾವಿರ ರೂಪಾಯಿ)

DIPR/DDU/YC/1669/2021-22 ಸಹಿ/- ರಿಜಿಸ್ಟ್ರಾರ್

ಜಯಂತಿ-ಕುಮರೇಶ್ ಸಂಗೀತ ಕಛೇರಿ ಇಂದು

ಬೆಂಗಳೂರು: ವಿವಿಧ್ ಆರ್ಟ್ ಆ್ಯಂಡ್ ಎಂಟರ್‌ಟೇನ್‌ಮೆಂಟ್ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಭವನದಲ್ಲಿ ಶನಿವಾರ (ಸೆ.25) ಸಂಜೆ 6.30ಕ್ಕೆ 'ಸ್ಟ್ರಿಂಗ್ಸ್ ಅಟ್ಯಾಚಡ್' ಪರಿಕಲ್ಪನೆಯಲ್ಲಿ ವಾದ್ಯ ಸಂಗೀತ ಕಾರ್ಯಕ್ರಮ ಹಮ್ಮಿಕೊಂಡಿದೆ.

ಖ್ಯಾತ ವಾದಕ ದಂಪತಿಯಾದ ಜಯಂತಿ ಅವರಿಂದ ವೀಣೆ ಹಾಗೂ ಕುಮರೇಶ್ ಅವರಿಂದ ವಯೊಲಿನ್ ವಾದನ ನಡೆಯಲಿದೆ. ಕಾರ್ಯಕ್ರಮದ ಟಿಕೆಟ್ ಪಡೆಯಲು ಮೊ. 9845989228ಕ್ಕೆ ಸಂಪರ್ಕಿಸಬಹುದು

ಕರ್ನಾಟಕ ಲೋಕಸೇವಾ ಆಯೋಗ

"ಉದ್ಯೋಗ ಸೌಧ", ಬೆಂಗಳೂರು - 560 001

ಸಂ: ಪಿಎಸ್‌ಸಿ ಇ(3)2185/2021-22 ದಿನಾಂಕ: 24.09.2021

ಪತ್ರಿಕಾ ಪ್ರಕಟಣೆ

ಆಯೋಗದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)800/2019-20, ದಿನಾಂಕ: 29.02.2021, ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)801/2019-20, ದಿನಾಂಕ: 29.02.2021 ಹಾಗೂ ಸೇರ್ಪಡೆ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ ಇ(3)4(ಎ)/2020-21, ದಿನಾಂಕ: 14.05.2020ರಡಿಯಲ್ಲಿ ಅಧಿಸೂಚಿಸಲಾದ 2019-20ನೇ ಸಾಲಿನ ಕಿರಿಯ ಸಹಾಯಕರು/ದ್ವಿತೀಯ ದರ್ಜೆ ಸಹಾಯಕರು ಹುದ್ದೆಗಳ ನೇಮಕಾತಿಗೆ ದಿನಾಂಕ: **19.09.2021ರಂದು** ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗಳ ಕೀ ಉತ್ತರಗಳನ್ನು ಆಯೋಗದ ಅಂತರ್ಜಾಲದಲ್ಲಿ **"http://kpsc.kar.nic.in/key answer"** ನಲ್ಲಿ ದಿನಾಂಕ: **22.09.2021ರಂದು** ಪ್ರಕಟಿಸಲಾಗಿದ್ದು, ಸದರಿ ಕೀ ಉತ್ತರಗಳ ಕುರಿತಂತೆ ಆಕ್ಷೇಪಣೆಗಳನ್ನು ಅಂತರ್ಜಾಲದಲ್ಲಿರುವ ನಿಗದಿತ ನಮೂನೆಯಲ್ಲಿ ಹಾಗೂ ಸದರಿ ನಮೂನೆಯಲ್ಲಿರುವ ಸೂಚನೆಗಳನ್ವಯ ದಿನಾಂಕ: **29.09.2021ರ ಸಂಜೆ 5.30ರೊಳಗೆ ಸಲ್ಲಿಸತಕ್ಕದ್ದು.** ನಂತರ ಸಲ್ಲಿಸಲಾಗುವ ಮನವಿಗಳನ್ನು ತಿರಸ್ಕರಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಆಯೋಗದ ವೆಬ್‌ಸೈಟ್ **http://kpsc.kar.nic.in/key answer** ಅನ್ನು ನೋಡುವಂತೆ ಸೂಚಿಸಿದೆ.

ಸಹಿ/-
(ಜಿ.ಸತ್ಯವತಿ)
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್, ತುಮಕೂರು

ಶ್ರೀ ಮಹಾಲಕ್ಷ್ಮೀ ಆರ್ಕೇಡ್, ಎಸ್.ಎಸ್.ಪುರಂ ಮುಖ್ಯರಸ್ತೆ,
ಕಾಫಿ ಬೋರ್ಡ್ ಕಾಲೋನಿ, ತುಮಕೂರು-572 102
ದೂರವಾಣಿ:0816-2278190, CIN:U74999KA2017PLC099774
ವೆಬ್‌ಸೈಟ್: www.smartcitytumakuru.in
ಇ-ಮೇಲ್: smartcitytumakuru@gmail.com

ಸಂಖ್ಯೆ:ತುಸ್ಮಾಸಿ/ಟೆಂಡರ್/ಸಿಆರ್/3-6/2021-22 ದಿನಾಂಕ: 22.09.2021

ಟೆಂಡರ್ ಪ್ರಕಟಣೆ

ತುಮಕೂರು ಸ್ಮಾರ್ಟ್‌ಸಿಟಿ ಯೋಜನೆಯಡಿಯಲ್ಲಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರು ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ "ತುಮಕೂರು ಜಿಲ್ಲಾ ಆಸ್ಪತ್ರೆ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಟ್ರಾಮಾಕೇರ್ ಸೆಂಟರ್‌ಗೆ ಈ ಕೆಳಕಂಡಂತೆ ವೈದ್ಯಕೀಯ ಯಂತ್ರೋಪಕರಣಗಳು, ಉಪಕರಣಗಳು ಹಾಗೂ ಪೀಠೋಪಕರಣಗಳ ಸರಬರಾಜು, ಅಳವಡಿಕೆ ಹಾಗೂ ತರಬೇತಿ ಜೊತೆಗೆ ಕಾರ್ಯಾರಂಭಕ್ಕಾಗಿ ಟೆಂಡರ್ ಆಹ್ವಾನಿಸಲಾಗಿದೆ. ಪಾವತಿಸಬೇಕಾಗಿರುವ ಇ.ಎಂ.ಡಿ ಮೊತ್ತವನ್ನು ಪ್ರತಿ ಉಪಕರಣಕ್ಕೆ ನಿಗದಿಪಡಿಸಿದ್ದು, ಟೆಂಡರ್ ದಾಖಲೆಗಳಲ್ಲಿ ತಿಳಿಸಲಾಗಿದೆ.

ಇಂಡೆಂಟ್ ನಂ.(1) **UDD/2021-22/IND299,** ವೈದ್ಯಕೀಯ ಉಪಕರಣಗಳ ವಿವರ; ವೈದ್ಯಕೀಯ ಉಪಕರಣಗಳು. **ಟೆಂಡರ್ ಮೊತ್ತ(ಲಕ್ಷಗಳಲ್ಲಿ): 165.64 (2) UDD/2021-22/IND300.** ವೈದ್ಯಕೀಯ ಉಪಕರಣಗಳ ವಿವರ; ಐ.ಸಿ.ಯು ಉಪಕರಣಗಳು. **ಟೆಂಡರ್ ಮೊತ್ತ (ಲಕ್ಷಗಳಲ್ಲಿ): 186.43. (3) UDD/2021-22/IND301** ವೈದ್ಯಕೀಯ ಉಪಕರಣಗಳ ವಿವರ; ಆಸ್ಪತ್ರೆ ಯಂತ್ರೋಪಕರಣಗಳು. **ಟೆಂಡರ್ ಮೊತ್ತ(ಲಕ್ಷಗಳಲ್ಲಿ): 201.00 (4) UDD/2021-22/IND302** ವೈದ್ಯಕೀಯ ಉಪಕರಣಗಳ ವಿವರ; ಸಾಮಾನ್ಯ ಪೀಠೋಪಕರಣ ಹಾಗೂ ಉಪಕರಣಗಳು. **ಟೆಂಡರ್ ಮೊತ್ತ(ಲಕ್ಷಗಳಲ್ಲಿ): 154.60.** ಟೆಂಡರ್ ದಾಖಲೆಯನ್ನು ದಿನಾಂಕ:**23.09.2021**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ ಪ್ರಿಬಿಡ್ ಸಭೆಯನ್ನು ದಿನಾಂಕ: **30.09.2021**ರಂದು ಬೆಳಿಗ್ಗೆ 11.00ಗಂಟೆಗೆ ಈ ಕಛೇರಿಯ ಮೇಲಿನ ವಿಳಾಸದಲ್ಲಿ ನಡೆಸಲು ನಿಗದಿಪಡಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **21.10.2021** 16.00ಗಂಟೆ ಮತ್ತು ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **22.10.2021** 16.00ಗಂಟೆ. ಅರ್ಹ ಬಿಡ್‌ದಾರರು ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ದಾಖಲೆಗಳನ್ನು ಇ-ಪೋರ್ಟಲ್ www.eproc. karnataka.gov.in-ಮುಖಾಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸೂಚನೆ: ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಯಾವುದಾದರೂ ಬದಲಾವಣೆ ಇದ್ದಲ್ಲಿ ಇ-ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/-ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ತುಮಕೂರು ಸ್ಮಾರ್ಟ್‌ಸಿಟಿ ಲಿಮಿಟೆಡ್, ತುಮಕೂರು.

DIPR/TUM/306/MCA/2021-22

ಸಾರ್ವಜನಿಕ ಸೂಚನೆ

ನಮ್ಮ ಕಕ್ಷಿದಾರರು ಈ ಕೆಳಗೆ ವಿವರಿಸಿದ ಸ್ಥಿರಾಸ್ತಿ ಸ್ವತ್ತುಗಳನ್ನು ತಮ್ಮ ಮಾಲೀಕರಿಂದ ಖರೀದಿಸಲು ಮಾತುಕತೆ ನಡೆಸಿದ್ದಾರೆ ಮತ್ತು ನಮ್ಮ ಕಕ್ಷಿದಾರರು ಈ ವಹಿವಾಟನ್ನು ಮುಕ್ತಾಯಗೊಳಿಸಲು ಉದ್ದೇಶಿಸಿದ್ದಾರೆ ಎಂದು ಸಾರ್ವಜನಿಕರಿಗೆ ಈ ಮೂಲಕ ಸೂಚಿಸಲಾಗುತ್ತದೆ. ಅದರಂತೆ ಯಾವುದೇ ವ್ಯಕ್ತಿ(ಗಳು) ಪಟ್ಟಿಯಲ್ಲಿ ನಮೂದಿಸಿರುವ ಸ್ಥಿರಾಸ್ತಿಗಳ ಮೇಲೆ ಯಾವುದೇ ಕ್ಲೈಮ್ ಹೊಂದಿದಲ್ಲಿ ಈ ಸೂಚನೆಯ ದಿನಾಂಕದಿಂದ 21 (ಇಪ್ಪತ್ತೊಂದು) ದಿನಗಳಲ್ಲಿ ಈ ಕೆಳಕಂಡ ವಿಳಾಸಕ್ಕೆ ಪೂರಕ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆ/ಹಕ್ಕುಗಳನ್ನು ಸಲ್ಲಿಸಲು ಈ ಮೂಲಕ ಕರೆ ನೀಡಲಾಗಿದೆ. ಹೇಳಿದ ಅವಧಿಯೊಳಗೆ ಯಾವುದೇ ಆಕ್ಷೇಪಣೆಗಳು/ ಹಕ್ಕುಗಳನ್ನು ಸ್ವೀಕರಿಸದಿದ್ದರೆ, ನಮ್ಮ ಕಕ್ಷಿದಾರರು, ಉತ್ತಮ ಖರೀದಿದಾರರಾಗಿ, ಸಂಪೂರ್ಣ ಮಾರಾಟ ಪರಿಗಣನೆಯ ಮೊತ್ತವನ್ನು ಪಾವತಿಸುವ ಮೂಲಕ ಮತ್ತು ಅವರ ಪರವಾಗಿ ಮಾರಾಟ ಪತ್ರಗಳನ್ನು ನೋಂದಾಯಿಸಿಕೊಳ್ಳುವ ಮೂಲಕ ಮಾರಾಟ ವಹಿವಾಟನ್ನು ಮುಕಾಯಗೊಳಿಸುತ್ತಾರೆ.

ಅನುಸೂಚಿತ

ಕ್ರ. ಸಂ.	ಮಾಲೀಕರ ಹೆಸರು	ಸರ್ವೆ ನಂ.	ವಿಸ್ತೀರ್ಣ	ಚಕ್ಕುಬಂದಿ			
				ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ
1	ಗೌರಮ್ಮ ಮತ್ತು ಮಂಜುನಾಥ	139/3	1 ಎ 07 ಗು	137 & 141	543 & ರಸ್ತೆ	139/2	138
2	ಎಸ್.ವಿ.ಶ್ರೀರಾಮ ರೆಡ್ಡಿ ಮತ್ತು ಕರಾರುದಾರರಾದ ಪ್ರಭುಕುಮಾರ್	ಪೈಕಿ 137	0 ಎ 13 ಗು	136	139	141	ಉಳಿಕೆ ಜಾಗ 137
3	ಆರ್.ಮಂಜುನಾಥ್	ಪೈಕಿ 137	0 ಎ 30 ಗು	136	139 & 138	ಉಳಿಕೆ ಜಾಗ	134
4	ಎಂ.ಎಲ್.ವೆಂಕಟಚಲ ನಾಯ್ಡು	136/1	0 ಎ 11½ ಗು	144	141	142	136/2
5	ಕೆ.ಪ್ರಕಾಶ, ರುಕ್ಮಿಣಿ ಎಸ್.ಕೆ. ಮತ್ತು ತ್ಯಾಗರಾಜ ಎಸ್	136/2	0 ಎ 23½ ಗು	144	141	136/1	136/3
6	ನಾಗರಾಜ್ ಮತ್ತು ಉದಯ	136/3	0 ಎ 12 ಗು	144	137	136/2	134 & 135
7	ಎಂ. ಭಾರತಿ	144/1	0 ಎ 23 ಗು	144/2	136	143	137 & ರಸ್ತೆ
8	ಎಸ್.ಎನ್ ಸುಬ್ಬರೆಡ್ಡಿ	144/2	0 ಎ 25 ಗು	606	144/1	143 & 184/2	145 & 146
9	ಎಸ್.ಎನ್ ಸುಬ್ಬರೆಡ್ಡಿ	ಪೈಕಿ 606	0 ಎ 08 ಗು	148	144	184	ಉಳಿಕೆ ಜಾಗ 606
10	ಆನಂದ ರಾಮ ರೆಡ್ಡಿ	ಪೈಕಿ 606	0 ಎ 07 ಗು	148	144	ಉಳಿಕೆ ಜಾಗ 606	146
11	ಎಸ್.ಎನ್ ಸುಬ್ಬರೆಡ್ಡಿ	148/1	0 ಎ 20 ಗು	149	606	184&183	148/2
12	ರತ್ನಮ್ಮ	148/2	0 A 07 G	149	606	148/1	147
13	ಎನ್.ಟಿ.ಲೀಲಮ್ಮ, ಮಹಮದ್ ಮುಸ್ತಾಫ್ @ ಮುಸ್ತಾಪಾ, ಭಗವಾನ ಅಳ್ಳಳಪ್ಪ	149	1 A 32 G	152	148	176	150
14	ಎಸ್.ಕೆ.ಲಕ್ಷಣ್	152	1 A 24 G	153	149 & Road	175	ಉಳಿಕೆ ಜಾಗ Sy. No. 159
15	ಲೀಲಮ್ಮ	153/1	0 A 16 G	165	152	174	153/2
16	ಲೀಲಮ್ಮ	153/2	1 A 13 G	165	ಉಳಿಕೆ ಜಾಗ 153	153/1	153/3
17	ಎಸ್.ಕೆ.ಲಕ್ಷಣ್	153/2	0 A 04 G	ಉಳಿಕೆ ಜಾಗ 153	152 & ರಸ್ತೆ	152 & ರಸ್ತೆ	ಉಳಿಕೆ ಜಾಗ 153/3
18	ಮಹಮದ್ ಸಾಲದ್	153/3	0 A 19 G	165	152	154,155, 155&157	ಉಳಿಕೆ ಜಾಗ 153
19	ಮಧುಚಂದ್ರ	145/1	0 A 12 G	145/2	175	144	125
20	ಮಧುಚಂದ್ರ	145/2	0 A 16 G	145/3	145/1& 145/4	144	125
21	ಆರ್.ಮಂಜುನಾಥ್ ಮತ್ತು ವಿ. ಸಾವಿತ್ರಮ್ಮ	145/3	0 A 18 G	146/1	145/2	144	125
22	ಪಿಳ್ಳಚಯ್ಯ, ಚನ್ನಪ್ಪ, ವಿ. ಸಾವಿತ್ರಮ್ಮ	145/4	0 A 18 G	145/2	175	145/1	125
23	ಆರ್.ಮಂಜುನಾಥ್ ಮತ್ತು ವಿ. ಸಾವಿತ್ರಮ್ಮ	146/1	0 A 28 G	145	146/2	144	146/4
24	ವಿ.ಪ್ರಭುಕುಮಾರ್	146/2	0 A 15 G	146/3	146/1	144	124 & ರಸ್ತೆ
25	ವಿ.ಕೃಷ್ಣರೆಡ್ಡಿ	146/3	0 A 16 G	157	146/2	144	124& ರಸ್ತೆ
26	ಎಸ್.ಎನ್ ಸುಬ್ಬರೆಡ್ಡಿ ಮತ್ತು ಎಸ್ ನರೇಂದ್ರ (ಹೆಸರು ನಮೊದಿಸಿಲ್ಲ)	147/1	1 A 01 G	150	149	147/2	124
27	ಎಸ್ ನರೇಂದ್ರ (ಸಿದ್ದಾರ್ಥ ರೆಡ್ಡಿ)	147/2	0 A 08 G	150	148	144	147/1
28	ಮುನಿಯಪ್ಪ, ತಿಮ್ಮರೆಡ್ಡಿ ನಾಗರಾಜ್	184/1	0 A 14 G	183	184/2	185	606
29	ಎನ್.ಟಿ.ಲೀಲಮ್ಮ	184/2	0 A 20 G	184/1	143	185	ಉಳಿಕೆ ಜಾಗ 184/2

ಸಹಿ/- **ಜಿ. ಎಸ್. ಪ್ರಸನ್ನ ಕುಮಾರ್, ವಕೀಲರು, ಲಿಂಕ್ ಆಂಡ್ ಕೊ.**
ನಂ.9, 2ನೇ ಮುಖ್ಯರಸ್ತೆ, ಶ್ರೀಕಂಠನ್ ಬಡಾವಣೆ, ಕ್ರೆಸೆಂಟ್ ರಸ್ತೆ, ಹೈಗ್ರೌಂಡ್ಸ್, ಬೆಂಗಳೂರು-560001

ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸಲು ಮನವಿ

'ಡೆಂಗಿ: ಸೊಳ್ಳೆ ಕಡಿತದಿಂದ ಜ್ವರ ಹೆಚ್ಚಳ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಡೆಂಗಿ, ಚಿಕೂನ್‌ಗುನ್ಯಾ ಹಾಗೂ ಮಲೇರಿಯಾ ಜ್ವರ ಕೆಲವೆಡೆ ಕಾಣಿಸಿಕೊಳ್ಳುತ್ತಿರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು, ಮನೆಯ ಸುತ್ತಮುತ್ತ ಸ್ವಚ್ಛತೆಗೆ ಆದ್ಯತೆ ನೀಡಬೇಕು' ಎಂದು ಬೆಂಗಳೂರು ದಕ್ಷಿಣ ತಾಲ್ಲೂಕು ಆರೋಗ್ಯಾಧಿಕಾರಿ ರವಿಶಂಕರ್ ತಿಳಿಸಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿ ಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ನಗರ ಜಿಲ್ಲೆಯಲ್ಲಿ ಕಳೆದ ವರ್ಷ 154 ಡೆಂಗಿ ಹಾಗೂ 13 ಚಿಕೂನ್‌ಗುನ್ಯಾ ಪ್ರಕರಣಗಳು ವರದಿಯಾಗಿವೆ. ಮುಂಗಾರು ಮಳೆ ಜೋರಾದಂತೆ ಈ ಜ್ವರಕ್ಕೆ ಹೆಚ್ಚಿನವರು ಒಳಪಡುವ ಸಾಧ್ಯತೆ ಇರುತ್ತದೆ. ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಸೊಳ್ಳೆ, ಸಂಗ್ರಹಿಸಿಟ್ಟ ನೀರಿನಲ್ಲಿ ಮೊಟ್ಟೆಯಿಟ್ಟು, ಸಂತಾನೋತ್ಪತ್ತಿ ಮಾಡುತ್ತದೆ. ಹಾಗಾಗಿ, ಮನೆಯ ಸುತ್ತಮುತ್ತ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು' ಎಂದರು.

'ನೀರಿನ ತೊಟ್ಟಿಗಳು, ಟ್ಯಾಂಕ್‌ಗಳು ಮತ್ತು ಬ್ಯಾರಲ್‌ಗಳನ್ನು ಕನಿಷ್ಠ ಒಂದು ವಾರಗಳಿಗೊಮ್ಮೆ ಸ್ವಚ್ಛಗೊಳಿಸಿ, ಮುಚ್ಚಿಡಬೇಕು. ಮಳೆ ನೀರು ಸಂಗ್ರಹವಾಗುವ ವಾಹನಗಳ ಚಕ್ರಗಳು, ತೆಂಗಿನ ಚಿಪ್ಪುಗಳನ್ನು ವಿಲೇವಾರಿ ಮಾಡಬೇಕು. ಹವಾನಿಯಂತ್ರಿತ ಯಂತ್ರಗಳು, ಹೂವಿನಕುಂಡಗಳಲ್ಲಿ ಪ್ರತಿ ವಾರ ನೀರನ್ನು ಖಾಲಿ ಮಾಡಬೇಕು' ಎಂದು ಹೇಳಿದರು.

'2025ರ ಒಳಗೆ ಬೆಂಗಳೂರು ನಗರ ಜಿಲ್ಲೆಯಲ್ಲಿ ಮಲೇರಿಯಾ ನಿರ್ಮೂಲನೆಗೆ ಪಣತೊಡಲಾಗಿದೆ. ಮಲೇರಿಯಾ ಮುಕ್ತ ಜಿಲ್ಲೆಯನ್ನಾಗಿಸಲು ಜನರ ಸಹಕಾರ ಅಗತ್ಯ. ಇಲ್ಲಿ ಕೆಲ ದಿನಗಳಿಂದ ಮಳೆಯಾಗುತ್ತಿರುವುದರಿಂದ ಸೊಳ್ಳೆಗಳ ಉತ್ಪತ್ತಿಯೂ ಹೆಚ್ಚಾಗಬಹುದು. ಜ್ವರ, ಮೈ-ಕೈ ನೋವು ಮತ್ತು ಕೀಲು ನೋವು, ತೀವ್ರತರ ತಲೆನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡರೆ ಕೂಡಲೇ ಹತ್ತಿರ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ, ತಪಾಸಣೆ ಮಾಡಿಸಿ ಕೊಳ್ಳಬೇಕು' ಎಂದು ಮನವಿ ಮಾಡಿಕೊಂಡರು.

(ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ)

ಕಾರ್ಯನಿರ್ವಾಹಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಹಾಗೂ ನೈರ್ಮಲ್ಯ ವಿಭಾಗ ಕಾರ್ಯಾಲಯ,
ಕನಕದಾಸ ಬಡಾವಣೆ, ಜಿಲ್ಲಾ ಪಂಚಾಯತ್ ಆವರಣ, ವಿಜಯಪುರ-586 109.
ದೂರವಾಣಿ: 08352-277941 ಇ-ಮೇಲ್: eerdwsd.bjp@gmail.com

ಕ್ರ.ಸಂ:ಕಾಇಂ/ಗ್ರಾ.ಕು.ನೀ.ನೈ.ವಿ./ವಿಜ/ಇಪ್ರಾ/JJM/ಟೆಂಡರ್/2021-22/840 ದಿನಾಂಕ:21.09.2021

ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು (Standered tender docuement KW-1/2/3) & KTPP ನಿಯಮಾನುಸಾರ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ವಿಜಯಪುರ ವಿಭಾಗದಡಿ ಬರುವ ಗ್ರಾಮೀಣ ಜನವಸತಿಗಳಲ್ಲಿ ಜಲ ಜೀವನ ಮಿಷನ್ ಯೋಜನೆಯಡಿ ಕಾರ್ಯಾತ್ಮಕ ನಳ ಸಂಪರ್ಕ (FHTC) ಹಾಗೂ ಕುಡಿಯುವ ನೀರಿನ ಮೂಲಭೂತ ಸೌಕರ್ಯ (In village pipeline network system with Tap and meter installation) ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದೆ.

a) ಸಾಮಾನ್ಯ ವರ್ಗದ (GEN) ಗುತ್ತಿಗೆದಾರರಿಗೆ ಮೀಸಲಿರಿಸಿದ **ಕಾಮಗಾರಿಗಳ ಸಂಖ್ಯೆ: 16.**

b) ಪರಿಶಿಷ್ಟ ಜಾತಿ ವರ್ಗದ (SC) ಗುತ್ತಿಗೆದಾರರಿಗೆ ಮೀಸಲಿರಿಸಿದ **ಕಾಮಗಾರಿಗಳ ಸಂಖ್ಯೆ: 5.**

c) ಪರಿಶಿಷ್ಟ ಪಂಗಡ ವರ್ಗದ (ST) ಗುತ್ತಿಗೆದಾರರಿಗೆ ಮೀಸಲಿರಿಸಿದ **ಕಾಮಗಾರಿಗಳ ಸಂಖ್ಯೆ: 1.**

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನ್‌ಲೈನ್ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 13.10.2021** ರಂದು **ಸಾಯಂಕಾಲ 5.30 ಗಂಟೆಯವರೆಗೆ, ಆರ್ಥಿಕ ಬಿಡ್ ತೆರೆಯುವ ದಿನಾಂಕ: 16.10.2021 ಬೆಳಿಗ್ಗೆ 11.00 ಗಂಟೆ.**

ದ್ವಿ ಲಕೋಟೆ : 21 ಕಾಮಗಾರಿಗಳು

ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಆನ್‌ಲೈನ್ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 13.10.2021** ರಂದು **ಸಾಯಂಕಾಲ 5.30 ಗಂಟೆಯವರೆಗೆ,** ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 16.10.2021 ಬೆಳಿಗ್ಗೆ 11.00 ಗಂಟೆ,** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 22.10.2021 ಬೆಳಿಗ್ಗೆ 11.00 ಗಂಟೆ.**

ಟೆಂಡರ್ ಷರತ್ತುಗಳು ಹಾಗೂ ವಿವರಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ನಲ್ಲಿ ನೋಡಬಹುದು ಹಾಗೂ ಈ ವಿಭಾಗ ಕಛೇರಿಯಿಂದ ಪಡೆಯಬಹುದು.

ಸಹಿ/-
(ಚಂದ್ರಶೇಖರ. ವ್ಹಿ. ಚವ್ಹಾಣ)
ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ.&ನೈ ವಿಭಾಗ, ವಿಜಯಪುರ

ವಾಸಾಸಂಇ/ವಿಜಯಪುರ/304/ಜಿಎ/2021-22

ಪುರಸಭಾ ಕಾರ್ಯಾಲಯ, ಕಡೂರು, ಚಿಕ್ಕಮಗಳೂರು ಜಿಲ್ಲೆ

E-Mail: kadurtmc@yahoo.com ದೂರವಾಣಿ : 08267-221221
Website address: www.kadurtown.gov.in ಫ್ಯಾಕ್ಸ್ : 08267-221202
ಸಂಖ್ಯೆ : ಟಿ.ಎಂ.ಸಿ/ಕ.ಪು/ಟೆಂಡರ್-05/2021-22 ದಿನಾಂಕ : 23/09/2021

ಟೆಂಡರ್ ಪ್ರಕಟಣೆ

ಮುಖ್ಯಾಧಿಕಾರಿ ಪುರಸಭೆ ಕಡೂರು ರವರು 2021-22 ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನದಡಿ ಈ ಕೆಳಕಂಡ ಕಾಮಗಾರಿಗಳನ್ನು ಅಂದಾಜು ಪಟ್ಟಿಯ ಅನ್ವಯ ಕೈಗೊಳ್ಳಲು ಅರ್ಹ ನೊಂದಾಯಿತ ಗುತ್ತಿಗೆದಾರರಿಂದ ಕೆ.ಡ್ಬ್ಲ್ಯು1 ಹಾಗೂ 2 ರ ನಿಬಂಧನೆಗಳಿಗೊಳಪಟ್ಟು ಟೆಂಡರನ್ನು ಇ-ಪ್ರೊಕ್ಯೂರ್ ಮೆಂಟ್ ಟೆಂಡರ್ ಮುಖಾಂತರ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳನ್ನು ಈ ಕಛೇರಿಯ ತಾಂತ್ರಿಕ ಶಾಖೆಯಲ್ಲಿ ಕೆಲಸದ ಅವಧಿಯಲ್ಲಿ ಕೇಳಿ ಪಡೆಯಬಹುದಾಗಿದೆ. ಇಪ್ರೊಕ್ಯೂರ್‌ಮೆಂಟ್ ಟೆಂಡರ್ ಮುಖಾಂತರ ಟೆಂಡರ್ ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ – 21/10/2021 ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:22/10/2021 ರ ಸಂಜೆ 5.00 ಗಂಟೆ, ಟೆಂಡರ್ ತೆರೆಯುವ ದಿನಾಂಕ: 25/10/2021 ಸಂಜೆ 5.30 ಗಂಟೆಗೆ ಇ.ಎಂ.ಡಿ, ಟೆಂಡರ್ ಪ್ರೊಸೆಸಿಂಗ್ ಶುಲ್ಕ ಹಾಗೂ ಇನ್ನಿತರೇ ಟೆಂಡರ್ ಮಾಹಿತಿಗಾಗಿ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ ಮೂಲಕ(ಇ-ಪ್ರೊಕ್ಯೂರ್‌ಮೆಂಟ್) https://eproc.karnataka.gov.in/ರಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1.	DMA/ 2021- 22/RD/WORK INDENT120599	14.50
2.	DMA/ 2021- 22/OW/WORK INDENT120600 FOR SC	4.50
3.	DMA/ 2021- 22/EL/WORK INDENT120601	6.00
4.	DMA/ 2021 -22/WS/WORK INDENT120602 FOR ST	21.00
5.	DMA/ 2021 -22/OW/WORK INDENT120603	2.00
6.	DMA/ 2021- 22/OW/WORK INDENT120605	6.50
7.	DMA/ 2021 - 22/WS/WORK INDENT120606 FOR SC	3.50

ಸಹಿ/- (ಶ್ರೀ ಭಂಡಾರಿ ಶ್ರೀನಿವಾಸ್)
ಅಧ್ಯಕ್ಷರು,
ಪುರಸಭೆ, ಕಡೂರು

ಸಹಿ/- (ಶ್ರೀ ಹೆಚ್ ಎನ್.ಮಂಜುನಾಥ್)
ಮುಖ್ಯಾಧಿಕಾರಿಗಳು,
ಪುರಸಭೆ, ಕಡೂರು

ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ

(ಕರ್ನಾಟಕ ರಾಜ್ಯ ಸರ್ಕಾರದ ಸ್ವಾಮಕ್ಕೆ ಒಳಪಟ್ಟಿದೆ.)
ಸೈರಾಬಾಗ್, ನಂ.19/4, 3ನೇ ಮಹಡಿ, ಕನ್ನಿಂಗ್ ಹ್ಯಾಂ ರೋಡ್, ಬೆಂಗಳೂರು-560052
ಕಚೇರಿ ದೂರವಾಣಿ: 080-23221320/29551320
E-mail: ksskdc03@gmail.com Website: www.ksskdc.kar.nic.in

KSSKDC

2021-22ನೇ ಸಾಲಿನ ವಿವಿಧ ಯೋಜನೆಗಳಿಗೆ ಸಫಾಯಿ ಕರ್ಮಚಾರಿ/ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಫಲಾಪೇಕ್ಷಿಗಳಿಂದ ಅರ್ಜಿ ಆಹ್ವಾನ

ಯೋಜನೆಗಳು

1. ಸಫಾಯಿ ಕರ್ಮಚಾರಿ/ಪೌರಕಾರ್ಮಿಕರು ಹಾಗೂ ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್‌ಗಳ ನೋಂದಾಯಿತ ಸಂಘ ಸಂಸ್ಥೆಗಳಿಗೆ ಸಕ್ಕಿಂಗ್ & ಜಟ್ಟಿಂಗ್ ಯಂತ್ರಗಳನ್ನು ಖರೀದಿಸಲು ಶೇ.75 ರಷ್ಟು ಸಹಾಯಧನ ನೀಡುವ ಯೋಜನೆ.

ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್/ಪೌರಕಾರ್ಮಿಕರ ನೋಂದಾಯಿತ ಸಂಘ ಸಂಸ್ಥೆಗಳಲ್ಲಿ ಸ್ವಚ್ಛತಾ ಕಾರ್ಯದಲ್ಲಿ ತೊಡಗಲು ಬಯಸುವ ಸಂಘ ಸಂಸ್ಥೆಗಳಿಗೆ ಸಕ್ಕಿಂಗ್ ಮತ್ತು ಜಟ್ಟಿಂಗ್ ಯಂತ್ರಗಳನ್ನು ಖರೀದಿಸಲು ನಿಗಮದಿಂದ ಶೇ.75 ರಷ್ಟು ಸಹಾಯಧನ ನೀಡಲಾಗುವುದು ಹಾಗೂ ಬಾಕಿ ಶೇ.25 ರಷ್ಟು ಮೊತ್ತವನ್ನು ಸಂಘ-ಸಂಸ್ಥೆಗಳು ಸ್ವಂತ ನಿಧಿ ಅಥವಾ ಬ್ಯಾಂಕ್ ಸಾಲದ ಮೂಲಕ ಭರಿಸಬೇಕಾಗುವುದು.

2. ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್/ಪೌರಕಾರ್ಮಿಕರ ಮಕ್ಕಳಿಗೆ ಆನ್‌ಲೈನ್ ಪಾಠ ಕೇಳಲು ಹಾಗೂ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಟ್ಯಾಬ್ ವಿತರಣಾ ಯೋಜನೆ.

ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್ ಹಾಗೂ ಪೌರಕಾರ್ಮಿಕರ 9th, 10th, 1st PUC, 2nd PUC ಓದುತ್ತಿರುವ ಮಕ್ಕಳಿಗೆ ಆನ್‌ಲೈನ್ ಪಾಠ ಕೇಳಲು ಹಾಗೂ ಅವರ ವಿದ್ಯಾಭ್ಯಾಸದ ಅನುಕೂಲಕ್ಕಾಗಿ ಟ್ಯಾಬ್‌ಗಳ ವಿತರಣೆ.

3. ಮಹಿಳಾ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್/ಪೌರಕಾರ್ಮಿಕರುಗಳಿಗೆ ದ್ವಿ ಚಕ್ರ ವಾಹನ ಸೌಲಭ್ಯದ ಯೋಜನೆ.

ಬೆಂಗಳೂರು ನಗರ, ಮಂಗಳೂರು, ಮೈಸೂರು, ದಾವಣಗೆರೆ, ಬಳ್ಳಾರಿ, ಕಲ್ಬುರ್ಗಿ, ಹುಬ್ಬಳ್ಳಿ-ಧಾರವಾಡ, ಬೆಳಗಾವಿ, ವಿಜಯಪುರ, ತುಮಕೂರು, ಶಿವಮೊಗ್ಗ ವ್ಯಾಪ್ತಿಯಲ್ಲಿ ಬರುವ ಮಹಿಳಾ ಸಫಾಯಿ ಕರ್ಮಚಾರಿ/ಮ್ಯಾನ್ಯುಯಲ್ ಸ್ಕ್ಯಾವೆಂಜರ್ಸ್/ಪೌರಕಾರ್ಮಿಕರುಗಳಿಗೆ ಕೆಲಸಕ್ಕೆ ಹಾಜರಾಗುವ ಸಲುವಾಗಿ 90% ರಷ್ಟು ಸಹಾಯಧನ ಹಾಗೂ 10% ಫಲಾನುಭವಿಗಳ ವಂತಿಕೆಯಲ್ಲಿ ದ್ವಿಚಕ್ರವಾಹನ ನೀಡಲಾಗುವುದು.

ಅರ್ಜಿ ಸಲ್ಲಿಸುವ ವಿಧಾನ: ಫಲಾಪೇಕ್ಷಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಮತ್ತು ದಾಖಲೆಗಳನ್ನು ನಿಗಮದ ವೆಬ್ ಸೈಟ್ www.ksskdc.kar.nic.in ನಲ್ಲಿ ಅಪ್ಲೋಡ್ ಮಾಡಬಹುದು ಮತ್ತು ಫಲಾಪೇಕ್ಷಿಗಳು ಆಫ್‌ಲೈನ್ ಮೂಲಕ ಅರ್ಜಿಗಳನ್ನು ಸಂಬಂಧಪಟ್ಟ ಜಿಲ್ಲಾ ವ್ಯವಸ್ಥಾಪಕರು, ಡಾ|| ಬಿ. ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮ/ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮಗಳಲ್ಲಿ ಸಲ್ಲಿಸಬಹುದು.

ಪ್ರಾರಂಭಿಕ ದಿನಾಂಕ: 25.09.2021 ಕೊನೆಯ ದಿನಾಂಕ: 25.10.2021

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ವ್ಯವಸ್ಥಾಪಕರು, ಡಾ|| ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ/ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ, ಇವರನ್ನು ಸಂಪರ್ಕಿಸಬಹುದು

ಸಹಿ/- (ಕೆ. ಬಿ. ಮಲ್ಲಿಕಾರ್ಜುನ)
ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ
ಬೆಂಗಳೂರು

ವಾ.ಸಾ.ಸಂ.ಇ/ಬೆಂ.ನಗರ/1686/ಆಕಾರ್/2021-22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ಸಾಮಾಜಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬಾಲನ್ ಎಂಜಿನಿಯರಿಂಗ್: ಕಡಿಮೆ ಬೆಲೆಯ ಇ.ವಿ.

ಬೆಂಗಳೂರು: ಬೆಂಗಳೂರಿನ ಬಾಲನ್ ಎಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ ಕಂಪನಿಯು ಕಡಿಮೆ ಬೆಲೆಯ ವಿದ್ಯುತ್ ಚಾಲಿತ ವಾಹನಗಳನ್ನು (ಇ.ವಿ.) ಪರಿಚಯಿಸಿದೆ. ಈ ವಾಹನಗಳು ನಾಲ್ಕು ವರ್ಷಗಳ ಮೋಟರ್, ಕಂಟ್ರೋಲರ್ ಮತ್ತು ಬ್ಯಾಟರಿ ವಾರಂಟಿ ಹೊಂದಿವೆ. ಪ್ರಯಾಣಿಕ, ಸರಕು ಸಾಗಣೆ ಉದ್ದೇಶಕ್ಕಷ್ಟೇ ಅಲ್ಲದೆ, ರಸಗೊಬ್ಬರ, ಕೀಟನಾಶಕಗಳ ಸಿಂಪಡಣೆಗೂ ಬಳಸಬಹುದಾಗಿದೆ ಎಂದು ಕಂಪನಿಯು ತಿಳಿಸಿದೆ.

'ಎಲ್ಲ ವಾಹನಗಳೂ ಇಂಟರ್‌ನ್ಯಾಷನಲ್ ಸೆಂಟರ್ ಫಾರ್ ಆಟೊಮೋಟಿವ್ ಟೆಕ್ನಾಲಜಿಯಿಂದ (ಐಸಿಎಟಿ) ಪ್ರಮಾಣೀಕೃತವಾಗಿವೆ. ಬಾಳಿಕೆ ಮತ್ತು ಹಣಕ್ಕೆ ತಕ್ಕ ಮೌಲ್ಯ ಎನ್ನುವ ಎರಡು ತತ್ವಗಳ ಆಧಾರದ ಮೇಲೆ ಈ ಉತ್ಪನ್ನಗಳನ್ನು ಬಿಡುಗಡೆ ಮಾಡಲಾಗಿದೆ' ಎಂದು ಕಂಪನಿಯ ನಿರ್ದೇಶಕ ಬಾಲಕೃಷ್ಣನ್ ತಿಳಿಸಿದ್ದಾರೆ.

ಆತ್ಮನಿರ್ಭರ ಭಾರತ ಯೋಜನೆಯಡಿ ಇವುಗಳನ್ನು ಸಂಪೂರ್ಣವಾಗಿ ಭಾರತದಲ್ಲಿಯೇ ತಯಾರಿಸಲಾಗಿದೆ. ವಿಶ್ವಾಸಾರ್ಹತೆಯು ವಾಹನದ ವಿನ್ಯಾಸದ ಅಡಿಪಾಯ ಆಗಿರುವುದರಿಂದ ವಾಹನಕ್ಕೆ 'ವಿಶ್ವಾಸ್' ಎಂದು ಹೆಸರಿಡಲಾಗಿದೆ. ಐಸಿಎಟಿ ಫೇಮ್ ಪರೀಕ್ಷೆ ವೇಳೆ ಒಂದು ಬಾರಿ ಚಾರ್ಜ್ ಮಾಡಿದಾಗ 140 ಕಿಲೋ ಮೀಟರ್ ಚಲಿಸಿದೆ. ಪ್ರತಿ ಕಿ.ಮೀ.ಗೆ 0.30 ರಿಂದ 0.35 ಪೈಸೆ ಖರ್ಚು ಬರುತ್ತದೆ. ಬೆಂಗಳೂರಿನಲ್ಲಿ ಈ ವಾಹನಗಳ ಎಕ್ಸ್ ಷೋರೂಂ ಬೆಲೆ ಜಿಎಸ್‌ಟಿಯನ್ನೂ ಒಳಗೊಂಡು ₹1.85 ಲಕ್ಷ. ಈ ವಾಹನಗಳಿಗೆ ಪಂಜಾಬ್ ನ್ಯಾಷನಲ್ ಬ್ಯಾಂಕ್ ಹಣಕಾಸಿನ ನೆರವು ನೀಡಲಿದೆ ಎಂದು ತಿಳಿಸಿದ್ದಾರೆ.

'ಸದ್ಯ ಬೆಂಗಳೂರಿನಲ್ಲಿ ತಯಾರಿಕಾ ಘಟಕ ಹೊಂದಿದ್ದು, ಬಾಗಲಕೋಟೆಯಲ್ಲಿ 50 ಸಾವಿರ ವಾಹನ ತಯಾರಿಕಾ ಸಾಮರ್ಥ್ಯದ ದೊಡ್ಡ ಘಟಕ ನಿರ್ಮಾಣವಾಗುತ್ತಿದೆ' ಎಂದು ಅವರು ಮಾಹಿತಿ ನೀಡಿದ್ದಾರೆ. ಹೆಚ್ಚಿನ ಮಾಹಿತಿಗೆ ಸಂಪರ್ಕ ಸಂಖ್ಯೆ: 080-23253255, 7892502926.

ಡಿಪ್ಲೊಮಾ: ಪ್ರವೇಶ ದಿನಾಂಕ ವಿಸ್ತರಣೆ

ಬೆಂಗಳೂರು: 2021-22ನೇ ಸಾಲಿನ ಪ್ರಥಮ ಸೆಮಿಸ್ಟರ್ ಡಿಪ್ಲೊಮಾ ಪ್ರಿಂಟಿಂಗ್ ಟೆಕ್ನಾಲಜಿ ಕೋರ್ಸ್ ಪ್ರವೇಶದ ಕೊನೆಯ ದಿನಾಂಕವನ್ನು ಇದೇ 30ರವರೆಗೆ ವಿಸ್ತರಿಸಲಾಗಿದೆ ಎಂದು ಸರ್ಕಾರಿ ಮುದ್ರಣ ತಂತ್ರಜ್ಞಾನ ಸಂಸ್ಥೆ ತಿಳಿಸಿದೆ.

ಎಸ್ಸೆಸ್ಸೆಲ್ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಶೇ 35 ರಷ್ಟು ಅಂಕಗಳನ್ನು ಪಡೆದು, ಉತ್ತೀರ್ಣರಾದ ಅಭ್ಯರ್ಥಿಗಳು ಪ್ರವೇಶ ಪಡೆಯಲು ಅರ್ಹರು. ಆಸಕ್ತ ವಿದ್ಯಾರ್ಥಿಗಳು ದಾಖಲಾತಿಗಳೊಂದಿಗೆ ಅರಮನೆ ರಸ್ತೆಯಲ್ಲಿರುವ ಸಂಸ್ಥೆಗೆ ಭೇಟಿ ನೀಡಿ, ನೇರವಾಗಿ ಪ್ರವೇಶ ಪಡೆಯಬಹುದು ಎಂದು ಪ್ರಕಟಣೆ ತಿಳಿಸಿದೆ.

ಸಂಪರ್ಕಕ್ಕೆ ದೂ.ಸಂ: 080 22253914 ಅಥವಾ 9448315326

ನೀರು ಪೂರೈಕೆಯಲ್ಲಿ ನಾಳೆ ವ್ಯತ್ಯಯ

ಬೆಂಗಳೂರು: ನಗರದಲ್ಲಿ ಸೆ.26ರಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 1 ಗಂಟೆಯವರೆಗೆ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ.

ವಿದ್ಯುತ್ ಪರಿವರ್ತಕ ಬದಲಾಯಿಸುವ ಕಾರ್ಯ ಕೈಗೊಂಡಿರುವುದರಿಂದ ಟಿ.ಕೆ.ಹಳ್ಳಿ, ಹಾರೋಹಳ್ಳಿ ಮತ್ತು ತಾತಗುಣಿಯಲ್ಲಿರುವ ಕಾವೇರಿ ನೀರು ಸರಬರಾಜು ಯೋಜನೆಯ 1, 2, 3 ಮತ್ತು 4ನೇ ಹಂತದ 1 ಮತ್ತು 2ನೇ ಘಟ್ಟದಲ್ಲಿನ ಯಂತ್ರಗಳ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲಾಗುತ್ತದೆ.

ಹೀಗಾಗಿ, ನಗರದ ಎಲ್ಲ ಪ್ರದೇಶಗಳಲ್ಲಿ ನೀರು ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಪ್ರಕಟಣೆ ತಿಳಿಸಿದೆ.

ಬಂದ್‌ಗೆ ಹೋಟೆಲ್ ಉದ್ಯಮದ ಬೆಂಬಲವಿಲ್ಲ

ಬೆಂಗಳೂರು: 'ಸೆ.27ರಂದು ಭಾರತ ಬಂದ್‌ಗೆ ನೀಡಿರುವ ಕರೆಗೆ ಬೆಂಬಲ ನೀಡುವುದಿಲ್ಲ' ಎಂದು ಬೃಹತ್ ಬೆಂಗಳೂರು ಹೋಟೆಲುಗಳ ಸಂಘ ತಿಳಿಸಿದೆ.

'ರೈತರು ಬೆಳೆಯುವ ತರಕಾರಿ, ಹಣ್ಣು, ದವಸವನ್ನು ಹೋಟೆಲ್ ಉದ್ಯಮ ಖರೀದಿಸಿ ರೈತರನ್ನು ಪ್ರೋತ್ಸಾಹಿಸುತ್ತಿದೆ' ಎಂದು ಸಂಘದ ಅಧ್ಯಕ್ಷ ಪಿ.ಸಿ. ರಾವ್ ಮತ್ತು ಪ್ರಧಾನ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ತಿಳಿಸಿದ್ದಾರೆ.

ಉದ್ಘಾಟನೆಗೆ ಸಜ್ಜಾದ 'ಸೂರ್ಯ ಎಲಿಗೆನ್ಸ್'

ಸೂರ್ಯ ಎಲಿಗೆನ್ಸ್

ಬೆಂಗಳೂರು: 'ಮಧ್ಯಮ ಹಾಗೂ ಕೆಳಮಧ್ಯಮ ವರ್ಗದ ಲಕ್ಷಾಂತರ ಮಂದಿಯ ಸ್ವಂತ ಸೂರಿನ ಕನಸನ್ನು ಈಡೇರಿಸುವ ಸಲುವಾಗಿ ವಸತಿ ಇಲಾಖೆಯು ಏಷ್ಯಾದ ಅತಿದೊಡ್ಡ ಟೌನ್‌ಶಿಪ್ ಯೋಜನೆಯಾದ 'ಸೂರ್ಯ ನಗರ ಟೌನ್‌ಶಿಪ್' ಅನ್ನು ಕೈಗೆತ್ತಿಕೊಂಡಿದ್ದು, ಆನೇಕಲ್ ಮುಖ್ಯರಸ್ತೆಯಲ್ಲಿ ನಿರ್ಮಾಣವಾಗಿರುವ 1ನೇ ಹಂತದ 'ಸೂರ್ಯ ಎಲಿಗೆನ್ಸ್' ಬಹುಮಹಡಿ ಸಮುಚ್ಚಯ ಉದ್ಘಾಟನೆಗೆ ಸಜ್ಜಾಗಿದೆ.

6 ಎಕರೆ ವ್ಯಾಪ್ತಿಯಲ್ಲಿ ನಿರ್ಮಾಣವಾಗಿರುವ 'ಸೂರ್ಯ ಎಲಿಗೆನ್ಸ್' ಹಲವು ವಿಶೇಷತೆಗಳನ್ನು ಹೊಂದಿದ್ದು, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಭಾನುವಾರ(ಸೆ.26) ಉದ್ಘಾಟಿಸಲಿದ್ದಾರೆ.

ಇಲ್ಲಿ 2 ಮತ್ತು 3 ಬಿಎಚ್‌ಕೆ ಫ್ಲಾಟ್‌ಗಳು ಲಭ್ಯವಿವೆ. ಗುಣಮಟ್ಟದ ರಸ್ತೆ ಸೌಲಭ್ಯವನ್ನೂ ಕಲ್ಪಿಸಲಾಗಿದೆ. ಒಳಚರಂಡಿ, ಕಾವೇರಿ ನೀರು ಸರಬರಾಜು ವ್ಯವಸ್ಥೆಯನ್ನೂ ಮಾಡಲಾಗಿದೆ. ನಿವಾಸಿಗಳ ಅನುಕೂಲಕ್ಕಾಗಿ ಕ್ಲಬ್ ಹೌಸ್, ಈಜುಕೊಳ, ಆಟದ ಮೈದಾನ, ಒಳಾಂಗಣ ಕ್ರೀಡಾಂಗಣ ಮತ್ತು ಉದ್ಯಾನ ನಿರ್ಮಿಸಲಾಗಿದೆ. ನಿವಾಸಿಗಳಿಗೆ ಮತ್ತು ಸಂದರ್ಶಕರಿಗೆ ಪಾರ್ಕಿಂಗ್ ಸೌಲಭ್ಯ ಕಲ್ಪಿಸಲಾಗಿದ್ದು, ಮಳೆ ನೀರು ಕೊಯ್ಲು ಅಳವಡಿಸಲಾಗಿದೆ' ಎಂದು ವಸತಿ ಸಚಿವ ವಿ.ಸೋಮಣ್ಣ ಹೇಳಿದ್ದಾರೆ.

'2 ಬಿಎಚ್‌ಕೆ ಮತ್ತು 3 ಬಿಎಚ್‌ಕೆಯ ತಲಾ 192 ಫ್ಲಾಟ್‌ಗಳು ಇಲ್ಲಿ ಲಭ್ಯವಿವೆ. ಫ್ಲಾಟ್‌ಗಳ ಹಂಚಿಕೆಗೆ ಈಗಾಗಲೇ ಅರ್ಹರಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಗುಣಮಟ್ಟದ ಫ್ಲಾಟ್‌ಗಳ ನಿರ್ಮಾಣದ ಸಂಕಲ್ಪಕ್ಕೆ ಇಲಾಖೆ ಬದ್ಧವಾಗಿದೆ. ಆನೇಕಲ್ ತಾಲ್ಲೂಕಿನ ಜಿಗಣಿಯ ಸ್ವಾಮಿ ವಿವೇಕಾನಂದ ಯೋಗ ವಿಶ್ವವಿದ್ಯಾಲಯದ ಬಳಿ ಸೂರ್ಯನಗರ 4ನೇ ಹಂತದಲ್ಲಿ ಬೃಹತ್ ಟೌನ್‌ಶಿಪ್ ನಿರ್ಮಾಣ ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ. ಇಲ್ಲಿ ಆಕರ್ಷಕ ಸರೋವರ ನಿರ್ಮಿಸಿ ಪ್ರವಾಸಿ ತಾಣವಾಗಿ ಅಭಿವೃದ್ಧಿಪಡಿಸುವ ಯೋಜನೆಯೂ ಇದೆ' ಎಂದು ಮಾಹಿತಿ ನೀಡಿದ್ದಾರೆ.

ಉಚಿತ ಪ್ರಯಾಣಕ್ಕೆ ಅವಕಾಶ

ಬೆಂಗಳೂರು: ಸೆ. 27 ಮತ್ತು 29 ರಂದು ನಡೆಯಲಿರುವ ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳು ಬಸ್‌ನಲ್ಲಿ ಉಚಿತವಾಗಿ ಪ್ರಯಾಣಿಸಲು ಕೆಎಸ್‌ಆರ್‌ಟಿಸಿ ಅವಕಾಶ ಕಲ್ಪಿಸಿದೆ.

ವಾಸ ಸ್ಥಳದಿಂದ ಪರೀಕ್ಷಾ ಕೇಂದ್ರಕ್ಕೆ ಹೋಗುವಾಗ ಮತ್ತು ವಾಪಸ್ ಬರುವಾಗ ಪ್ರವೇಶ ಪತ್ರ ತೋರಿಸಿ ಪ್ರಯಾಣಿಸಬಹುದು ಎಂದು ಕೆಎಸ್‌ಆರ್‌ಟಿಸಿ ತಿಳಿಸಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

❤ ಸುಭಾಷಿತ ❤

ಯಾರು ಬೇಕಾದರೂ ತಾರೆಗಳಾಗಿಬಿಡಬಹುದು, ಆದರೆ ಪ್ರತಿಯೊಬ್ಬರೂ ಮಾನವೀಯ ಗುಣ ಹೊಂದಿರಲೇಬೇಕಾದುದು ಮುಖ್ಯ.

-ರಫೆಲ್ ನಡಾಲ್

ಬೆಂಕಿ ಅವಘಡ– ಪಟಾಕಿ ಸ್ಫೋಟ ಸಂಘಟಿತ ಮುನ್ನೆಚ್ಚರಿಕೆ ಅಗತ್ಯ

ಎರಡು ದಿನಗಳ ಅಂತರದಲ್ಲಿ ಬೆಂಗಳೂರಿನಲ್ಲಿ ಸಂಭವಿಸಿರುವ ಅಗ್ನಿ ಅವಘಡ ಹಾಗೂ ಪಟಾಕಿ ಸ್ಫೋಟದ ಘಟನೆಗಳಲ್ಲಿ ನಾಲ್ವರು ಜೀವ ಕಳೆದುಕೊಂಡಿದ್ದಾರೆ. ಈ ದುರ್ಘಟನೆಗಳು ಸುರಕ್ಷಾ ವ್ಯವಸ್ಥೆಯ ಬಗ್ಗೆ ಅನುಮಾನ ಮತ್ತು ಆತಂಕ ಮೂಡಿಸುವಂತಿವೆ. ದೇವರಚಿಕ್ಕನಹಳ್ಳಿಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಸಂಭವಿಸಿದ ಅಗ್ನಿ ಆಕಸ್ಮಿಕದಲ್ಲಿ ತಾಯಿ–ಮಗಳು ಜೀವ ಕಳೆದುಕೊಂಡಿದ್ದಾರೆ. ಬಾಲ್ಕನಿಗೆ ಅಳವಡಿಸಿದ ಕಬ್ಬಿಣದ ಅಡ್ಡಪಟ್ಟಿಗಳ ಅಡೆತಡೆಯಿಂದ ಹೊರಬರಲಾಗದೆ ಮಹಿಳೆಯೊಬ್ಬರು ಬೆಂಕಿಗೆ ಆಹುತಿಯಾಗಿದ್ದರೆ, ಅವರ ತಾಯಿ ಕೊಠಡಿಯೊಳಗೆ ಸಾವಿಗೀಡಾಗಿದ್ದಾರೆ. ಚಾಮರಾಜಪೇಟೆಯ ಸೀತಾಪತಿ ಅಗ್ರಹಾರದ ಗೋದಾಮೊಂದರಲ್ಲಿ ಸಂಭವಿಸಿರುವ ಪಟಾಕಿ ಸ್ಫೋಟದಲ್ಲಿ ಇಬ್ಬರು ದಾರುಣವಾಗಿ ಸಾವನ್ನಪ್ಪಿದ್ದಾರೆ. ಜನನಿಬಿಡ ಪ್ರದೇಶದ ಗೋದಾಮಿನಲ್ಲಿ ಸ್ಫೋಟ ಸಂಭವಿಸಿದ್ದು, ಆ ಕೋಣೆಗೆ ಹೊಂದಿಕೊಂಡಿದ್ದ ಪಂಕ್ಚರ್ ಅಂಗಡಿಯ ಮಾಲೀಕ ಅಂಗಡಿಯಿಂದ ಹೊರಗೆ ಹಾರಿಬಿದ್ದು ಸಾವಿಗೀಡಾಗಿದ್ದಾರೆ. ಇನ್ನೊಂದು ಮಳಿಗೆಗೆ ಸಾಮಗ್ರಿಗಳನ್ನು ಪೂರೈಸಲು ಬಂದಿದ್ದ ಟಾಟಾ ಏಸ್ ಚಾಲಕ, ವಾಹನದ ಬಳಿಯಿಂದ ಹಾರಿ ಗೋಡೆಗೆ ಅಪ್ಪಳಿಸಿ ಮೃತಪಟ್ಟಿದ್ದಾರೆ. ಚಹಾ ಅಂಗಡಿಯಲ್ಲಿದ್ದವರು ಹಾಗೂ ರಸ್ತೆಯಲ್ಲಿ ಸಂಚರಿಸುತ್ತಿದ್ದವರು ಕೂಡ ಗಾಯಗೊಂಡಿದ್ದಾರೆ. ದುರ್ಘಟನೆಯಲ್ಲಿ ಸಾವಿಗೀಡಾದವರು ಛಿದ್ರ ಛಿದ್ರವಾಗಿರುವುದು, ಗೋದಾಮಿನ ಮುಂದೆ ನಿಲ್ಲಿಸಿದ್ದ ವಾಹನಗಳು ನಜ್ಜುಗುಜ್ಜಾಗಿರುವುದು ಸ್ಫೋಟದ ತೀವ್ರತೆಯನ್ನು ಸೂಚಿಸುವಂತಿದೆ. ಗೋದಾಮಿನಲ್ಲಿ ಯಾವುದೇ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳದ ಹಾಗೂ ಮಹಾನಗರ ಪಾಲಿಕೆಯ ಅನುಮತಿ ಪಡೆಯದೆ ಪಟಾಕಿಗಳನ್ನು ಅಕ್ರಮವಾಗಿ ಸಂಗ್ರಹಿಸಿದ್ದ ಆರೋಪದ ಮೇರೆಗೆ ವ್ಯಕ್ತಿಯೊಬ್ಬರನ್ನು ಬಂಧಿಸಲಾಗಿದೆ ಹಾಗೂ ಪ್ರಕರಣ ದಾಖಲಿಸಲಾಗಿದೆ. ಇವೆಲ್ಲವೂ ದುರ್ಘಟನೆಯೊಂದು ನಡೆದಾಗ ಸಹಜವಾಗಿ ಆಗಬೇಕಾದ ಕಾನೂನು ಪ್ರಕ್ರಿಯೆಗಳು. ಆದರೆ, ವಸತಿ–ವಾಣಿಜ್ಯ ಪ್ರದೇಶದಲ್ಲಿ ಪಟಾಕಿ ಗೋದಾಮು ಇರುವುದು ಹಾಗೂ ಅದು ಯಾರ ಗಮನಕ್ಕೂ ಬಾರದಿರುವುದು ಆಶ್ಚರ್ಯಕರ. ಗೋದಾಮಿನ ಅಕ್ಕಪಕ್ಕದಲ್ಲಿ ಪಂಕ್ಚರ್ ಅಂಗಡಿ, ಲಾರಿ ದುರಸ್ತಿ ಮಳಿಗೆ, ಚಹಾ ಅಂಗಡಿ ಹಾಗೂ ಮನೆಗಳಿವೆ. ಹೀಗಿದ್ದೂ ಪಟಾಕಿ ದಾಸ್ತಾನು ಹಾಗೂ ಮಾರಾಟವನ್ನು ಆರೋಪಿ ಯಾರ ಗಮನಕ್ಕೂ ಬರದಂತೆ ನಡೆಸುತ್ತಿದ್ದ ಎಂದರೆ ಅದನ್ನು ನಂಬಲಾಗದು. ಸ್ಫೋಟ ಸಂಭವಿಸಿದ ದಿನವೂ 15ರಿಂದ 20 ಕೆ.ಜಿ. ತೂಕದ ಪಟಾಕಿಗಳಿದ್ದ 80 ಬಾಕ್ಸ್‌ಗಳನ್ನು ತರಿಸಿ ಗೋದಾಮಿನಲ್ಲಿ ಸಂಗ್ರಹಿಸಲಾಗಿತ್ತು ಎನ್ನುವ ವಿವರವನ್ನು ನೋಡಿದರೆ, ಆ ಚಟುವಟಿಕೆಗಳೆಲ್ಲ ಕದ್ದುಮುಚ್ಚಿ ನಡೆಯುತ್ತಿದ್ದವು ಎಂದು ನಂಬುವುದು ಕಷ್ಟ. ದೇವರಚಿಕ್ಕನಹಳ್ಳಿಯ ಅಪಾರ್ಟ್‌ಮೆಂಟ್ ನಿರ್ಮಾಣದಲ್ಲಿ ಕೂಡ ಸುರಕ್ಷಾ ಕ್ರಮಗಳನ್ನು ಸಮರ್ಪಕವಾಗಿ ಪಾಲಿಸಲಾಗಿಲ್ಲ ಎಂದು ಹೇಳಲಾಗುತ್ತಿದೆ. ಹಾಗಾಗಿ, ಪ್ರಸಕ್ತ ದುರ್ಘಟನೆಗಳ ಹೊಣೆಗಾರಿಕೆಯನ್ನು ಸಾರ್ವಜನಿಕರು, ಮಹಾನಗರಪಾಲಿಕೆ ಹಾಗೂ ಪೊಲೀಸ್ ವ್ಯವಸ್ಥೆ ಕೂಡ ಪರೋಕ್ಷವಾಗಿಯಾದರೂ ಹೊರಬೇಕಾಗಿದೆ.

ಸ್ವಯಂಶಿಸ್ತು ನಾಗರಿಕರಿಗೂ ಬೇಕು, ವ್ಯಾಪಾರಿಗಳಿಗೂ ಬೇಕು. ಕಾನೂನು ಕ್ರಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ಸರ್ಕಾರಿ ಸಂಸ್ಥೆಗಳು ನಿಗಾ ವಹಿಸಬೇಕು

ಎಚ್‌ಎಎಲ್ ವಿಮಾನ ನಿಲ್ದಾಣ ರಸ್ತೆಯ ಕಾರ್ಲ್‌ಟನ್ ಟವರ್ಸ್ ಕಟ್ಟಡದಲ್ಲಿ 2010ರಲ್ಲಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಒಂಬತ್ತು ಮಂದಿ ಸಾವಿಗೀಡಾಗಿದ್ದರು. ಆ ಕಟ್ಟಡದಲ್ಲಿ ಅಗ್ನಿ ಸುರಕ್ಷತೆಗೆ ಸಂಬಂಧಿಸಿದ ಮೂವತ್ತು ನಿಯಮಗಳನ್ನು ಉಲ್ಲಂಘಿಸಲಾಗಿತ್ತು. ಕಟ್ಟಡದ ಎರಡು, ಮೂರು ಮತ್ತು ನಾಲ್ಕನೇ ಮಹಡಿಗಳ ಪ್ರವೇಶದ್ವಾರಗಳು ಮುಚ್ಚಿದ್ದವು. ಕಾರಿಡಾರ್‌ನಲ್ಲಿ ಸರಾಗವಾಗಿ ಸಾಗಲೂ ಅವಕಾಶವಿರಲಿಲ್ಲ. ‘ಕಾರ್ಲ್‌ಟನ್ ದುರಂತ’ದ ನಂತರ ಕಟ್ಟಡಗಳಿಗೆ ಸಂಬಂಧಿಸಿದ ನಿಯಮಗಳನ್ನು ಬಿಗಿಗೊಳಿಸಲಾಯಿತು. ಬಹುಮಹಡಿ ಕಟ್ಟಡಗಳ ನಿರ್ಮಾಣದಲ್ಲಿ ‘ರಾಷ್ಟ್ರೀಯ ಕಟ್ಟಡ ನೀತಿ’ ಹಾಗೂ ಕರ್ನಾಟಕ ಗೃಹ ಸಚಿವಾಲಯ ರೂಪಿಸಿರುವ ಸುರಕ್ಷತೆಗೆ ಸಂಬಂಧಿಸಿದ ಕ್ರಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕು. ಆದರೆ, ಬಹುತೇಕ ಕಟ್ಟಡಗಳಲ್ಲಿ ಸುರಕ್ಷಾ ಕ್ರಮಗಳು ಅಧಿಕಾರಿಗಳ ಕಣ್ಣೊರೆಸುವಷ್ಟಕ್ಕೆ ಸೀಮಿತವಾಗಿರುತ್ತವೆ. ತುಂಡು ಭೂಮಿ ಮತ್ತು ಹಣ ಇರುವ ಯಾರು ಬೇಕಾದರೂ ತಮಗೆ ಬೇಕಾದಂತೆ ಕಟ್ಟಡ ನಿರ್ಮಿಸಬಹುದು ಎನ್ನುವ ಸ್ಥಿತಿಯಿದೆ. ಜನಸಾಮಾನ್ಯರ ಜೀವಗಳ ಬಗೆಗಿನ ಕಾಳಜಿಯನ್ನು ರಿಯಲ್ ಎಸ್ಟೇಟ್ ಉದ್ಯಮವಿರಲಿ, ಕಾನೂನು ಅನುಷ್ಠಾನದ ಹೊಣೆ ಹೊತ್ತ ಪಾಲಿಕೆ–ಪ್ರಾಧಿಕಾರಗಳೂ ಪ್ರದರ್ಶಿಸುತ್ತಿಲ್ಲ. ಈ ಬೇಜವಾಬ್ದಾರಿ ಹಾಗೂ ಭ್ರಷ್ಟತೆಯಿಂದಾಗಿ ಬಹುಮಹಡಿ ಕಟ್ಟಡಗಳಲ್ಲಿ ಅಗ್ನಿ ಆಕಸ್ಮಿಕಗಳು ಸಂಭವಿಸಿ, ಸಾವುನೋವಿನ ಪ್ರಕರಣಗಳು ವರದಿಯಾಗುತ್ತಿವೆ.

ಪಟಾಕಿ ಸ್ಫೋಟ ಅಥವಾ ಬೆಂಕಿ ಅವಘಡಗಳಂಥ ದುರಂತಗಳು ಸಂಭವಿಸಿದಾಗ ನಾಗರಿಕಪ್ರಜ್ಞೆ ಚುರುಕಾಗಿ, ಅಷ್ಟೇ ಬೇಗ ತಣ್ಣಗಾಗುತ್ತದೆ. ದುರ್ಘಟನೆಗಳು ಪದೇಪದೇ ನಡೆಯುತ್ತಿದ್ದರೂ ಕಟ್ಟಡ–ಕಾರ್ಖಾನೆಗಳಲ್ಲಿನ ಸುರಕ್ಷಾ ಕ್ರಮಗಳಲ್ಲೇನೂ ಸುಧಾರಣೆಯಾಗಿಲ್ಲ. ಲಾಭಕೋರತನದ ಕೆಲವು ವ್ಯಾಪಾರಿಗಳು ಅಮಾಯಕರ ಜೀವಗಳೊಂದಿಗೆ ಚೆಲ್ಲಾಟ ಆಡುತ್ತಲೇ ಇರುತ್ತಾರೆ. ಕಾನೂನು ಉಲ್ಲಂಘನೆಯಾಗದಂತೆ ನಿಗಾ ವಹಿಸಬೇಕಾದ ಪಾಲಿಕೆ–ಪ್ರಾಧಿಕಾರಗಳು, ದುರಂತ ನಡೆದಾಗ ತಮ್ಮ ಅಸ್ತಿತ್ವ ಪ್ರದರ್ಶಿಸುವುದನ್ನು ಬಿಟ್ಟರೆ ಉಳಿದ ಸಮಯದಲ್ಲಿ ಕಣ್ಣು ಮುಚ್ಚಿಕೊಂಡಿರುವಂತೆ ವರ್ತಿಸುತ್ತವೆ. ಸಾರ್ವಜನಿಕರು ಕೂಡ ತಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ಅಕ್ರಮ ಅಥವಾ ಶಂಕಾಸ್ಪದ ಚಟುವಟಿಕೆಗಳು ನಡೆಯುತ್ತಿರುವುದು ಗಮನಕ್ಕೆ ಬಂದರೂ, ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ಇಲ್ಲವೇ ಪೊಲೀಸರಿಗೆ ಮಾಹಿತಿ ನೀಡುವ ಗೋಜಿಗೆ ಹೋಗುವುದಿಲ್ಲ. ಸ್ವಯಂಶಿಸ್ತು ನಾಗರಿಕರಿಗೂ ಬೇಕು, ವ್ಯಾಪಾರಿಗಳಿಗೂ ಬೇಕು. ಕಾನೂನು ಕ್ರಮಗಳು ಕಟ್ಟುನಿಟ್ಟಾಗಿ ಪಾಲನೆಯಾಗುವಂತೆ ಸರ್ಕಾರಿ ಸಂಸ್ಥೆಗಳು ನಿಗಾ ವಹಿಸಬೇಕು. ಸಾರ್ವಜನಿಕ ಕಾಳಜಿಯ ತಾಳಮೇಳ ಸರಿಯಾಗದೆ ಹೋದರೆ, ಸ್ಫೋಟ ಹಾಗೂ ಅಗ್ನಿ ಅವಘಡಗಳು ಮತ್ತೆ ಮತ್ತೆ ಸಂಭವಿಸುತ್ತಲೇ ಇರುತ್ತವೆ; ಅಮಾಯಕರು ಜೀವ ಕಳೆದುಕೊಳ್ಳುತ್ತಲೇ ಇರುತ್ತಾರೆ.

ದಿನದ ಟ್ವೀಟ್

ಸಂವಿಧಾನ ವಿರೋಧಿ ನಡೆ

ಸಭಾಧ್ಯಕ್ಷರನ್ನು ಹೊರತುಪಡಿಸಿ ರಾಜ್ಯಕ್ಕೆ ಸಾಂವಿಧಾನಿಕ ಮುಖ್ಯಸ್ಥರಾಗಿರುವ ರಾಜ್ಯಪಾಲರಷ್ಟೇ ಕೂರಬಹುದಾದ ಆಸನದಲ್ಲಿ ಲೋಕಸಭಾಧ್ಯಕ್ಷರನ್ನು ಕೂರಿಸುವುದು ಸಂವಿಧಾನ ವಿರೋಧಿ ಮಾತ್ರವಲ್ಲ, ವಿಧಾನಸಭೆಯ ಪಾವಿತ್ರ್ಯ ನಾಶ ಕೂಡಾ ಆಗಿದೆ. ಈ ಪಾಪದ ಫಲವನ್ನು ಬಿಜೆಪಿ ರಾಜ್ಯ ಘಟಕ ಹೊರಬೇಕಾಗುತ್ತದೆ.
#BJPAgainstDemocracy

ಸಿದ್ದರಾಮಯ್ಯ, ವಿಧಾನಸಭೆ ವಿರೋಧಪಕ್ಷದ ನಾಯಕ

ಕಿಡಿನುಡಿ



ಲೋಕಸಭಾಧ್ಯಕ್ಷರಾದ ಓಂ ಬಿರ್ಲಾ ಅವರು ವಿಧಾನಮಂಡಲದ ಜಂಟಿ ಅಧಿವೇಶನವನ್ನು ಉದ್ದೇಶಿಸಿ ಮಾತನಾಡಿದ್ದನ್ನು ಧಿಕ್ಕರಿಸಿರುವುದು ಕಾಂಗ್ರೆಸ್ ಪಕ್ಷದ ಪ್ರಜಾಪ್ರಭುತ್ವ ವಿರೋಧಿ ನಿಲುವು. ಸಾಂವಿಧಾನಿಕ ಹುದ್ದೆಯಲ್ಲಿರುವ ಲೋಕಸಭಾಧ್ಯಕ್ಷರನ್ನು ಅಗೌರವಿಸುವುದು ಕಾಂಗ್ರೆಸ್‌ನ ನೀಚ ರಾಜಕೀಯವನ್ನು ಎತ್ತಿ ತೋರಿಸಿದೆ.

ಆರಗ ಜ್ಞಾನೇಂದ್ರ, ಗೃಹ ಸಚಿವ

25 ವರ್ಷಗಳ ಹಿಂದೆ

ಬುಧವಾರ, 25-9-1996

- **ಕೇಂದ್ರ ಸರ್ಕಾರಕ್ಕೆ ಬೆಂಬಲ ಅಚಲ: ಸೀತಾರಾಂ ಕೇಸರಿ**

ನವದೆಹಲಿ, ಸೆ. 24 (ಯುಎನ್‌ಐ)– ಸಂಯುಕ್ತರಂಗ ಸರ್ಕಾರಕ್ಕೆ ಬೆಂಬಲ ನೀಡುವ ಪಕ್ಷದ ನಿರ್ಧಾರವನ್ನು ಪುನರ್ ಪರಿಶೀಲಿಸುವ ಪ್ರಶ್ನೆಯೇ ಇಲ್ಲ ಎಂದು ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ನೂತನ ಅಧ್ಯಕ್ಷ ಸೀತಾರಾಂ ಕೇಸರಿ ಇಂದು ಇಲ್ಲಿ ಸ್ಪಷ್ಟಪಡಿಸಿದರು.

ಪಕ್ಷಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನರಸಿಂಹ ರಾವ್ ಅವರ ನಾಯಕತ್ವದಲ್ಲಿ ಕಾಂಗ್ರೆಸ್ ಕಾರ್ಯಕಾರಿಣಿಯು ಸರ್ಕಾರವನ್ನು ಬೆಂಬಲಿಸುವ ನಿರ್ಧಾರ ಕೈಗೊಂಡಿತು ಎಂದು ಹೇಳಿದರು.

- **ಜೂನ್‌ನಿಂದ ಸಾರಾಯಿ ನಿಷೇಧ: ಮುಖ್ಯಮಂತ್ರಿ**

ಬೆಂಗಳೂರು, ಸೆ. 24– ಮುಂದಿನ ಜೂನ್‌ನಿಂದ ಸಾರಾಯಿ ನಿಷೇಧಕ್ಕೆ ಸರ್ಕಾರ ತೀರ್ಮಾನಿಸಿದೆ ಎಂದು ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಇಂದು ಘೋಷಿಸಿದರು.

50 ವರ್ಷಗಳ ಹಿಂದೆ

ಶನಿವಾರ, 25-9-1971

- **ಇಂಫಾಲ್‌ನಲ್ಲಿ ಉದ್ರಿಕ್ತ ವಿದ್ಯಾರ್ಥಿಗಳ ಮೇಲೆ ಗುಂಡು, ಸೈನ್ಯಕ್ಕೆ ಕರೆ**

ಇಂಫಾಲ್, ಸೆ. 24– ಇಲ್ಲಿನ ವಿದ್ಯಾರ್ಥಿಗಳು ಕಳೆದ ಎರಡು ದಿನಗಳಿಂದ ನಡೆಸಿರುವ ಆಹಾರ ಚಳವಳಿ ಇಂದು ಹಿಂಸಾತ್ಮಕ ರೂಪ ತಾಳಿ ಗೋಲಿಬಾರ್ ಮತ್ತು ಕರ್ಫ್ಯೂ ಜಾರಿಗೆಡೆ ಮಾಡಿಕೊಟ್ಟಿತು. ಮುಂಜಾಗ್ರತಾ ಕ್ರಮವಾಗಿ ಇಂಫಾಲ್ ನಗರಕ್ಕೆ ಸೈನ್ಯ ಕರೆಸಲಾಗಿದೆ.

ವಾರಕ್ಕೆ ಆರು ಕೆ.ಜಿ. ಭತ್ತವನ್ನು ಪಡಿತರವಾಗಿ ನೀಡಲು ಹಾಗೂ ನಿನ್ನೆ ಬಂಧಿಸಲಾದ ಎಲ್ಲಾ ವಿದ್ಯಾರ್ಥಿಗಳ ಬಿಡುಗಡೆಗೆ ಆಗ್ರಹಿಸಿ ಚಳವಳಿ ನಡೆಯುತ್ತಿತ್ತು.

ಈ ಭಾರಿ ಗುಂಪಿನ ಮೇಲೆ ಇಂದು ಪೊಲೀಸರು ಗುಂಡು ಹಾರಿಸಿದಾಗ ಐವರು ಗಾಯಗೊಂಡರು.

- **ಮೈಸೂರು ಭೂ ಸುಧಾರಣೆ ಶಾಸನಕ್ಕೆ ತಿದ್ದುಪಡಿ**

ನವದೆಹಲಿ, ಸೆ. 24– ಭೂಸುಧಾರಣೆ ಜಾರಿಗೆ ತರುವಲ್ಲಿನ ವಿಳಂಬ ತಗ್ಗಿಸಲು ಮೈಸೂರು ಸರ್ಕಾರ ಮೈಸೂರು ಭೂಸುಧಾರಣಾ ಶಾಸನಕ್ಕೆ ತಿದ್ದುಪಡಿ ಸೂಚಿಸುವ ಕರಡು ಮಸೂದೆಯನ್ನು ಸಿದ್ಧಪಡಿಸಿದೆ.

ಈ ಹೆಮ್ಮೆಯ ಕಂಪನಿ ವಿರುದ್ಧ ಮಾಡಿರುವ ದಾಳಿಯು ಕೆಲವು ಗಂಭೀರ ಪ್ರಶ್ನೆಗಳನ್ನು ಹುಟ್ಟುಹಾಕಿದೆ

ಇನ್ಫೊಸಿಸ್: ಟೀಕಾಸ್ತ್ರ ವೃತ್ತಾಂತ

ವಿಶ್ಲೇಷಣೆ

ಪ್ರೊ. ಬಿ.ಕೆ.ಚಂದ್ರಶೇಖರ್

ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಮುಖವಾಣಿಯಾದ ‘ಪಾಂಚಜನ್ಯ’ ನಿಯತಕಾಲಿಕವು ರಾಷ್ಟ್ರದ ಹೆಮ್ಮೆಯ ಕಂಪನಿಯಾದ ಇನ್ಫೊಸಿಸ್ ವಿರುದ್ಧ ಟೀಕಾಸ್ತ್ರ ಝಳಪಿಸಿ ಮುಗಿಬಿದ್ದಿದೆ. ಇನ್ಫೊಸಿಸ್ ಅಭಿವೃದ್ಧಿಪಡಿಸಿದ ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಪೋರ್ಟಲ್‌ಗಳಲ್ಲಿನ ಲೋಪಗಳ ಕಾರಣದಿಂದಾಗಿ, ದೇಶದ ಅರ್ಥ ವ್ಯವಸ್ಥೆಯ ಮೇಲೆ ತೆರಿಗೆ ಪಾವತಿದಾರರು ಹೊಂದಿದ್ದ ವಿಶ್ವಾಸಕ್ಕೆ ಪೆಟ್ಟು ಬಿದ್ದಿದೆ; ಯಾವುದಾದರೂ ದೇಶವಿರೋಧಿ ಶಕ್ತಿಗಳು ಇನ್ಫೊಸಿಸ್ ಮೂಲಕ ಭಾರತದ ಆರ್ಥಿಕ ಹಿತಾಸಕ್ತಿಗಳಿಗೆ ಧಕ್ಕೆ ತರಲು ಯತ್ನಿಸುತ್ತಿರಬಹುದೇ ಎಂದು ಲೇಖನದಲ್ಲಿ ಪ್ರಶ್ನೆ ಮಾಡಲಾಗಿದೆ.

ಸಮಾಜದಲ್ಲಿ ಜಾತಿದ್ವೇಷ ಬಿತ್ತುವ ಕೆಲವು ಸಂಘಟನೆಗಳು ಕಂಪನಿಯ ಅನುದಾನದ ಪ್ರಯೋಜನ ಪಡೆದಿವೆ ಎಂದು ಹೇಳಲಾಗಿದೆ. ನಕ್ಸಲೀಯರು, ಎಡಪಂಥೀಯರು ಮತ್ತು ತುಕ್ಡೆ–ತುಕ್ಡೆ ಗ್ಯಾಂಗ್‌ಗೆ ಸಹಾಯ ಮಾಡಿದ ಆರೋಪವೂ ಇನ್ಫೊಸಿಸ್ ಮೇಲೆ ಇದೆ ಎಂದೂ ಉಲ್ಲೇಖವಾಗಿದೆ. ಕಂಪನಿಯು ರೂಪಿಸಿದ ಆದಾಯ ತೆರಿಗೆ ಇಲಾಖೆಯ ಪೋರ್ಟಲ್‌ನಲ್ಲಿನ ಕೆಲವು ತಾಂತ್ರಿಕ ತೊಂದರೆಗಳನ್ನೇ ನೆಪ ಮಾಡಿಕೊಂಡು ಈ ಮುಖಪುಟ ಲೇಖನವನ್ನು ಪ್ರಕಟಿಸಲಾಗಿದೆ.

ಹೀಗೆ ಇನ್ಫೊಸಿಸ್ ಕಂಪನಿಯನ್ನು ಗುರಿಯಾಗಿಸಿಕೊಂಡು ಆರೋಪ ಮಾಡುವಾಗ ಅನಗತ್ಯವಾಗಿ ಇನ್ಫೊಸಿಸ್ ಟ್ರಸ್ಟ್ ಅನ್ನೂ ಅದರೊಟ್ಟಿಗೆ ಎಳೆದು ತರಲಾಗಿದೆ. ಇನ್ಫೊಸಿಸ್ ಟ್ರಸ್ಟ್ ಮೆಚ್ಚುಗೆಗೆ ಪಾತ್ರವಾಗುವಂತಹ ಕಾರ್ಯಯೋಜನೆಗಳಿಗೆ ಅನುದಾನ ನೀಡುತ್ತಿರುವುದನ್ನು ಕಡೆಗಣಿಸಿ ಈ ಆರೋಪ ಮಾಡಿರುವುದು ಸಮರ್ಥನೀಯವಾದುದಲ್ಲ. ಉದಾಹರಣೆಗೆ, ಪ್ರಾಚೀನ ಭಾರತದ ಅನನ್ಯವಾದ ಸಾಹಿತ್ಯ ಕೃತಿಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸುವ ಮಹತ್ವದ ಕಾರ್ಯಯೋಜನೆಗಳಿಗೆ ಈ ಟ್ರಸ್ಟ್ ಅನುದಾನ ನೀಡಿದೆ.

ತಾನು ತೆರೆಮರೆಯಲ್ಲಿದ್ದು ಕಂಪನಿಯ ವಿರುದ್ಧ ಆರ್‌ಎಸ್‌ಎಸ್ ಮಾಡಿರುವ ಈ ದಾಳಿಯು ಕೆಲವು ಮುಖ್ಯವಾದ ಪ್ರಶ್ನೆಗಳನ್ನು ಹುಟ್ಟುಹಾಕಿದೆ. ಅಷ್ಟೇ ಅಲ್ಲದೆ, ಆರ್‌ಎಸ್‌ಎಸ್‌ನ ನಿಜವಾದ ಕಾರ್ಯಸೂಚಿಯೇ ಬೇರೆ ಹಾಗೂ ಅದು ತನ್ನನ್ನು ಸಾರ್ವಜನಿಕವಾಗಿ ಬಿಂಬಿಸಿಕೊಳ್ಳುವ ರೀತಿಯೇ ಬೇರೆ ಎಂಬುದನ್ನೂ ಇದು ಜಗಜ್ಜಾಹೀರುಗೊಳಿಸಿದೆ. ಈ ಲೇಖನವು ದೇಶದಾದ್ಯಂತ ಚರ್ಚೆಗೆ ಗ್ರಾಸವಾಗುತ್ತಿದ್ದಂತೆ ‘ಆರ್‌ಎಸ್‌ಎಸ್ ಒಂದು ಸಾಂಸ್ಕೃತಿಕ ಸಂಘಟನೆ. ಸಮಾಜದಲ್ಲಿ ಆಗುತ್ತಿರುವ ಧ್ರುವೀಕರಣವೂ ಸೇರಿದಂತೆ ಯಾವುದೇ ರಾಜಕೀಯ ವಿಷಯಕ್ಕೂ ಸಂಘಟನೆಗೂ ಸಂಬಂಧವೇ ಇಲ್ಲ. ಅದು ಸಂಪೂರ್ಣ ರಾಷ್ಟ್ರವಾದಿ ಸಂಘಟನೆ. ವಿದೇಶಿ ನಿಧಿಯನ್ನು ನಿರೀಕ್ಷಿಸುವ ಗೋಜಿಗೆ ಹೋಗದೆ ತನ್ನ ಪಾವಿತ್ರ್ಯ ಕಾಪಾಡಿಕೊಂಡಿದೆ’ ಎಂದು ಆರ್‌ಎಸ್‌ಎಸ್ ಸ್ಪಷ್ಟನೆ ಕೊಟ್ಟಿದೆ. ಅಲ್ಲದೇ, ಪಾಂಚಜನ್ಯವು ಆರ್‌ಎಸ್‌ಎಸ್ ಮುಖವಾಣಿಯಲ್ಲ ಎಂದೂ ಹೇಳಿದೆ.

ಇದು ನಾಮಕಾವಸ್ತೆಯ ಸ್ಪಷ್ಟನೆಯಷ್ಟೆ. ವಾಸ್ತವದಲ್ಲಿ, ‘ಪಾಂಚಜನ್ಯ’ ಮತ್ತು ‘ದ ಆರ್ಗನೈಸರ್’ ಪತ್ರಿಕೆಗಳು ಬಹಳ ಹಿಂದಿನಿಂದಲೂ ಆರ್‌ಎಸ್‌ಎಸ್ ಮುಖವಾಣಿಗಳೆಂದೇ ಗುರುತಿಸಿಕೊಂಡಿವೆ. ಈ ಪತ್ರಿಕೆಗಳಿಗೂ ತನಗೂ ಸಂಬಂಧವಿದೆ ಎಂಬುದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುವ ಧೈರ್ಯವನ್ನು ಆರ್‌ಎಸ್‌ಎಸ್ ಏಕೆ ಮಾಡಬಾರದು? ಯಾವುದೇ ಲೇಖಕ ಯಾವ ಪೂರ್ವಸೂಚನೆಯೂ ಇಲ್ಲದೆ ಹಾಗೂ ಸಂಪಾದಕರ ಸಮ್ಮತಿ ಇಲ್ಲದೆ ಇಷ್ಟು ಸುದೀರ್ಘವಾದ ಮುಖಪುಟ ಲೇಖನವನ್ನು ಬರೆಯಲು ಸಾಧ್ಯವೇ? ಆರ್‌ಎಸ್‌ಎಸ್ ಸ್ಪಷ್ಟನೆಗೆ ಪೂರಕವಾಗಿ, ‘ಇಲ್ಲಿ ವ್ಯಕ್ತವಾಗಿರುವ ಅಭಿಪ್ರಾಯಗಳು ವೈಯಕ್ತಿಕವಾದವು’ ಎಂಬ ಸೂಚನೆಯನ್ನೇನಾದರೂ ಲೇಖನದೊಂದಿಗೆ ಹಾಕಲಾಗಿದೆಯೇ? ಈ ಲೇಖನ ಪ್ರಕಟಿಸಿದ್ದರ ಸಂಬಂಧವಾಗಿ ಆರ್‌ಎಸ್‌ಎಸ್ ಮತ್ತು ‘ಪಾಂಚಜನ್ಯ’ ಕ್ಷಮೆ ಕೋರಬೇಕಿತ್ತು.

ಭಾರತವು ಸ್ವಾತಂತ್ರ್ಯಗೊಂಡ ಸಂದರ್ಭದಲ್ಲಿ ಎಂ.ಎಸ್. ಗೋಲ್ವಾಲ್ಕರ್ ಅವರು ಸಂಘಟನೆಯು ‘ರಾಜಗುರು’ವಿನಂತೆ ತನ್ನ ಪಾತ್ರವನ್ನು ನಿರ್ವಹಿಸುತ್ತದೆ ಎಂದು ಹೇಳಿದ್ದರಾದರೂ ಅಧಿಕಾರ ರಾಜಕಾರಣದಲ್ಲಿ ಭಾಗಿಯಾಗುವ ಯಾವ ಆಸಕ್ತಿಯನ್ನೂ ಆರ್‌ಎಸ್‌ಎಸ್ ವ್ಯಕ್ತಪಡಿಸಿರಲಿಲ್ಲ. ಕೆ.ಆರ್.ಮಲ್ಕಾನಿ ಅವರು ‘ದ ಆರ್ಗನೈಜರ್’ನಲ್ಲಿ 1949ರ ಡಿಸೆಂಬರ್‌ನಲ್ಲಿ ‘ಹೊಸ ಸರ್ಕಾರದ ಭಾರತೀಯವಲ್ಲದ ಮತ್ತು ಭಾರತ ವಿರೋಧಿಯಾದ ಕಾರ್ಯನೀತಿಗಳಿಗೆ ತಡೆಯೊಡ್ಡಲು ಸಂಘವು ರಾಜಕಾರಣದಲ್ಲಿ ಪಾಲ್ಗೊಳ್ಳಬೇಕು... ಇದಕ್ಕಾಗಿ ಅದು ರಾಜಕೀಯ ಘಟಕವೊಂದನ್ನು ಬೆಳೆಸಬೇಕು’ ಎಂದು ಬರೆದಿದ್ದರು. ವಿಪರ್ಯಾಸವೆಂದರೆ, ಸಂಘಟನೆಯ ಕೇಂದ್ರಗುರಿಯಾದ ‘ಹಿಂದೂ ರಾಷ್ಟ್ರ’ ನಿರ್ಮಾಣದ (ಇದನ್ನೇ ಸಾವರ್ಕರ್ ಮತ್ತು ಗೋಲ್ವಾಲ್ಕರ್ ಅವರು ‘ಹಿಂದುತ್ವ’ ಎಂದು ಕರೆದಿದ್ದು) ಕಲ್ಪನೆಯೇ ಸ್ಪಷ್ಟವಾಗಿ ‘ರಾಜಕಾರಣ’ವಾಗಿತ್ತು. ಇಷ್ಟಾದರೂ ಹಿಂದುತ್ವವು ‘ರಾಜಕೀಯೇತರ’ ಎಂಬ ಭ್ರಮೆಯನ್ನು ಸಮಾಜದಲ್ಲಿ ಹರಡಿ, ಹಿಂದುತ್ವವನ್ನು ಟೀಕಿಸುವುದೇ ‘ರಾಜಕೀಯ’ ಎಂಬ ನಂಬಿಕೆಯನ್ನು ಮೂಡಿಸಲಾಗಿದೆ.

2005ರಲ್ಲಿ ನಡೆದ ಬಿಜೆಪಿ ಕಾರ್ಯಕಾರಿಣಿ ಸಭೆಯಲ್ಲಿ ಎಲ್.ಕೆ.ಅಡ್ವಾಣಿ ಅವರು ವಿಮರ್ಶಾತ್ಮಕವಾಗಿ ಮಾಡಿದ ಉಲ್ಲೇಖವೊಂದನ್ನು ಇಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ‘ಪಕ್ಷವು ಯಾವುದೇ ರಾಜಕೀಯ ನಿರ್ಧಾರವನ್ನು ಅಥವಾ ಸಂಘಟನಾತ್ಮಕ ನಿರ್ಧಾರವನ್ನು ಆರ್‌ಎಸ್‌ಎಸ್ ಒಪ್ಪಿಗೆ ಇಲ್ಲದೇ ತೆಗೆದುಕೊಳ್ಳಲು ಸಾಧ್ಯವಿಲ್ಲ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಮೂಡಿದೆ’ ಎಂದು ಅವರು ಹೇಳಿದ್ದರು. ಇದಕ್ಕೆ ಮುನ್ನ, ಆರ್‌ಎಸ್‌ಎಸ್ ಮುಖ್ಯಸ್ಥರಾಗಿದ್ದ ಕು.ಸೀ.ಸುದರ್ಶನ್ ಅವರು 2005ರ ಟಿ.ವಿ. ಸಂದರ್ಶನವೊಂದರಲ್ಲಿ, ‘ವಾಜಪೇಯಿ ಮತ್ತು ಅಡ್ವಾಣಿ ಹೊಸ ಮುಖಗಳಿಗೆ ಅವಕಾಶ ಮಾಡಿಕೊಡುವುದಕ್ಕಾಗಿ ಜಾಗ ತೆರವು ಮಾಡಬೇಕು’ ಎಂದಿದ್ದರು. ಇದಕ್ಕೆ ಪ್ರತಿಯಾಗಿ, ‘ಪಕ್ಷದ ವಿಚಾರಗಳಲ್ಲಿ ಆರ್‌ಎಸ್‌ಎಸ್ ತಲೆಹಾಕಬಾರದು’ ಎಂದು ಅಡ್ವಾಣಿ ತಿರುಗೇಟು ನೀಡಿದ್ದರು. ಆದರೆ ಹಾಗೆ ಹೇಳಿದ ಅಡ್ವಾಣಿ ಅದೇ ಡಿಸೆಂಬರ್‌ನಲ್ಲಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಡಬೇಕಾಯಿತು!

ಇನ್ನು ವಿದೇಶಿ ಹಣಕಾಸು ದೇಣಿಗೆಯ ವಿಷಯಕ್ಕೆ ಬಂದರೆ ಆರ್‌ಎಸ್‌ಎಸ್, ತನ್ನ ಕಾರ್ಯಕರ್ತನಾಗಿದ್ದ, ಅಮೆರಿಕ ಮೂಲದ ವಿಶ್ವಬ್ಯಾಂಕ್ ಉದ್ಯೋಗಿಯಾಗಿದ್ದ ವಿನೋದ್ ಪ್ರಕಾಶ್ ಅವರು 1988ರಲ್ಲಿ ಸ್ಥಾಪಿಸಿದ ‘ಇಂಡಿಯಾ ಡೆವಲಪ್‌ಮೆಂಟ್ ಆ್ಯಂಡ್ ರಿಲೀಫ್ ಫಂಡ್’ನ (ಐಡಿಆರ್‌ಎಫ್) ದೊಡ್ಡ ಫಲಾನುಭವಿ. ಅಮೆರಿಕದಲ್ಲಿದ್ದ ಭಾರತೀಯ ಮೂಲದ ಪ್ರಭಾವಿ ಸಾಫ್ಟ್‌ವೇರ್ ವೃತ್ತಿಪರರು ಮುಂಚೂಣಿ ಬ್ಲೂಚಿಪ್ ಕಂಪನಿಗಳಾದ ಸಿಸ್ಕೊ, ಸನ್ ಮೈಕ್ರೊ ಸಿಸ್ಟಮ್ಸ್, ಹ್ಯೂಲೆಟ್ ಪ್ಯಾಕರ್ಡ್ ಮತ್ತಿತರ ಕಂಪನಿಗಳನ್ನು ಆರ್‌ಎಸ್‌ಎಸ್‌ಗೆ ದೇಣಿಗೆ ನೀಡುವಂತೆ ಮನವೊಲಿಸಿದರು ಎಂಬ ಮಾತಿದೆ. ಐಡಿಆರ್‌ಎಫ್, 1994-2000ದ ಅವಧಿಯಲ್ಲಿ ಸಂಘ ಪರಿವಾರದ ಸಂಘಟನೆಗಳಿಗೆ 40 ಲಕ್ಷ ಡಾಲರ್‌ಗಳನ್ನು ದೇಣಿಗೆಯಾಗಿ ನೀಡಿದೆ.

ಇದಕ್ಕೆ ಪ್ರತಿಕ್ರಿಯೆಯಾಗಿ ಇತರ ಭಾರತೀಯ ವೃತ್ತಿಪರರು, ಉದ್ಯೋಗಿಗಳು, ವಿದ್ಯಾರ್ಥಿಗಳು, ಕಲಾವಿದರು ಮತ್ತು ಬುದ್ಧಿಜೀವಿಗಳನ್ನು ಒಳಗೊಂಡ ‘ಕ್ಯಾಂಪೇನ್ ಟು ಸ್ಟಾಪ್ ಫಂಡಿಂಗ್ ಹೇಟ್’ 2002ರ ನವೆಂಬರ್‌ನಲ್ಲಿ ಅಂಕಿ ಅಂಶಗಳನ್ನೊಳಗೊಂಡ ‘ಎ ಫಾರಿನ್ ಎಕ್ಸ್‌ಚೇಂಜ್ ಆಫ್ ಹೇಟ್: ಐಡಿಆರ್‌ಎಫ್’ ಶೀರ್ಷಿಕೆಯಡಿಯಲ್ಲಿ 91 ಪುಟಗಳ ವರದಿಯನ್ನು ಪ್ರಕಟಿಸಿತು. ಅದರ ಪ್ರಕಾರ, ಶೇ 83ರಷ್ಟು ದೇಣಿಗೆಯು ಆರ್‌ಎಸ್‌ಎಸ್, ವಿಎಚ್‌ಪಿಯಂತಹ ಮೂಲಭೂತವಾದಿ ಸಂಘಟನೆಗಳಿಗೆ, ಶೇ 2ರಷ್ಟು ಮಾತ್ರ ಜಾತ್ಯತೀತ ಸಂಘಟನೆಗಳಿಗೆ ಸಂದಾಯವಾಗಿದೆ.

ಇದು, ಐಡಿಆರ್‌ಎಫ್ ಹಾಗೂ ಆರ್‌ಎಸ್‌ಎಸ್ ಒಳಸಂಬಂಧವನ್ನು ಎತ್ತಿತೋರಿಸುತ್ತದೆ. ನಂತರ ಇದು ಅಮೆರಿಕದಲ್ಲಿ ದೊಡ್ಡ ವಿವಾದವನ್ನು ಉಂಟುಮಾಡಿ, ಮುಂಚೂಣಿ ಕಂಪನಿಗಳು ದೇಣಿಗೆಯನ್ನು ಸ್ಥಗಿತಗೊಳಿಸುವುದಕ್ಕೆ ಕಾರಣವಾಯಿತು. ಅಮೆರಿಕದ ನ್ಯಾಯಾಂಗ ಇಲಾಖೆಯು ಶಂಕಾಸ್ಪದ ವ್ಯವಹಾರಗಳ ಬಗ್ಗೆ ತನಿಖೆಯನ್ನು ಆರಂಭಿಸಿತು. ಅಮೆರಿಕದ ಸಣ್ಣ ವ್ಯಾಪಾರಗಳ ಆಡಳಿತಾಂಗವು (ಫೆಡರಲ್ ಏಜೆನ್ಸಿ) ಬಹಿರಂಗಗೊಳಿಸಿರುವಂತೆ, 2021ರ ಏಪ್ರಿಲ್ ವೇಳೆಗೆ ಅಮೆರಿಕದಲ್ಲಿನ ಹಿಂದೂ ಬಲಪಂಥೀಯ ಸಂಘಟನೆಗಳು 8.33 ಲಕ್ಷ ಡಾಲರ್ ಬೃಹತ್ ಮೊತ್ತವನ್ನು ‘ಕೋವಿಡ್ ನಿಧಿ’ಯ ಹೆಸರಿನಲ್ಲಿ ಪಡೆದಿವೆ.

ಈ ಎಲ್ಲಾ ಮೂಲಗಳ ಪ್ರಕಾರ, ಆರ್‌ಎಸ್‌ಎಸ್ ಎಂಬುದು ಪ್ರಭಾವಿಯಾದ ರಾಜಕೀಯ ನಿರ್ಣಯಗಳನ್ನು ನಿರ್ಧರಿಸುವ ಪರ್ಯಾಯ ಅಧಿಕಾರ ಕೇಂದ್ರ ಎಂಬುದು ಸ್ಪಷ್ಟವಾಗಿ ಸಾಬೀತಾಗುತ್ತದೆ.

ಲೇಖಕ: ಕೆಪಿಸಿಸಿ ವಕ್ತಾರ



ಚುರುಮುರಿ

ಮನೆ ಕಲಿಕೆ

• ಸಿ.ಎನ್.ರಾಜು

‘ಮಕ್ಕಳು ಗೋಡೆ ಮೇಲೆಲ್ಲಾ ಅಆಇಈ, ಎಬಿಸಿಡಿ, ಗೊಂಬೆ ಚಿತ್ರ ಬರೆದು ಹಾಳು ಮಾಡಿದ್ದಾರೆ. ಪೇಂಟ್ ಮಾಡಿಸಬೇಕೂರೀ...’ ಎಂದಳು ಅನು.

‘ಶಾಲೆ ಓಪನ್ ಆಗೋವರೆಗೂ ಪೇಂಟ್ ಮಾಡಿಸೋದು ಬೇಡ. ಮಕ್ಕಳು ಗೋಡೆ ಮೇಲೊ, ಟೀವಿ ಮೇಲೊ ಬರೆದು ಜ್ಞಾನ ಬೆಳೆಸಿಕೊಳ್ಳಲಿ’ ಎಂದ ಗಿರಿ.

‘ಸರ್ಕಾರ ಸದ್ಯಕ್ಕೆ ಪ್ರೈಮರಿ ಶಾಲೆಗಳನ್ನು ತೆರೆಯುವಂತೆ ಕಾಣುತ್ತಿಲ್ಲ. ಬ್ಲ್ಯಾಕ್ ಬೋರ್ಡ್, ಚಾಕ್‌ಪೀಸ್ ತನ್ನಿ, ನಾನೇ ಮಕ್ಕಳಿಗೆ ಪಾಠ ಹೇಳ್ತೀನಿ’.

‘ನಿನ್ನ ಪಾಠಕ್ಕೆ ಸಿಲೆಬಸ್ ಇಲ್ಲ, ಟೈಂಟೇಬಲ್ ಇಲ್ಲ, ಅದೇನು ಕಲಿಸ್ತೀಯೋ... ತರಕಾರಿ ಹೆಚ್ಚುವಾಗ ಎಬಿಸಿಡಿ ಬರೆಸ್ತೀಯ, ಒಗ್ಗರಣೆ ಹಾಕುವಾಗ ರೈಮ್ಸ್ ಹೇಳಿಸ್ತೀಯ...’

‘ನೀವು ಟೀವಿಯಲ್ಲಿ ಕ್ರಿಕೆಟ್ ನೋಡಿಕೊಂಡು ಕೊಶ್ಚನ್ ಕೇಳ್ತೀರಿ, ಮಕ್ಕಳ ಉತ್ತರದ ಬದಲು ಕಾಮೆಂಟರಿ ಕೇಳಿಸಿಕೊಳ್ತೀರಿ’.

‘ಸರಿಬಿಡು, ಮಕ್ಕಳಿಗೆ ಮನೆಯೇ ಮೊದಲ ಪಾಠಶಾಲೆ, ಮೊದಲ ಗುರು ತಾಯಿ. ಏನಿದ್ದರೂ ತಂದೆಯಾದವನು ಕೇವಲ ಎಲೆಮರೆಯ ಕಾಯಿ...’ ಗಿರಿ ಒಪ್ಪಿಕೊಂಡ.

‘ಹೇಗೋ ಮಕ್ಕಳು ಚೆನ್ನಾಗಿ ಓದಿ ಬದುಕು ರೂಪಿಸಿಕೊಂಡರೆ ಸಾಕು’.

‘ದೇಶದಲ್ಲಿ ನಿರುದ್ಯೋಗ ಸಮಸ್ಯೆ ಇದೆ. ಈಗ ಪದವಿ ಪಡೆದಿರುವವರಿಗೇ ಉದ್ಯೋಗವಿಲ್ಲ. ನಮ್ಮ ಮಕ್ಕಳು ಓದಿ ಉದ್ಯೋಗ ಮಾಡೋದು ಇನ್ಯಾವಾಗಲೋ...’

‘ಹೌದೂರಿ, ಸರ್ಕಾರ ಕೊಟ್ಟ ಮಾತಿನಂತೆ ಉದ್ಯೋಗ ಸೃಷ್ಟಿ ಮಾಡಲಿಲ್ಲ, ನಿರುದ್ಯೋಗಿಗಳು ತಮ್ಮ ಪದವಿ ಪ್ರಮಾಣಪತ್ರವನ್ನು ಪ್ರಧಾನಿಗೆ ಕಳಿಸಿ ಅಂತ ಕಾಂಗ್ರೆಸ್ ನಾಯಕರು ಕರೆ ಕೊಟ್ಟಿದ್ದಾರೆ’.

‘ಕೊರೊನಾದಿಂದಾಗಿ ಆರ್ಥಿಕ ಬಿಕ್ಕಟ್ಟು ಹೆಚ್ಚಾಗಿದೆಯಂತೆ, ಸಮಸ್ಯೆ ನಿವಾರಣೆ ಆದಮೇಲೆ ಉದ್ಯೋಗ ಸೃಷ್ಟಿ, ತೆರಿಗೆ ಇಳಿಕೆ, ದಿನಬಳಕೆ ಪದಾರ್ಥಗಳ ಬೆಲೆ ಇಳಿಸುವುದಂತೆ ಸರ್ಕಾರ’.

‘ಸರ್ಕಾರವನ್ನು ನಂಬಿಕೊಳ್ಳಲು ಆಗುತ್ತೇನ್ರೀ? ಮಕ್ಕಳಿಗೆ ವಿದ್ಯೆ ಕಲಿಸುವ ಜೊತೆಗೆ ಮನೆಯಲ್ಲೇ ಸ್ವಯಂ ಉದ್ಯೋಗದ ತರಬೇತಿಯನ್ನೂ ಕೊಟ್ಟು ಅವರ ಬದುಕು ರೂಪಿಸಲು ಸಂಕಲ್ಪ ಮಾಡಿದ್ದೇನೆ...’ ಎಂದಳು ಅನು!

ಸಂಗತ

ಇದು ಫ್ಯಾಕ್ಟ್ ಚೆಕ್ ಕಾಲ

ವಿಶ್ವಾಸಾರ್ಹವಲ್ಲದ ಹುಸಿ ಡಿಜಿಟಲ್ ಮಾಹಿತಿ ಗುರುತಿಸುವುದು ಹೇಗೆ?

• ಡಾ. ಎಂ.ಎಸ್.ಶ್ರೀಧರ್

ಎರಡು ದಶಕಗಳ ಹಿಂದೆ, ಗೂಗಲ್ ಒಂದಿದ್ದರೆ ಸಾಕು, ಪುಸ್ತಕಗಳು ಮುಂತಾದ ಮುದ್ರಿತ ಮಾಹಿತಿ ಆಕರಗಳು, ಗ್ರಂಥಾಲಯಗಳ ಅವಶ್ಯಕತೆಯೇ ಇಲ್ಲ ಎನ್ನುವಷ್ಟರ ಮಟ್ಟಿಗೆ ಬಳಕೆದಾರರು ಇಂಟರ್‌ನೆಟ್ ಮಾಹಿತಿಗಳನ್ನು ನಂಬಿದ್ದರು. ಕಂಪ್ಯೂಟರೀಕೃತ ನೇತ್ರ ಪರೀಕ್ಷೆಯಿಂದ ಹಿಡಿದು ಬೀದಿಬದಿಯಲ್ಲಿ ಕಂಪ್ಯೂಟರ್ ಭವಿಷ್ಯ ಕೇಳುವವರೆಗೆ ಕಂಪ್ಯೂಟರ್‌ನಿಂದ ಪಡೆದದ್ದೆಲ್ಲಾ ಅಪ್ಪಟ ಸತ್ಯ ಎಂದು ನಂಬಿದ್ದ ಕಾಲವೊಂದಿತ್ತು.

ಶೋಧಯಂತ್ರಗಳನ್ನು ನಿರ್ವಹಿಸುವವರ ಪೂರ್ವಗ್ರಹಪೀಡಿತ, ಪಕ್ಷಪಾತ ಧೋರಣೆ ಹಾಗೂ ಸಾಮಾಜಿಕ ಜಾಲತಾಣಗಳ ಹುಸಿ ಮತ್ತು ದಾರಿತಪ್ಪಿಸುವ ಮಾಹಿತಿಗಳ ಮಹಾಪೂರದ ಅರಿವು ಕ್ರಮೇಣ ಮೂಡಿದ್ದರ ಪರಿಣಾಮವಾಗಿ ಇಂದು ಪತ್ರಿಕೆಗಳಲ್ಲಿ ಫ್ಯಾಕ್ಟ್ ಚೆಕ್ ಕಾಲಂ ಮತ್ತು ಗ್ರಂಥಾಲಯಗಳಲ್ಲಿ ಡಿಜಿಟಲ್ ಮಾಹಿತಿಯ ಸತ್ಯಾಸತ್ಯತೆ ಬಗೆಗೆ ಅರಿವು ಮೂಡಿಸುವ ಸೇವೆಗಳನ್ನು ಆರಂಭಿಸಲಾಗಿದೆ.

ಇಂಟರ್‌ನೆಟ್‌ನಲ್ಲೂ ಸುಳ್ಳು ಮಾಹಿತಿ ಪತ್ತೆ ಮಾಡುವಂತಹ ತಾಣಗಳಿವೆ (ಉದಾಹರಣೆಗೆ: https://www.factcheck.org, https://www.snopes.com, https://www.politifact.com). ಹುಸಿ ಮಾಹಿತಿ ಪತ್ತೆ ಹಚ್ಚುವ ಪರಿಕರಗಳನ್ನು ಅಭಿವೃದ್ಧಿಪಡಿಸಲಾಗಿದೆ. SurfSafe, MetaCert, Fake News Guard, Decodex ಅಂತಹ ಬ್ರೌಸರ್ ವಿಸ್ತರಣೆ ರೂಪದ ಪರಿಕರಗಳೂ ಲಭ್ಯವಿವೆ. ದಿ ಇಂಟರ್‌ನ್ಯಾಷನಲ್ ಫ್ಯಾಕ್ಟ್ ಚೆಕಿಂಗ್ ನೆಟ್‌ವರ್ಕ್ (ಐಎಫ್‌ಸಿಎನ್) ಇಂತಹ ಎಲ್ಲಾ ಪ್ರಯತ್ನಗಳನ್ನು ಒಗ್ಗೂಡಿಸಿ ಎಲ್ಲರಿಗೂ ದೊರೆಯುವಂತೆ ಮಾಡುತ್ತಿದೆ. ಒಟ್ಟಿನಲ್ಲಿ ಇಂಟರ್‌ನೆಟ್ ಯುಗದಲ್ಲಿ ದಿಗಿಲು ಹುಟ್ಟಿಸುವಷ್ಟು ಕಪಟ ಮಾಹಿತಿ, ಅಂತರ್ಜಾಲ ಕಿರುಕುಳ, ಕೃತಕ ಬುದ್ಧಿಮತ್ತೆ ತುಂಬಿದ್ದು, ಯಾವುದು ನಿಜ ಯಾವುದು ಸುಳ್ಳು ಎಂದು ನಿರ್ಧರಿಸಲಾಗದೆ ಪರದಾಡುವಂತಹ ಪರಿಸ್ಥಿತಿಯಲ್ಲಿದ್ದೇವೆ.

ಪಠ್ಯ, ಚಿತ್ರ, ಧ್ವನಿ ಮತ್ತು ವಿಡಿಯೊಗಳನ್ನು ಅತ್ಯಂತ ಸುಲಭದಲ್ಲಿ ಪ್ರತಿ ಮಾಡಿ ಬೇಕಾದಂತೆ ಬದಲಿಸಿಕೊಳ್ಳುವ, ಮಾಹಿತಿಯನ್ನು ಅನುಕೂಲಕ್ಕೆ ತಕ್ಕಂತೆ ತಿರುಚಿ, ಕ್ಷಣಾರ್ಧದಲ್ಲಿ ವಿಶ್ವದಾದ್ಯಂತ ಏಕಕಾಲಕ್ಕೆ ಪ್ರಸಾರ ಮಾಡಬಹುದಾದ ಸಾಧ್ಯತೆ ಇಂತಹ ಬೆಳವಣಿಗೆಗೆ ಪೂರಕವಾಗಿದೆ. ಇದನ್ನು ಯಾವ ಅಡೆತಡೆಯಿಲ್ಲದೆ ರಾಜಕೀಯ, ವ್ಯಾಪಾರ, ಪ್ರಚಾರ ಮತ್ತು ದ್ವೇಷದ ಕಾರಣಗಳಿಗಾಗಿ ಬಳಸಿಕೊಳ್ಳಲಾಗುತ್ತಿದೆ.

ಪ್ರಪಂಚದಾದ್ಯಂತ ಮಾಧ್ಯಮದ ಮೇಲಿನ ನಂಬಿಕೆ ಒಂದೇ ವರ್ಷದಲ್ಲಿ (2020ರಿಂದ 2021) ಪ್ರತಿಶತ 8ರಷ್ಟು ಕುಸಿದಿದೆ. ಅದರಲ್ಲೂ ಸಾಮಾಜಿಕ ಜಾಲತಾಣಗಳಲ್ಲಿ ಪ್ರಸಾರವಾಗುವ ವಿಷಯಗಳ ಮೇಲಿನ ನಂಬಿಕೆ ಅತ್ಯಂತ ಕಡಿಮೆ ಮಟ್ಟದಲ್ಲಿದೆ. ಫೇಸ್‌ಬುಕ್‌ನಂತಹ ದಿಗ್ಗಜ ಕಂಪನಿಗಳು ಕೂಡ 2016ರಿಂದ ಆರಂಭಿಸಿ ಸುಳ್ಳು ಮಾಹಿತಿ ಮತ್ತು ಕಥೆಗಳನ್ನು ಪ್ರತಿಶತ 50ರಷ್ಟು ಕಡಿಮೆ ಮಾಡಿರುವುದಾಗಿ ಹೇಳಿಕೊಂಡಿವೆ. ಆದರೂ ಫೇಸ್‌ಬುಕ್‌ನಲ್ಲಿ 2020ರ 2ನೇ ತ್ರೈಮಾಸಿಕದಲ್ಲಿ 70 ಲಕ್ಷದಷ್ಟಿದ್ದ ಹುಸಿ ಸಮಾಚಾರ 3ನೇ ತ್ರೈಮಾಸಿಕ ದಷ್ಟರಲ್ಲಿ 180 ಕೋಟಿಯಷ್ಟಾಗಿದೆ. ಗೂಗಲ್ ಕೂಡ ತನ್ನ ಗುಣಮಟ್ಟ ಹಾಗೂ ನೀತಿಗಳಿಗೆ ವ್ಯತಿರಿಕ್ತವಾದ ಖಾತೆಗಳನ್ನು ಕಡಿಮೆ ಮಾಡುವ, ತೆಗೆದುಹಾಕುವ ಹಾಗೂ ಬಳಕೆದಾರರನ್ನು ಎಚ್ಚರಿಸುವ ಮೂರು ಅಂಶಗಳ ಕಾರ್ಯಕ್ರಮವನ್ನು ಹೊಂದಿದೆ. ಪ್ರಖ್ಯಾತ ಉನ್ನತ ತಾಂತ್ರಿಕ ಕಂಪನಿಗಳು ಹದ್ದಿನ ಕಣ್ಣಿಟ್ಟು ಇಷ್ಟೆಲ್ಲಾ ಪ್ರಯತ್ನಪಟ್ಟರೂ ಸುಳ್ಳು ಮಾಹಿತಿ ಮತ್ತು ಕತೆಗಳ ಬಗ್ಗೆ ಗ್ರಾಹಕರು ಅತಿ ಎಚ್ಚರ ವಹಿಸಬೇಕಾದುದು ಅವಶ್ಯಕ.

ಕಪಟ ಡಿಜಿಟಲ್ ಮಾಹಿತಿ ಗುರುತಿಸಲು ಕೆಲವು ಸೂತ್ರ-ಸಲಹೆಗಳು ಇಂತಿವೆ: ಕಳಕಳಿಯಿಂದ ಅಂಗಲಾಚುವ ವಿವೇಕರಹಿತ ಸಮಾಚಾರ, ಕಥೆಗಳನ್ನು ಅನುಮಾನಿಸಿ. ಎಲ್ಲ ಮಾಹಿತಿ ಮೂಲಗಳೂ ತಪ್ಪುಮಾಹಿತಿ ಕೊಡುವ ಸಾಧ್ಯತೆ ಇರುತ್ತದೆಯಾದರೂ ಗೌರವಾನ್ವಿತವಾದವು ಅದಕ್ಕೆ ಹೊಣೆಹೊರಲು ಸಿದ್ಧವಿದ್ದು, ತಮ್ಮ ತಾಣದ ವಿಳಾಸ, ಇ- ಮೇಲ್‌ನಂತಹ ಮಾಹಿತಿ ಪ್ರಕಟಿಸುತ್ತವೆ. ಮಾಹಿತಿ ಮೂಲದ ಧ್ಯೇಯೋದ್ದೇಶ ಮತ್ತು ಸಂಪರ್ಕಗಳನ್ನು ಗಮನಿಸಿ. ವೆಬ್ ತಾಣದ ವಿಳಾಸವು (ಯುಆರ್‌ಎಲ್) ವಾಡಿಕೆಯಂತಿಲ್ಲದೆ ವಿಚಿತ್ರವಾಗಿದೆಯೇ ಪರಿಶೀಲಿಸಿ.

ಸಮಾಚಾರಕ್ಕೆ ಅನುರೂಪವಾಗಿರದ ಶೀರ್ಷಿಕೆ, ಅನವಶ್ಯಕವಾಗಿ ಇಂಗ್ಲಿಷ್ ಅಕ್ಷರಗಳಿರುವ ಶೀರ್ಷಿಕೆ, ಹೆಚ್ಚು ಆಶ್ಚರ್ಯಸೂಚಕ ಚಿಹ್ನೆಯಂತಹ ವಿರಾಮಚಿಹ್ನೆಗಳನ್ನು ಹೊಂದಿದ್ದು ಮೋಹಕವಾಗಿದ್ದು, ಗಮನ ಸೆಳೆದು ಲಿಂಕ್ ಮೇಲೆ ಕ್ಲಿಕ್ಕಿಸಲು ಉತ್ತೇಜಿಸುವಂತಹ ಶೀರ್ಷಿಕೆ ಬಗ್ಗೆ ಎಚ್ಚರವಹಿಸಿ.

ಸಾಧಾರಣವಾಗಿ ಸಂಪಾದಕರಿಲ್ಲದ್ದರಿಂದ ಕಾಗುಣಿತ ದೋಷ, ಅನವಶ್ಯಕವಾಗಿ ಕ್ಯಾಪಿಟಲ್ ಅಕ್ಷರಗಳ ಬಳಕೆ ಇದ್ದು, ಪಠ್ಯದ ಗುಣಮಟ್ಟ ಕಡಿಮೆಯಿರುತ್ತದೆ. ಶೀರ್ಷಿಕೆ ಎರಡು ಪಂಗಡಗಳ ನಡುವೆ ದ್ವೇಷ ಹುಟ್ಟುಹಾಕುವ ಧ್ವನಿಯಲ್ಲಿದ್ದರೆ ಜಾಗರೂಕತೆ ವಹಿಸಿ.

ಪ್ರಖ್ಯಾತರ ಖಾತೆಗಳನ್ನು ನಕಲು ಮಾಡಿ ಅವರ ಹೆಸರಿನಲ್ಲಿ ಸುಳ್ಳು ಮಾಹಿತಿಯನ್ನು ಪ್ರಸಾರ ಮಾಡಲಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಅವರ ಹೆಸರುಗಳ ಕಾಗುಣಿತದಲ್ಲಿ ವ್ಯತ್ಯಾಸ ವಿರುವುದು ತಿಳಿಯುತ್ತದೆ (Warren Buffett ಬದಲಾಗಿ Warren Buffet). ಭಾವೋದ್ವೇಗಗೊಳಿಸುವಂತಹ, ವೈರಲ್ ಆಗಬಹುದಾದ ನಕಲಿ ಚಿತ್ರಗಳನ್ನು ಗಮನಿಸಿ ನ್ಯಾಯಸಮ್ಮತ ಸಮಾಚಾರ ತಾಣಗಳೊಂದಿಗೆ ತುಲನೆ ಮಾಡಿ. ಅನುಮಾನಾಸ್ಪದ ಮಾಹಿತಿಯನ್ನು ಇತರ ವಿಶ್ವಾಸಾರ್ಹ ತಾಣದಲ್ಲಿ ಮರುಪರಿಶೀಲಿಸುವುದು ಸೂಕ್ತ.

ಲೇಖಕ: ನಿವೃತ್ತ ಮುಖ್ಯಸ್ಥ, ಗ್ರಂಥಾಲಯ ಮತ್ತು ಪ್ರಲೇಖನ ವಿಭಾಗ, ಯು.ಆರ್.ರಾವ್ ಉಪಗ್ರಹ ಕೇಂದ್ರ, ಇಸ್ರೊ

ವಾಚಕರ ವಾಣಿ

ಕನ್ನಡದಲ್ಲಿ ಕಾನೂನು ಶಿಕ್ಷಣ: ಸಮಿತಿ ರಚಿಸಿ

‘ಕಾನೂನು ಶಿಕ್ಷಣಕ್ಕೆ ಕನ್ನಡ ಮಾಧ್ಯಮ ಬೇಡವೇ?’ ಎಂಬ ಜಿನದತ್ತ ದೇಸಾಯಿ ಅವರ ಪ್ರಶ್ನೆ (ಸಂಗತ, ಸೆ. 21) ಸುಸಂಗತವಾಗಿದೆ. ಜಿಲ್ಲಾ ಮಟ್ಟದ ನ್ಯಾಯಾಲಯಗಳು ಕನ್ನಡ ಭಾಷೆಯಲ್ಲಿ ತೀರ್ಪು ನೀಡುವುದು ಅವಶ್ಯಕವಾಗಿದೆ. ಈ ದಿಸೆಯಲ್ಲಿ ಸದ್ಯಕ್ಕೆ ಕನ್ನಡ ಭಾಷೆಯಲ್ಲಿ ಸುಲಭವಾಗಿ ಲಭ್ಯವಿರದ ಶಬ್ದ, ಪದಗಳನ್ನು ವ್ಯುತ್ಪತ್ತಿ ಮಾಡುವ ಅನಿವಾರ್ಯ ಇರುವುದನ್ನು ಮನಗಾಣಬೇಕಾಗಿದೆ. ಈ ಸಮಸ್ಯೆಯನ್ನು ಪರಿಹರಿಸುವಲ್ಲಿ ಹಾಗೂ ರಾಜ್ಯದ ಎಲ್ಲಾ ಜಿಲ್ಲಾ ಮಟ್ಟದ ನ್ಯಾಯಾಲಯಗಳಲ್ಲಿ ಏಕರೂಪದ ಶಬ್ದಗಳನ್ನು ಬಳಸುವ ಅವಶ್ಯಕತೆ ಇರುವುದರಿಂದ, ಆ ದಿಸೆಯಲ್ಲಿ ಸಮಗ್ರ ಇಂಗ್ಲಿಷ್- ಕನ್ನಡ ಕಾನೂನು ಪದಕೋಶ ರಚಿಸುವ, ನಿರಂತರವಾಗಿ ಹಾಗೂ ನಿಯಮಿತವಾಗಿ ಅದರ ಪರಿಷ್ಕರಣೆ ಮಾಡುವ ಉದ್ದೇಶಕ್ಕಾಗಿ ಒಂದು ಕಾಯಂ ಸಮಿತಿಯನ್ನು ರಚಿಸುವ ಅವಶ್ಯಕತೆ ಇದೆ.

ಈ ಸಮಿತಿಯು ಕನ್ನಡ ಭಾಷೆಯಲ್ಲಿ ಉತ್ತಮ ಜ್ಞಾನ ಹೊಂದಿರುವ ಹೈಕೋರ್ಟ್‌ನ ಒಬ್ಬರು ನ್ಯಾಯಮೂರ್ತಿಯನ್ನು ಅಧ್ಯಕ್ಷರನ್ನಾಗಿ ಹೊಂದಿದ್ದು, ಜಿಲ್ಲಾ ಮಟ್ಟದ ನ್ಯಾಯಾಧೀಶರು, ಕನ್ನಡ ಸಾಹಿತ್ಯ ಪರಿಷತ್ತು, ಹಂಪಿ ಕನ್ನಡ ವಿಶ್ವವಿದ್ಯಾಲಯ, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಾಗೂ ವಿಶ್ವ ಕನ್ನಡ ಕೋಶ ಸಂಪಾದಕ ಮಂಡಳಿಯ ಪರವಾಗಿ ತಲಾ ಒಬ್ಬ ನಾಮನಿರ್ದೇಶಿತ ವ್ಯಕ್ತಿಗಳು, ಹೈಕೋರ್ಟ್‌ನಿಂದ ನೇಮಕಗೊಳ್ಳುವ ಇಬ್ಬರು ಸಾಹಿತಿಗಳನ್ನು ಸಮಿತಿಯ ಸದಸ್ಯರನ್ನಾಗಿ ಹೊಂದಿರಬೇಕು. ಈ ಸಮಿತಿಗೆ ಸಮಾನಾಂತರ ಪದಗಳ ಅರ್ಥೈಸುವಿಕೆ, ಪದಗಳ ಭಾಷಾಂತರ, ಇತರ ನಿರ್ದೇಶನ, ಸೂಚನೆಗಳನ್ನು ನೀಡುವ ಜವಾಬ್ದಾರಿಯನ್ನು ಸಹ ವಹಿಸುವುದು ಸೂಕ್ತವೆನಿಸುತ್ತದೆ.

ಈ ವಿಷಯವಾಗಿ ಕಳೆದ ಕೆಲವು ದಶಕಗಳಿಂದ ಸಂಬಂಧಪಟ್ಟ ಹಲವರಿಗೆ ಮೌಖಿಕವಾಗಿ ನಿವೇದನೆಗಳನ್ನು ಸಲ್ಲಿಸುತ್ತಲೇ ಬಂದಿದ್ದೇನೆ. ಆದಾಗ್ಯೂ ಗುರುತಿಸುವಂತಹ ಯಾವುದೇ ಬೆಳವಣಿಗೆಯಾಗಿಲ್ಲ. ಹೈಕೋರ್ಟ್, ರಾಜ್ಯ ಸರ್ಕಾರ, ಸಂಬಂಧಪಟ್ಟ ಇಲಾಖೆಗಳು ಹಾಗೂ ಸಾರ್ವಜನಿಕರು ಗಮನಹರಿಸುವುದು ಅವಶ್ಯಕ.

ಎಚ್.ಬಿ.ಪ್ರಭಾಕರ ಶಾಸ್ತ್ರಿ, ಬೆಂಗಳೂರು

ಆತ್ಮಹತ್ಯೆ ತಡೆ: ಬೇಕು ನೈತಿಕತೆ ಬೋಧನೆ

ಸಮಾಜದಲ್ಲಿ ಇತ್ತೀಚೆಗೆ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗುತ್ತಿರುವುದು ವಿಷಾದನೀಯ. ಇವುಗಳ ಹಿಂದಿರುವ ನಾನಾ ಕಾರಣಗಳು ಎಂತಹವರನ್ನೂ ದಂಗುಬಡಿಸುತ್ತವೆ. ಅದರಲ್ಲಿಯೂ ಹದಿಹರೆಯದ ಹುಡುಗ, ಹುಡುಗಿಯರು ಜೀವನದಲ್ಲಿ ಜುಗುಪ್ಸೆ ಹೊಂದಿ ಆತ್ಮಹತ್ಯೆಗೆ ಶರಣಾಗುವುದು ಯಾವುದೇ ತಂದೆ-ತಾಯಿ ಸಹಿಸಿಕೊಳ್ಳಲಾರದ ವಿಚಾರ. ಈ ಸಮಸ್ಯೆಗೆ ಪ್ರತಿಯೊಬ್ಬರೂ ಪರಿಹಾರ ಹುಡುಕಬೇಕಿದೆ. ಪೊಲೀಸರು, ಪೋಷಕರು, ಶಿಕ್ಷಕರು, ನಾಡಿನ ಚಿಂತಕರು ಈ ಕೃತ್ಯ ತಡೆಯುವ ದಿಸೆಯಲ್ಲಿ ಚಿಂತಿಸಬೇಕಿದ್ದು, ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ತಿಳಿವಳಿಕೆ ನೀಡಬೇಕಾಗಿದೆ. ತಂದೆ-ತಾಯಿ ಜೊತೆಗಿನ ಸಂಬಂಧದ ಬಗ್ಗೆ ಮಕ್ಕಳ ಮನಸ್ಸಿನ ಮೇಲೆ ಪ್ರಭಾವ ಬೀರಬೇಕಾಗಿದೆ.

ಶಿಕ್ಷಣ ಇಲಾಖೆ ಅಧಿಕಾರಿಗಳು ವೇಳಾಪಟ್ಟಿಯಲ್ಲಿ ಶಿಕ್ಷಕರು ನೈತಿಕತೆ ಬೋಧನೆಯನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡಬೇಕು. ಇದು, ಮಕ್ಕಳು ಆತ್ಮಹತ್ಯೆಯಂತಹ ಘೋರ ಕೃತ್ಯದ ಮೊರೆ ಹೋಗುವುದನ್ನು ತಪ್ಪಿಸಿ, ಜೀವನದ ಸುಂದರ ಕ್ಷಣಗಳನ್ನು ಅನುಭವಿಸಲು ನೆರವಾಗಬಹುದೆಂಬ ಆಶಯ ಹುಟ್ಟಿಸುತ್ತದೆ.

ಎಚ್.ಎಸ್.ಟಿ.ಸ್ವಾಮಿ, ಚಿತ್ರದುರ್ಗ

ರಾಜ್ಯಪಾಲರ ಮಾದರಿ ನಡೆ

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಕನ್ನಡ ಕಲಿಯಲು ಮುಂದಾಗಿರುವ ಸುದ್ದಿ ತಿಳಿದು ನನಗೆ ಬಹಳ ಆಶ್ಚರ್ಯ ಹಾಗೂ ಸಂತೋಷವಾಯಿತು. ರಾಜ್ಯಪಾಲರು ಮೂಲತಃ ಮಧ್ಯಪ್ರದೇಶದವರು. ಅವರು ಅಧಿಕಾರ ಸ್ವೀಕರಿಸಿ ಕೆಲವೇ ದಿನಗಳಾಗಿದ್ದು, ಕನ್ನಡ ಕಲಿಕೆಗೆ ಆಸಕ್ತಿ ತೋರಿರುವುದು ಸ್ವಾಗತಾರ್ಹ ಬೆಳವಣಿಗೆ. ಅಷ್ಟೇ ಅಲ್ಲದೆ ಪ್ರತಿದಿನ ಅಧಿಕಾರಿಗಳು ಹಾಗೂ ಅವರ ಸಿಬ್ಬಂದಿ ಜೊತೆ ಕನ್ನಡದಲ್ಲೇ ಮಾತನಾಡುವ ಪ್ರಯತ್ನವನ್ನು ಸಹ ಮಾಡುತ್ತಿರುವುದು ಕನ್ನಡ ಭಾಷೆಯ ಮೇಲೆ ಅವರಿಗಿರುವ ಪ್ರೀತಿ ಹಾಗೂ ಗೌರವವನ್ನು ತೋರಿಸುತ್ತದೆ.

ಕರ್ನಾಟಕದಲ್ಲಿ ಇದ್ದುಕೊಂಡು ಇನ್ನೂ ಕನ್ನಡ ಭಾಷೆಯನ್ನು ಕಲಿಯದ ಕನ್ನಡೇತರ ಅಧಿಕಾರಿಗಳಿಗೆ ಗೆಹಲೋತ್ ಮಾದರಿಯಾಗಿದ್ದಾರೆ.

ಎಲ್.ಎಸ್.ಶಿವಮೂರ್ತಿ, ಬೆಂಗಳೂರು

ಮತಾಂತರ: ಸತ್ಯ ಮುಚ್ಚಿಡುವುದೇಕೆ?

ಮತಾಂತರ ಕುರಿತ ಚರ್ಚೆ ರಾಜ್ಯದಲ್ಲಿ ಮತ್ತೆ ಮುನ್ನೆಲೆಗೆ ಬಂದಿದೆ. ಹಲವು ಬಗೆಯ ಛದ್ಮವೇಷಗಳಲ್ಲಿ ನಡೆಯುತ್ತಿರುವ ಈ ವಿದ್ಯಮಾನವನ್ನು ನಿಷೇಧಿಸಲು ಸೂಕ್ತ ಕಾನೂನು ತರುವುದಾಗಿ ರಾಜ್ಯ ಸರ್ಕಾರ ಹೇಳಿದ ನಂತರ ಕೆಲವರು ಎಂದಿನಂತೆ ಜನರ ದಿಕ್ಕು ತಪ್ಪಿಸುತ್ತಿದ್ದಾರೆ. ಮತ್ತಷ್ಟು ಮಂದಿ ಎಂದಿನಂತೆ, ಹಿಂದೂ ಧರ್ಮದ ವಿರುದ್ಧ ಕತ್ತಿ ಬೀಸುತ್ತಿದ್ದಾರೆ. ಇದೊಂದು ತಥಾಕಥಿತ ವರಸೆ.

ಆಫ್ರಿಕಾ ಖಂಡದಲ್ಲಿ ಕ್ರೈಸ್ತರು ನಡೆಸಿದ ಎಗ್ಗಿಲ್ಲದ ಮತಾಂತರದಿಂದ ಕ್ರೈಸ್ತೇತರ ಬುಡಕಟ್ಟು ಸಂಸ್ಕೃತಿ, ಜಾನಪದ, ಭಾಷೆಗಳು, ನಂಬಿಕೆಗಳು, ಸಂಪ್ರದಾಯಗಳು ಎಲ್ಲವೂ ನಾಮಾವಶೇಷವಾಗಿ ಹೋದವು. ಮಧ್ಯ ಪ್ರಾಚ್ಯದಲ್ಲಿ ಇದೇ ಕೆಲಸವನ್ನು ಇಸ್ಲಾಂ ಧರ್ಮ ಪ್ರಚಾರಕರು ಮಾಡಿದರು. ಹೀಗೆಂದ ಮಾತ್ರಕ್ಕೆ ಹಿಂದೂ ಧರ್ಮದಲ್ಲಿ ಐಬುಗಳೇ ಇಲ್ಲವೆಂದಲ್ಲ. ಆದರೆ, ಈ ಧರ್ಮವು ಕಳೆದ ಮುನ್ನೂರು ವರ್ಷಗಳಿಂದಲೂ ತನ್ನನ್ನು ತಾನು ಸುಧಾರಣೆಗೆ ಒಡ್ಡಿಕೊಂಡಿದೆ. ಹಿಂದೂ ಧರ್ಮದಲ್ಲಿ ಬಂದಿರುವಷ್ಟು ‘ತೀಕ್ಷ್ಣವಾದ ವಿಮರ್ಶೆಗಳು’ ಬೇರಾವ ಧರ್ಮಗಳಲ್ಲೂ ಬಂದಿಲ್ಲ ಎನ್ನುವುದನ್ನು ನಾವು ಧೈರ್ಯದಿಂದ ಹೇಳಬಹುದು. ಗಾಂಧೀಜಿ, ಸಾವರ್ಕರ್, ತಿಲಕ್, ಅಂಬೇಡ್ಕರ್, ಶಾಮಪ್ರಸಾದ್ ಮುಖರ್ಜಿ, ನಮ್ಮ ನೆಲದವರಾದ ಡಿವಿಜಿ, ಕುವೆಂಪು, ಮಾಸ್ತಿ ಮುಂತಾದವರೆಲ್ಲ ಇಂತಹ ‘ಒಳಗಿನ ವಿಮರ್ಶಕರೇ’ ಆಗಿದ್ದರು.

ಮತಾಂತರವು ಒಂದು ದೊಡ್ಡ ಗಂಡಾಂತರ ಎನ್ನುವುದರಲ್ಲಿ ಅನುಮಾನವಿಲ್ಲ. ಇದರ ಹಿಂದೆ ಒಂದು ದೊಡ್ಡ ಜಾಲವೇ ಇದೆ. ಹಿಂದೂ ಧರ್ಮದಲ್ಲಿ ಟೀಕಿಸುವ, ಪ್ರಶ್ನಿಸುವ, ತನ್ನ ಇಷ್ಟದಂತೆ ನಡೆದುಕೊಳ್ಳುವ ಸ್ವಾತಂತ್ರ್ಯವಿದೆ, ನಂಬಿಕೆಯ ವೈವಿಧ್ಯವಿದೆ. ಇದನ್ನೆಲ್ಲ ಉಳಿಸಿಕೊಂಡೇ ಹಿಂದೂ ಧರ್ಮವನ್ನು ಮತ್ತಷ್ಟು ಸುಧಾರಿಸೋಣ. ಎಗ್ಗಿಲ್ಲದ ಮತಾಂತರ ಹೀಗೆಯೇ ಮುಂದುವರಿದರೆ ಆಫ್ರಿಕಾ ಮತ್ತು ಮಧ್ಯಪ್ರಾಚ್ಯದ ದೇಶಗಳಿಗೆ ಬಂದ ದುರ್ಗತಿಯೇ ಭಾರತಕ್ಕೂ ಬರುವುದರಲ್ಲಿ ಅನುಮಾನವಿಲ್ಲ.

ಬಿ.ಎಸ್.ಜಯಪ್ರಕಾಶ ನಾರಾಯಣ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಅಕ್ರಮ ಧಾರ್ಮಿಕ ಕಟ್ಟಡಗಳ ರಕ್ಷಣೆಗೆ ಕಾಯ್ದೆ ರೂಪಿಸಿರುವ ಕರ್ನಾಟಕ ಸರ್ಕಾರದ ಕ್ರಮ ಸರಿಯೇ?

ಉಳ್ಳವರ ಶಿವಾಲಯ, ದಿವಾಳಿ ರಾಜಕೀಯ

ದೇಶದಾದ್ಯಂತ 'ಸಾರ್ವಜನಿಕ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡು ಕಟ್ಟಲಾಗಿರುವ' ಅಕ್ರಮ ಧಾರ್ಮಿಕ ಕಟ್ಟಡಗಳ ಕುರಿತು ದೇಶದ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆಜ್ಞೆಗೆ ವಿರೋಧವಾಗಿರುವ 'ಕರ್ನಾಟಕ ಧಾರ್ಮಿಕ ಕಟ್ಟಡಗಳ (ರಕ್ಷಣೆ) ಮಸೂದೆ-2021' ಮತ್ತು ಅದನ್ನು ಅವಸರದಲ್ಲಿ ತಂದಿರುವ ದಿವಾಳಿಕೋರ ರಾಜಕೀಯವನ್ನು ಪ್ರಜೆಗಳು ತಮ್ಮ ಹಿತ ದೃಷ್ಟಿಯಿಂದ ಗಮನಿಸಬೇಕು

ಪ್ರಜಾವಾಣಿ ಚರ್ಚೆ

● ಕೆ.ಫಣಿರಾಜ್

'ಉಳ್ಳವರು ಶಿವಾಲಯವ ಮಾಡುವರು ನಾನೇನ ಮಾಡಲಿ ಬಡವನಯ್ಯ / ಎನ್ನ ಕಾಲೇ ಕಂಬ ದೇಹವೇ ದೇಗುಲ ಶಿರವೇ ಹೊನ್ನ ಕಳಶವಯ್ಯ / ಕೂಡಲಸಂಗಮದೇವ ಕೇಳಯ್ಯ ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ಎಂಬ ಬಸವಣ್ಣನವರ ವಚನದ ಅಂತರಂಗ-ಬಹಿರಂಗ ಶುದ್ಧತೆಗಳ ಅರಿವಿನ ಧರ್ಮ ಭಾವವು ಕರ್ನಾಟಕದ ರಾಜಕಾರಣಕ್ಕೆ ನೆಟ್ಟಗೆ ಇದ್ದಿದ್ದರೆ, ಕರ್ನಾಟಕ ಧಾರ್ಮಿಕ ಕಟ್ಟಡಗಳ (ರಕ್ಷಣೆ) ಮಸೂದೆಯ ಪ್ರಹಸನವು ನಡೆಯುತ್ತಿರಲಿಲ್ಲ. ಪ್ರಜೆಗಳ ದೇಹ ದೇಗುಲಗಳ ರಕ್ಷಣೆ, ಪೋಷಣೆಗೆ ಹತ್ತಾರು ವರ್ಷಗಳ ಕಾಲದಿಂದ ಹರಿದು ಬರುತ್ತಿರುವ ಅಹವಾಲುಗಳ ಬಗ್ಗೆ ಯಾವ ತರಾತುರಿಯನ್ನೂ ತೋರದೇ ಇರುವ ಸರ್ಕಾರಗಳು (ಅದು ಯಾವುದೇ ಪಕ್ಷದ್ದೇ ಇದ್ದರೂ ಇಂಥದ್ದರಲ್ಲಿ ಅಷ್ಟೇನೂ ವ್ಯತ್ಯಾಸವಿಲ್ಲ) ಸಾರ್ವಜನಿಕ ಸ್ಥಳಗಳನ್ನು ಒತ್ತುವರಿ ಮಾಡಿಕೊಂಡು, ಅನಧಿಕೃತವಾಗಿ 'ಧರ್ಮದ ನೆಪದಲ್ಲಿ' ಕಟ್ಟಲಾಗಿರುವ ಕಟ್ಟಡಗಳ ಸಕ್ರಮಕ್ಕೆ ತೋರಿರುವ ಆತುರವು ಪ್ರಜೆಗಳಲ್ಲಿ ಖಂಡಿತಕ್ಕೂ ಆತಂಕ ಹುಟ್ಟಿಸಬೇಕು; ಅದಾಗದೇ ಇದ್ದರೆ, ಪ್ರಜೆಗಳಾದ ನಾವುಗಳೇ, ದಿವಾಳಿ ಬುದ್ಧಿಯ ರಾಜಕೀಯಕ್ಕೆ ನಮ್ಮ ಸಹಮತ ತೋರಿ, ನಮ್ಮ ಹಕ್ಕುಗಳ ಬಗ್ಗೆ ನಯಾ ಪೈಸೆ ಕಾಳಜಿ ಇರದ ಭ್ರಷ್ಟ ರಾಜಕಾರಣವನ್ನು ಪೋಷಿಸಿದಂತಾಗುತ್ತದೆ. ಈ ಮಸೂದೆಯನ್ನು, ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕಿನ ಉಚ್ಚಗಣಿಯ ಮಹದೇವಮ್ಮ ದೇವಸ್ಥಾನವನ್ನು ಜಿಲ್ಲಾಡಳಿತವು ತೆರವುಗೊಳಿಸಿದ ವಿದ್ಯಮಾನಕ್ಕೆ ಸೀಮಿತವಾಗಿಸಿಕೊಂಡು, ಜನರಲ್ಲಿ ಭಾವೋದ್ರೇಕ ಪ್ರಚೋದಿಸುವ ಕೆಲಸವನ್ನು ಆಳುವ ಪಕ್ಷದ ಶಾಸಕ ಸಂಸದರೂ, ಲಾಗಾಯ್ತಿನಿಂದ ಇದೇ ಕೆಲಸ ಮಾಡಿಕೊಂಡು ಬರುತ್ತಿರುವ ಹಿಂದುತ್ವವಾದಿ ರಾಜಕೀಯ ಸಂಘಟನೆಗಳೂ ಮಾಡುತ್ತಿರುವುದು ಅಚ್ಚರಿಯಲ್ಲ; ಆದರೆ ಹಿಂದೆ ಸರ್ಕಾರ ನಡೆಸಿದ್ದ, ವಿದ್ಯಮಾನದ ಹಿನ್ನೆಲೆಯ ಅರಿವಿರುವ ವಿರೋಧ ಪಕ್ಷಗಳೂ ಇದನ್ನು ರಾಜಕೀಯ ಮೇಲುಗೈ ಆಟದ ದಾಳ ಮಾಡಿಕೊಂಡು, ಮಸೂದೆಗೆ ವಿರೋಧ ತೋರದಂಥ ಸ್ಥಿತಿಗೆ ಬಂದಿರುವುದು ಪ್ರಜಾಪ್ರಭುತ್ವದ ದೃಷ್ಟಿಯಲ್ಲೂ, ಪ್ರಜಾಹಿತದ ಕಣ್ಣೋಟದಿಂದಲೂ ಒಳ್ಳೆಯ ಬೆಳವಣಿಗೆ ಏನೂ ಅಲ್ಲ.

ಕರ್ನಾಟಕದಲ್ಲಿ, ಪ್ರಜೆಗಳು ತಮ್ಮ ಪ್ರತಿನಿಧಿಯಾಗಿ ಸರ್ಕಾರಕ್ಕೆ 'ಸಾರ್ವಜನಿಕ ಆಸ್ತಿ' ಎಂದು ಒಪ್ಪಿಸಿರುವ ಭೂ ಸಂಪನ್ಮೂಲದ ವ್ಯಾಪ್ತಿ, ಅದು ಇರುವ ಜಾಗ, ಅದು ಬಳಕೆ/ ದುರ್ಬಳಕೆ ಆಗುತ್ತಿರುವ ಬಗೆ, ಅದನ್ನು ಪ್ರಜೆಗಳ ಸ್ಥಿತಿ ಗತಿಗೆ ಅನುಗುಣವಾಗಿ ವಿತರಿಸುವ ಉತ್ತರದಾಯಿತ್ವ ಸರ್ಕಾರದ್ದು. ಅದರ ಲೆಕ್ಕಾಚಾರ ಸರ್ಕಾರದ ಬಳಿ ಸದಾ ಇರುತ್ತದೆ. ಸರ್ಕಾರವು ಅದನ್ನು ಸದ್ಬಳಕೆ ಮಾಡುವಂತೆ ಮಸೂದೆ-ಕಾಯ್ದೆ ತರಬೇಕು. ಆದರೆ, ಉಳ್ಳವರು ಅನಧಿಕೃತವಾಗಿ ಕಬಳಿಸುವ 'ಸಾರ್ವಜನಿಕ ಭೂಮಿ'ಯ ಬಗ್ಗೆ ತನಗೇ ಅರಿವೇ ಇಲ್ಲ ಎಂಬಂತೆ ವರ್ತಿಸುತ್ತ, ಅದರ ಲೆಕ್ಕ ತನಿಖೆಗೆ ಸದನ ಸಮಿತಿ ನೇಮಿಸುತ್ತದೆ; ಅದು ತನಿಖೆ ಮಾಡಿ ಕೊಟ್ಟ ಅಕ್ರಮ ಕಬಳಿಕೆಯ ವರದಿಗಳ ಬಗ್ಗೆ ಪರಿಶೀಲಿಸಿ, ಭೂಮಿ ವಶ ಪಡಿಸಿಕೊಳ್ಳಲು ಯಾವ ತುರ್ತು ಕಾಯ್ದೆಯನ್ನೂ ತರುವುದಿಲ್ಲ. ಗ್ರಾಮೀಣ ಭಾಗದ ಭೂಹೀನ ಕೃಷಿಕರು ಸಾರ್ವಜನಿಕ ಭೂಮಿಯನ್ನು ಉಳುಮೆಗೆ ಕೊಡಿ ಎಂದು ಬೇಡಿ ಬೇಡಿ ಬಗರ್ ಹುಕುಂ ಉಳುಮೆ ಮಾಡಿದರೆ, ಅದು ಅಕ್ರಮವೆಂದು ಒಕ್ಕಲೆಬ್ಬಿಸಲು ಎಲ್ಲ ವಿಧದಲ್ಲೂ ಯತ್ನಿಸುತ್ತದೆ; ಹೊಟ್ಟೆಗೆ ಹಿಟ್ಟಿಲ್ಲದ ಅವರು ಜಗ್ಗದೆ ನಿಂತರೆ ಅರಣ್ಯ ಇಲಾಖೆಯ ಮೂಲಕ ನ್ಯಾಯಾಲಯಗಳ ತೀರ್ಪು ತೋರಿಸಿ, 'ಅಕ್ರಮ ಸಕ್ರಮ'ದ ತೊಡಕುಗಳನ್ನು ಸದನದಲ್ಲಿ ಮುಂದಿಡುತ್ತ ಯಾವುದೇ ಕಾಯ್ದೆ ತರದೆ ಕಾಲ ತಳ್ಳುತ್ತದೆ. ಗ್ರಾಮೀಣ ಕೃಷಿ ಆದಾಯ ಕುಸಿದು ನಗರಗಳಿಗೆ ದಿನಗೂಲಿಗೆ ಬಂದ ಜನರು 'ಸಾರ್ವಜನಿಕ ಭೂಮಿ'ಯಲ್ಲಿ ತಮ್ಮ ತಾತ್ಕಾಲಿಕ ಸೂರು ಕಟ್ಟಿಕೊಂಡರೆ, ಮಹಾನಗರ ಪಾಲಿಕೆಗಳು ಕಾರ್ಯಪ್ರವೃತ್ತರಾಗಿ ಅವರ ಗುಡಿಸಲುಗಳನ್ನು ಧ್ವಂಸಗೊಳಿಸುತ್ತವೆ; ಅಂಥ ನಿರ್ಗತಿಕರ ಪರವಾಗಿ ನಿಂತ ನಾಗರಿಕ ಸಂಘಟನೆಗಳು ಹೈ ಕೋರ್ಟು ಕಟ್ಟೆ ಹತ್ತಿ ನ್ಯಾಯಿಕ ತೀರ್ಪು ತಂದರೂ, 'ಸಕ್ರಮ ಸೂರು' ಒದಗಿಸುವ ಮಸೂದೆ-ಕಾಯ್ದೆಗಳ ಬಗ್ಗೆ ಸರ್ಕಾರವು ತುರ್ತಾಗಿ ಯೋಚಿಸುವುದಿಲ್ಲ. 'ಭೂಮಿ-ವಸತಿ ಹಕ್ಕು ವಂಚಿತರ' ದೇಹ ದೇಗುಲಗಳನ್ನು ರಕ್ಷಿಸಿ ಪೋಷಿಸುವ ಕಾಯ್ದೆಗಳನ್ನು ತಂದು ಅಂಥ ಪ್ರಜೆಗಳ ಜೀವನದ ಹಕ್ಕು ಕಾಪಾಡುವುದು ಸಾಂವಿಧಾನಿಕ ಧರ್ಮವೆಂದು ಉನ್ನತ ನ್ಯಾಯಾಲಯಗಳು ಸಾರಿದರೂ ತಕ್ಕ ಕಾಯ್ದೆಗಳನ್ನು ತರಲು ಸರ್ಕಾರ ಮೀನಮೇಷ ಎಣಿಸುತ್ತದೆ. ಇಂಥಾ ಸನ್ನಿವೇಶದ ಹಿನ್ನೆಲೆಯಲ್ಲಿ, ದೇಶದಾದ್ಯಂತ 'ಸಾರ್ವಜನಿಕ ಆಸ್ತಿಗಳನ್ನು ಒತ್ತುವರಿ ಮಾಡಿಕೊಂಡು ಕಟ್ಟಲಾಗಿರುವ' ಅಕ್ರಮ ಧಾರ್ಮಿಕ ಕಟ್ಟಡಗಳ ಕುರಿತು ದೇಶದ ಸರ್ವೋಚ್ಚ ನ್ಯಾಯಾಲಯವು ಹೊರಡಿಸಿದ ಆಜ್ಞೆಗೆ ವಿರೋಧವಾಗಿರುವ 'ಕರ್ನಾಟಕ ಧಾರ್ಮಿಕ ಕಟ್ಟಡಗಳ (ರಕ್ಷಣೆ) ಮಸೂದೆ-2021' ಮತ್ತು ಅದನ್ನು ಅವಸರದಲ್ಲಿ ತಂದಿರುವ ದಿವಾಳಿಕೋರ ರಾಜಕೀಯವನ್ನು ಪ್ರಜೆಗಳು ತಮ್ಮ ಹಿತ ದೃಷ್ಟಿಯಿಂದ ಗಮನಿಸಬೇಕು.

ಗುಜರಾತಿನ ಅಹಮದಾಬಾದ್ ನಗರದಲ್ಲಿ 1200 ದೇವಸ್ಥಾನಗಳು ಹಾಗು 26 ಮುಸ್ಲಿಮ್ ಧಾರ್ಮಿಕ ಕೇಂದ್ರಗಳು ಸಾರ್ವಜನಿಕ ಸ್ಥಳವನ್ನು ಆಕ್ರಮಿಸಿಕೊಂಡಿವೆ ಎಂಬ 2006ರ ಮೇ 6ರ ಪತ್ರಿಕಾ ವರದಿಯನ್ನು ಆಧರಿಸಿ ಗುಜರಾತ್ ಹೈಕೋರ್ಟ್ ಸ್ವಯಂ ಪ್ರೇರಿತವಾಗಿ ದೂರು ದಾಖಲಿಸಿಕೊಂಡು, ತೆರವಿಗೆ ತೀರ್ಪು ನೀಡಿತು; ಅದರ ತಡೆಗೆ ಗುಜರಾತ್ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಹೋದಾಗ, ನ್ಯಾಯಾಲಯವು ಈ ವಿಷಯದ ಕುರಿತು ಭಾರತದ ಎಲ್ಲ ರಾಜ್ಯ ಹಾಗು ನಗರಾಡಳಿತ ಪ್ರದೇಶಗಳಲ್ಲಿರುವ ಸ್ಥಿತಿಯನ್ನು ಅರಿಯಲು ಆಯಾ ಸರ್ಕಾರಗಳ ಮುಖ್ಯ ಕಾರ್ಯದರ್ಶಿಗಳನ್ನು ಸಮಾಲೋಚಿಸಲು ಒಕ್ಕೂಟ ಸರ್ಕಾರದ ವಿಶೇಷ ವಕೀಲರಿಗೆ ಸೂಚಿಸಿತು. ಆ ಪ್ರಕಾರವಾಗಿ ಒಕ್ಕೂಟ ಸರ್ಕಾರದ ವಿಶೇಷ ವಕೀಲರು ಸಮಾಲೋಚನೆ ನಡೆಸಿ, 2009ರ ಸೆಪ್ಟೆಂಬರ್ 19ರಂದು 'ಎಲ್ಲ ಸರ್ಕಾರಗಳೂ ಇಂದಿನ ನಂತರದಲ್ಲಿ ಸಾರ್ವಜನಿಕ ಆಸ್ತಿಯಲ್ಲಿ ಧಾರ್ಮಿಕ ಕಟ್ಟಡ ನಿರ್ಮಾಣವನ್ನು ಅಕ್ರಮಗೊಳಿಸುವುದಾಗಿಯೂ, ಹಿಂದೆ ಕಟ್ಟಲಾಗಿರುವ ಕಟ್ಟಡಗಳ ಬಗ್ಗೆ ತನಿಖೆ ನಡೆಸಿ, ಯಾವುದು ಅಕ್ರಮ ಯಾವುದು ಸಕ್ರಮ ಯೋಗ್ಯವೆಂದು ವರದಿ ತಯಾರಿಸಿ ಕ್ರಮ ಕೈಗೊಳ್ಳುವ ವರದಿ ಸಲ್ಲಿಸಲು ಸಹಮತ ಸೂಚಿಸಿವೆ' ಎಂದು ತಿಳಿಸಿದರು. ಆ ಪ್ರಕಾರ 2009ರ ಸೆಪ್ಟೆಂಬರ್ 29ರಂದು ಸರ್ವೋಚ್ಚ ನ್ಯಾಯಾಲಯವು 'ಈ ದಿನಾಂಕದ ನಂತರ ಸಾರ್ವಜನಿಕ ಸ್ಥಳದಲ್ಲಿ ಧಾರ್ಮಿಕ ಕಟ್ಟಡ ನಿರ್ಮಾಣವು ಅಕ್ರಮ; ಈ ದಿನಾಂಕಕ್ಕಿಂತ ಮೊದಲಿನ ಕಟ್ಟಡಗಳ ಕುರಿತು ಕ್ರಮ ಕೈಗೊಂಡ ವರದಿಯನ್ನು ಮೂರು ವಾರಗಳಲ್ಲಿ ಸರ್ಕಾರಗಳು ಸಲ್ಲಿಸ ಬೇಕು' ಆಜ್ಞೆ ನೀಡಿತು.

ಈ ದಿನಾಂಕ ನಂತರದ ಹನ್ನೆರಡು ವರ್ಷಗಳಲ್ಲಿ ಕರ್ನಾಟಕದಲ್ಲಿ 1,242 ಹೊಸ ಕಟ್ಟಡಗಳು ಅನಧಿಕೃತವಾಗಿ ನಿರ್ಮಾಣವಾಗಿವೆ! 2009ರ ಸೆಪ್ಟೆಂಬರ್ 29ರಂದು ಅನಧಿಕೃತವಾದ 5,688 ಕಟ್ಟಡಗಳಿದ್ದವು; ಅವುಗಳಲ್ಲಿ 2,887 ಕಟ್ಟಡಗಳನ್ನು 'ತೆರವು/ ಅಧಿಕೃತ'ಗೊಳಿಸಲಾಗಿದೆ. ಉಳಿದರ್ಧ ಅನಧಿಕೃತ ಕಟ್ಟಡಗಳ ಬಗ್ಗೆ ಕ್ರಮ ಕೈಗೊಳ್ಳುವಂತೆ ಕರ್ನಾಟಕ ಹೈಕೋರ್ಟ್, ಸರ್ಕಾರಕ್ಕೆ ನಿರಂತರ ಎಚ್ಚರ ನೀಡುತ್ತಿದೆ! 12 ವರ್ಷಗಳ ಕಾಲ 4000 ಕಟ್ಟಡಗಳು ಅನಧಿಕೃತ ಹಾಗು ತೆರವಿಗೆ ಯೋಗ್ಯ ಎಂದು ಸರ್ಕಾರಕ್ಕೆ ಗೊತ್ತಿತ್ತು; ಎಲ್ಲ ಜನಪ್ರತಿನಿಧಿಗಳಿಗೂ ಗೊತ್ತಿತ್ತು! ಅವೆಲ್ಲಾ ಈಗ ಸಕ್ರಮ! ಪ್ರಜೆಗಳೇ, ನಿಮ್ಮ ದೇಹದೇಗುಲಗಳ ಹಿತವನ್ನು ಸಕ್ರಮಗೊಳಿಸುವುದಕ್ಕಿಂತ, ಉಳ್ಳವರ ಶಿವಾಲಯವನ್ನು ರಕ್ಷಿಸುವ ಮಸೂದೆಯ ಬಗ್ಗೆ ನೀವೇ ಆಯ್ದ ಸರ್ಕಾರಗಳಿಗೆ ಆಸ್ಥೆ-ಜಾಗೃತರಾಗುವಿರಾ ಕನ್ನಡಿಗರೇ?

ಲೇಖಕ: ಸಾಮಾಜಿಕ ಹೋರಾಟಗಾರ

ಸಚ್ಚಿದಾನಂದ ಸತ್ಯಸಂದೇಶ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮೌಢ್ಯ ಎಂದೂ ಪರಂಪರೆಯಲ್ಲ

ಮನುಷ್ಯ ಎಷ್ಟೇ ಆಧುನಿಕವಾಗಿ ಮುಂದುವರೆದಿದ್ದರೂ ಅವನೊಳಗಿನ ಕೆಟ್ಟ ಅಂಶಗಳು ನಾಶವಾಗುತ್ತಿಲ್ಲ. ಸಾಂಕ್ರಾಮಿಕ ಕ್ರಿಮಿಕಗಳ ಮಾದರಿಯಲ್ಲಿ ಕಾಲದಿಂದ ಕಾಲಕ್ಕೆ ಮನುಷ್ಯನ ಕೆಟ್ಟ ಗುಣಗಳು ನಾನಾ ರೂಪಗಳನ್ನು ತಾಳುತ್ತಲೇ ಇವೆ. ಇದಕ್ಕೆ ಕಾರಣ ಮಾನವರಿಗೆ ಅರಿವಿದ್ದೋ ಇಲ್ಲದೆಯೋ ರೂಢಿಸಿಕೊಂಡ ಕೆಟ್ಟ ಪದ್ಧತಿಗಳು ಅವನೊಳಗೆ ಕೆಟ್ಟ ಗುಣಗಳನ್ನು ಪ್ರಚೋದಿಸುತ್ತಿವೆ. ಕೆಟ್ಟ ವಿಚಾರಗಳು ಯಾವ ಕಾಲಕ್ಕೂ ಒಳ್ಳೆಯ ವಿಚಾರವಾಗುವುದಿಲ್ಲ. ನಾವು ಸದ್ವಿಚಾರ ಅಂತ ನಂಬಿಕೊಂಡು ಬಂದ ಪದ್ಧತಿಗಳು ಕೆಟ್ಟದ್ದು ಅಂತ ಗೋಚರವಾದಾಗಲೂ ಮುಂದುವರೆಸುವುದು ಅಪಾಯಕಾರಿ. ಕೆಟ್ಟದ್ದು ಯಾವತ್ತೂ ಒಳ್ಳೆಯ ಸಂಸ್ಕೃತಿ ಆಗುವುದಿಲ್ಲ; ನಾವು ಮಾಡಿಕೊಂಡ ಕಟ್ಟುಪಾಡುಗಳಿಂದ ಮೂಡಿದ ಮೌಢ್ಯಗಳು ಪರಂಪರೆ ಆಗುವುದಿಲ್ಲ.

ಮನುಷ್ಯ ತನ್ನ ಅಗತ್ಯಕ್ಕೆ ತಕ್ಕಂತೆ ಗುಣಮೌಲ್ಯಗಳನ್ನು ಅಳವಡಿಸಿಕೊಂಡಿದ್ದಾನೆ. ಅದು ಅವನ ಅನುಕೂಲಸಿಂಧು ಸಿದ್ಧಾಂತ. ಒಬ್ಬ ಊಳಿಗಮಾನದ ಪಾಳೇಗಾರ ತನ್ನ ವೈಯಕ್ತಿಕ ಸ್ವಾರ್ಥಕ್ಕಾಗಿ ಮಾಡಿಕೊಂಡ ನಿಯಮಗಳನ್ನು ವಂಶಪಾರಂಪರ್ಯವಾಗಿ ಮುಂದುವರೆಸುವುದು ಎಷ್ಟು ತಪ್ಪೋ, ಸಾಮುದಾಯಿಕವಾಗಿ ಮಾಡಿಕೊಂಡ ಕೆಟ್ಟ ವಿಚಾರಗಳು ಸಮಾಜದಲ್ಲಿ ಪರಂಪರೆಯಾಗಿ ಮುಂದುವರೆಯುವುದು ಅಷ್ಟೇ ತಪ್ಪು. ಉದಾಹರಣೆಗೆ ನಮ್ಮ ಸಮಾಜದಲ್ಲಿರುವ ಜಾತಿಪದ್ಧತಿ. ಮೇಲು-ಕೀಳು ಎಂಬ ಭಾವದಲ್ಲಿ ಮನುಷ್ಯರನ್ನು ಅಳೆಯುವುದು ರಾಕ್ಷಸೀತನ. ಇಂಥ ಮನುಷ್ಯ-ಮನುಷ್ಯರ ನಡುವೆ ಕಂದಕ ನಿರ್ಮಿಸುವ ಮೌಢ್ಯ ನಮಗೆಂದೂ ಪರಂಪರೆಯಾಗುವುದಿಲ್ಲ. ಪರಂಪರೆಗೆ ತನ್ನದೇ ಆದ ಒಳ್ಳೆಯತನದ ತಳಹದಿ ಇದೆ. ಆದರೊಳಗೆ ಮಾನವತೆಯ ಅಂತಃಕರಣವಿದೆ. ಮಾನವರು ತಮಗೆ ಅರಿವಿಲ್ಲದ ಕಾಲದಲ್ಲಿ ಮಾಡಿಕೊಂಡ ಪದ್ಧತಿಗಳು ಪರಂಪರೆಯಾಗುವುದಿಲ್ಲ.

ಹಿಂದೆ ಕೋಟೆ ಕಟ್ಟಡ, ಕೆರೆಕಟ್ಟೆ ಕಟ್ಟಿದರೆ ನರಬಲಿ-ಪ್ರಾಣಿಬಲಿ ಕೊಡುತ್ತಿದ್ದರು. ಈ ಮೌಢ್ಯಕ್ಕೆ ಬಲಿಯಾದ ಮುಗ್ಧಜೀವಗಳೆಷ್ಟೋ? ಕೆರೆಗೆ ಹಾರವಾದ ಭಾಗೀರಥಿಯರೆಷ್ಟೋ? ಆದರೆ ಇಂಥ ಅಮಾನವೀಯ ಕುಕೃತ್ಯಗಳು ನಮ್ಮ ಪರಂಪರೆಯಾಗಿ ಉಳಿಯಲಿಲ್ಲ. ಏಕೆಂದರೆ, ಹಿಂಸೆ ಯಾವತ್ತೂ ಮಾನವರ ಪರಂಪರೆಯಾಗುವುದಿಲ್ಲ. 'ಧರ್ಮಗಳಲ್ಲೆ ಅಹಿಂಸಾಧರ್ಮ ದೊಡ್ಡದು' ಎಂದು ನಂಬಿಕೊಂಡ ಪರಂಪರೆ ನಮ್ಮದು. ಹೀಗಾಗಿ ಕೆಟ್ಟ ಸಂಪ್ರದಾಯಗಳು ಹುಟ್ಟಿದ ಕಾಲದಲ್ಲೆ ನಶಿಸುತ್ತಾ ಹೋದವು. 'ಬಲಿಕೊಡದಿದ್ದರೆ, ಕೋಟೆ ಬಿದ್ದು ಹೋಗುತ್ತದೆ, ಕೆರೆ ಕಟ್ಟೆ ಒಡೆದು ಹೋಗುತ್ತದೆ' ಅನ್ನೋ ಕೆಟ್ಟ ನಂಬಿಕೆಗಳು ಅಳಿದವು. ಈಗ ಅದೆಂಥ ದೊಡ್ಡ ಕಟ್ಟಡ, ದೊಡ್ಡ ಅಣೆಕಟ್ಟೆ ಕಟ್ಟಿದರೂ ಯಾವ ಬಲಿಯನ್ನು ಅಪೇಕ್ಷಿಸದೆ, ಅವೆಲ್ಲಾ ಗಟ್ಟಿಯಾಗಿ ನಿಂತಿವೆ. ಇವೆಲ್ಲಾ ಯಾರ ಪ್ರಾಣಬಲಿಯ ಮೇಲೆ ನಂಬಿಕೆಯಿಟ್ಟು ಕಟ್ಟಿದವುಗಳಲ್ಲ. ಗಟ್ಟಿಯಾಗಿ ಉಳಿಯುತ್ತವೆ ಎಂಬ ಒಳ್ಳೆಯ ನಂಬಿಕೆಯಿಂದ ಕಟ್ಟಿದ ಕಟ್ಟಡಗಳು. ನಮ್ಮ ನಂಬಿಕೆ ಮತ್ತು ಪರಂಪರೆ ಮಾನವತೆಯ ಗಟ್ಟಿ ನೆಲೆಯಲ್ಲಿ ರೂಪುಗೊಳ್ಳಬೇಕೇ ಹೊರತು, ಅಮಾನವೀಯ ಪೊಳ್ಳು ನೆಲೆಯಲ್ಲಿ ಅಲ್ಲ.

ಮನುಷ್ಯನ ಗುಣ-ಸ್ವಭಾವಗಳು ರಕ್ತದ ವಂಶವಾಹಿನಿಯಿಂದಲೇ ಮೂಡುತ್ತವೆ. ಹಾಗೇ, ನಮ್ಮ ಸಮಾಜದ ಕಟ್ಟುಪಾಡುಗಳು ಸಹ ತಲೆಮಾರಿನಿಂದ ತಲೆಮಾರಿಗೆ ಮಾನವರ ತಲೆಯೊಳಗೆ ಕೂರುತ್ತಾ ಹೋಗುತ್ತವೆ. ನಮ್ಮ ತಲೆ ಮೇಲೆ ಕೂತ ಸಾಮಾಜಿಕ ಪದ್ಧತಿಗಳು ಎಷ್ಟು ಉತ್ತಮವಾಗಿವೆ, ನಮ್ಮ ಸಮಕಾಲೀನ ಬದುಕಿಗೆ ಯಾವ ರೀತಿ ಪೂರಕವಾಗಿದೆ ಅಂತ ವಿವೇಚಿಸಬೇಕು. ಆ ರೀತಿ ಯೋಚಿಸದೆಯೇ ಮುಂದುವರೆದರೆ ನಮ್ಮ ತಲೆಗೆ ಮೂಢತನ ಆವರಿಸುತ್ತದೆ. ವಿಚಾರ-ವಿಮರ್ಶೆಗಳಿಗೆ ಅವಕಾಶ ಕೊಡದ ಆಚಾರಗಳು ವಿಕಾರರೂಪವನ್ನು ತಾಳುತ್ತವೆ. ಇವು ತಲೆಮಾರಿನಿಂದ ತಲೆಮಾರಿಗೆ ಮೌಢ್ಯ ಹರಡುತ್ತಾ ಸಮಾಜವನ್ನು ಹಾಳುಗೆಡವುತ್ತದೆ. ಹಿಂಸೆಗೆ ಪ್ರಚೋದಿಸುವ, ಅಮಾನವತೆಗೆ ಪ್ರೇರಣೆಯಾಗುವ, ಮನುಷ್ಯರನ್ನು ಮೂರ್ಖರನ್ನಾಗಿಸುವ ಮೌಢ್ಯಗಳು ನಮ್ಮ ಪರಂಪರೆಯಾಗಬಾರದು. ಮೌಢ್ಯಗಳು ಎಂದಿಗೂ ಪರಂಪರೆ ಆಗುವುದೂ ಇಲ್ಲ. ಸದ್ವಿಚಾರ-ಸದಾಚಾರಗಳಷ್ಟೆ 'ಸಚ್ಚಿದಾನಂದ'ದ ಪರಂಪರೆಯಾಗುತ್ತವೆ.

ದೇವಾಲಯಗಳ ತೆರವು: ಅಧಿಕಾರಿಗಳ ವಿವೇಚನಾರಹಿತ ಕ್ರಮ

● ಪ್ರತಾಪ್ ಸಿಂಹ

ರಸ್ತೆ ಮಧ್ಯದಲ್ಲಿಯೋ, ಫುಟ್‌ಪಾತ್‌ನಲ್ಲಿಯೋ ದೇವಾಲಯ ಇದ್ದು ಅದರಿಂದ ಅಡಚಣೆಯಾಗುತ್ತಿದೆ ಎಂದಾದರೆ, ಅದಕ್ಕೆ ಪರ್ಯಾಯ ವ್ಯವಸ್ಥೆ ಮಾಡಬೇಕು. ಒಂದು ಸ್ಥಳವನ್ನು ಕೊಟ್ಟು ಅಲ್ಲಿ ಕಟ್ಟಿಕೊಳ್ಳಲು ಅವಕಾಶ ಮಾಡಿಕೊಡಬೇಕು. ಅದುಬಿಟ್ಟು, ಸುಪ್ರೀಂ ಕೋರ್ಟ್ ಆದೇಶವಿದೆ ಎಂದು ಏಕಾಏಕಿ ಬಂದು ಕೆಡವಿ ಹಾಕಿಬಿಟ್ಟರೆ? ಇದನ್ನೇ ನಾನು ಎತ್ತಿ ತೋರಿಸಿರುವುದು

ಇವತ್ತು ದೇಶದಾದ್ಯಂತ ಜನಸಂಖ್ಯೆ ಜಾಸ್ತಿಯಾಗುತ್ತಿದ್ದು, ನಗರಗಳೂ ಬೆಳೆಯುತ್ತಿವೆ. ಹಾಗಾಗಿ, ಬಹಳಷ್ಟು ಕಡೆ ರಸ್ತೆಗಳನ್ನೂ ವಿಸ್ತರಣೆ ಮಾಡಬೇಕಾದ ಅಗತ್ಯ ಕಾಣುತ್ತಿದೆ. ಯಾವುದೋ ಕಾಲದ ದೇವಸ್ಥಾನಗಳು, ಈಗ ರಸ್ತೆ ವಿಸ್ತರಣೆ ಮಾಡುವ ಸಂದರ್ಭದಲ್ಲಿ ರಸ್ತೆ ಮಧ್ಯದಲ್ಲಿ ಬರುತ್ತವೆ. ಅವು ದೇವಸ್ಥಾನಗಳಿರಬಹುದು, ಮಸೀದಿ, ಗುರುದ್ವಾರಗಳಿರಬಹುದು. ಇದರೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಕಟ್ಟಿರುವಂಥ ಕಟ್ಟಡಗಳೂ ಇರಬಹುದು.

ಅಭಿವೃದ್ಧಿ ಕಾರ್ಯಕ್ಕಾಗಿ ಇವುಗಳನ್ನು ತೆರವುಗೊಳಿಸುವುದು ಅನಿವಾರ್ಯ ಆಗಬಹುದು. ಆದರೆ, ದೇವಾಲಯಗಳನ್ನು ತೆರವು ಮಾಡುವ ಸಂದರ್ಭದಲ್ಲಿ ಸುಪ್ರೀಂ ಕೋರ್ಟ್ ನೀಡಿದ ತೀರ್ಪನ್ನು ಪರಿಗಣಿಸದೇ ಕ್ರಮಕ್ಕೆ ಮುಂದಾಗಿದ್ದು ಮಾತ್ರ ಸರಿಯಲ್ಲ.

ಸಾರ್ವಜನಿಕ ಸ್ಥಳಗಳಲ್ಲಿ ಇರುವ ಗುರುದ್ವಾರ, ಮಸೀದಿ, ಚರ್ಚ್ ಹಾಗೂ ದೇವಸ್ಥಾನಗಳಿಗೆ ಸಂಬಂಧಿಸಿದಂತೆ ನಿರ್ದೇಶನ ನೀಡುವಂತೆ ಕೋರಿ, 2006ರಲ್ಲಿ ಸುಪ್ರೀಂ ಕೋರ್ಟ್ ಮುಂದೆ ವಿಶೇಷ ಅರ್ಜಿಯೊಂದು ಬರುತ್ತದೆ. ಆಗ, ಸುಪ್ರೀಂ ಕೋರ್ಟ್ ಎಲ್ಲಾ ಮಗ್ಗುಲಲ್ಲಿಯೂ ವಿಚಾರಣೆ ನಡೆಸಿ 2009ರಲ್ಲಿ ಮಧ್ಯಂತರ ಆದೇಶ ನೀಡುತ್ತದೆ.

ಅದೇನೆಂದರೆ, ಇನ್ನು ಮುಂದೆ ಯಾವುದೇ ಸರ್ಕಾರಿ/ ಸಾರ್ವಜನಿಕ ಸ್ಥಳಗಳಲ್ಲಿ, ಉದ್ಯಾನ–ರಸ್ತೆಯಲ್ಲಿ ಎಲ್ಲೂ ಮಸೀದಿ, ಚರ್ಚು, ಗುರುದ್ವಾರ, ದೇವಸ್ಥಾನ ಯಾವುದೂ ಬರಕೂಡದು. ಆದರೆ, ಇಂಥ ಕಟ್ಟಡಗಳು 2009ಕ್ಕಿಂತ ಮೊದಲೇ ನಿರ್ಮಾಣವಾಗಿದ್ದರೆ, ಅವುಗಳಿಂದ ಸಾರ್ವಜನಿಕರಿಗೆ ಅಡಚಣೆ ಆಗುತ್ತಿದೆಯೇ ಇಲ್ಲವೇ ಎಂಬುದನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಹೇಳುತ್ತದೆ.

ಆನಂತರ, 2010ರಲ್ಲಿ ಸೆಪ್ಟೆಂಬರ್‌ನಲ್ಲಿ ಈ ಬಗ್ಗೆ ತೀರ್ಪು ನೀಡುವ ಸುಪ್ರೀಂ ಕೋರ್ಟ್, ಸರಿಯಾದ ಪ್ರಮಾಣಪತ್ರ ಸಲ್ಲಿಸದೇ ಇರುವುದರಿಂದ ('ಅಬ್ಸೆನ್ಸ್ ಆಫ್ ಪ್ರಾಪರ್ ಅಫಿಡವಿಟ್') ತನಗೆ ಬೇರೆ ದಾರಿ ಇಲ್ಲ ಎಂದು 2009ರ ಆದೇಶವನ್ನೇ ಮುಂದುವರಿಸಿ ಆದೇಶಿಸುತ್ತದೆ. ಆದರೆ, ಎಂಟು ವಾರಗಳೊಳಗೆ ಹೊಸ ಪಟ್ಟಿಯನ್ನು ಸಿದ್ಧಪಡಿಸಿ ಸಲ್ಲಿಸುವಂತೆ ಗಡುವು ನೀಡುತ್ತದೆ. ಕೆಡವಿ ಹಾಕುವ, ಸ್ಥಳಾಂತರ ಮಾಡುವ ಇಲ್ಲವೇ ಕ್ರಮಬದ್ಧಗೊಳಿಸಲು ಅವಕಾಶ ಇರುವ ಕಟ್ಟಡಗಳ ಪಟ್ಟಿ ಸಿದ್ಧಪಡಿಸುವಂತೆ ಹೇಳುತ್ತದೆ. ಆದರೆ, ಸೋಮಾರಿ ಅಧಿಕಾರಿಗಳು ಇದಾವುದನ್ನೂ ಮಾಡುವುದಿಲ್ಲ.

ಇದಾದ ಮೇಲೆ, ಅಧಿಕಾರಿಗಳು ಅನಧಿಕೃತ ಪ್ರಾರ್ಥನಾ ಮಂದಿರಗಳನ್ನು ಕೆಡವಿ ಹಾಕುವ ಬಗ್ಗೆ ಸರ್ಕಾರದ ನಡಾವಳಿಯೊಂದನ್ನು ಹೊರಡಿಸುತ್ತಾರೆ. ಕೆಲವು ದೇವಸ್ಥಾನ–ಮಸೀದಿಗಳ ತೆರವಿಗೆ ಹೋದಾಗ, ಕೆಲವರು ನ್ಯಾಯಾಲಯದ ಮೆಟ್ಟಿಲೇರಿದರು. ಇನ್ನು, ಸುಪ್ರೀಂ ಕೋರ್ಟ್ ಆದೇಶವನ್ನು ಮುಂದಿಟ್ಟುಕೊಂಡು ಬಾಕಿ ದೇವಸ್ಥಾನಗಳನ್ನು ತೆರವುಗೊಳಿಸಲು ಮುಂದಾದರು.

ಆದರೆ, 2010ರಲ್ಲಿ ಅಧಿಕಾರಿಗಳು ಸರ್ಕಾರದ ನಡಾವಳಿ ಹೆಸರಿನಲ್ಲಿ ಏನು ದಾರಿತಪ್ಪಿಸುವ ಕೆಲಸ ಮಾಡಿದರೋ, ಅದೇ ರೀತಿ 2020ರಲ್ಲಿಯೂ ಆಯಿತು. ಸುಪ್ರೀಂ ಕೋರ್ಟ್ ತೀರ್ಪಿನ ವಿಶ್ಲೇಷಣೆ ನಡೆಯಲಿಲ್ಲ.

ಬಂದವರೆಲ್ಲ, ಸುಪ್ರೀಂ ಕೋರ್ಟ್ ಆದೇಶವಿದೆ ಎನ್ನುತ್ತಲೇ ಒಡೆಯಲು ಬಂದರು. ಅಧಿಕಾರಿಗಳ ಉದಾಸೀನತೆ ಹಾಗೂ ತಿಳಿಗೇಡಿತನದಿಂದಾಗಿ ನಮ್ಮ ಮೈಸೂರಿನ ಮಹದೇವಮ್ಮ ಹಾಗೂ ಭೈರವೇಶ್ವರ ದೇವಾಲಯಗಳು ಆಹುತಿಯಾದವು. ಸಹಜವಾಗಿ ನಮಗೆ ಗಾಸಿಯಾಯಿತು. ಹೀಗಾಗಿ, ನಾನು ಅದನ್ನು ವಿರೋಧಿಸಿದೆ. ಸುಪ್ರೀಂ ಕೋರ್ಟ್ ತೀರ್ಪಿನ ಎಲ್ಲ ದಾಖಲೆಗಳನ್ನು ತೆಗೆದು ಮುಂದಿಟ್ಟೆ. ಮಾತೆತ್ತಿದರೆ, ಕೋರ್ಟ್ ಹೆಸರು ಹೇಳುತ್ತಿದ್ದವರ ಮುಂದೆ, 'ಕೋರ್ಟ್ ಹಾಗೆಲ್ಲಿ ಹೇಳಿದೆ' ಎಂದು ಕೇಳಿದೆ. ಕ್ರಮಬದ್ಧಗೊಳಿಸುವುದಕ್ಕೆ, ಸ್ಥಳಾಂತರಕ್ಕೆ ಅವಕಾಶ ಕೊಟ್ಟಿರುವುದನ್ನು ಪ್ರಸ್ತಾಪಿಸಿದೆ. ಈ ರೀತಿ ನಾನು ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡ ನಂತರ, ನನ್ನೊಂದಿಗೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಂಬಂಧಪಟ್ಟ ದಾಖಲೆಗಳನ್ನು ತರಿಸಿಕೊಂಡರು.

ಅವರೇ ಒಂದು ನಿರ್ಧಾರವನ್ನು ಕೈಗೊಂಡು, ಈ ಎಲ್ಲ ದೇವಸ್ಥಾನಗಳನ್ನು, ಪೂಜಾ ಸ್ಥಳಗಳನ್ನು 2009ಕ್ಕಿಂತ ಮೊದಲು ಬಂದಿರುವುದನ್ನು ಸಂರಕ್ಷಣೆ ಮಾಡುವುದಕ್ಕೆ ಮಸೂದೆ ತಂದಿದ್ದಾರೆ.

ಆದರೆ, ಈ ದೇವಸ್ಥಾನಗಳು ಅಧಿಕೃತ ಹಾಗೂ ಅನಧಿಕೃತ ಎಂದು ಅಧಿಕಾರಿಗಳು ಯಾವ ಆಧಾರದ ಮೇಲೆ ಘೋಷಣೆ ಮಾಡುತ್ತಾರೆ?

ಯಾವುದೇ ಜಮೀನು ಸರ್ಕಾರಿ ಸೊತ್ತಾಗಿದ್ದು 1950 ಜ. 26ರ ನಂತರ. ಅದಕ್ಕಿಂತಲೂ ಮೊದಲು ದೇಶದಾದ್ಯಂತ 645ಕ್ಕಿಂತಲೂ ಹೆಚ್ಚು ಪ್ರಾಂತ್ಯ–ಸಂಸ್ಥಾನಗಳು ಇದ್ದವು. ಹೈದರಾಬಾದ್‌ನಂಥ ಕೆಲವು ಪ್ರಾಂತ್ಯಗಳನ್ನು ಬಿಟ್ಟರೆ, ಉಳಿದೆಲ್ಲ ಪ್ರಾಂತ್ಯಗಳಲ್ಲಿ ಕೂಡ ಇದ್ದ ಮಹಾರಾಜರು ಹಿಂದೂ ಮಹಾರಾಜರೇ ಇದ್ದರು. ನಮ್ಮೆಲ್ಲ ಪೂಜಾಸ್ಥಳಗಳಿಗೆ, ದೇವಸ್ಥಾನಗಳಿಗೆ ಪೋಷಕರಾಗಿದ್ದವರು ಕೂಡ ಅವರೇ. ಭೂಮಿಯ ಒಡೆತನವೂ ಮಹಾರಾಜರದೇ ಆಗಿತ್ತು. ದೇವಸ್ಥಾನ ಕಟ್ಟಲು ಅನುಮತಿ, ಹಣಕಾಸು ಸಹಾಯ ಎಲ್ಲವನ್ನೂ ಮಹಾರಾಜರೇ ಕೊಡುತ್ತಿದ್ದರು. ಮಹದೇವಮ್ಮ ದೇವಸ್ಥಾನದಂಥ ದೇವಸ್ಥಾನಗಳು ಆಗ ಕಟ್ಟಿದಂಥ ದೇವಸ್ಥಾನಗಳು. ಅದು 200 ವರ್ಷಗಳಿಗೂ ಹಿಂದಿನದು.

1964ರಲ್ಲಿ ಕರ್ನಾಟಕ ಪುರಸಭಾ ಕಾಯ್ದೆ ಬರುವ ಮೊದಲು ಲೈಸೆನ್ಸ್ ಪದ್ಧತಿಯೇ ಇರಲಿಲ್ಲ. 1993ರಲ್ಲಿ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಬಂದಿತು. ಅದಕ್ಕಿಂತ ಮೊದಲು ಹಳ್ಳಿಗಳಲ್ಲಿ ದೇವಸ್ಥಾನ ಕಟ್ಟಬೇಕೆಂದರೆ ಯಾವ ಅಪ್ಪಣೆಯನ್ನೂ ಕೇಳುತ್ತಿರಲಿಲ್ಲ. 1950ಕ್ಕಿಂತ ಮೊದಲು ಸರ್ಕಾರದ ಸೊತ್ತೇ ಆಗಿರದ ಜಾಗವನ್ನು ಸರ್ಕಾರಿ ಸೊತ್ತು ಎಂದು ಹೇಗೆ ಹೇಳುತ್ತಾರೆ? ಕರ್ನಾಟಕ ಪುರಸಭಾ ಕಾಯ್ದೆ ಬರುವುದಕ್ಕಿಂತ ಮುಂಚಿನ, 1993 ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ಮುನ್ನ ಕಟ್ಟಿದ ಕಟ್ಟಡಗಳನ್ನು ಅನಧಿಕೃತ ಎಂದು ಹೇಗೆ ಹೇಳುವಿರಿ? ಮನೆ ಕಟ್ಟಲು, ವಿದ್ಯುತ್ ಸಂಪರ್ಕ ಪಡೆಯಲು ಈಗ ಎಲ್ಲದಕ್ಕೂ ಲೈಸೆನ್ಸ್ ಅಗತ್ಯ. ಆವಾಗ ಅದು ಇರಲೇ ಇಲ್ಲವಲ್ಲ? ಯಾವ ಆಧಾರದ ಮೇಲೆ ಅನಧಿಕೃತ ಎಂದು ಹೇಳುತ್ತೀರಿ? ಇವತ್ತು ಊರು ಬೆಳೆದು, ರಸ್ತೆಗಳು ಅಗಲವಾದ ನಂತರ ದೇವಸ್ಥಾನಗಳು ನಿಮಗೆ ರಸ್ತೆಯ ಮಧ್ಯದಲ್ಲಿ ಕಾಣಿಸಬಹುದು. ಆದರೆ, ದೇವಸ್ಥಾನ ಕಟ್ಟಿದಾಗ ರಸ್ತೆಯೇ ಇರಲಿಲ್ಲವಲ್ಲ? ಅದಕ್ಕಾಗಿ, ಈ ಬಗ್ಗೆ ವಿವೇಚನೆಯಿಂದ ತೀರ್ಮಾನ ತೆಗೆದುಕೊಳ್ಳಬೇಕು.

ಹಿಂದುತ್ವ ಎಂಬುದು ನನ್ನ ಬದ್ಧತೆ. ಇದರಲ್ಲಿ ರಾಜಕೀಯವಿಲ್ಲ. ಆದರೆ, ಇನ್ನು ಮುಂದೆ ದೇವಸ್ಥಾನಗಳನ್ನು ಅನಧಿಕೃತವಾಗಿ ಕಟ್ಟಲು ಅವಕಾಶ ಕೊಡಬಾರದು. ನಿರ್ದಾಕ್ಷಿಣ್ಯವಾಗಿ ನಿಲ್ಲಿಸಬೇಕು.

ಲೇಖಕ: ಮೈಸೂರು–ಕೊಡಗು ಸಂಸದ

ನಿರೂಪಿತ ಲೇಖನ

ಪದಬಂಧ 4729

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಮುದ್ರ ಅಥವಾ ನದಿಯ ಉಬ್ಬರ (3)
6.ಇದು ಹೊಣೆಗೇಡಿತನವೆ ಬಿಡಿ! (5)
7.ಬಳ್ಳಿ ಇಲ್ಲಿ ಹಬ್ಬಿದೆ (3)
10.ಉಪವಾಸದಿಂದ ಮರಣ ಹೊಂದುವ ವ್ರತ (5)
15.ಸ್ವಾಭಾವಿಕವಾದುದು ಅಥವಾ ಪ್ರಕೃತಿ (3)
16.ನೀರಿನೊಡನೆ ಅಲೆ ಸೇರಿದಾಗ ವಾದ್ಯವಾಗುವುದೇ? (5)
17.ನಮ್ಮ ನಾಡ ಹಬ್ಬ (3)

ಮೇಲಿಂದ ಕೆಳಕ್ಕೆ
1. ನಡುವೆ ಧ್ವನಿ ತೂರಿಸಿ ನೀಡಿದ ಅಶ್ವಾಸನೆ! (4)
2.ಕುಂಬಾರನ ಚಕ್ರವಿದು (3)
3.ಈತ ಪಕ್ಕಾ ಆಲಸಿ! (3)
4. ವಾಲುತ್ತಾ ಕೇಳಿದ ಪ್ರಶ್ನೆ! (3)
5.ಕತ್ತಲೆಯ ರಾತ್ರಿ (4)
8.ಇದು ಕನ್ನಡಿಗನ ಎಕ್ಸ್‌ಪಿರಿಮೆಂಟ್! (3)
9.ವೇಶ ಧರಿಸಿ ಒಳ ಸೇರುವಿಕೆ! (3)
11. ಬಿಸಿಲುಕುದುರೆ ಇಲ್ಲಿದೆ (4)
12.ಒಂಬತ್ತನೇ ಚಾಂದ್ರಮಾನ ಮಾಸ (4)
13.ಸಂಬಳವನ್ನು ಹೀಗೆನ್ನಿ (3)
14.ಮಗನೊಡನಿರುವ ಪುತ್ರಿ (3)
15.ನಾದಿನಿಗೆ ಕೇಳಿಸಿದ ಧ್ವನಿ (3)

1		2	■	3	■	4	■	5
	■		■	6				
7			■		■		■	
	■	■	8	■	9	■	■	
■	■	10					■	■
11	■	■		■		■	■	12
	■	13	■	14	■	15		
16					■		■	
	■		■		■	17		

4728ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3.ಭವಬಂಧನ
4.ಕೋರಿಕೆ 6.ಮಟ್ಟಸ
8.ರಮಣ 9.ಮಾರುತ
10.ಚಂದನ 11.ಮಧುರ
13.ರದನ 14.ರಜತೋತ್ಸವ

ಮೇಲಿಂದ ಕೆಳಕ್ಕೆ:
1.ನವಸುಮ 2.ಪರಿಮಾಣ
5.ತರತಮ 7.ಸಮಾನತೆ
10.ಚಂದ್ರೋದಯ
12.ರಥೋತ್ಸವ

ಸುಡೊಕು 5115

		1			7		3	
			2	3				
5		2		1		9		7
2		5					7	
				5	3	8		9
	9		8				5	
4		3			2			
	5			4		7	9	2
7		9			5		1	

5114 ಸುಡೊಕು

8	9	5	6	7	2	4	1	3
7	3	1	9	5	4	6	8	2
6	2	4	3	1	8	7	5	9
5	8	3	7	6	9	1	2	4
1	7	6	2	4	5	3	9	8
2	4	9	8	3	1	5	6	7
9	5	7	1	8	3	2	4	6
4	6	2	5	9	7	8	3	1
3	1	8	4	2	6	9	7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ

ಶನಿವಾರ ಸೆಪ್ಟೆಂಬರ್ 25, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ವರ್ಷ ಋತು ಭಾದ್ರಪದ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಉತ್ತರ ಫಲ್ಗುಣಿ ಚತುರ್ಥೀ ಗಂ. 5-11 (ಬೆ. 8-19) ಶನಿವಾರ ನಿತ್ಯ ನಕ್ಷತ್ರ ಭರಣೀ ಗಂ. 11-1 (ಹ. 10-39) ಹರ್ಷ ನಾಮ ಯೋಗ ಗಂ. 22-5 ಬಾಲವ ಕರಣ ಗಂ. 5-11 ವಿಷ ಗಂ. 44-8 ಅಮೃತ ಶೇಷ ಗಂ 2-19 : ರಾಹುಕಾಲ ಬೆ. ಗಂ. 9-00 ರಿಂದ 10-30 ಗುಳಿಕ ಕಾಲ ಬೆ. ಗಂ 6-00 ರಿಂದ 7-30 ಯಮಗಂಡ ಮ. ಕಾಲ ಗಂ 1-30 ರಿಂದ 3-00: ಸೂರ್ಯೋದಯ: 6-12 ಸೂರ್ಯಾಸ್ತ: 6-16 ಅದೃಷ್ಟ ಸಂಖ್ಯೆ 7 8

ಮೇಷ: ವಿಶ್ವಾಸಿಗಳಿಗೆ ಅನಿವಾರ್ಯ ಹಣ ಸಹಾಯ ಮಾಡುವ ಅವಕಾಶ ಉಂಟಾದೀತು. ಎಂಜಿನಿಯರುಗಳಿಗೆ ತಂತ್ರಜ್ಞರಿಗೆ ಮತ್ತು ಗುಪ್ತಚರ ಇಲಾಖೆಯಲ್ಲಿ ಕೆಲಸ ಮಾಡುವವರಿಗೆ ಅನುಕೂಲಕರ ವಾತಾವರಣ.

ವೃಷಭ: ಬಂಧು ಮಿತ್ರರೊಂದಿಗೆ ದೇವತಾ ಕಾರ್ಯದಲ್ಲಿ ಪಾಲ್ಗೊಳ್ಳುವ ಸಾಧ್ಯತೆ. ಉದರ ಸಂಬಂಧಿ ಖಾಯಿಲೆಗಳು ಕಿರಿ ಕಿರಿ ಉಂಟುಮಾಡಬಹುದು. ವ್ಯವಹಾರ ನಿಮಿತ್ತ ಮಿತ್ರರೊಂದಿಗೆ ದೂರದ ಪ್ರಯಾಣ.

ಮಿಥುನ: ರಾಜಕೀಯ ಪ್ರೇರಿತ ಕೆಲಸಗಳಲ್ಲಿ ಯಶಸ್ಸು. ಉನ್ನತ ಹುದ್ದೆ ಅಲಂಕರಿಸಿರುವ ಅಧಿಕಾರಿಗಳಿಗೆ ವರ್ಗಾವಣೆ ಸಾಧ್ಯತೆ. ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಉತ್ತಮ ಮನ್ನಣೆ ದೊರಕಲಿದೆ.

ಕರ್ಕಾಟಕ: ವಿದ್ಯಾಭ್ಯಾಸದ ಬಗ್ಗೆ ಹಣಕಾಸಿನ ವ್ಯವಸ್ಥೆ ಮಾಡಬೇಕಾದೀತು. ನೌಕರಸ್ಥರು ಸಹೋದ್ಯೋಗಿಗಳೊಡನೆ ನೇರವಾಗಿ ವ್ಯವಹರಿಸುವುದು ಉತ್ತಮ. ಎಲೆಕ್ಟ್ರಿಕಲ್ ಗುತ್ತಿಗೆದಾರರು, ಮಾರಾಟಗಾರರಿಗೆ ಬಿಡುವಿಲ್ಲದ ಕೆಲಸ.

ಸಿಂಹ: ನ್ಯಾಯಾಲಯದಲ್ಲಿನ ತಗಾದೆಗಳು ನಿಮ್ಮ ಪರವಾಗಿ ಇತ್ಯರ್ಥವಾಗುವುದರಿಂದ ಮಾನಸಿಕ ನೆಮ್ಮದಿ ಹೊಂದುವಿರಿ. ಹಿರಿಯ ಅಧಿಕಾರಿಗಳಿಂದ ಮಾನಸಿಕ ಕಿರಿಕಿರಿ. ವ್ಯವಹಾರದಲ್ಲಿನ ಉನ್ನತಿಗಾಗಿ ಗಣೇಶ ಪ್ರಾರ್ಥನೆ ಮಾಡಿ.

ಕನ್ಯಾ: ಮಹಿಳೆಯರಿಗೆ ಆರ್ಥಿಕ ಸಬಲತೆಗೆ ಬೇಕಾದ ಅನುಕೂಲತೆಗಳು ದೊರಕಲಿವೆ. ಸರ್ಕಾರಿ ಸಂಸ್ಥೆಗಳಲ್ಲಿ ದುಡಿಯುವವರಿಗೆ ಬಡ್ತಿ ದೊರಕುವ ಸಾಧ್ಯತೆ ಕಂಡುಬರುವುದು.

ತುಲಾ: ವ್ಯವಹಾರಗಳು ಸುಗಮವಾಗಿ ನೆರವೇರುವವು. ಬರಬೇಕಾಗಿರುವ ಹಣ ನಿಮ್ಮ ಕೈ ಸೇರುವುದರಲ್ಲಿ ಅನುಮಾನವಿಲ್ಲ. ನಿರುದ್ಯೋಗಿಗಳಿಗೆ ಉದ್ಯೋಗದ ವಿಷಯದಲ್ಲಿ ಮಾಡಿದ ಪ್ರಯತ್ನಗಳು ಫಲ ನೀಡಲಿವೆ.

ವೃಶ್ಚಿಕ: ಸೌಂದರ್ಯ ವರ್ಧಕ ವಸ್ತುಗಳ ವ್ಯವಹಾರವನ್ನು ಆರಂಭಿಸುವ ಬಗ್ಗೆ ಚಿಂತನೆ ನಡೆಸಲಿದ್ದೀರಿ. ನೆರೆ ಹೊರೆಯವರೊಂದಿಗೆ ಬಾಂಧವ್ಯ ವೃದ್ಧಿಯಾಗಲಿದೆ. ಹಣಕಾಸಿನ ವಿಷಯದಲ್ಲಿ ಅನುಕೂಲತೆ.

ಧನು: ವೈಯುಕ್ತಿಕ ವಿಚಾರಗಳತ್ತ ಲಕ್ಷ್ಯ ಕೊಡಬೇಕಾಗುವುದು. ಹೊಸ ಉದ್ಯಮವೊಂದನ್ನು ಪ್ರಾರಂಭಿಸುವ ಬಗೆಗೆ ಮಾತುಕತೆ ನಡೆಸುವಿರಿ. ಹಿತ ಮಿತವಾದ ಮಾತುಗಳಿಂದ ಕಾರ್ಯಸಿದ್ಧಿಯಾಗಲಿದೆ.

ಮಕರ: ಮನೆಯ ನವೀಕರಣ ಅಥವಾ ನಿರ್ಮಾಣದ ಕೆಲಸಗಳು ಪ್ರಾರಂಭವಾಗುವವು. ಬಡವರಿಗೆ ಧಾನ್ಯಗಳನ್ನು ದಾನ ಮಾಡುವ ಅವಕಾಶ ಕಂಡುಬರುವುದು. ಅವಕಾಶಗಳನ್ನು ಕಳೆದುಕೊಳ್ಳದೇ ಸದುಪಯೋಗ ಪಡಿಸಿಕೊಳ್ಳುವಲ್ಲಿ ನಿಮ್ಮ ಜಾಣ್ಮೆ ಅಡಗಿದೆ.

ಕುಂಭ: ರಾಜಕೀಯ ಮುತ್ಸದ್ದಿಗಳಿಗೆ ಉನ್ನತ ಹುದ್ದೆ ಅಲಂಕರಿಸುವ ಅವಕಾಶ. ಆರೋಗ್ಯದ ಬಗ್ಗೆ ಕಾಳಜಿ ಅಗತ್ಯ. ಆಕಸ್ಮಿಕ ಧನ ಲಾಭ.

ಮೀನ: ಪ್ರಮುಖ ಸಭೆಯೊಂದರಲ್ಲಿ ಭಾಗವಹಿಸಿ ವಿಷಯವೊಂದರ ಕುರಿತು ಅಭಿಪ್ರಾಯ ಮಂಡಿಸುವ ಸಾಧ್ಯತೆ. ಕಳೆದುಕೊಂಡ ವಸ್ತುಗಳು ಕೈ ಸೇರುವ ಸಂಭವವಿದೆ. ಸಂಸಾರ ಸಮೇತ ದೂರದ ಪ್ರಯಾಣಮಾಡಲಿದ್ದೀರಿ.

ನಿಮ್ಮ ಜನ್ಮದಿನ 25-ಸೆಪ್ಟೆಂಬರ್ ಇಂದು ಅತ್ಯಂತ ಶುಭದಾಯಕವಾಗಿದ್ದು, ಮನೆಯ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದರಿಂದ ಚಿಂತೆಯಿಂದ ಮುಕ್ತರಾಗುವಿರಿ. ಸರ್ಕಾರದಿಂದ ಆಗಬೇಕಾದ ಕೆಲಸ ಕಾರ್ಯಗಳು ಕೈಗೂಡಲಿವೆ. ಮನೆಮಂದಿಯಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಉತ್ತಮ ಪ್ರೋತ್ಸಾಹ ದೊರಕುವುದು.

ಶಿಷ್ಟಾಚಾರ ಪಾಲಿಸುತ್ತೇನೆ: ರೋಹಿಣಿ ಸಿಂಧೂರಿ

ಬೆಂಗಳೂರು: 'ಯಾವುದೇ ಸಮಿತಿ ಅಥವಾ ಶಾಸಕರಿಗೆ ಅಗೌರವ ತೋರಿಸುವ ಉದ್ದೇಶ ಇಲ್ಲ. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ನಿಯಮದಂತೆ ಶಿಷ್ಟಾಚಾರ ಪಾಲಿಸುತ್ತೇನೆ' ಎಂದು ಹಕ್ಕು ಬಾಧ್ಯತೆಗಳ ಸಮಿತಿ ಎದುರು ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಹೇಳಿಕೆ ನೀಡಿದ್ದಾರೆ. ಹೀಗಾಗಿ, ಅವರ ಮೇಲಿನ ಹಕ್ಕುಚ್ಯುತಿ ಪ್ರಕರಣವನ್ನು ಸಮಿತಿ ಕೈಬಿಟ್ಟಿದೆ.

ಸಮಿತಿಯ ಎರಡನೇ ವರದಿಯನ್ನು ಸಮಿತಿಯ ಅಧ್ಯಕ್ಷ ಬಸನಗೌಡ ಪಾಟೀಲ ಯತ್ನಾಳ್ ಅವರು ವಿಧಾನಸಭೆಯಲ್ಲಿ ಶುಕ್ರವಾರ ಮಂಡಿಸಿದರು.

ತಮ್ಮ ನೇತೃತ್ವದ ವಿಧಾನ ಮಂಡಲದ ಕಾಗದ ಪತ್ರಗಳ ಸಮಿತಿ ಜ. 12ರಂದು ಮೈಸೂರಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಅಲ್ಲಿನ ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ಅಗೌರವ ತೋರಿದ್ದಾರೆ. ಸಮಿತಿಯ ಸಭೆಗೆ ಹಾಜರಾಗಿಲ್ಲ. ಸಮಿತಿಯ ಹಕ್ಕಿಗೆ ಚ್ಯುತಿ ಉಂಟು ಮಾಡಿದ್ದಾರೆ ಎಂದು ಸಮಿತಿಯ ಅಧ್ಯಕ್ಷ ಸಾ.ರಾ.ಮಹೇಶ್ ಅವರು ಮಾರ್ಚ್ 8ರಂದು ಹಕ್ಕು ಬಾಧ್ಯತೆಗಳ ಸಮಿತಿಗೆ ಪತ್ರ ಬರೆದಿದ್ದರು.

ನಾಗಪುರ ಶಿಕ್ಷಣ ನೀತಿಗೆ ಧಿಕ್ಕಾರ ಕೂಗಿದ ಸಿದ್ದರಾಮಯ್ಯ ● ಆರ್‌ಎಸ್‌ಎಸ್ ಜಿಂದಾಬಾದ್– ಬಿಜೆಪಿ ಸದಸ್ಯರ ಪ್ರತ್ಯುತ್ತರ

ಎನ್‌ಇಪಿ: ವಿಧಾನಸಭೆಯಲ್ಲಿ ಕೋಲಾಹಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ರಾಷ್ಟ್ರೀಯ ಶಿಕ್ಷಣ ನೀತಿ (ಎನ್‌ಇಪಿ) ಕುರಿತು ಚರ್ಚೆ ನಡೆಸದೇ ಜಾರಿಗೊಳಿಸಲು ರಾಜ್ಯ ಸರ್ಕಾರ ಮುಂದಾಗಿದೆ ಎಂದು ಆರೋಪಿಸಿ ಕಾಂಗ್ರೆಸ್ ಸದಸ್ಯರು ವಿಧಾನಸಭೆಯಲ್ಲಿ ಶುಕ್ರವಾರ ಧರಣಿ ನಡೆಸಿದರು. ಇದು ಆರ್‌ಎಸ್‌ಎಸ್ ಕಾರ್ಯಸೂಚಿ ಎಂಬ ವಿಷಯ ಕಾಂಗ್ರೆಸ್– ಬಿಜೆಪಿ ಸದಸ್ಯರ ನಡುವೆ ವಾಕ್ಸಮರ ನಡೆದು ಕಲಾಪದಲ್ಲಿ ಕೋಲಾಹಲ ಸೃಷ್ಟಿಯಾಯಿತು.

ಇದು ನಾಗಪುರ ಶಿಕ್ಷಣ ನೀತಿ ಎಂದು ಕಾಂಗ್ರೆಸ್ ಸದಸ್ಯರು ಆರೋಪಿಸಿದರೆ, ಕಾಂಗ್ರೆಸ್‌ನವರಿಗೆ ಇಟಲಿ ಶಿಕ್ಷಣ ನೀತಿ ಬೇಕಾಗಿದೆ ಎಂದು ಬಿಜೆಪಿ ಸದಸ್ಯರು ತಿರುಗೇಟು ನೀಡಿದರು. ಆಡಳಿತ ಹಾಗೂ ವಿರೋಧ ಪಕ್ಷದ ನಾಯಕರು ಆರೋಪ–ಪ್ರತ್ಯಾರೋಪಗಳ ಸುರಿಮಳೆ ಸುರಿಸಿದರು.

ಸದನದಲ್ಲಿ ನಡೆದಿದ್ದು ಏನು?

ಶೂನ್ಯ ವೇಳೆಯಲ್ಲಿ ತುರ್ತು ವಿಷಯಗಳ ಬಗ್ಗೆ ಗಮನ ಸೆಳೆಯಲು ಕೆಲವು ಸದಸ್ಯರಿಗೆ ಅವಕಾಶ ನೀಡಲು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮುಂದಾದರು. ಈ ವೇಳೆ, ಹೇಮಾವತಿ ಜಲಾಶಯದಿಂದ ಕುಣಿಗಲ್ ಲಿಂಕ್ ಕೆನಾಲ್‌ಗೆ ನೀರು ಹರಿಸುವ ವಿಷಯಕ್ಕೆ ಸಂಬಂಧಿಸಿದಂತೆ ಗಮನ ಸೆಳೆಯಲು ಅವಕಾಶ ನೀಡಬೇಕು ಎಂದು ಕಾಂಗ್ರೆಸ್‌ನ ಡಾ.ರಂಗನಾಥ್ ಒತ್ತಾಯಿಸಿದರು. ಅದಕ್ಕೆ ಸಭಾಧ್ಯಕ್ಷರು ಪ್ರತಿಕ್ರಿಯಿಸಲಿಲ್ಲ. 'ಕುಣಿಗಲ್ ಲಿಂಕ್ ಕೆನಾಲ್' ಎಂಬ ಭಿತ್ತಿಪತ್ರವನ್ನು ಪ್ರದರ್ಶಿಸಿದ ರಂಗನಾಥ್ ಅವರು ಸಭಾಧ್ಯಕ್ಷರ ಪೀಠದ ಎದುರು ಧರಣಿ ಆರಂಭಿಸಿದರು. ಕಾಂಗ್ರೆಸ್‌ನ ಕೆ.ವೆಂಕಟರಮಣಯ್ಯ, ಜೆ.ಎನ್.ಗಣೇಶ್ ಸೇರಿದಂತೆ ಹಲವು ಸದಸ್ಯರು ಧರಣಿಯಲ್ಲಿ ಸೇರಿಕೊಂಡರು.

'ಪ್ರಮುಖ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ನೀಡುವುದಾಗಿ ಹೇಳಿದ್ದೇವೆ. ಆದರೂ, ನಿಮ್ಮ ಪಕ್ಷದ ಸದಸ್ಯರು ಧರಣಿ ನಡೆಸುತ್ತಿದ್ದಾರಲ್ಲ' ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಕಾಗೇರಿ ಪ್ರಶ್ನಿಸಿದರು.

ಸಿದ್ದರಾಮಯ್ಯ ಪ್ರತಿಕ್ರಿಯಿಸಿ, 'ಸದನದಲ್ಲಿ ಜನರ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು ಹಾಗೂ ಧರಣಿ ನಡೆಸಬಾರದು ಎಂದು ನಾವು ತೀರ್ಮಾನಿಸಿದ್ದೆವು. ಹಲವು ವಿಷಯಗಳ ಕುರಿತು ಚರ್ಚಿಸಲು ಅವಕಾಶವೇ ಸಿಕ್ಕಿಲ್ಲ. ಕಲಾಪವನ್ನು ಒಂದು ವಾರ ಮುಂದುವರಿಸುವಂತೆ ಪ್ರಸ್ತಾಪಿಸಿ ಕೇಳಿಕೊಂಡಿದ್ದೆವು. ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆಯೂ ಚರ್ಚಿಸಬೇಕಿತ್ತು. ಇದಕ್ಕೂ ಅವಕಾಶ ಸಿಕ್ಕಿಲ್ಲ ಎಂಬ ಬೇಸರದಿಂದ ನಮ್ಮ ಸದಸ್ಯರು ಧರಣಿ ಆರಂಭಿಸಿದ್ದಾರೆ' ಎಂದು ಸಮರ್ಥಿಸಿಕೊಂಡರು.

'ಈ ನೀತಿಯನ್ನು ನಾಗಪುರ ಶಿಕ್ಷಣ ನೀತಿ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಟೀಕಿಸಿದ್ದಾರೆ. ಅಕ್ಟೋಬರ್ 1ರಿಂದ ಕಾಲೇಜುಗಳು ಆರಂಭವಾಗಲಿವೆ. ನೀತಿಯ ಕುರಿತು ಚರ್ಚೆಯೇ ಆಗಿಲ್ಲ. ಇದು ಮಕ್ಕಳ ಭವಿಷ್ಯದ ಪ್ರಶ್ನೆ. ಮಕ್ಕಳ ಮೇಲೆ ಆರ್‌ಎಸ್‌ಎಸ್ ಅಜೆಂಡಾ ಹೇರುವುದು ಸರಿಯಲ್ಲ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

'ಕಾಂಗ್ರೆಸ್‌ನವರಿಗೆ ಇಟಲಿ ಶಿಕ್ಷಣ ನೀತಿ ಬೇಕಿದೆ' ಎಂದು ಬಿಜೆಪಿಯ ಸಿ.ಟಿ.ರವಿ ವ್ಯಂಗ್ಯವಾಗಿ ಹೇಳಿದರು. ಆಗ ಉಳಿದ ಕಾಂಗ್ರೆಸ್ ಸದಸ್ಯರು ಧರಣಿಯಲ್ಲಿ ಸೇರಿಕೊಂಡರು.

ಕಾಂಗ್ರೆಸ್ ಸದಸ್ಯರು 'ಎನ್‌ಇಪಿ ಕೈಬಿಡಿ, ನ್ಯಾಯ ಬೇಕೇ ಬೇಕು' ಎಂದು ಘೋಷಣೆಗಳನ್ನು ಕೂಗಿದರು. 'ನಾಗಪುರ ಶಿಕ್ಷಣ ನೀತಿ ನಮಗೆ ಬೇಡವೇ ಬೇಡ' ಎಂದೂ ಹೇಳಿದರು. 'ಇಟಲಿ ಕಾಂಗ್ರೆಸ್' ಎಂದು ಬಿಜೆಪಿ ಸದಸ್ಯರು ಛೇಡಿಸಿದರು. ಬಿಜೆಪಿಯ ಹಲವು ಸದಸ್ಯರು ತಮ್ಮ ಸ್ಥಾನಗಳನ್ನು ಬಿಟ್ಟು ಬಂದು ಗುಂಪಾಗಿ ನಿಂತು ಕಾಂಗ್ರೆಸ್ ವಿರುದ್ಧ ಘೋಷಣೆಗಳನ್ನು ಕೂಗಿದರು.

ಕೋವಿಡ್ ಸಾವಿನ ಕುರಿತ ಚರ್ಚೆಗೆ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ಉತ್ತರ ನೀಡಲು ಆರಂಭಿಸಿದರು. 'ಸಚಿವರು ಉತ್ತರ ನೀಡುತ್ತಿದ್ದಾರೆ. ಗಮನಿಸಿ' ಎಂದು ಬಿಜೆಪಿ ಸದಸ್ಯರನ್ನು ಉದ್ದೇಶಿಸಿ ಸಭಾಧ್ಯಕ್ಷರು ಹೇಳಿದರು. ಆಗಲೂ ಬಿಜೆಪಿ ಸದಸ್ಯರ ಘೋಷಣೆ ಕೂಗುವುದನ್ನು ಮುಂದುವರಿಸಿದರು. ಜೈ ಶ್ರೀರಾಮ್ ಎಂದೂ ಕೂಗಿದರು.

'ರಾಷ್ಟ್ರದಲ್ಲಿ ಗೋಡ್ಸೆ ವಿಶ್ವವಿದ್ಯಾಲಯ ಸ್ಥಾಪನೆ ಯಾವಾಗ' ಎಂದು ಕಾಂಗ್ರೆಸ್ ಸದಸ್ಯರು ಪ್ರಶ್ನಿಸಿದರು.

'ದಲಿತ, ಶೂದ್ರ, ಹಿಂದುಳಿದ, ಮಹಿಳಾ, ರೈತ, ಕಾರ್ಮಿಕ ವಿರೋಧಿ ಶಿಕ್ಷಣ ನೀತಿ' ಎಂಬ ಭಿತ್ತಿಪತ್ರವನ್ನು ಕಾಂಗ್ರೆಸ್ ಸದಸ್ಯರು ಪ್ರದರ್ಶಿಸಿದರು. 'ಮೋದಿ ಸರ್ಕಾರ್ ಚೋರ್ ಹೈ' ಎಂದೂ ಘೋಷಣೆಗಳನ್ನು ಕೂಗಿದರು. 'ಕಾಂಗ್ರೆಸ್ ಚೋರ್ ಹೈ' ಎಂದು ಬಿಜೆಪಿ ಸದಸ್ಯರು ಹೇಳಿದರು. 'ಚೌಕಿದಾರ್ ಚೋರ್ ಹೈ' ಎಂದೂ ಕಾಂಗ್ರೆಸ್ ಸದಸ್ಯರು ಹೇಳಿದರು. ಇದರಿಂದ ಸದನದಲ್ಲಿ ಕೋಲಾಹಲ ಸೃಷ್ಟಿಯಾಯಿತು. ಕಲಾಪವನ್ನು ಅನಿರ್ದಿಷ್ಟಾವಧಿಗೆ ಮುಂದೂಡಲಾಯಿತು.

ಈಗಲೂ ಆರ್‌ಎಸ್‌ಎಸ್‌ಪರ: ಕಾಗೇರಿ

'ನಾನು ಈಗಲೂ ಆರ್‌ಎಸ್‌ಎಸ್ ಪರ. ಆರ್‌ಎಸ್‌ಎಸ್ ಇರುವುದು ಭಾರತದಲ್ಲಿ ಅಲ್ಲವೇ' ಎಂದು ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಹೇಳಿದರು.

'ಆರ್‌ಎಸ್‌ಎಸ್ ಅಜೆಂಡಾವನ್ನು ಸರ್ಕಾರ ಹೇರುತ್ತಿದೆ' ಎಂದು ಸಿದ್ದರಾಮಯ್ಯ ಆರೋಪಿಸಿದರು. 'ಆರ್‌ಎಸ್‌ಎಸ್‌ನ ಉತ್ತಮ ವಿಚಾರಗಳನ್ನು ಕಲಿತರೆ ತಪ್ಪೇನು' ಎಂದು ಕಾಗೇರಿ ಪ್ರಶ್ನಿಸಿದರು. 'ನಿಮ್ಮ ಪೂರ್ವಾಶ್ರಮ ಅದೇ ಅಲ್ಲವೇ' ಎಂದು ಸಿದ್ದರಾಮಯ್ಯ ಚುಚ್ಚಿದರು. 'ನಾನು ಈಗಲೂ ಆರ್‌ಎಸ್‌ಎಸ್ ಪರ' ಎಂದು ಕಾಗೇರಿ ಪ್ರತಿಕ್ರಿಯಿಸಿದರು.

'ಆರ್‌ಎಸ್‌ಎಸ್ ಎಂದರೆ ರಾಷ್ಟ್ರೀಯತೆ'

'ಆರ್‌ಎಸ್‌ಎಸ್ ಎಂದರೆ ರಾಷ್ಟ್ರೀಯತೆ. ಆರ್‌ಎಸ್‌ಎಸ್‌ನಿಂದ ದೇಶಕ್ಕೆ ಒಳ್ಳೆಯದು ಆಗುತ್ತಿದೆ. ಮಕ್ಕಳ ಭವಿಷ್ಯಕ್ಕೆ ಒಳ್ಳೆಯದು ಆಗುವುದಿದ್ದರೆ ಸಂಘಟನೆಯ ನೀತಿಯನ್ನು ಅಳವಡಿಸಿದರೆ ತಪ್ಪೇನು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಶ್ನಿಸಿದರು.

'ಕಾಂಗ್ರೆಸ್‌ಗೆ ಬೇರೆಯವರು ಮಾಡಿದ ಶಿಕ್ಷಣ ಪದ್ಧತಿ. ಶಿಕ್ಷಣ ವ್ಯವಸ್ಥೆಯ ಸುಧಾರಣೆಯನ್ನು ಸಹಿಸುವುದಿಲ್ಲ. ಅವರಿಗೆ ಬೇರೆಯವರ ಗುಲಾಮತನ' ಎಂದೂ ಹರಿಹಾಯ್ದರು.



ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಮುಖಂಡರು ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಿಂದ ವಿಧಾನಸೌಧದವರೆಗೆ ಟಾಂಗಾ ಜಾಥಾ ನಡೆಸಿದರು.

ಟಾಂಗಾ ಏರಿ ಕಾಂಗ್ರೆಸ್ ನಾಯಕರ ಪ್ರತಿಭಟನೆ

ಬೆಂಗಳೂರು: ಇಂಧನ ಬೆಲೆ ಹಾಗೂ ತತ್ಪರಿಣಾಮ ದಿನಬಳಕೆ ವಸ್ತುಗಳ ದರ ಏರಿಕೆ ಖಂಡಿಸಿ ಎತ್ತಿನ ಗಾಡಿ ಏರಿ, ಸೈಕಲ್ ತುಳಿದು ವಿಧಾನಮಂಡಲದ ಅಧಿವೇಶನಕ್ಕೆ ಹೋಗಿದ್ದ ಕಾಂಗ್ರೆಸ್ ನಾಯಕರು, ಶುಕ್ರವಾರ ಟಾಂಗಾ ಏರಿ ಹೋದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಎಸ್.ಆರ್. ಪಾಟೀಲ ನೇತೃತ್ವದಲ್ಲಿ ಕ್ವೀನ್ಸ್ ರಸ್ತೆಯ ಕೆಪಿಸಿಸಿ ಕಚೇರಿಯಿಂದ ವಿಧಾನಸೌಧದವರೆಗೆ ಕಾಂಗ್ರೆಸ್ ಮುಖಂಡರು ಟಾಂಗಾ ಜಾಥಾ ನಡೆಸಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷರಾದ ರಾಮಲಿಂಗಾರೆಡ್ಡಿ, ಸಲೀಂ ಅಹಮದ್, ಈಶ್ವರ ಖಂಡ್ರೆ, ಶಾಸಕರಾದ ಕೆ.ಜೆ. ಜಾರ್ಜ್, ಕೃಷ್ಣ ಬೈರೇಗೌಡ, ಪ್ರಿಯಾಂಕ್ ಖರ್ಗೆ ಇದ್ದರು. ಮಾರ್ಗದುದ್ದಕ್ಕೂ ಕೇಂದ್ರ– ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

ಪೊಲೀಸರ ತಡೆ: ಈ ವೇಳೆ ಜನದಟ್ಟಣೆ, ಸಂಚಾರ ದಟ್ಟಣೆ ತಡೆಯಲು ಮುಂದಾದ ಪೊಲೀಸರು, ಕಾಂಗ್ರೆಸ್ ನಾಯಕರು ಮತ್ತು ಶಾಸಕರಿಗೆ ಮಾತ್ರ ಎಂಟು ಟಾಂಗಾಗಳಲ್ಲಿ ವಿಧಾನಸೌಧದತ್ತ ಹೋಗಲು ಅವಕಾಶ ನೀಡಿದರು.

ಜಾಥಾ ಬಳಿಕ ಮಾತನಾಡಿದ ಡಿ.ಕೆ. ಶಿವಕುಮಾರ್, 'ಇಂಧನ ಸೇರಿದಂತೆ ಅಗತ್ಯ ವಸ್ತುಗಳು, ಮನೆ ನಿರ್ಮಾಣ ಸಾಮಗ್ರಿಗಳ ಬೆಲೆ ಗಗನಕ್ಕೇರಿದೆ. ಎಮ್ಮೆ ಚರ್ಮದ ಸರ್ಕಾರಕ್ಕೆ ಅರ್ಥವಾಗುತ್ತಿಲ್ಲ. ಸರ್ಕಾರಕ್ಕೆ ಕಣ್ಣು, ಕಿವಿ, ಬಾಯಿ ಯಾವುದೂ ಇಲ್ಲ. ಜನರ ರಕ್ತವನ್ನು ಸರ್ಕಾರ ಹೀರುತ್ತಿದೆ. ಜನರ ಧ್ವನಿಯಾಗಿ ನಾವು ಈ ಪ್ರತಿಭಟನೆ ಮಾಡುತ್ತಿದ್ದೇವೆ. ಅಕ್ಟೋಬರ್ ತಿಂಗಳಿನಲ್ಲಿ ರಾಜ್ಯದ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದರು.

ಸಿದ್ಧರಾಮಯ್ಯ ಅವರು, 'ಅಗತ್ಯ ವಸ್ತುಗಳ ಬೆಲೆ ಏರಿಕೆ ಖಂಡಿಸಿ ನಮ್ಮ ಮೂರನೇ ಹೋರಾಟವಿದು. ಮೋದಿ ಪ್ರಧಾನಿಯಾದ ಬಳಿಕ ಬೆಲೆ ಗಗನಕ್ಕೇರುತ್ತಿದೆ. ಬೆಲೆ ಏರಿಕೆಯನ್ನು ಸರ್ಕಾರ ಗಂಭೀರವಾಗಿ ಪರಿಗಣಿಸದಿದ್ದರೆ ಇನ್ನೂ ತೀವ್ರ ಹೋರಾಟ ನಡೆಸುತ್ತೇವೆ' ಎಂದು ಎಚ್ಚರಿಸಿದರು.

'ಇನ್‌ಸೈಟ್ಸ್ ಐಎಎಸ್'ಗೆ ಅತ್ಯುತ್ತಮ ಫಲಿತಾಂಶ

ಬೆಂಗಳೂರು: ಕೇಂದ್ರ ಲೋಕಸೇವಾ ಆಯೋಗದ (ಯುಪಿಎಸ್‌ಸಿ) ನಾಗರಿಕ ಸೇವೆಗಳ ಪರೀಕ್ಷೆಗೆ ತರಬೇತಿ ನೀಡುವ ಪ್ರಮುಖ ಸಂಸ್ಥೆ 'ಇನ್‌ಸೈಟ್ಸ್ ಐಎಎಸ್'ಗೆ ಈ ಬಾರಿಯೂ ಅತ್ಯುತ್ತಮ ಫಲಿತಾಂಶ ದೊರೆತಿದೆ.

2020ನೇ ಸಾಲಿನ ಪರೀಕ್ಷೆಯಲ್ಲಿನ ಮೊದಲ 100ರಲ್ಲಿನ 40 ರ್‍ಯಾಂಕ್‌ಗಳು 'ಇನ್‌ಸೈಟ್ಸ್ ಐಎಎಸ್'ನಲ್ಲಿ ತರಬೇತಿ ಪಡೆದ ಅಭ್ಯರ್ಥಿಗಳ ಪಾಲಾಗಿವೆ. ಮೊದಲ 10ರಲ್ಲಿನ 4 ರ್‍ಯಾಂಕ್‌ಗಳು ಸಹ ಕೇಂದ್ರಕ್ಕೆ ದೊರೆತಿವೆ. ಒಟ್ಟಾರೆ, 210 ರ್‍ಯಾಂಕ್‌ಗಳನ್ನು ಕೇಂದ್ರದ ಅಭ್ಯರ್ಥಿಗಳು ಪಡೆದಿದ್ದಾರೆ. ಹಿಂದಿನ ವರ್ಷ 170 ರ್‍ಯಾಂಕ್‌ಗಳನ್ನು ಇಲ್ಲಿನ ಅಭ್ಯರ್ಥಿಗಳು ಪಡೆದಿದ್ದರು.

ಚಂದ್ರಾಲೇಔಟ್‌ನಲ್ಲಿ ಈ ಸಂಸ್ಥೆ ಇದೆ. ಇಲ್ಲಿ ತರಬೇತಿ ಪಡೆದ ಕರ್ನಾಟಕದ 22 ಅಭ್ಯರ್ಥಿಗಳು ಈ ಬಾರಿ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ.

ಅಕ್ಷಯ್ ಸಿಂಹ ಅವರು 77ನೇ ರ್‍ಯಾಂಕ್ ಪಡೆದಿದ್ದಾರೆ. ಇವರಿಗೆ ಸಂಸ್ಥೆಯ ಸಂಸ್ಥಾಪಕ ವಿನಯಕುಮಾರ್ ಅವರು ಮಾರ್ಗದರ್ಶನ ನೀಡಿದ್ದರು. ಯತೀಶ್ 115ನೇ ರ್‍ಯಾಂಕ್, ಪ್ರಿಯಾಂಕಾ 121ನೇ ರ್‍ಯಾಂಕ್, ನಿಶ್ಚಯ ಪ್ರಸಾದ್ 130, ಶ್ರೀನಿವಾಸ್ ಎಂ.ಪಿ. 235ನೇ ರ್‍ಯಾಂಕ್ ಪಡೆದಿದ್ದಾರೆ.

ಅನಿರುದ್ಧ ಆರ್. ಗಂಗಾವರಂ (252), ಸುರಜ್ ಡಿ (255), ನೇತ್ರಾ ಮೇಟಿ (326), ಮೇಘಾ ಜೈನ್ (354), ಪ್ರಜ್ವಲ್ (367), ಸಾಗರ್ ಎ.ವಾಡಿ (385), ನಾಗರಗೋಜೆ ಶುಭಂ ಬಾಬುಸಾಹೇಬ್ (453), ಮಾಲಾಶ್ರೀ ಎಂ.ವಿ. (504), ಶಾಕೀರಅಹ್ಮದ ಎ ತೊಂಡಿಖಾನ (583), ಪ್ರಮೋದ್ ಆರಾಧ್ಯ (601), ಕೆ. ಧರ್ಮವೀರ ಚೌಹಾಣ್ (657), ಮಮತಾ ಜಿ (707), ಅಭಿಷೇಕ್ ಬಿ.ಎನ್.(708), ಕೆ. ಸೌರಭ್ (725), ಎಚ್. ಸಂತೋಷ (751) ರ್‍ಯಾಂಕ್‌ಗಳನ್ನು ಪಡೆದಿದ್ದಾರೆ.

ಕರ್ನಾಟಕ ಸರ್ಕಾರ
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
ಆಯುಕ್ತರ ಕಛೇರಿ, ಪಶುಪಾಲನಾ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024.
No. CAH/KLDA/AI/CONSUMABLES/Re-Tender/2021-22 Date: 24.09.2021
ಟೆಂಡರ್ ನೋಟಿಫಿಕೇಷನ್ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
2021–22ನೇ ಸಾಲಿನಲ್ಲಿ ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆಗೆ ಅವಶ್ಯವಿರುವ AI Consumables (Disposable Full arm AI Gloves & Universal Sheaths) ಸರಬರಾಜಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಎರಡು ವರ್ಷದ ಅವಧಿಗೆ ಟೆಂಡರನ್ನು ಕರೆಯಲಾಗಿದೆ. ಆಸಕ್ತಿಯುಳ್ಳ ಅರ್ಹ ಟೆಂಡರ್‌ದಾರರು ಅಂತರ್ಜಾಲ ವಿಳಾಸ https//eproc.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ಉಪ ನಿರ್ದೇಶಕರು, ಕೆ.ವಿ.ಎಸ್, ಹೆಬ್ಬಾಳ, ಬೆಂಗಳೂರು – 560024 ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು. ಪೂರ್ಣ ಟೆಂಡರ್ ದಾಖಲೆಯನ್ನು ಮೇಲಿನ ಅಂತರ್ಜಾಲ ವಿಳಾಸದಲ್ಲಿ ದಿನಾಂಕ: 24.09.2021 ರಿಂದ ವೀಕ್ಷಿಸಬಹುದಾಗಿದ್ದು, ಟೆಂಡರ್‌ದಾರರು ಅವಶ್ಯಕತೆಯಿರುವ ಪ್ರಮಾಣ ಪತ್ರಗಳನ್ನು e-procurement Platform ನಲ್ಲಿ ದಿನಾಂಕ : 24.09.2021 ರಿಂದ 04.10.2021 ರವರೆಗೆ ಸಂಜೆ 5.30 ಗಂಟೆಯೊಳಗೆ ಟೆಂಡರ್ ದಾಖಲಾತಿಗಳನ್ನು ಅಪ್‌ಲೋಡ್ ಮಾಡಬಹುದಾಗಿದೆ. ಟೆಂಡರ್‌ದಾರರು ಅಥವಾ ಟೆಂಡರ್‌ದಾರರಿಂದ ನಾಮನಿರ್ದೇಶನ ಹೊಂದಿದವರ ಸಮ್ಮುಖದಲ್ಲಿ ದಿನಾಂಕ: 11.10.2021 ರಂದು ಬೆಳಿಗ್ಗೆ 11.00 ಘಂಟೆಯ ತರುವಾಯ ಆಯುಕ್ತರವರ ಕಾರ್ಯಾಲಯ, ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ, ಪಶು ಪಾಲನಾ ಭವನ, ಬಳ್ಳಾರಿ ರಸ್ತೆ, ಹೆಬ್ಬಾಳ, ಬೆಂಗಳೂರು – 560024 ಇಲ್ಲಿ ಟೆಕ್ನಿಕಲ್ ಬಿಡ್‌ಗಳನ್ನು ತೆರೆಯಲಾಗುವುದು.
ಸಹಿ/–
ಉಪ ನಿರ್ದೇಶಕರು ಮತ್ತು ಸದಸ್ಯ ಕಾರ್ಯದರ್ಶಿಗಳು
ಟೆಂಡರ್ ಆಹ್ವಾನಿಸುವ ಪ್ರಾಧಿಕಾರ,
ಪಶುಪಾಲನಾ ಮತ್ತು ಪಶುವೈದ್ಯಕೀಯ ಸೇವಾ ಇಲಾಖೆ
DIPR/DDU/Zen/RO-1676/2021-22
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ, ಮಹದೇವಪುರ ವಿಭಾಗ,
ಬೆಂಗಳೂರು – 560048.
ಟೆಂಡರ್ ಅಧಿಸೂಚನೆ ಸಂಖ್ಯೆ: ಬೃಬೆಂಮಪಾ/ಕಾಅ/ಮವಿ/ಇ–ಪ್ರೊ/10/2021–22
ದಿನಾಂಕ: 24.09.2021
ತಿದ್ದುಪಡಿ ಟೆಂಡರ್ ಪ್ರಕಟಣೆ
ಈ ಮೂಲಕ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಮಹದೇವಪುರ ವಲಯದ ಮಹದೇವಪುರ ವಿಭಾಗ ವ್ಯಾಪ್ತಿಯಲ್ಲಿ 2020–21ನೇ ಸಾಲಿನ ರಾಜ್ಯ ಆಯವ್ಯಯದ ಕಂಡಿಕೆ ಸಂ: 205ರಲ್ಲಿ ಘೋಷಿಸಿರುವಂತೆ, ಬೃ.ಬೆಂ.ಮ.ಪಾ ವ್ಯಾಪ್ತಿಯ 110 ಹಳ್ಳಿಗಳ ರಸ್ತೆ ದುರಸ್ತಿ ಮತ್ತು ಅಭಿವೃದ್ಧಿ ಕಾರ್ಯಕ್ರಮದ ಅನುದಾನದಡಿ ಈ ಕಚೇರಿಯ ಟೆಂಡರ್ ಅಧಿಸೂಚನೆ ನಂ:ಬೃಬೆಂಮಪಾ/ಕಾಅ/ಮವಿ/ಇ–ಪ್ರೊ/10/2021–22, ದಿನಾಂಕ: 09.09.2021ರ ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು ತಾಂತ್ರಿಕ ಕಾರಣಗಳಿಂದ ಈ ಕೆಳಕಂಡಂತೆ ಮುಂದೂಡಲಾಗಿರುತ್ತದೆ.
ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ದಿನಾಂಕ 27.09.2021ರ ಸಂಜೆ 4:00 ಗಂಟೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಆಕ್ಷೇಪಣೆಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 30.09.2021ರ ಮಧ್ಯಾಹ್ನ 3:00 ಗಂಟೆಯವರೆಗೆ. (3) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ: 04.10.2021ರ ಮಧ್ಯಾಹ್ನ 3:00 ಗಂಟೆಗೆ ತೆರೆಯಲಾಗುವುದು (4) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 11.10.2021ರ ಸಂಜೆ 4:00 ಗಂಟೆಯವರೆಗೆ. (5) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12.10.2021ರ ಸಂಜೆ 4:30 ಗಂಟೆಗೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹದೇವಪುರ ವಿಭಾಗ
ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಚೇರಿ–1, ಘನತ್ಯಾಜ್ಯ ನಿರ್ವಹಣೆ–1,
ನೆಲ ಮಹಡಿ, ದಾಸಪ್ಪ ಆಸ್ಪತ್ರೆಯ ಹಿಂಭಾಗ ನರಸಿಂಹ ರಾಜ ಚೌಕ,
ಬೆಂಗಳೂರು–560 002.
ಸಂಖ್ಯೆ: ಕಾಪಾಅ–1/ಘತ್ಯಾನಿ/ಟೆಂಡರ್/02/2021–22 ದಿನಾಂಕ: 24.09.2021
ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಟೆಂಡರ್)
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕಾರ್ಯಪಾಲಕ ಅಭಿಯಂತರರು–1, ಘನ ತ್ಯಾಜ್ಯ ನಿರ್ವಹಣೆ ವಿಭಾಗ, ಬೃ.ಬೆಂ.ಮ.ಪಾಲಿಕೆ, ಬೆಂಗಳೂರು, ಇವರ ಪರವಾಗಿ ಅರ್ಹ ಬಿಡ್ಡರುದಾರರಿಂದ ಈ ಕೆಳಕಂಡ ಕಾಮಗಾರಿಗೆ ಬಿಡ್‌ಗಳನ್ನು ಆಹ್ವಾನಿಸಿದ್ದಾರೆ.

Name of the Work	Appropriate Amount put to bid (in ₹.)
Engineering, Supply, Construction, Installation and Commissioning of Domestic Hazardous Waste Disposal Plant of 10 ton per day capacity using Plasma Induced Heat based process at 2 (two) selected locations in BBMP Limits with 5 years of Operations & Maintenance of the plant (Extendable to 2 years)	Capex Rs.742 Lakhs and Opex Cost Rs.660/Ton

ಟೆಂಡರ್ ವೇಳಾಪಟ್ಟಿ: (1) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ದಿನಾಂಕ 29.09.2021ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ: 25.10.2021ರ ಸಂಜೆ 4:00 ಗಂಟೆಯವರೆಗೆ. (3) ಆಕ್ಷೇಪಣೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 07.10.2021ರ ಸಂಜೆ 4:00 ಗಂಟೆಯವರೆಗೆ. (4) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 11.10.2021ರ ಸಂಜೆ 4:00 ಗಂಟೆಗೆ ಮುಖ್ಯ ಅಭಿಯಂತರರ ಕಚೇರಿ, ಘನ ತ್ಯಾಜ್ಯ ನಿರ್ವಹಣೆ, ಅನೆಕ್ಸ್–2 ಕಟ್ಟಡ, ಕೊಠಡಿ ಸಂ.301, 3ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಕೇಂದ್ರ ಕಚೇರಿ, ನರಸಿಂಹ ರಾಜ ಚೌಕ, ಬೆಂಗಳೂರು–02 ಇಲ್ಲಿ ನಡೆಸಲಾಗುವುದು. (5) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 27.10.2021 ರಂದು ಸಂಜೆ 4:00 ಗಂಟೆಯ ನಂತರ ಅಥವಾ ಮುಂದಿನ ಕೆಲಸದ ದಿನದಂದು ತೆರೆಯಲಾಗುವುದು. (6) ಆರ್ಥಿಕ ಬಿಡ್ ತೆರೆಯುವುದನ್ನು ತಾಂತ್ರಿಕವಾಗಿ ಅರ್ಹರಾದ ಬಿಡ್ಡರುದಾರರಿಗೆ ತಿಳಿಸಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಚೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ https://eproc.karnataka.gov.in ನಲ್ಲಿ ಪಡೆದುಕೊಳ್ಳಬಹುದಾಗಿದೆ.
ಸಹಿ/– ಕಾರ್ಯಪಾಲಕ ಅಭಿಯಂತರರು–1, ಘನ ತ್ಯಾಜ್ಯ ನಿರ್ವಹಣೆ
ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

SAINIK SCHOOL KODAGU
(Under Ministry of Defence, Govt. of India)
PO Kudige Dist: Kodagu, Karnataka PIN: 571232
RECRUITMENT NOTIFICATION
Applications are invited for various vacancies at Sainik School Kodagu and the details are as follows:-

Sl. No.	Name of the Post	No. of Posts Type of Post	Age as on 01 OCT 2021	Category
1	TGT-Hindi	01 (Contractual)	21-35 Years	General
2	Counsellor	01 (Contractual)	21-35 Years	General
3	Craft Instructor	01 (Contractual)	21-35 Years	SC/ST
4	Band Master	01 (Contractual)	21-35 Years	General
5	Wardens (Male)	02 (Contractual)	18-50 Years	SC/ST-01 General-01
6	General Employees (Male)	04 (Regular)	18-50 Years	SC/ST-01 General-03

How to Apply. For detailed Notification including reservation criteria, salary and Application Form, visit School website **www.sainikschoolkodagu.edu.in** from **25 Sep 2021 (Saturday).** The School administration reserves the right to cancel any or all vacancies due to administrative reasons. Last date of receipt of filled in applications is **16 October 2021 (Saturday).**
PRINCIPAL

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ
"ಜ್ಞಾನ ಸಂಗಮ", ಬೆಳಗಾವಿ - 590 018,
ದೂರವಾಣಿ : 0831-2498100 ಫ್ಯಾಕ್ಸ್ : 0831-2405467.
Ref. No. VTU/BGM/SAP/CW4/T-520/21-22/2740 Date : 24-08-2021
ಟೆಂಡರ್ ಪ್ರಕಟಣೆ
ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರಿಂದ ಕೆಳಕಂಡ ಕೆಲಸಗಳಿಗೆ (ದ್ವಿ ಲಕೋಟೆ ಪದ್ಧತಿಯಲ್ಲಿ) ಇ–ಟೆಂಡರ್ ಮೂಲಕ ಮೊಹರ ಬಂದ ದರಖಾಸ್ತುಗಳನ್ನು ಅರ್ಹ ತಯಾರಕರು / ಪೂರೈಕೆದಾರರಿಂದ ಆಹ್ವಾನಿಸಲಾಗಿದೆ. ಕೆಲಸದ ಹೆಸರು : ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಮೆಕ್ಯಾನಿಕಲ್ ವಿಭಾಗ ಸ್ನಾತಕೋತ್ತರ ಕೇಂದ್ರ ಬೆಳಗಾವಿಗೆ ಟೂಲ್ಸ್ ಮೆಜರಿಂಗ್ ಇನ್ಸ್ಟ್ರುಮೆಂಟ್ ಹಾಗೂ ಯಂತ್ರೋಪಕರಣಗಳನ್ನು ಪೂರೈಸುವುದು ಮತ್ತು ಅನುಸ್ಥಾಪನಗೊಳಿಸುವುದು.
1) ವಿವರಣೆ : ಷೆಡ್ಯೂಲ್ – 1. ಟೆಂಡರ್‌ಗಿಟ್ಟ ಮೊತ್ತ : ರೂ. 3,03,000/–. ಮುಂಗಡ ಠೇವಣಿ : 7,600/–. 2) ವಿವರಣೆ : ಷೆಡ್ಯೂಲ್ – 2. ಟೆಂಡರ್‌ಗಿಟ್ಟ ಮೊತ್ತ : ರೂ. 5,43,700/–. ಮುಂಗಡ ಠೇವಣಿ : 13,600/–. 3) ವಿವರಣೆ : ಷೆಡ್ಯೂಲ್ – 3. ಟೆಂಡರ್‌ಗಿಟ್ಟ ಮೊತ್ತ : ರೂ. 1,36,300/–. ಮುಂಗಡ ಠೇವಣಿ : 3,500/–.
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 08–10–2021 ರ ಮಧ್ಯಾಹ್ನ 2.30 ಗಂಟೆವರೆಗೆ. ಟೆಂಡರ್ ತೆರೆಯುವ ದಿನಾಂಕ : 11–10–2021 ರ ಬೆಳಿಗ್ಗೆ 10.00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ www.eproc.karnataka.gov.in ಮತ್ತು www.vtu.ac.in ನೋಡಬಹುದು.
ಡಿಐಪಿಆರ್/ಬೆಳಗಾವಿ/808/ಮಣಿಪಾಲ್/2021–22 ಸಹಿ/– ಕುಲಸಚಿವರು.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.033/ಪಿಬಿ/ಗುತ್ತಿಗೆ/8443/2021–22/3164
ದಿನಾಂಕ: 24–09–2021
ಇ–ಟೆಂಡರ್ ಪ್ರಕಟಣೆ
ದಿನಾಂಕ : 24–09–2021ರಂದು ಇ–ಪ್ರಕ್ಯೂರ್‌ಮೆಂಟ್ ಮೂಲಕ, ಕಾಮಗಾರಿಗಳ ಇಂಡೆಂಟ್ ಸಂಖ್ಯೆ : 141840ರ ಕಾಮಗಾರಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಇ–ಪ್ರಕ್ಯೂರ್‌ಮೆಂಟ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 11–10–2021 (ಸಾಯಂಕಾಲ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಇಲಾಖೆಯ ವೆಬ್‌ಸೈಟ್ http://www.eproc.karnataka.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– (ಸತೀಶ. ಹೆಚ್. ಜಹಾಗೀರದಾರ)
ಕಾರ್ಯನಿರ್ವಾಹಕ ಇಂಜನೀಯರರು,
ಲೋಕೋಪಯೋಗಿ ಇಲಾಖೆ ವಿಭಾಗ,
ಹಾವೇರಿ.
ವಾಸಾಸಂಇ/ಹಾವೇರಿ/ಎಂಸಿಎ/257/2021–22

KSSIDC **ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ನಿಯಮಿತ**
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಅಧೀಕ್ಷಕ ಅಭಿಯಂತರರು, ಕೇಂದ್ರ ಕಛೇರಿ, ಕೈಗಾರಿಕಾ ವಸಾಹತು, ರಾಜಾಜಿನಗರ, ಬೆಂಗಳೂರು–10.
Email:kssidcho@vsnl.com, Phone : 23407011-25
ಸಂಖ್ಯೆ:ಇಂಜಿ:ಅ.ಅ:ಇಪಿ–62:ಡಿಪಿಆರ್:ಹರಿಹರಪುರ:2021–22 ದಿನಾಂಕ:22–09–2021
ಅಲ್ಪಾವಧಿ ಟೆಂಡರ್ ಪ್ರಕಟಣೆ
(ಪ್ರಸ್ತಾವನೆ ಸಲ್ಲಿಸಲು ಕೋರಿಕೆ) ಎರಡು ಲಕೋಟೆ ಪದ್ಧತಿ
(ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)
ಅಧೀಕ್ಷಕ ಅಭಿಯಂತರರು ವ್ಯವಸ್ಥಾಪಕ ನಿರ್ದೇಶಕರ ಪರವಾಗಿ ಇ–ಪ್ರಕ್ಯೂರ್‌ಮೆಂಟ್ ಮುಖಾಂತರ ಹರಿಹರಪುರ, ಕೊಪ್ಪ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ ಇಲ್ಲಿ ಕೈಗಾರಿಕಾ ವಸಾಹತು ಸ್ಥಾಪಿಸುವ ಸಲುವಾಗಿ ವಿಸ್ತೃತ ಯೋಜನಾ ವರಧಿಯನ್ನು ಸಿದ್ದಪಡಿಸಲು (RFP) ನುರಿತ ಸಲಹೆಗಾರರನ್ನು ನೇಮಿಸಿಕೊಳ್ಳಲು ಉದ್ದೇಶಿಸಲಾಗಿದ್ದು, ಈ ಬಗ್ಗೆ ಟೆಂಡರ್ ಪ್ರಕಟಣೆಯನ್ನು ಸಂಖ್ಯೆ:ಇಂಜಿ:ಅ.ಅ:ಇಪಿ–62:ಡಿಪಿಆರ್:ಹರಿಹರಪುರ:2021–22 ದಿನಾಂಕ: 22–09–2021 ರಂತೆ ಹೊರಡಿಸಲಾಗಿರುತ್ತದೆ. ಭದ್ರತಾ ಠೇವಣಿ ಮೊತ್ತ ರೂ. 10,000.00, ಟೆಂಡರ್ ದಸ್ತಾವೇಜುಗಳನ್ನು (RFP Documents) ಕರ್ನಾಟಕ ಸರ್ಕಾರದ ಇ–ಪೋರ್ಟಲ್ https://eproc.Karnataka.gov.in (IC-Department of Commerce and Industries) ಮುಖಾಂತರ ದಿನಾಂಕ: 24–09–2021 ರಿಂದ ಇ–ಪೋರ್ಟಲ್ ಮುಖಾಂತರ ಪಡೆದುಕೊಳ್ಳಬಹುದು.
ಟೆಂಡರ್‌ನ ಕಾಲಮಿತಿ ವಿವರಗಳು: • ಅಧೀಕ್ಷಕ ಅಭಿಯಂತರರ ಕಛೇರಿಯಲ್ಲಿ ಪೂರ್ವಬಾವಿ ಸಭೆ ದಿನಾಂಕ: 01–10–2021, 15.00 ಗಂಟೆಗೆ. • ಟೆಂಡರ್ ದಸ್ತಾವೇಜುಗಳನ್ನು ಸಲ್ಲಿಸುವ ಕೊನೆಯ ದಿನಾಂಕ: 05–10–2021, 16.00 ಗಂಟೆ. • ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 07–10–2021, 11.00 ಗಂಟೆ, • ತಾಂತ್ರಿಕ ಬಿಡ್‌ಗಳ ಪ್ರಸ್ತಾವನೆ ಅನುಮೋದನೆ ನಂತರ ಆರ್ಥಿಕ ಬಿಡ್‌ಗಳನ್ನು ಇ–ಪೋರ್ಟಲ್ ಮುಖಾಂತರ ತೆರೆಯಲಾಗುವುದು. • ಹೆಚ್ಚಿನ ವಿವರಗಳಿಗಾಗಿ ಈ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.
DIPR/DDU/AAPL/1672/2021-22 ಸಹಿ/– ಅಧೀಕ್ಷಕ ಅಭಿಯಂತರರು
ಕೋವಿಡ್-19. ಆತಂಕ ಬೇಡ; ಮುನ್ನೆಚ್ಚರಿಕೆ ಇರಲಿ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಕಾರ್ಯ ಯೋಜನೆ, ಧಾರವಾಡ–580 008
ದೂರವಾಣಿ : 0836–2748522 ಇ–ಮೇಲ್ : cfwpsdwd@aranya.gov.in
ಸಂ: ಎ2/ಬಿಜಿಟಿ/ಕಾಂಪಾ/ಗಡಿ ಮೋಜಣಿ/ಇ–ಟೆಂಡರ/ಸಿಆರ್– /2021–22
ಧಾರವಾಡ ದಿನಾಂಕ : 23–09–2021
ಇ–ಟೆಂಡರ್ ಪ್ರಕಟಣೆ /2021–22 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)
ಉಪ ಅರಣ್ಯ ಸಂರಕ್ಷಣಾಧಿಕಾರಿ, ಕಾರ್ಯಯೋಜನೆ, ಧಾರವಾಡ ಇವರ ಕಚೇರಿಯಲ್ಲಿ ಪ್ರಸಕ್ತ 2021–22ನೇ ಸಾಲಿನಲ್ಲಿ ಹೆಸರು ನೋಂದಾಯಿಸಿದ ಅರ್ಹ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಿಂದ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಈ ಕೆಳಗೆ ನಮೂದಿಸಿದ ಕೆಲಸಕ್ಕೆ "ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಆಡಳಿತ ಕೇಂದ್ರ ಅಥವಾ ವೆಬ್‌ಸೈಟ್: www.eproc.karnataka.gov.in ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಬಹುದು. ಹೆಚ್ಚಿನ ವಿವರಗಳಿಗೆ ಈ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಮಾಹಿತಿ ಪಡೆಯಬಹುದು.
2021–22ನೇ ಸಾಲಿಗೆ ಗದಗ ವಿಭಾಗದ ವ್ಯಾಪ್ತಿಯಲ್ಲಿ ಬರುವ ಶಿರಹಟ್ಟಿ ವಲಯದ ವಿವಿಧ ಹಳ್ಳಿಯಲ್ಲಿ ಕಾಯ್ದಿಟ್ಟ / ರಕ್ಷಿತ ಅರಣ್ಯ ಪ್ರದೇಶದ ಗಡಿ ಮೋಜಣಿ ಮಾಡಿ ಸದರಿ ಸ್ಥಳಗಳಲ್ಲಿ 1.50ಮೀ. X 0.25ಮೀ. X 0.25ಮೀ. ಅಳತೆಯ ಆರ್.ಸಿ.ಸಿ. ಪಿಲ್ಲರ್‌ಗಳನ್ನು ತಯಾರಿಸಿಕೊಂಡು ಅಳವಡಿಸುವುದು ಹಾಗೂ ಸದರಿ ಆರ್.ಸಿ.ಸಿ. ಪಿಲ್ಲರಿನ ಭೂಮಿಯ ಮೇಲ್ಭಾಗದಲ್ಲಿ ಇರುವ ಎಲ್ಲಾ ಬದಿಗಳಿಗೆ ಬಣ್ಣ ಹಚ್ಚುವ ಕಾಮಗಾರಿಗೆ ವಿವರ ಈ ಕೆಳಗಿನಂತೆ,
1) ಒಟ್ಟು 41.60 ಕಿ.ಮೀ. ಹಾಗೂ 292 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 45,05,079.00/– ಇಎಂಡಿ ಹಣ (2%) ರೂ. 90,102.00/–.
2) ಒಟ್ಟು 41.75 ಕಿ.ಮೀ. ಹಾಗೂ 293 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 45,20,566.00/– ಇಎಂಡಿ ಹಣ (2%) ರೂ. 90,411.00/–.
3) ಒಟ್ಟು 42.25 ಕಿ.ಮೀ. ಹಾಗೂ 296 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 45,67,415.00/– ಇಎಂಡಿ ಹಣ (2%) ರೂ. 91,348.00/–.
4) ಒಟ್ಟು 39.80 ಕಿ.ಮೀ. ಹಾಗೂ 280 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 43,19,237.00/– ಇಎಂಡಿ ಹಣ (2%) ರೂ. 86,385.00/–.
5) ಒಟ್ಟು 42.45 ಕಿ.ಮೀ. ಹಾಗೂ 299 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 46,11,934.00/– ಇಎಂಡಿ ಹಣ (2%) ರೂ. 92,239.00/–.
6) ಒಟ್ಟು 42.00 ಕಿ.ಮೀ. ಹಾಗೂ 294 ಆರ್.ಸಿ.ಸಿ. ಪಿಲ್ಲರ್‌ಗಳು ಅಂದಾಜು ಮೊತ್ತ ರೂ. 45,36,829.00/– ಇಎಂಡಿ ಹಣ (2%) ರೂ. 90,737.00/–.
ವಿಶೇಷ ಸೂಚನೆ :– ಅರ್ಹ ಗುತ್ತಿಗೆದಾರರು ಮೋಜಣಿ ಮಾಡಿ ಪ್ರತಿ ಕಿ.ಮೀ. ಗೆ 7 (ಏಳು) ರಂತೆ ಆರ್.ಸಿ.ಸಿ. ಪಿಲ್ಲರ್‌ಗಳನ್ನು ತಯಾರಿಸಿಕೊಂಡು ಅಳವಡಿಸತಕ್ಕದ್ದು. ಸಂಕ್ಷಿಪ್ತ ಇ–ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ಟೆಂಡರದಾರರು ಟೆಂಡರ್ ಫಾರ್ಮಗಳನ್ನು ದಿನಾಂಕ : 09–10–2021ರ ತನಕ ವೆಬ್‌ಸೈಟ್ ಮುಖಾಂತರ ಡೌನಲೋಡ್ ಮಾಡಿಕೊಳ್ಳಬಹುದು ಹಾಗೂ ದಿನಾಂಕ : 10–10–2021ರ ಮಧ್ಯಾಹ್ನ 3:00 ಘಂಟೆವರೆಗೆ ವೆಬ್‌ಸೈಟನಲ್ಲಿ ಟೆಂಡರ್ ಸಲ್ಲಿಸಬಹುದು. ತಾಂತ್ರಿಕ ಬಿಡ್‌ಗಳನ್ನು ದಿನಾಂಕ : 11–10–2021 ರಂದು ಮಧ್ಯಾಹ್ನ 3:30 ಘಂಟೆಯ ನಂತರ ಹಾಗೂ ಆರ್ಥಿಕ ಬಿಡ್‌ಗಳನ್ನು ದಿನಾಂಕ : 13–10–2021 ರಂದು ಮಧ್ಯಾಹ್ನ 12:00 ಘಂಟೆಯ ನಂತರ ತೆರೆಯಲಾಗುವುದು. ಒಂದು ವೇಳೆ ಆ ದಿವಸವು ಆಕಸ್ಮಿಕವಾಗಿ ಸರಕಾರ ರಜೆ ಎಂದು ಘೋಷಿಸಲ್ಪಟ್ಟಲ್ಲಿ ಅಥವಾ ಏನಾದರೂ ತಾಂತ್ರಿಕ ಸಮಸ್ಯೆಗಳು ಬಂದಲ್ಲಿ ಮರು ಕಚೇರಿ ಕೆಲಸದ ದಿನದಂದು ತೆರೆಯಲಾಗುವದು. ಟೆಂಡರ ಪ್ರಕ್ರಿಯೆಯಲ್ಲಿ ಯಾರು ಗುತ್ತಿಗೆದಾರರು ಭಾಗವಹಿಸದಿದ್ದಲ್ಲಿ, ಮರು ಟೆಂಡರ ದಿನಾಂಕ : 17–10–2021ರವರಗೆ ಮುಂದುವರೆಸಲಾಗುವುದು.
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ,
ಅರಣ್ಯ ಸಂರಕ್ಷಣಾಧಿಕಾರಿಗಳು, ಕಾರ್ಯಯೋಜನೆ,
ಇವರ ತಾಂತ್ರಿಕ ಸಹಾಯಕರು, ಧಾರವಾಡ.
ವಾಸಾಸಂಇ/ಧಾ/ಎಂಸಿಎ/531/2021–22

ನವೋದಯ ವಿದ್ಯಾಲಯ ಸಮಿತಿ
ಶಿಕ್ಷಣ ಸಚಿವಾಲಯದ ಅಡಿಯಲ್ಲಿ ಒಂದು ಸ್ವಾಯತ್ತ ಸಂಸ್ಥೆ
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಭಾರತ ಸರಕಾರ
Azadi Ka Amrit Mahotsav

2022-23ನೇ ಸಾಲಿನಲ್ಲಿ ಆಯ್ಕೆ ಪರೀಕ್ಷೆಯ ಮೂಲಕ
ಜವಾಹರ ನವೋದಯ ವಿದ್ಯಾಲಯಗಳಲ್ಲಿ 6ನೇ ತರಗತಿಗೆ ಪ್ರವೇಶ ಪರೀಕ್ಷೆ

ಆನ್ ಲೈನ್ ಅರ್ಜಿ ಸಲ್ಲಿಕೆಗೆ ವಿಂಡೋ ಈಗ ತೆರೆದಿರುತ್ತದೆ
ಪರೀಕ್ಷೆಯ ದಿನಾಂಕ 30.04.2022
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 30.11.2021
ಅಭ್ಯರ್ಥಿಗಳಿಗೆ ಅರ್ಹತೆಗಳು
- ಜನವಿಗಳು ಕಾರ್ಯ ನಿರ್ವಹಿಸುತ್ತಿರುವ ಜಿಲ್ಲೆಗಳ ಸರ್ಕಾರಿ/ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಗಳಲ್ಲಿ 2021-22 ನೇ ಸಾಲಿನಲ್ಲಿ 5ನೇ ತರಗತಿಯಲ್ಲಿ ಓದುತ್ತಿರಬೇಕು
- ಸರ್ಕಾರ/ಸರ್ಕಾರದಿಂದ ಮಾನ್ಯತೆ ಪಡೆದ ಶಾಲೆಯಲ್ಲಿ 3 ಮತ್ತು 4 ನೇ ತರಗತಿಗಳಲ್ಲಿ ಪೂರ್ಣ ಶೈಕ್ಷಣಿಕ ವರ್ಷ ಮುಗಿಸಿ ಉತ್ತೀರ್ಣರಾಗಿರಬೇಕು ಮತ್ತು 01.05.2009 ರಿಂದ 30.04.2013 ರೊಳಗೆ (ಎರಡೂ ದಿನಗಳು ಸೇರಿ) ಜನಿಸಿರಬೇಕು.

ಪ್ರಮುಖ ಅಂಶಗಳು
- ಪ್ರತಿಯೊಂದು ಜಿಲ್ಲೆಯಲ್ಲಿ ಸಹಶಿಕ್ಷಣ ವಸತಿ ಶಾಲೆಗಳು
- ಬಾಲಕ ಮತ್ತು ಬಾಲಕಿಯರಿಗೆ ಪ್ರತ್ಯೇಕ ವಸತಿ ನಿಲಯಗಳು
- ಉಚಿತ ಶಿಕ್ಷಣ, ಊಟ ಮತ್ತು ವಸತಿ
- ವಲಸೆ ಯೋಜನೆಯ ಮೂಲಕ ವ್ಯಾಪಕ ಸಾಂಸ್ಕೃತಿಕ ವಿನಿಮಯ.

ಸಾಧನೆಗಳು
- JEE MAIN-2020 : 8237 ವಿದ್ಯಾರ್ಥಿಗಳಲ್ಲಿ 3628 (44.04%) ಅರ್ಹರಾಗಿದ್ದಾರೆ.
- JEE Advanced-2020: 3628 ವಿದ್ಯಾರ್ಥಿಗಳಲ್ಲಿ 1076 (29.66%) ಅರ್ಹರಾಗಿದ್ದಾರೆ.
- NEET-2020: 13332 ವಿದ್ಯಾರ್ಥಿಗಳಲ್ಲಿ 11027 (82.71%) ಅರ್ಹರಾಗಿದ್ದಾರೆ.
- ಬೋರ್ಡ್ ತರಗತಿಗಳ ಉತ್ತೀರ್ಣತಾ % (2020-21) : X : 99.99% ಮತ್ತು XII : 99.94%

ಹೆಚ್ಚಿನ ವಿವರಗಳಿಗಾಗಿ ಮತ್ತು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಲು ದಯವಿಟ್ಟು ಭೇಟಿ ನೀಡಿ: www.navodaya.gov.in
ಪ್ರಕಟಣೆ ನೀಡಿದ್ದು : ನವೋದಯ ವಿದ್ಯಾಲಯ ಸಮಿತಿ

ಮರಿ ಮೊಮ್ಮಗನ ಆಗಮನ...

ನಟ ಹಾಗೂ ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ–ರೇವತಿ ದಂಪತಿಗೆ ಶುಕ್ರವಾರ ಬೆಂಗಳೂರಿನ ಜೆ.ಪಿ. ನಗರದ ಆಸ್ಟರ್ ಆರ್.ವಿ. ಆಸ್ಪತ್ರೆಯಲ್ಲಿ ಗಂಡು ಮಗು ಜನಿಸಿದ್ದು, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಅವರು ಮರಿಮೊಮ್ಮಗನಿಗೆ ಹರಸಿದರು

-ಪ್ರಜಾವಾಣಿ ಚಿತ್ರ

ಮೀಸಲಾತಿ ಹೋರಾಟ ವಿರೋಧಿಸುವವರ ವಿರುದ್ಧ ಪಂಚಮಸಾಲಿ ಶ್ರೀ ಗುಡುಗು

‘ಇತರರಂತೆ ಹಣ ಪಡೆದು ಹಿಂದೆ ಸರಿದಿಲ್ಲ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ 2ಎ ಮೀಸಲಾತಿಗೆ ಆಗ್ರಹಿಸಿ ನಡೆಸುತ್ತಿರುವ ಹೋರಾಟ ಮತ್ತು ಅದಕ್ಕೆ ಸಿಗುತ್ತಿರುವ ಬೆಂಬಲವನ್ನು ಸಹಿಸದ ಕೆಲವರು ಹಲವು ರೀತಿಯಲ್ಲಿ ತೊಂದರೆ ಕೊಡುತ್ತಿದ್ದಾರೆ’ ಎಂದು ಕೂಡಲಸಂಗಮ ಲಿಂಗಾಯತ ಪಂಚಮಸಾಲಿ ಪೀಠದ ಬಸವ ಜಯಮೃತ್ಯುಂಜಯ ಸ್ವಾಮೀಜಿ ಯಾರ ಹೆಸರನ್ನೂ ಪ್ರಸ್ತಾಪಿಸದೆ ಆರೋಪಿಸಿದರು.

ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಮಹಾಸಭಾ ಜಿಲ್ಲಾ ಘಟಕ ನಗರದಲ್ಲಿ ಶುಕ್ರವಾರ ಆಯೋಜಿಸಿದ್ದ ‘ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್’ನಲ್ಲಿ ಅವರು ಮಾತನಾಡಿದರು.

‘ಬೇರೆಯವರಂತೆ ಹಣ, ಕಾರು ಪಡೆದು ಹೋರಾಟದಿಂದ ಹಿಂದೆ ಸರಿದಿಲ್ಲ. ಸಮಾಜ ಒಗ್ಗೂಡಿಸಲು ಶ್ರಮಿಸುತ್ತಿದ್ದೇನೆ. ಕೆಲವರು ಸಮಾಜವನ್ನು ಒಡೆಯಲು ಮುಂದಾಗಿದ್ದಾರೆ. ಹೋರಾಟ ಹತ್ತಿಕ್ಕಲು ಯಾರಿಂದಲೂ ಸಾಧ್ಯವಿಲ್ಲ’ ಎಂದು ಗುಡುಗಿದರು.

‘ರಾಜಕಾರಣಿಗಳು ಮತ್ತು ಸ್ವಾಮೀಜಿಗಳ ಬೆಳವಣಿಗೆ ಸಹಿಸದವರೂ ನಮ್ಮಲ್ಲಿದ್ದಾರೆ. ನಾಯಕರಾದ ಬಸನಗೌಡ ಪಾಟೀಲ ಯತ್ನಾಳ, ವಿಜಯಾನಂದ ಕಾಶಪ್ಪನವರ ಹೀಗೆ... ಯಾರ ಮೇಲೆ ಸಿಟ್ಟಿದ್ದರೂ ಅವರ ವಿರುದ್ಧ ಚುನಾವಣೆಯಲ್ಲಿ ನಿಂತು ಗೆಲ್ಲಲಿ’ ಎಂದು ಸವಾಲೆಸೆದರು.

‘ಆಗ್ರಹ ಆಗ್ರಹ ಪಂಚಮಸಾಲಿಗಳ ಸತ್ಯಾಗ್ರಹ’ ಘೋಷಣೆಯೊಂದಿಗೆ ಅ.1ರಿಂದ 5ನೇ ಹಂತದ ಚಳವಳಿ ನಡೆಸುತ್ತೇವೆ. ಸಮಾಜದವರು ಮಕ್ಕಳನ್ನೂ ಜೊತೆಯಲ್ಲಿ ಬೆಂಗಳೂರಿಗೆ ಕರೆದುಕೊಂಡು ಬರಬೇಕು’ ಎಂದು ಕರೆ ನೀಡಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ, ಮುಖಂಡರಾದ ಎ.ಬಿ. ಪಾಟೀಲ, ಎಚ್.ಎಸ್. ಶಿವಶಂಕರ್, ವೀಣಾ ಕಾಶಪ್ಪನವರ, ರೋಹಿಣಿ ಪಾಟೀಲ, ದಿನೇಶ ಪಾಟೀಲ, ಮಲ್ಲೇಶ ಪಾಲ್ಗೊಂಡಿದ್ದರು.

ಪಂಚಮಸಾಲಿ ಮೀಸಲು: ವರದಿ ಬಳಿಕ ಕ್ರಮ



ಬಸವರಾಜ ಬೊಮ್ಮಾಯಿ

ಬೆಂಗಳೂರು: ‘ಪಂಚಮಸಾಲಿ ಸಮುದಾಯಕ್ಕೆ 2 ಎ ಮೀಸಲಾತಿ ನೀಡುವ ವಿಷಯಕ್ಕೆ ಸಂಬಂಧಿಸಿದಂತೆ ಹಿಂದುಳಿದ ವರ್ಗಗಳ ಶಾಶ್ವತ ಆಯೋಗ ವರದಿ ನೀಡಿದ ನಂತರ ಕ್ರಮ ಕೈಗೊಳ್ಳಲಾಗುವುದು’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

ವಿಧಾನಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಬಿಜೆಪಿಯ ಬಸನಗೌಡ ಪಾಟೀಲ ಯತ್ನಾಳ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ, ‘ಪಂಚಮಸಾಲಿ ಸಮಯದಾಯ ಅಲ್ಲದೆ 15 ಸಮುದಾಯಗಳು ಮೀಸಲಾತಿ ಬಗ್ಗೆ ಬೇಡಿಕೆ ಇಟ್ಟಿವೆ. ಸಮುದಾಯದ ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿಯ ಸಮೀಕ್ಷೆ ನಡೆಸಬೇಕಿದೆ. ಈ ಕೆಲಸವನ್ನು ಆಯೋಗ ಮಾಡುತ್ತಿದೆ. ಮರಾಠರಿಗೆ ಮೀಸಲಾತಿ ನೀಡುವಾಗ ಅಲ್ಲಿನ ಸರ್ಕಾರ ಈ ಅಂಶಗಳನ್ನು ಪರಿಗಣಿಸಲಿಲ್ಲ. ಹೀಗಾಗಿ, ಸುಪ್ರೀಂ ಕೋರ್ಟ್‌ನಲ್ಲಿ ಸೋಲಾಯಿತು. ಏಕಾಏಕಿ ಮೀಸಲಾತಿ ನೀಡಿದರೆ ಸಮಸ್ಯೆ ಸೃಷ್ಟಿಯಾಗುತ್ತದೆ’ ಎಂದರು.

‘ವಾರದೊಳಗೆ ಮಹತ್ವದ ಬದಲಾವಣೆ’

ಬಸನಗೌಡ ಪಾಟೀಲ ಯತ್ನಾಳ

‘ರಾಜ್ಯದಲ್ಲಿ ವಾರದೊಳಗೆ ಮಹತ್ವದ ಬದಲಾವಣೆಯಾಗಲಿದೆ. ಮಹತ್ವದ ನಿರ್ಧಾರವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತೆಗೆದುಕೊಳ್ಳಲಿದ್ದಾರೆ’ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ತಿಳಿಸಿದರು.

ಇಲ್ಲಿ ಶುಕ್ರವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ’ಬೊಮ್ಮಾಯಿ ಅವರು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ನೆರಳಲ್ಲ. ವಾರದಲ್ಲಿ ಅವರು ಕೈಗೊಳ್ಳಲಿರುವ ಕ್ರಮವು ಅವರು ಮಾಜಿ ಮುಖ್ಯಮಂತ್ರಿಯ ನೆರಳಿನಲ್ಲಿ ಇಲ್ಲ ಎನ್ನುವುದನ್ನು ಸಾಧಿಸಲಿದೆ. ಕಾದು ನೋಡಿ’ ಎಂದು ಹೇಳಿದರು.

‘ಲಿಂಗಾಯತ ಪಂಚಮಸಾಲಿ ಸಮಾಜಕ್ಕೆ ಪ್ರವರ್ಗ 2ಎ ಮೀಸಲಾತಿಗೆ ಹೋರಾಡುತ್ತಿರುವ ಬಸವ ಜಯಮೃತ್ಯುಂಜಯ ಸ್ವಾಮೀಜಿ ಅವರಿಂದ ಕೂಡಲಸಂಗಮದ ಮಠ ಕಸಿದುಕೊಳ್ಳುವ, ಅಲ್ಲಿಗೆ ಬೇರೊಬ್ಬರನ್ನು ತಂದು ಕೂರಿಸುವುದಕ್ಕೂ ಪ್ರಯತ್ನಗಳು ನಡೆದಿವೆ’ ಎಂದು ಆರೋಪಿಸಿದರು.

ನ್ಯಾ.ಸದಾಶಿವ ವರದಿ ವಿರುದ್ಧ ಮನವಿ

ಬೆಂಗಳೂರು: ನ್ಯಾಯಮೂರ್ತಿ ಎ.ಜೆ. ಸದಾಶಿವ ಆಯೋಗದ ವರದಿಯನ್ನು ಏಕಪಕ್ಷೀಯವಾಗಿ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡದಂತೆ ಒತ್ತಡ ಹೇರಬೇಕು ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಭೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ನೇತೃತ್ವದ ನಿಯೋಗ ಮನವಿ ಸಲ್ಲಿಸಿತು.

‘ಕರ್ನಾಟಕ ಪರಿಶಿಷ್ಟ ಜಾತಿಗಳ ಪಟ್ಟಿಯಲ್ಲಿರುವ ಯಾವುದೇ ಜಾತಿಯನ್ನು ಪಟ್ಟಿಯಿಂದ ಕೈ ಬಿಡುವ ಪ್ರಸ್ತಾವನೆ ಇಲ್ಲ ಎಂದು ರಾಷ್ಟ್ರೀಯ ಪರಿಶಿಷ್ಟ ಜಾತಿಗಳ ಆಯೋಗಕ್ಕೆ ರಾಜ್ಯ ಸರ್ಕಾರ ತಿಳಿಸಬೇಕು. ಈ ಎರಡೂ ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು’ ಎಂದು ಸಿದ್ದರಾಮಯ್ಯ ಅವರಿಗೆ ನಿಯೋಗ ಮನವಿ ಮಾಡಿತು.

ದೆಹಲಿ: ನ್ಯಾಯಾಲಯದಲ್ಲಿ ಗುಂಡಿನ ದಾಳಿ

ರೌಡಿ ಗೋಗಿ ಸೇರಿ ಮೂವರ ಹತ್ಯೆ

ಪ್ರಜಾವಾಣಿ ವಾರ್ತೆ

ನವದೆಹಲಿ: ವಕೀಲರ ವೇಷದಲ್ಲಿದ್ದ ದುಷ್ಕರ್ಮಿಗಳಿಬ್ಬರು, ವಿಚಾರಣೆಗಾಗಿ ಭಾರಿ ಭದ್ರತೆಯಲ್ಲಿ ಬಂದಿದ್ದ ಕುಖ್ಯಾತ ರೌಡಿಯನ್ನು ಗುಂಡಿಟ್ಟು ಸಾಯಿಸಿ, ಬಳಿಕ ಪೊಲೀಸರ ದಾಳಿಯಲ್ಲಿ ಸಾವಿಗೀಡಾಗಿರುವ ಘಟನೆ ಇಲ್ಲಿನ ರೋಹಿಣಿ ಪ್ರದೇಶದ ಜಿಲ್ಲಾ ನ್ಯಾಯಾಲಯದಲ್ಲಿ ಶುಕ್ರವಾರ ಮಧ್ಯಾಹ್ನ ನಡೆದಿದೆ.

ದರೋಡೆ, ಸುಲಿಗೆ, ಕೊಲೆ ಮತ್ತಿತರ ಅಪರಾಧ ಪ್ರಕರಣಗಳಲ್ಲಿ ಬಂಧನಕ್ಕೆ ಒಳಗಾಗಿದ್ದ ಜಿತೇಂದರ್ ಮಾನ್ ಗೋಗಿ ಹತ್ಯೆಗೀಡಾದ ರೌಡಿ. ಪ್ರಕರಣವೊಂದರ ವಿಚಾರಣೆಗಾಗಿ ಪೊಲೀಸ್ ಭದ್ರತೆಯಲ್ಲಿ ಮಧ್ಯಾಹ್ನ ಕೋರ್ಟ್ ಹಾಲ್‌ನೊಳಗೆ ಕರೆದೊಯ್ಯುತ್ತಿದ್ದಂತೆ, ದಿಢೀರ್ ದಾಳಿ ನಡೆದಿದೆ.

ಭದ್ರತೆಗೆ ನಿಯುಕ್ತರಾಗಿದ್ದ ಪೊಲೀಸರು ತಕ್ಷಣ ನಡೆಸಿದ ಪ್ರತಿದಾಳಿಯಲ್ಲಿ ಇಬ್ಬರು ದಾಳಿಕೋರರು ಸಾವಿಗೀಡಾದರು. ಅವರನ್ನು ರಾಹುಲ್ ಹಾಗೂ ಮೋರಿಸ್ ಎಂದು ಗುರುತಿಸಲಾಗಿದೆ.

‘ಮೋಸ್ಟ್ ವಾಂಟೆಡ್’ ಕ್ರಿಮಿನಲ್ ಜಿತೇಂದರ್ ಗೋಗಿಯ ವಿರೋಧಿಯಾದ ಟಿಲ್ಲು ತಾಜ್‌ಪೂರಿಯಾನ ಗ್ಯಾಂಗ್‌ನ ಸದಸ್ಯರೇ ಈ ದಾಳಿ ನಡೆಸಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶಂಕಿಸಿದ್ದಾರೆ.

ಕೋರ್ಟ್ ಹಾಲ್‌ನಲ್ಲಿ ಹಲವಾರು ಬಾರಿ ಗುಂಡಿನ ಶಬ್ದ ಕೇಳುತ್ತಿದ್ದಂತೆಯೇ, ಅಲ್ಲಿದ್ದ ವಕೀಲರು, ಕಕ್ಷಿದಾರರು ಹಾಗೂ ಸಿಬ್ಬಂದಿ ರಕ್ಷಣೆಗಾಗಿ ಹೊರಗೆ ಓಡಿ ಬರಲಾರಂಭಿಸಿದರು. ದಾಳಿಕೋರರು ಗುಂಡು ಹಾರಿಸಿದ್ದರಿಂದ ಗೋಗಿ ರಕ್ತದ ಮಡುವಿನಲ್ಲಿ ಬಿದ್ದ.

ಕೋರ್ಟ್ ಹಾಲ್ ಹೊರಗಿದ್ದ ಭದ್ರತಾ ಸಿಬ್ಬಂದಿ ಕೂಡಲೇ ನಡೆಸಿದ ಪ್ರತಿದಾಳಿಗೆ ಇಬ್ಬರೂ ದಾಳಿಕೋರರು ನೆಲಕ್ಕುರುಳಿದರು.

ಘಟನೆಯಲ್ಲಿ ವಕೀಲೆಯೊಬ್ಬರಿಗೆ ತೀವ್ರ ಗಾಯಗಳಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಅದೃಷ್ಟವಶಾತ್ ನ್ಯಾಯಾಲಯದಲ್ಲಿದ್ದ ಇತರ ಯಾರಿಗೂ ಗಾಯಗಳಾಗಿಲ್ಲ. ರೌಡಿ ಮೇಲೆ ದಾಳಿ ನಡೆಸಿದ್ದ ಇಬ್ಬರನ್ನೂ ಪೊಲೀಸರು ಹೊಡೆದುರುಳಿಸಿದ್ದಾರೆ ಎಂದು ದೆಹಲಿ ಪೊಲೀಸ್ ಆಯುಕ್ತ ರಾಕೇಶ್ ಅಸ್ಥಾನಾ ತಿಳಿಸಿದ್ದಾರೆ.

ಕೊಲೆ ಮತ್ತು ಸುಲಿಗೆ ಸೇರಿದಂತೆ ಹತ್ತಕ್ಕೂ ಹೆಚ್ಚು ಪ್ರಕರಣಗಳಲ್ಲಿ ಭಾಗಿಯಾಗಿದ್ದ ಗೋಗಿ, ತನ್ನ ಸಹಚರ ಕುಲದೀಪ್ ನಾನ್ ಫಜ್ಜಾ ಹಾಗೂ ಇತರ ಇಬ್ಬರ ಜೊತೆ 2020ರ ಏಪ್ರಿಲ್‌ನಲ್ಲಿ ಮಹಾರಾಷ್ಟ್ರ ಸಂಘಟಿತ ಅಪರಾಧ ಕಾಯ್ದೆ (ಮೋಕಾ) ಅಡಿ ದೆಹಲಿಯ ವಿಶೇಷ ಪೊಲೀಸ್ ಘಟಕದಿಂದ ಗುರುಗ್ರಾಮದಲ್ಲಿ ಬಂಧನಕ್ಕೆ ಒಳಗಾಗಿದ್ದ.

ಬಂಧಿತ ಕುಲದೀಪ್ 2021ರ ಮಾರ್ಚ್ 25ರಂದು ಕೋರ್ಟ್‌ಗೆ ಹಾಜರುಪಡಿಸುವಾಗ ಪೊಲೀಸ್ ಕಸ್ಟಡಿಯಿಂದ ಪರಾರಿಯಾಗಿದ್ದ.

ಕುಖ್ಯಾತ ಪಾತಕಿ ಗೋಗಿ ಸುಳಿವು ನೀಡಿದವರಿಗೆ ದೆಹಲಿ ಮತ್ತು ಹರಿಯಾಣ ಸರ್ಕಾರಗಳು ಕ್ರಮವಾಗಿ ₹4 ಲಕ್ಷ ಹಾಗೂ ₹2.50 ಲಕ್ಷ ಬಹುಮಾನ ಘೋಷಿಸಿದ್ದವು.

ರೋಹಿಣಿಯ ನ್ಯಾಯಾಲಯದ ಆವರಣದಲ್ಲೇ ಐದಾರು ಬಾರಿ ಇಂತಹ ದಾಳಿ ಪ್ರಕರಣಗಳು ನಡೆದಿದ್ದರೂ ಸೂಕ್ತ ಭದ್ರತೆಗೆ ಅಗತ್ಯ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಪ್ರತ್ಯಕ್ಷದರ್ಶಿಯಾಗಿರುವ ವಕೀಲರೊಬ್ಬರು ಘಟನೆಯ ಕುರಿತು ತೀವ್ರ ಆತಂಕ ವ್ಯಕ್ತಪಡಿಸಿದ್ದಾರೆ.

ರೋಹಿಣಿ ಕೋರ್ಟ್‌ನಲ್ಲಿ ನಡೆದಿರುವ ಘಟನೆಯ ಹಿನ್ನೆಲೆಯಲ್ಲಿ ದೆಹಲಿಯ ಎಲ್ಲ ನ್ಯಾಯಾಲಯಗಳಲ್ಲಿ ಸೂಕ್ತ ಭದ್ರತಾ ವ್ಯವಸ್ಥೆ ಕಲ್ಪಿಸುವಂತೆ ಕೋರಿರುವ ದೆಹಲಿಯ ಜಿಲ್ಲಾ ನ್ಯಾಯಾಲಯಗಳ ವಕೀಲರ ಸಂಘಗಳ ಸದಸ್ಯರು, ಶನಿವಾರ ಕೋರ್ಟ್ ಕಲಾಪ ಬಹಿಷ್ಕರಿಸಲು ನಿರ್ಧರಿಸಿದ್ದಾರೆ.

ಅಮೆರಿಕ: ವೃದ್ಧರಿಗೆ ಬೂಸ್ಟರ್ ಡೋಸ್- ಸಿಡಿಸಿ ಒಪ್ಪಿಗೆ

ವಾಷಿಂಗ್ಟನ್ (ಎಪಿ): ವೃದ್ಧರು ಹಾಗೂ ರೋಗ ನಿರೋಧಕ ಶಕ್ತಿ ಕಡಿಮೆ ಇರುವವರಿಗೆ ಕೋವಿಡ್ ಲಸಿಕೆಯ ಬೂಸ್ಟರ್ ಡೋಸ್ ನೀಡಲು ಅಮೆರಿಕದ ರೋಗಗಳ ನಿಯಂತ್ರಣ ಕೇಂದ್ರ (ಸಿಡಿಸಿ) ಒಪ್ಪಿಗೆ ನೀಡಿದೆ.

ಕೋವಿಡ್: ವೆಚ್ಚ ನಿರ್ಬಂಧ ಹಿಂಪಡೆದ ಸರ್ಕಾರ

ನವದೆಹಲಿ (ಪಿಟಿಐ): ಕೋವಿಡ್-19 ಎರಡನೇ ಅಲೆಯ ಕಾರಣ ಜೂನ್‌ನಲ್ಲಿ ವಿಧಿಸಲಾಗಿದ್ದ ವಿವಿಧ ಇಲಾಖೆಗಳು ಮತ್ತು ಸಚಿವಾಲಯಗಳ ಮೇಲಿನ ವೆಚ್ಚ ನಿರ್ಬಂಧವನ್ನು ಹಣಕಾಸು ಸಚಿವಾಲಯ ಶುಕ್ರವಾರ ಹಿಂಪಡೆದಿದೆ.

ಸಾರ್ವಜನಿಕ ಹಣಕಾಸು ಸುಧಾರಣೆ ಮತ್ತು ಬೆಳವಣಿಗೆಯನ್ನು ಹೆಚ್ಚಿಸುವ ತುರ್ತು ಕಾರಣಕ್ಕಾಗಿ ಹಾಗೂ ಮಾರ್ಗಸೂಚಿಗಳ ಪರಿಶೀಲನೆಯ ನಂತರ ವೆಚ್ಚ ನಿರ್ಬಂಧವನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ ಎಂದು ಹಣಕಾಸು ಸಚಿವಾಲಯ ತನ್ನ ಆದೇಶದಲ್ಲಿ ತಿಳಿಸಿದೆ.

ಕೋವಿಡ್: ಎಲ್ಲರಿಗೂ ‘ಬೂಸ್ಟರ್’ ಬೇಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಲಸಿಕೆಯ ಎರಡು ಡೋಸ್ ಪಡೆದ ನಂತರದ ಆರು ತಿಂಗಳ ವೇಳೆಗೆ ಶೇ 99 ರಷ್ಟು ಮಂದಿಯಲ್ಲಿ ಉತ್ತಮವಾಗಿ ಪ್ರತಿಕಾಯ (ಆ್ಯಂಟಿಬಾಡಿ) ವೃದ್ಧಿಯಾಗಿರುತ್ತದೆ. ಹೀಗಾಗಿ, ಬೂಸ್ಟರ್ ಡೋಸ್ ಅಗತ್ಯವಿಲ್ಲ ಎನ್ನುವುದು ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಕೋವಿಡ್ ಲಸಿಕೆಯ ಕಾರ್ಯನಿರ್ವಹಣೆ ಹಾಗೂ ಬೂಸ್ಟರ್ ಡೋಸ್ ಅಗತ್ಯತೆ ಬಗ್ಗೆ ವೈದ್ಯಕೀಯ ಕ್ಷೇತ್ರದಲ್ಲಿ ಚರ್ಚೆಗಳು ನಡೆಯುತ್ತಿವೆ. ಲಸಿಕೆಯು ಎಷ್ಟು ದಿನಗಳವರೆಗೆ ವ್ಯಕ್ತಿಯನ್ನು ರಕ್ಷಿಸುವ ಸಾಮರ್ಥ್ಯ ಹೊಂದಿದೆ ಎನ್ನುವುದರ ಬಗ್ಗೆ ಖಚಿತತೆ ಇರಲಿಲ್ಲ. ಅದೇ ರೀತಿ, ದೇಹದಲ್ಲಿ ಎಷ್ಟು ಪ್ರಮಾಣದಲ್ಲಿ ಪ್ರತಿಕಾಯಗಳು ವೃದ್ಧಿಯಾಗಿರುತ್ತವೆ ಎನ್ನುವುದರ ಬಗ್ಗೆ ಲಸಿಕೆ ತಯಾರಿಕಾ ಕಂಪನಿಗಳು ನಿಖರವಾಗಿ ಹೇಳಿಲ್ಲ. ಹಾಗಾಗಿ, ಸಂಸ್ಥೆಯ ಸೂಕ್ಷ್ಮ ಜೀವ ವಿಜ್ಞಾನ ವಿಭಾಗವು ಈ ಬಗ್ಗೆ ಅಧ್ಯಯನವನ್ನು ಕೈಗೆತ್ತಿಕೊಂಡಿತ್ತು.

ವಿಭಾಗದ ಮುಖ್ಯಸ್ಥರಾದ ಡಾ. ನವೀನಾ ಜೆ. ಹಾಗೂ ಸಹಾಯಕ ಪ್ರಾಧ್ಯಾಪಕಿ ಡಾ.ಎಂ.ಪಿ. ನಂದಿನಿ ಈ ಅಧ್ಯಯನ ನಡೆಸಿದ್ದು, ವೈದ್ಯರು ಒಳಗೊಂಡಂತೆ 250 ಆರೋಗ್ಯ ಕಾರ್ಯಕರ್ತರು ಅಧ್ಯಯನಕ್ಕೆ ಒಳಪಟ್ಟಿದ್ದರು.

ಲಸಿಕೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿದೆ ಎನ್ನುವುದು ಅಧ್ಯಯನದಿಂದ ತಿಳಿದುಬಂದಿದೆ. ಒಂದು ವರ್ಷವಾದ ಬಳಿಕ ಪ್ರತಿಕಾಯದ ಬಗ್ಗೆ ಇನ್ನೊಂದು ಅಧ್ಯಯನ ನಡೆಸಲಾಗುತ್ತದೆ

ಡಾ.ಸಿ.ಎನ್. ಮಂಜುನಾಥ್, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕ

ಕಳೆದ ಫೆಬ್ರವರಿ ತಿಂಗಳಲ್ಲಿ ‘ಕೋವಿಶೀಲ್ಡ್’ ಲಸಿಕೆಯ 2 ಡೋಸ್ ಪಡೆದವರನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ಇವರಲ್ಲಿ ಸಮಾನವಾಗಿ ಪುರುಷರು ಹಾಗೂ ಮಹಿಳೆಯರು ಇದ್ದರು.

ಅವರಲ್ಲಿ ಅಭಿವೃದ್ಧಿ ಹೊಂದಿರುವ ಪ್ರತಿಕಾಯದ ಬಗ್ಗೆ ಏಪ್ರಿಲ್ ತಿಂಗಳಲ್ಲಿ ಎಲಿಸಾ ವಿಧಾನದ ಮೂಲಕ ಪರೀಕ್ಷೆ ನಡೆಸಲಾಗಿತ್ತು. ಆ ವೇಳೆ ಶೇ 80 ರಷ್ಟು ಮಂದಿಯಲ್ಲಿ ಉತ್ತಮ ಪ್ರತಿಕಾಯ ಅಭಿವೃದ್ಧಿ ಹೊಂದಿರುವುದು ಖಚಿತಪಟ್ಟಿತ್ತು. ಸೆಪ್ಟೆಂಬರ್ ತಿಂಗಳಲ್ಲಿ ನಡೆಸಲಾದ ಪರೀಕ್ಷೆಯಲ್ಲಿ ಶೇ 99ರಷ್ಟು ಮಂದಿಯಲ್ಲಿ ಉತ್ತಮ ಪ್ರತಿಕಾಯ ಅಭಿವೃದ್ಧಿಯಾಗಿರುವುದು ದೃಢಪಟ್ಟಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ.



ಲಸಿಕೆ ಪರಿಣಾಮಕಾರಿ: ‘ನಿಗದಿತ ಸಮೂಹಕ್ಕೆ ಏಪ್ರಿಲ್ ತಿಂಗಳಲ್ಲಿ ನಡೆಸಲಾದ ಪರೀಕ್ಷೆಯಲ್ಲಿ ಶೇ 20 ರಷ್ಟು ಮಂದಿಯಲ್ಲಿ ಅಷ್ಟಾಗಿ ಪ್ರತಿಕಾಯ ವೃದ್ಧಿಯಾಗಿರಲಿಲ್ಲ. ಆದರೆ, ಸೆಪ್ಟೆಂಬರ್ ತಿಂಗಳ ವೇಳೆಗೆ ಅವರಲ್ಲಿ ಕೂಡ ಉತ್ತಮವಾಗಿ ಪ್ರತಿಕಾಯ ಅಭಿವೃದ್ಧಿಯಾಗಿದೆ. ಶೇ 1ರಷ್ಟು ಮಂದಿಯಲ್ಲಿ ಮಾತ್ರ ಪ್ರತಿಕಾಯದ ಪ್ರಮಾಣ ಶೇ 30ರೊಳಗೆ ಇದೆ’ ಎಂದು ಸಂಸ್ಥೆಯ ನಿರ್ದೇಶಕ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.

‘250 ಆರೋಗ್ಯ ಕಾರ್ಯಕರ್ತರಲ್ಲಿ 19 ಮಂದಿ ಕೋವಿಡ್ ಪೀಡಿತರಾಗಿ ಚೇತರಿಸಿಕೊಂಡಿದ್ದರು. ಬಳಿಕ ಲಸಿಕೆ ಪಡೆದುಕೊಂಡಿದ್ದರು. ಅವರಲ್ಲಿ ಅತೀ ಹೆಚ್ಚು ಪ್ರತಿಕಾಯ ಇರುವುದು ದೃಢಪಟ್ಟದೆ’ ಎಂದು ಹೇಳಿದರು.

4 ವಾರಗಳ ಅಂತರದಲ್ಲಿ ಪರಿಣಾಮಕಾರಿ: ‘4 ವಾರಗಳ ಅಂತರದಲ್ಲಿ ಲಸಿಕೆಯು ಉತ್ತಮವಾಗಿ ಕಾರ್ಯನಿರ್ವಹಿಸಲಿದೆ. 6ನೇ ತಿಂಗಳ ವೇಳೆಗೆ ಹೆಚ್ಚಿನ ಪ್ರಮಾಣದಲ್ಲಿ ಪ್ರತಿಕಾಯ ವೃದ್ಧಿಯಾಗುತ್ತದೆ. ಹಾಗಾಗಿ, ಲಸಿಕೆಯ ಎರಡೂ ಡೋಸ್ ಪಡೆದ 6 ತಿಂಗಳ ವರೆಗೂ ಬೂಸ್ಟರ್ ಡೋಸ್ ಅಗತ್ಯವಿಲ್ಲ. 18 ವರ್ಷ ಮೇಲ್ಪಟ್ಟ ಎಲ್ಲರೂ ಆದಷ್ಟು ಬೇಗ ಲಸಿಕೆ ಪಡೆದುಕೊಳ್ಳಬೇಕು’ ಎಂದು ಅಧ್ಯಯನದಲ್ಲಿ ಉಲ್ಲೇಖಿಸಲಾಗಿದೆ. ‘ಕೋವಿಶೀಲ್ಡ್’ ಲಸಿಕೆಯ ಎರಡು ಡೋಸ್‌ಗಳ ಅಂತರವನ್ನು 12 ವಾರಗಳಿಂದ 4ರಿಂದ 6 ವಾರಗಳಿಗೆ ಇಳಿಕೆ ಮಾಡುವುದು ಉತ್ತಮ’ ಎಂದು ಹೇಳಲಾಗಿದೆ.

ಸಮಾಜ ಕಲ್ಯಾಣ ಇಲಾಖೆ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯಗಳು

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ಮಾನ್ಯ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಸಾರಿಗೆ ಸಚಿವರಾದ ಶ್ರೀ ಬಿ. ಶ್ರೀರಾಮುಲು ಅವರು ಇಲಾಖೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರಾದ ಶ್ರೀ ಕೋಟ ಶ್ರೀನಿವಾಸ ಪೂಜಾರಿ ಅವರು ಇಲಾಖೆಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು.

ವಿದ್ಯಾರ್ಥಿವೇತನ ಕಾರ್ಯಕ್ರಮ

2021-22ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ ಅರ್ಹ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
Website ವಿವರ: ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ:
https://ssp.karnataka.gov.in/homepage.aspx
ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ:
https://ssp.postmatric.karnataka.gov.in/

FREESHIP CARD

ಭಾರತ ಸರ್ಕಾರ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಾರ್ಗಸೂಚಿ (2021)ರನ್ವಯ 2021-22ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮದಡಿ FREESHIP CARD ವ್ಯವಸ್ಥೆಯನ್ನು ಜಾರಿಗೆ ತಂದಿದ್ದು, ಅರ್ಹ ವಿದ್ಯಾರ್ಥಿಗಳು ಕಾಲೇಜುಗಳಿಗೆ ಪ್ರವೇಶದ ಸಮಯದಲ್ಲಿ ಯಾವುದೇ ಶುಲ್ಕಗಳನ್ನು ಪಾವತಿಸುವಂತಿಲ್ಲ.

FREESHIP CARD ಸೌಲಭ್ಯ ಪಡೆಯಲು ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದ Student Loginನಲ್ಲಿ ನೋಂದಣಿಯಾಗುವುದು.

ಪ್ರೋತ್ಸಾಹಧನ ಕಾರ್ಯಕ್ರಮ

ಎಸ್.ಎಸ್.ಎಲ್.ಸಿ. ಪ್ರೋತ್ಸಾಹಧನ:
2019-20 ಮತ್ತು 2020-21ನೇ ಶೈಕ್ಷಣಿಕ ಸಾಲಿನಲ್ಲಿ CBSE & ICSE ಶಾಲೆಗಳಲ್ಲಿ 10ನೇ ತರಗತಿ ವಾರ್ಷಿಕ ಪರೀಕ್ಷೆಯಲ್ಲಿ ಶೇ. 60ಕ್ಕಿಂತ ಹೆಚ್ಚು ಅಂಕಗಳನ್ನು ಪಡೆದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಪ್ರೋತ್ಸಾಹಧನ ಪಡೆಯಲು ಇಲಾಖೆಯ ಜಿಲ್ಲಾ/ತಾಲ್ಲೂಕು ಮಟ್ಟದ ಕಛೇರಿಗೆ ಭೇಟಿ ನೀಡಿ ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಆಧಾರ್ ಕಾರ್ಡ್ ಮತ್ತು ಬ್ಯಾಂಕ್ ಪಾಸ್‌ಪುಸ್ತಕದ ಪ್ರತಿಯನ್ನು ಸಲ್ಲಿಸುವುದು.
(SSLC State Boardನ ವಿದ್ಯಾರ್ಥಿಗಳಿಗೆ ನೇರವಾಗಿ ಪ್ರೋತ್ಸಾಹಧನವನ್ನು ಪಾವತಿಸುವ ಕಾರಣ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.)

ಮೆಟ್ರಿಕ್ ನಂತರದ ಪ್ರೋತ್ಸಾಹಧನ:
12ನೇ ತರಗತಿ, ಪದವಿ, ಸ್ನಾತಕೋತ್ತರ ಪದವಿ ಹಾಗೂ ಕೃಷಿ, ತಾಂತ್ರಿಕ, ಪಶುವೈದ್ಯ ಮತ್ತು ವೈದ್ಯಕೀಯ ಕೋರ್ಸುಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ತೇರ್ಗಡೆಯಾದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
Website ವಿವರ
https://sw.kar.nic.in/swprizemoney/Home.aspx
(ವಿದ್ಯಾರ್ಥಿಗಳು ಕಡ್ಡಾಯವಾಗಿ ತಮ್ಮ ಬ್ಯಾಂಕ್ ಖಾತೆಯನ್ನು ಆಧಾರ್‌ನೊಂದಿಗೆ ಜೋಡಣೆ ಮಾಡಿಸತಕ್ಕದ್ದು)

ವಿದ್ಯಾರ್ಥಿನಿಲಯಗಳಿಗೆ ಪ್ರವೇಶಾವಕಾಶ

2021-22ನೇ ಸಾಲಿನಲ್ಲಿ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಾವಕಾಶ ಕಲ್ಪಿಸಲು ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.
Website ವಿವರ
https://sw.kar.nic.in/hosteladmissions/

ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ

2021-22ನೇ ಸಾಲಿನಲ್ಲಿ ಪ್ರತಿಭಾನ್ವಿತ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರತಿಷ್ಠಿತ ಶಾಲೆಗಳಲ್ಲಿ 6ನೇ ತರಗತಿಗೆ ಪ್ರವೇಶ ಪಡೆಯಲು ಅರ್ಜಿ ಆಹ್ವಾನಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಇಲಾಖೆಯ ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಅಧಿಕಾರಿಗಳ ಕಛೇರಿಯನ್ನು ಸಂಪರ್ಕಿಸುವುದು.

ಕಡ್ಡಾಯವಾಗಿ ಮಾಸ್ಕ್ ಧರಿಸಿ
ಕೈಗಳ ಸ್ವಚ್ಛತೆಯನ್ನು ಕಾಪಾಡಿಕೊಳ್ಳಿ
ದೈಹಿಕ ಅಂತರವನ್ನು ಪಾಲಿಸಿ

ಪಿ.ಎಸ್. ಕಾಂತರಾಜು ಕ.ಆ.ಸೇ.
ನಿರ್ದೇಶಕರು
ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ಡಾ. ರವಿ ಕುಮಾರ್ ಸುರಪುರ, ಭಾ.ಆ.ಸೇ.
ಆಯುಕ್ತರು
ಸಮಾಜ ಕಲ್ಯಾಣ ಇಲಾಖೆ

ಡಾ. ಎನ್. ನಾಗಾಂಬಿಕಾ ದೇವಿ, ಭಾ.ಆ.ಸೇ.
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

ದೇಶದ ಕಾಡು, ವನ್ಯಜೀವಿ ನದಿಗಳು ಸೇರಿ ಪರಿಸರ ಉಳಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನ ಬದ್ಧ ಮೂಲಭೂತ ಕರ್ತವ್ಯ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

ಶ್ರದ್ಧಾಂಜಲಿ



ಶ್ರೀ ಹೆಚ್. ಎಂ. ಪರಂಧಾಮ

ಜನನ: 24-12-1956 – ಮರಣ: 17-09-2021

ವೈಕುಂಠ ಸಮಾರಾಧನೆಯನ್ನು 27-09-2021 ರಂದು ಮೃತರ ಸ್ವಗೃಹದಲ್ಲಿ ನೆರವೇರಿಸಲಾಗುವುದು.

ಜೀವನದಲ್ಲಿ ಶ್ರೇಷ್ಠವಾದ ಶಿಸ್ತು, ಸಂಯಮ ಮತ್ತು ಸಂಸ್ಕಾರಯುತ ಬದುಕನ್ನು ನಡೆಸಿ ಪ್ರೀತಿ ವಾತ್ಸಲ್ಯದ ಪ್ರತಿರೂಪವಾಗಿ ಎಲ್ಲರಿಗೂ ಪ್ರೀತಿಯ ಚಿಲುಮೆಯಾಗಿ ಸದಾಕಾಲ ಎಲ್ಲರ ಒಳಿತನ್ನು ಬಯಸಿದ ಪರಂಧಾಮರವರ ಅಗಲುವಿಕೆ ನಮಗೆ ಅತೀವ ದುಃಖವನ್ನುಂಟುಮಾಡಿದೆ. ನಮ್ಮನ್ನು ಅಗಲಿದ ಅವರ ದಿವ್ಯಾತ್ಮಕ್ಕೆ ಚಿರಶಾಂತಿ ಲಭಿಸಲಿ ಎಂದು ಪ್ರಾರ್ಥಿಸುವ

ಪತ್ನಿ ಆಶಾರಾಣಿ, ಪುತ್ರಿಯರಾದ ಅರುಣ, ಅರ್ಚನಾ, ಅಳಿಯ ಅರ್ಜುನ್‌ರಾಮ್ ಮತ್ತು ಕುಟುಂಬದವರು.

ಚಿರಸ್ಮರಣೆ

ಶ್ರೀಮತಿ ಕೆಂಪಮ್ಮ
ನಿಧನ: 10.01.2014



ಹನುಮಂತಪ್ಪ ಉರುಫ್ ತಾಯಪ್ಪ
ನಿಧನ : 25.09.1991

ನೀವು ತೋರಿದ ಮಾರ್ಗದರ್ಶನ ನಮಗೆ ಸದಾ ದಾರಿದೀಪವಾಗಿದೆ.
ಇಂತಿ, ಪುತ್ರ ಹೆಚ್.ಎನ್.ಕೃಷ್ಣಪ್ಪ, ವಕೀಲರು (ನಿವೃತ್ತ ಎಸ್.ಇ. ಬೆಸ್ಕಾಂ) ಮತ್ತು ಶಶಿಕಲಾ, ಪ್ರಮೋದ್, ಸುಷ್ಮ, ಶ್ರೇಯಸ್, ರಂಜಿತಾ, ತೇಜಸ್, ರಮ್ಯ, ತನಯ್, ಅಮೂಲ್ಯ, ಅಂಜನಾ, ಹಗದೂರು, ವೈಟ್‌ಫೀಲ್ಡ್, ಬೆಂಗಳೂರು-66

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Doddabalapur

COMMERCIAL LAND for sale in Doddaballapur Yelahanka highway 34 guntas Doddaballapur town limit contact 9513691691

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8103990990

Industrial & Factory

Mysore

NEWLY CONST Shed 6000 Sqft area Rent for Godown or Industry in Sathyamangala Industrial Area Tumkur Contact: 9880201335

ಉದ್ಯೋಗಾವಕಾಶ

Engg/ Production Technical

WANTED TESTING Engineer minimum 3years experience in testing & repairing at board level for ONLINE UPS systems upto 40 kVA. Max Systems Pvt Ltd., Vidyaranyapura Bangalore 9811507700, thriveni@maxxups.com

EDUCATION SPECIAL
We are coming out with special offer for Admission Notice, Education Success Congratulation Ads
DH Classifieds More value, more impact
For details contact:
Jerry : 9731810277
Vishal : 9845114560
Tanveer: 9886213331
E-mail: dhclassifieds@deccanherald.co.in

General

WORK FROM HOME ಮನೆಯಿಂದಲೆ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000ವರೆಗೆ ಸಂಪಾದಿಸಿ. ಕನ್ನಡ/ ಇಂಗ್ಲೀಷ್ ಓದಲು, ಬರೆಯಲು ಬರುವ ಎಲ್ಲರಿಗೂ ಅವಕಾಶ. ಕೊರಿಯರ್ ಸೌಲಭ್ಯವಿದೆ. 8095377333/ 8095377444

ತಕ್ಷಣ ಬೇಕಾಗಿದ್ದಾರೆ ಮಾರ್ಕೆಟಿಂಗ್ ಅಲ್ಲ MNC, TVS, TOYOTA, BRITANIYA ಕಂಪನಿಗಳಿಗೆ 7th,SSLC, PUC, Degree, DIPLOMA ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಊಟದೊಂದಿಗೆ ESI/PFನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 7829400441, 7829416611

ಕರ್ನಾಟಕದಾದ್ಯಂತ ಹೆಸರಾಂತ 450ಕಂಪನಿಗಳಿಗೆ, ಕಂಪನಿ ಹಾಗೂ ಆಫೀಸ್ ವರ್ಕ್ ಗೆ, ಯುವಕ, ಯುವತಿಯರು ಬೇಕಾಗಿದ್ದಾರೆ.ನೇರನೇಮಕಾತಿ 16,200-65,000/-ಊಟ, ವಸತಿಯೊಂದಿಗೆ 7022366461, 8904049301.

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕ ಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 7618763886, 7618760283

ತಕ್ಷಣ ಬೇಕಾಗಿದ್ದಾರೆ ಹೊಸದಾದ ಕಂಪನಿಗಳಿಗೆ ಆಫೀಸ್‌ಗಳಿಗೆ 7th,SSLC, PUC,Degree ಆದವರಿಗೆ, (ವಿದ್ಯಾರ್ಹತೆಯಿಲ್ಲದವರಿಗೂ) ವಸತಿ ಊಟದೊಂದಿಗೆ ESI/PF ನೊಂದಿಗೆ ಸಂಬಳ 16,000-80,000/- ಸಂಪರ್ಕಿಸಿ: 8884486100, 7829919947

TATA ಮೋಟರ್ಸ್, TOYOTA, ಬ್ರಿಟಾನಿಯಾ ಆನ್‌ಲೈನ್ ಕಂಪೆನಿಗಳಿಗೆ SSLC, PUC,Degree, ITI ನವರು (ವಿದ್ಯಾರ್ಹತೆಯಿಲ್ಲದವರಿಗೂ) ನೇರನೇಮಕಾತಿ 18,000-56,000/- ವಸತಿಯೂಟವಿದೆ. 7204853296, 7204396011

CONCORD HEALTH-REQUIRED Mobile Phlebotomist (MLT/DMLT) For Sample Collection & Delivery Boys Ph No. -9154955064

Part-Time Jobs

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

★ಮನೆಯಿಂದಲೇ ಮೇಣದಬತ್ತಿ★ ತಯಾರಿಸಿ ನಮಗೆ ಮರಳಿಸಿ, ಪ್ರತಿದಿನ 500 ರಿಂದ 1000 ಸಂಪಾದಿಸಿ.ತರಬೇತಿಗಾಗಿ: ಬೆಂಗಳೂರು.9060472077, ಶಿವಮೊಗ್ಗ.9008012895

Wanted

WANTED MALE & Female PUC/Graduates Freshers & Experience(M.Sc Chemistry or B.Sc Chemistry): 8660018006/ 9019696123

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವ್ಯಾಪಾರ

Business to Business

Business

ಲಕ್ಷಾಂತರ ಗಳಿಸಿ ಔಷಧಿಯ ಮಿಲ್ಕಿ ಮಶ್ರೂಮ್ ಮನೆಯಲ್ಲೆ ಬೆಳೆಸಿರಿ ನಾವೇ ಖರೀದಿಸುತ್ತೇವೆ. ವೀಡಿಯೋಗಾಗಿ ವಾಟ್ಸಆಪ್ ಮಾಡಿ 8971251972. Patil Exports

Finance

ಸಾಲಗಳು ನಾವು ಎಲ್ಲಾ ರೀತಿಯ ಸಾಲಗಳನ್ನು ನೀಡುತ್ತೇವೆ. ವೈಯಕ್ತಿಕ, ವ್ಯವಹಾರ, ಆಸ್ತಿ, ವಸತಿ, ಕೃಷಿ, ಸ್ವಾಧೀನ ಮತ್ತು ಆಸ್ತಿಗಾಗಿ ಸಾಲ ನೀಡಲಾಗುತ್ತದೆ. ಮೊಬೈಲ್:7837015557

ಭವಿಷ್ಯ

Astrology

★॥ಶ್ರೀಶಿರಿಡಿ ಸಾಯಿಬಾಬಾ॥★ ಆರಾಧನೆಯಿಂದ ಪ್ರೀತಿಪ್ರೇಮ, ಸ್ತ್ರೀ_ಪುರುಷ_ವಶೀಕರಣ, ದಾಂಪತ್ಯ_ಕಿರಿಕಿರಿ, ಕಂಕಣಭಾಗ್ಯ, ಸಾಲದಬಾದೆ ಇನ್ನೂಯಾವುದೇ ಕಠಿಣ_ಗುಪ್ತ_ಸಮಸ್ಯೆಗಳಿಗೆ 11_ಗಂಟೆಗಳಲ್ಲಿ ಶಾಶ್ವತ_ಪರಿಹಾರ. ಪಂಡಿತ್.ವಿಕ್ರಮ್_ಭಟ್ 9972654095

★॥ಮೋಡಿ ಮಾಂತ್ರಿಕರು॥★ ನಂಬರ್.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಪ್ರೇಮ, ಸಾಲದಬಾದೆ, ಗಂಡಹೆಂಡತಿ ವಿಚಾರ ಇನ್ನೂಯಾವುದೆ ಗುಪ್ತ ಸಮಸ್ಯೆಗಳಿಗೆ ಫೋನಿನ_ಮೂಲಕ ಶಾಶ್ವತ_ಪರಿಹಾರ. 9591588881

★ಅಂಭಾಭವಾನಿ★ ಜ್ಯೋತಿಷ್ಯಾಲಯ ಕೊಳ್ಳೆಗಾಲದ ನಂ.1 'ವಶೀಕರಣ ಸ್ಪೆಷಲಿಸ್ಟ್' ದೇವಿಪ್ರಸಾದ್. (ಉಚಿತ ಭವಿಷ್ಯ ಖಚಿತ ಪರಿಹಾರ) ನಿಮ್ಮ ಸಮಸ್ಯೆಗಳೇನೇಯಿರಲಿ 2ದಿನದಲ್ಲಿ ಪರಿಹಾರ.9886755306

ಶ್ರೀಚಕ್ರ ಜ್ಯೋತಿಷ್ಯ ಪೀಠಂ ಕಠಿಣ ನಿಗೂಢ ಗುಪ್ತ ಸಮಸ್ಯೆಗಳಿಗೆ ಸಲಹೆ ಪಡೆಯಿರಿ. ಯಾವುದೇ ವಶೀಕರಣಗಳಿಗೆ 2865/-. 50 ವರ್ಷದ ಅನುಭವ 9845899127.

★॥ಶ್ರೀಚಾಮುಂಡೇಶ್ವರಿದೇವಿ ಜ್ಯೋತಿಷ್ಯರು॥★ ಸ್ತ್ರೀಪುರುಷ_ವಶೀಕರಣ, ಸಂಭೋಗ_ವಶೀಕರಣ ಇನ್ನೂ ಯಾವುದೇ ಸಮಸ್ಯೆಗಳಿಗೆ 15 ನಿಮಿಷಗಳಲ್ಲಿ ಪರಿಹಾರ. ರಾಘವೇಂದ್ರ_ಗುರೂಜಿ. 8050061378

ಶಕ್ತಿಶಾಲಿ ಮಹಾಲಕ್ಷ್ಮಿ ಯಂತ್ರ ವ್ಯಾಪಾರ ಅಭಿವೃದ್ಧಿ,ಹಣಕಾಸಿನ ಸಮಸ್ಯೆಯಿಂದ ಆರ್ಥಿಕ ಅಭಿವೃದ್ಧಿ ಹೊಂದಲು ಲಕ್ಷ್ಮಿಯಂತ್ರ ಕೊಡಲಾಗುತ್ತದೆ Rs.999 ಹಾಗೂ ಎಲ್ಲಾ ಕಠಿಣ ಸಮಸ್ಯೆಗಳಿಗೆ ಪರಿಹಾರ ಸಿಗುತ್ತದೆ: 9606701007, 8892501007

"ವಶೀಕರಣ ಯಂತ್ರ" ಜನವಶೀಕರಣ, ಲಕ್ಷ್ಮಿವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರು ವಶೀಕರಣ, ಕೇವಲ 2001 ರೂಪಾಯಿ. ಗುರೂಜಿ ಮಹೇಶ್ 9686999517

ವೈಯಕ್ತಿಕ

Lost

I, L Vanja, D/o, Late Lakshmaiah, R/o Vannarpet, Bangalore - 47, lost my Rectification Deed No.3226 Dt.21/09/2004, Agreement For Sale Deed No.3529 Dt.17/12/2007, Cancellation of Agreement for Sale Deed No.735 Dt.24/08/2009, If anybody found please contact 9108948666

ಸಮಾಜಸೇವೆ

Others

ಅಂಗವಿಕಲರಿಗೆ ಉಚಿತ ತರಬೇತಿ: ಸಮರ್ಥನಂ ಅಂಗವಿಕಲರ ಸಂಸ್ಥೆ ಅಂಗವಿಕಲರಿಗಾಗಿ ವಸತಿಯುತ ವಿಶೇಷ ಕೌಶಲ ತರಬೇತಿ ಹಾಗೂ ಉದ್ಯೋಗಾವಕಾಶಗಳನ್ನು ಕಲ್ಪಿಸುತ್ತಿದೆ. ಹತ್ತನೇ ತರಗತಿ ಪೂರ್ಣಗೊಳಿಸಿದ 18 ರಿಂದ 35 ವರ್ಷದೊಳಗಿನ ಆಸಕ್ತ ಅಂಗವಿಕಲರು ತರಬೇತಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: 9449864693, 9480812139.

ಪ್ರವಾಸ

Travel

16-10-2021 ಮಧ್ಯಪ್ರದೇಶ, ಗುಜರಾತ್, 17-10-2021 ಬದ್ರಿನಾಥ್, ಕೇದಾರ್‌ನಾಥ್, ಗಂಗೋತ್ರಿ, ಯಮುನೋತ್ರಿ, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತ್ ನಗರ) 9845035349, 9482435755

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,822
ಇಂದಿನ ಅಂತ್ಯ	17,853
▲	30
ದಿನದ ಗರಿಷ್ಠ	17,947

ವಿನಿಮಯ ದರ

$ ಡಾಲರ್	73.68
£ ಪೌಂಡ್	100.97
€ ಯುರೊ	86.46
¥ ಯೆನ್ (100ಕ್ಕೆ)	66.68

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹455
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹455

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1530 (1545)
ಸೋಯಾ (ರಿಫೈನ್ಡ್)	₹1330(1330)
ಸೂರ್ಯಕಾಂತಿ (ರಿಫೈನ್ಡ್)	₹1360 (1360)
ಪಾಮೋಲಿನ್	₹1208 (1210)

ಅ. 4ರಿಂದ ಅಮೆಜಾನ್ ಮಾರಾಟ ಮೇಳ

ಬೆಂಗಳೂರು: ಅಮೆಜಾನ್ ಕಂಪನಿ ಪ್ರತಿ ವರ್ಷ ಆಯೋಜಿಸುವ 'ಗ್ರೇಟ್ ಇಂಡಿಯನ್ ಫೆಸ್ಟಿವಲ್' ಮಾರಾಟ ಮೇಳವು ಈ ಬಾರಿ ಅಕ್ಟೋಬರ್ 4ರಿಂದ ಶುರುವಾಗಲಿದೆ. ಒಂದು ತಿಂಗಳ ಅವಧಿಗೆ ಇದು ನಡೆಯಲಿದೆ.

ಶುಕ್ರವಾರ ವರ್ಚುವಲ್ ವೇದಿಕೆಯ ಮೂಲಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮೆಜಾನ್ ಇಂಡಿಯಾದ ಉಪಾಧ್ಯಕ್ಷ ಮನೀಷ್ ತಿವಾರಿ, 'ಈ ಬಾರಿಯ ಹಬ್ಬದ ಮಾರಾಟ ಮೇಳದಲ್ಲಿ 75 ಸಾವಿರ ಸ್ಥಳೀಯ, ಸಣ್ಣ ವ್ಯಾಪಾರಿಗಳು ಪಾಲ್ಗೊಳ್ಳಲಿದ್ದಾರೆ' ಎಂದು ತಿಳಿಸಿದರು. ಒಟ್ಟು 8.50 ಲಕ್ಷ ಮಾರಾಟಗಾರರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ.

ಈಗಿರುವ ಅಂಕಿ-ಅಂಶದ ಪ್ರಕಾರ ಅಮೆಜಾನ್ ಮೂಲಕ ವಸ್ತುಗಳನ್ನು ಖರೀದಿಸುತ್ತಿರುವ ಗ್ರಾಹಕರ ಪೈಕಿ ಶೇಕಡ 60ರಿಂದ ಶೇ 65ರಷ್ಟು ಜನ ಎರಡನೆಯ ಹಾಗೂ ಅದಕ್ಕಿಂತ ಕೆಳಹಂತಗಳ ನಗರ, ಪಟ್ಟಣಗಳಿಗೆ ಸೇರಿದವರು ಎಂದು ತಿವಾರಿ ಹೇಳಿದರು.

ಮುಂಬೈ ಧಾರಣೆ

ಶೇಂಗಾ

24-9-2021

ಜಾವಾ 70/80(ಹೊಸ)	10900-10950
ಜಾವಾ 80/90(ಹೊಸ)	10300-10350
ದಪ್ಪ ಮಧ್ಯಪ್ರದೇಶ(ಹೊಸ)	10700-10800
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1555)
ಒಂದು ವಾರದ ಡೆಲಿವರಿ	1535 (1550)
ಸೋಯಾ ಕಚ್ಚಾ	1290 (1290)
ಪಾಮ್ ವಾರದ ಡೆಲಿವರಿ	1206(1208)
ಸೂರ್ಯಕಾಂತಿ ಎಣ್ಣೆ ಕಚ್ಚಾ	1300 (1300)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
46,050 (46,400)
ಬೆಳ್ಳಿ ಕೆ.ಜಿ
60,375 (60,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಫ್ಲಿಪ್‌ಕಾರ್ಟ್ ಮೇಳ

ಬೆಂಗಳೂರು: ಫ್ಲಿಪ್‌ಕಾರ್ಟ್‌ನಿಂದ ಬಿಗ್ ಬಿಲಿಯನ್ ಡೇಸ್ ಮಾರಾಟ ಮೇಳವು ಅಕ್ಟೋಬರ್ 7ರಿಂದ 12ರವರೆಗೆ ನಡೆಯಲಿದೆ ಎಂದು ಫ್ಲಿಪ್‌ಕಾರ್ಟ್ ಕಂಪನಿ ಪ್ರಕಟಣೆಯಲ್ಲಿ ತಿಳಿಸಿದೆ. 3.75 ಲಕ್ಷಕ್ಕಿಂತ ಹೆಚ್ಚಿನ ಮಾರಾಟಗಾರರು ಈ ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ

ಸಕಲೇಶಪುರ

ಕೂಳೆ	600- 650
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000 -1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400
ಕಾಳು ಮೆಣಸು	395

ಅಡಿಕೆ

ಬಂಟ್ವಾಳ

ಕೋಕ	10000-25000
ಹೊಸತು	25000-50000
ಹಳತು	46000-51500

ಭದ್ರಾವತಿ

ರಾಶಿ	49599-52099

ಚಿತ್ರದುರ್ಗ

ಆಪಿ	51119-51559
ಬೆಟ್ಟೆ	40029-40469
ಕೆಂಪುಗೋಟು	32900-33300
ರಾಶಿ	50639-51089

ಕಾರ್ಕಳ

ಹೊಸತು	44000-50000

ಕುಮಟಾ

ಚಿಪ್ಪು	36509-42019
ಕೋಕ	23099-36189
ಫ್ಯಾಕ್ಟರಿ	15509-23169
ಹೊಸಚಾಲಿ	45509-47689

ಪುತ್ತೂರು

ಕೋಕ	10500-26000
ಹೊಸತು	35500-50000

ಸಾಗರ

ಸಿಪ್ಪೆಗೋಟು	8019-8019

ಶಿವಮೊಗ್ಗ

ಬೆಟ್ಟೆ	52019-54600
ಗೊರಬಲು	16625-41399
ಹೊಸತು	48039-50599
ರಾಶಿ	46899-53009
ಸರಕು	50100-77300

ಸಿದ್ದಾಪುರ

ಬಿಳಿಗೋಟು	36199-42099
ಚಾಲಿ	45099-48099
ಕೋಕ	30199-38199
ಕೆಂಪುಗೋಟು	33889-38759
ರಾಶಿ	47009-50599
ತಟ್ಟಿಬೆಟ್ಟೆ	34699-47099

ಶಿರಸಿ

ಬೆಟ್ಟೆ	35899-49499
ಬಿಳಿಗೋಟು	29699-42139
ಚಾಲಿ	41099-48791
ರಾಶಿ	46999-51999

ಯಲ್ಲಾಪುರ

ಬಿಳಿಗೋಟು	37012-42011
ಚಾಲಿ	42812-48580
ಕೋಕ	22612-35612
ಕೆಂಪುಗೋಟು	30122-36899
ರಾಶಿ	48919-54000
ತಟ್ಟಿಬೆಟ್ಟೆ	37800-48119

ರೇಷ್ಮೆಗೂಡು ಮಾರುಕಟ್ಟೆ

ರಾಮನಗರ

ಮಿಶ್ರ ತಳಿ (ಸಿ.ಬಿ)	283-477
ದ್ವಿತಳಿ (ಬಿ.ವಿ)	303-588

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13800	13,000	13,150	190.60ಸೆಂಟ್ಸ್
ಎಸಿ	6,300	4,800	5200	
ಆರ್‌ಪಿ	6200	6,200	6300	ಲಂಡನ್
ಆರ್‌ಸಿ	3590	3,500	3675	2146 ಡಾಲರ್ಸ್

ತೆರಿಗೆ ಸಂಗ್ರಹ ಹೆಚ್ಚಳ

ನವದೆಹಲಿ (ಪಿಟಿಐ): ವೈಯಕ್ತಿಕ ಆದಾಯ ತೆರಿಗೆ ಮತ್ತು ಕಾರ್ಪೊರೇಟ್ ತೆರಿಗೆ ಸಂಗ್ರಹವು ಪ್ರಸಕ್ತ ಹಣಕಾಸು ವರ್ಷದಲ್ಲಿ ಇದುವರೆಗೆ ₹ 5.70 ಲಕ್ಷ ಕೋಟಿ ಆಗಿದೆ. ಇದು ಕಳೆದ ವರ್ಷದ ಇದೇ ಅವಧಿಯಲ್ಲಿನ ತೆರಿಗೆ ಸಂಗ್ರಹಕ್ಕೆ ಹೋಲಿಸಿದರೆ ಶೇಕಡ 74ರಷ್ಟು ಹೆಚ್ಚು.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ತೆರಿಗೆ ಸಂಗ್ರಹವು ₹ 3.27 ಲಕ್ಷ ಕೋಟಿ ಆಗಿತ್ತು ಎಂದು ಕೇಂದ್ರ ನೇರ ತೆರಿಗೆಗಳ ಮಂಡಳಿ (ಸಿಬಿಡಿಟಿ) ಪ್ರಕಟಣೆಯಲ್ಲಿ ಹೇಳಿದೆ. 2019–20ರ ಇದೇ ಅವಧಿಯಲ್ಲಿ ಸಂಗ್ರಹವಾಗಿದ್ದ ₹ 4.48 ಲಕ್ಷ ಕೋಟಿಗೆ ಹೋಲಿಸಿದರೆ ಶೇ 27ರಷ್ಟು ಏರಿಕೆ ಆಗಿದೆ.

ಡೀಸೆಲ್ ಬೆಲೆ ತುಸು ಏರಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ಶುಕ್ರವಾರ ಡೀಸೆಲ್ ಬೆಲೆಯನ್ನು ಲೀಟರ್‌ಗೆ 20 ಪೈಸೆಯಷ್ಟು ಹೆಚ್ಚಿಸಿವೆ. ಎರಡು ತಿಂಗಳ ನಂತರದಲ್ಲಿ ಬೆಲೆ ಹೆಚ್ಚಳ ಆಗಿದೆ.

ಪೆಟ್ರೋಲ್ ಬೆಲೆಯಲ್ಲಿ ಬದಲಾವಣೆ ಆಗಿಲ್ಲ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶುಕ್ರವಾರ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರತಿ ಬ್ಯಾರೆಲ್‌ಗೆ 77.50 ಅಮೆರಿಕನ್ ಡಾಲರ್‌ಗೆ ಹೆಚ್ಚಳವಾಗಿದೆ.

18 ತಿಂಗಳಲ್ಲಿ ಶೇಕಡ 130ರಷ್ಟು ಏರಿದ ಸೆನ್ಸೆಕ್ಸ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಕೋವಿಡ್ ಮೊದಲ ಅಲೆಯ ಆರಂಭದಲ್ಲಿ 25 ಸಾವಿರದ ಸಮೀಪಕ್ಕೆ ಕುಸಿತ ಕಂಡಿದ್ದ ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್, ಈಗ 60 ಸಾವಿರದ ಗಡಿಯನ್ನು ದಾಟಿದೆ. 2020ರ ಮಾರ್ಚ್ ಕೊನೆಯಲ್ಲಿ ಸೆನ್ಸೆಕ್ಸ್ ಇದ್ದ ಮಟ್ಟಕ್ಕೆ ಈಗಿನ ಮಟ್ಟವನ್ನು ಹೋಲಿಸಿದರೆ, ಶೇಕಡ 130ರಷ್ಟು ಏರಿಕೆ ಕಂಡಿದೆ!

ವ್ಯವಸ್ಥೆಯಲ್ಲಿ ನಗದು ಹರಿವು ಜಾಸ್ತಿ ಇರುವುದು, ನಿಶ್ಚಿತ ಆದಾಯವನ್ನು ತಂದುಕೊಡುವ ಠೇವಣಿಗಳ ಮೇಲಿನ ಬಡ್ಡಿದರವು ತೀರಾ ಕಡಿಮೆ ಪ್ರಮಾಣಕ್ಕೆ ಬಂದಿರುವುದು, ಹೆಚ್ಚಿನ ಲಾಭ ತಂದುಕೊಡಬಲ್ಲ ಈಕ್ವಿಟಿಗಳಲ್ಲಿ ಹೂಡಿಕೆಗೆ ಜನ ಮುಂದಾಗುತ್ತಿರುವುದು ಸೆನ್ಸೆಕ್ಸ್‌ನ ಈ ಪರಿಯ ಓಟಕ್ಕೆ ಕಾರಣ ಎಂದು ತಜ್ಞರು ವಿಶ್ಲೇಷಿಸಿದ್ದಾರೆ. ಕೋವಿಡ್‌ನ ಕೆಟ್ಟ ಪರಿಣಾಮಗಳನ್ನು ನಿವಾರಿಸಿಕೊಂಡು ಅರ್ಥ ವ್ಯವಸ್ಥೆಯು ಬೆಳವಣಿಗೆ ಕಾಣುತ್ತದೆ ಎನ್ನುವ ಭರವಸೆಯು ಕೂಡ ಈ ಏರಿಕೆಗೆ ಒಂದು ಕಾರಣ ಎಂದು ಅವರು ಹೇಳಿದ್ದಾರೆ.

'ಅರ್ಥ ವ್ಯವಸ್ಥೆಯ ಚೇತರಿಕೆಯು ಚೆನ್ನಾಗಿ ಇರಲಿದೆ ಮತ್ತು ಮುಂದಿನ ಎರಡು ವರ್ಷಗಳಲ್ಲಿ ಬೆಳವಣಿಗೆಯು ಸುಸ್ಥಿರವಾಗಿ ಇರಲಿದೆ ಎಂಬ ನಿರೀಕ್ಷೆಯು ಮಾರುಕಟ್ಟೆಯಲ್ಲಿ ತೇಜಿ ವಹಿವಾಟಿಗೆ ಕಾರಣವಾಗಿವೆ. ಜಾಗತಿಕವಾಗಿಯೂ ಭಾರತವು ಹೂಡಿಕೆಗೆ ಆಕರ್ಷಕ ತಾಣವಾಗಿ ಮುಂದುವರಿದಿದೆ' ಎಂದು ಐಐಎಫ್‌ಎಲ್ ಸೆಕ್ಯುರಿಟೀಸ್‌ನ ರಿಟೇಲ್ ವಿಭಾಗದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಸಂದೀಪ್ ಭಾರದ್ವಾಜ್ ಹೇಳಿದ್ದಾರೆ.

'ಹೀಗಿದ್ದರೂ, ಸಣ್ಣ ಹೂಡಿಕೆದಾರರು ತಮ್ಮ ಹೂಡಿಕೆಗಳು ಒಂದೇ ಕಡೆ ಆಗದಂತೆ ನಿಗಾ ವಹಿಸಬೇಕು. ಆಗ, ಮಾರುಕಟ್ಟೆಯಲ್ಲಿ ಅಸ್ಥಿರ ಪರಿಸ್ಥಿತಿ ನಿರ್ಮಾಣವಾದರೆ ಅದನ್ನು ಎದುರಿಸಲು ಸಾಧ್ಯವಾಗುತ್ತದೆ' ಎಂದು ಅವರು ಕಿವಿಮಾತು ಹೇಳಿದರು. 'ಅರ್ಥ ವ್ಯವಸ್ಥೆ ಗಟ್ಟಿಗೊಂಡ ಹಿನ್ನೆಲೆಯಲ್ಲಿ ಈ ಬೆಳವಣಿಗೆ ಸಾಧ್ಯವಾಗಿದೆ. ಹಾಗೆಯೇ,

ಕೋವಿಡ್‌ನ ಮೂರನೆಯ ಅಲೆಯು ತೀರಾ ಅಪಾಯಕಾರಿ ಆಗಲಿಕ್ಕಿಲ್ಲ ಎಂಬ ಲೆಕ್ಕಾಚಾರ ಕೂಡ ಇದಕ್ಕೆ ಕಾರಣ' ಎಂದು ಟಿಐಡಬ್ಲ್ಯು ಪ್ರೈವೇಟ್ ಈಕ್ವಿಟಿ ಕಂಪನಿಯ ಮುಖ್ಯ ಹೂಡಿಕೆ ಅಧಿಕಾರಿ ಮೋಹಿತ್ ರಲ್ಹಾನ್ ಹೇಳಿದರು.

'ಮುಂಬರುವ ತ್ರೈಮಾಸಿಕ ಫಲಿತಾಂಶಗಳು ಸಕಾರಾತ್ಮಕವಾಗಿ ಇರಲಿವೆ ಎಂಬ ನಿರೀಕ್ಷೆ, ಜಿಎಸ್‌ಟಿ ಸಂಗ್ರಹದಲ್ಲಿ ಹೆಚ್ಚಳ ಸೇರಿದಂತೆ ಹಲವು ಅಂಶಗಳು ಷೇರುಪೇಟೆ ಜಿಗಿತಕ್ಕೆ ಕಾರಣ. ಆದರೆ, ಅಮೆರಿಕದ ಫೆಡರಲ್ ಬ್ಯಾಂಕ್, ಭಾರತೀಯ ರಿಸರ್ವ್ ಬ್ಯಾಂಕ್ ಸೇರಿ ವಿವಿಧ ದೇಶಗಳ ಬ್ಯಾಂಕುಗಳು ಬಡ್ಡಿ ದರವನ್ನು ಕ್ರಮೇಣ ಹೆಚ್ಚಿಸಿ, ವ್ಯವಸ್ಥೆಯಲ್ಲಿ ನಗದು ಹರಿವಿನ ಪ್ರಮಾಣ ತಗ್ಗಿಸುವ ಇಂಗಿತ ವ್ಯಕ್ತಪಡಿಸಿವೆ. ಆ ಕೆಲಸ ಶುರುವಾದ ಬಳಿಕ ಷೇರುಪೇಟೆಯಲ್ಲಿ ಸೂಚ್ಯಂಕಗಳ ಓಟಕ್ಕೆ ಒಂದಿಷ್ಟು ಕಡಿವಾಣ ಬೀಳಬಹುದು' ಎಂದು ಇಂಡಿಯನ್ ಮನಿ ಡಾಟ್ ಕಾಂ ಕಂಪನಿಯ ಹಣಕಾಸು ಸಲಹಾ ವಿಭಾಗದ ಮುಖ್ಯಸ್ಥ ಕೆ.ಟಿ. ಅವಿನಾಶ್ ಅಂದಾಜಿಸಿದರು.

ಚೀನಾದ ಅತಿದೊಡ್ಡ ರಿಯಲ್ ಎಸ್ಟೇಟ್ ಕಂಪನಿ ಎವರ್‌ಗ್ರಾಂಡ್ ಸಾಲದ ಕಂತು ಪಾವತಿಸಲು ವಿಫಲವಾದಲ್ಲಿ, ಅದರಿಂದ ಆಗುವ ಪರಿಣಾಮಗಳು ಮಾರುಕಟ್ಟೆಯ ಚಲನೆಯ ಮೇಲೆ ಪ್ರಭಾವ ಬೀರಲಿವೆ ಎಂದು ಅವಿನಾಶ್ ಹೇಳಿದರು.

ಸಣ್ಣ ಹೂಡಿಕೆದಾರರು ನೇರವಾಗಿ ಹಾಗೂ ಮ್ಯೂಚುವಲ್ ಫಂಡ್‌ಗಳ ಮೂಲಕ ಷೇರುಗಳಲ್ಲಿ ಹೂಡಿಕೆ ಮಾಡುತ್ತಿರುವುದು ಕೂಡ ಸೂಚ್ಯಂಕಗಳ ಏರಿಕೆಗೆ ಒಂದು ಕಾರಣ ಎಂದು ಕೋಟಕ್ ಮಹೀಂದ್ರ ಆಸ್ತಿ ನಿರ್ವಹಣಾ ಕಂಪನಿಯ ಈಕ್ವಿಟಿ ಸಂಶೋಧನಾ ವಿಭಾಗದ ಮುಖ್ಯಸ್ಥೆ ಶಿಬಾನಿ ಕುರಿಯನ್ ವಿಶ್ಲೇಷಿಸಿದ್ದಾರೆ.

ಮ್ಯೂಚುವಲ್ ಫಂಡ್‌ಗಳ ಕೊಡುಗೆ

ಬೆಂಗಳೂರು: ಸೂಚ್ಯಂಕವು 60 ಸಾವಿರದ ಗಡಿ ದಾಟಿರುವುದು ದೇಶದ ಬೆಳವಣಿಗೆಯ ಸಾಮರ್ಥ್ಯದ ದ್ಯೋತಕ ಎಂದು ಬಿಎಸ್‌ಇ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಆಶಿಶ್ ಕುಮಾರ್ ಚೌಹಾಣ್ ಹೇಳಿದ್ದಾರೆ.

ಹೂಡಿಕೆದಾರರು ಮ್ಯೂಚುವಲ್ ಫಂಡ್‌ಗಳ ಮೂಲಕವೂ ಹೆಚ್ಚಿನ ಸಂಖ್ಯೆಯಲ್ಲಿ ಷೇರು ಮಾರುಕಟ್ಟೆಗಳ ಕಡೆ ಬರುತ್ತಿದ್ದಾರೆ. ಇವರು ಹೀಗೆ ಮಾರುಕಟ್ಟೆಗಳತ್ತ ಮುಖ ಮಾಡಲು ಹೊಸ ಕಾಲದ ಬ್ರೋಕರೇಜ್ ಸಂಸ್ಥೆಗಳು ನೆರವಾಗಿವೆ ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಬ್ಯಾಂಕ್ ಠೇವಣಿಗಳ ಮೇಲಿನ ಬಡ್ಡಿ ದರ ಕಡಿಮೆ ಇರುವುದು ಕೂಡ ಸಣ್ಣ ಹೂಡಿಕೆದಾರರು ಮಾರುಕಟ್ಟೆಗಳತ್ತ ಚಿತ್ತ ಹರಿಸಲು ಒಂದು ಕಾರಣ ಎಂದು ಹೇಳಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಭಾರತವು ವಿಶ್ವದ ನಾಯಕನ ರೀತಿಯಲ್ಲಿ ಬೆಳವಣಿಗೆ ಕಾಣುತ್ತಿದೆ. ಕಳೆದ 18 ತಿಂಗಳ ಅವಧಿಯಲ್ಲಿ ಭಾರತದ ಷೇರು ಮಾರುಕಟ್ಟೆಗಳು ಇತರ ಮಾರುಕಟ್ಟೆಗಳಿಗೆ ಹೋಲಿಸಿದರೆ ಅತ್ಯುತ್ತಮ ಬೆಳವಣಿಗೆ ಕಂಡಿವೆ' ಎಂದು ಅವರು ತಿಳಿಸಿದ್ದಾರೆ.

'ಪುಕ್ಸಟ್ಟೆ ಲೈಫಿ'ನಲ್ಲಿ ಬದುಕಿನ ಸಿದ್ಧಾಂತ

ಹುಟ್ಟಿದ ಮೇಲೆ ಹೇಗಾದರೂ ಬದುಕಲೇಬೇಕಾದದ್ದು ವಾಸ್ತವ ತತ್ವ. 'ಎಲ್ಲಾರು ಮಾಡುವುದು ಹೊಟ್ಟೆಗಾಗಿ' ಎಂದು ಕನಕದಾಸರು ಹಾಡಿದರೆ, 'ಕಳಬೇಡ, ಕೊಲಬೇಡ' ಎಂದು ಬಸವಣ್ಣ ನುಡಿದರು. ಎರಡೂ ಸಾಲುಗಳಿಂದ ಸಮ್ಮಿಳಿತಗೊಂಡ ಬದುಕಿನ ಸಿದ್ಧಾಂತವನ್ನು ತಮ್ಮ 'ಪುಕ್ಸಟ್ಟೆ ಲೈಫಿ'ನೊಳಗೆ ಪ್ರೇಕ್ಷಕರ ಮುಂದಿಟ್ಟವರು ನಿರ್ದೇಶಕ ಅರವಿಂದ್ ಕುಪ್ಲೀಕರ್.

ಬಹುಮುಖಿ ಸಮಾಜದ ಸಾಮಾನ್ಯರ ಬದುಕಿನ ಸುತ್ತ ಹೆಣೆದಿರುವ ಕಥೆಯಲ್ಲಿ, ವಾಸ್ತವದ ಬಿಂಬಗಳನ್ನು ನಿರ್ದೇಶಕರು ರಂಜನೀಯವಾಗಿಯೇ ತೆರೆದಿಟ್ಟಿದ್ದಾರೆ. ಬದುಕು ಮತ್ತು ವ್ಯವಸ್ಥೆಯನ್ನು ಪರಸ್ಪರ ಮುಖಾಮುಖಿಯಾಗಿಸುತ್ತಲೇ, ನಮ್ಮ ಅಕ್ಕಪಕ್ಕದಲ್ಲೇ ನಡೆಯುತ್ತಿರುವ ಘಟನೆ ಇದೇನೋ ಎಂಬ ಆಪ್ತತೆಯನ್ನು ಕಥೆಯುದ್ದಕ್ಕೂ ಕಟ್ಟಿ ಕೊಟ್ಟಿದ್ದಾರೆ.

ಭ್ರಷ್ಟ ವ್ಯವಸ್ಥೆಯ ಸುಳಿಗೆ ಅನಿವಾರ್ಯವಾಗಿ ಸಿಲುಕುವ ಬಡ ಯುವಕನ ಬದುಕಿನ ತೊಳಲಾಟ ಸಿನಿಮಾದ ಕಥಾವಸ್ತು. ತಿಳಿ ಹಾಸ್ಯ, ನವಿರು ಪ್ರೇಮ, ಕೌತುಕದ ಜೊತೆಗೆ ಭಾವುಕತೆಯ ಸ್ಪರ್ಶ ಇಲ್ಲಿದೆ. ಸಿನಿಮಾ ಮುಗಿಯುವವರೆಗೆ ಕುರ್ಚಿಯಿಂದ ಕದಲದಂತೆ ಮಾಡುವ ಲವಲವಿಕೆಯ ಗಟ್ಟಿ ನಿರೂಪಣೆ ಮೂಲಕ, ನಿರ್ದೇಶಕರು ಮೊದಲ ಪ್ರಯತ್ನದಲ್ಲೇ ಭರವಸೆ ಹುಟ್ಟಿಸಿದ್ದಾರೆ.



'ಪುಗ್ಸಟ್ಟೆ ಲೈಫ್...'ನಲ್ಲಿ ಸಂಚಾರಿ ವಿಜಯ್

ನಕಲಿ ಕೀ ತಯಾರಿಸುವ ಬಡ ಶಹಜಹಾನ್ ಎಂಬ ಯುವಕನ ಪಾತ್ರವನ್ನು ಸಂಚಾರಿ ವಿಜಯ್ ಜೀವಿಸಿದ್ದಾರೆ. ತೆರೆ ಮೇಲೆ ಅವರ ಮನೋಜ್ಞ ನಟನೆಯನ್ನು ಕಣ್ತುಂಬಿಕೊಂಡವರಿಗೆ ವಿಜಯ್ ಈಗ ನಮ್ಮೊಂದಿಲ್ಲ ಎಂಬುದನ್ನು ಅರಗಿಸಿಕೊಳ್ಳಲು ಕಷ್ಟವಾಗಬಹುದು.

ನಾವು ನೋಡಿದ ಸಿನಿಮಾ

ಪುಕ್ಸಟ್ಟೆ ಲೈಫು

- ನಿರ್ಮಾಪಕ: ನಾಗರಾಜ್ ಸೋಮಯಾಜಿ
- ನಿರ್ದೇಶನ: ಅರವಿಂದ್ ಕುಪ್ಲೀಕರ್
- ಸಂಗೀತ: ವಾಸು ದೀಕ್ಷಿತ್, ಹಿನ್ನೆಲೆ ಸಂಗೀತ: ಪೂರ್ಣಚಂದ್ರ ತೇಜಸ್ವಿ
- ಛಾಯಾಗ್ರಹಣ: ಅದ್ವೈತ್ ಗುರುಮೂರ್ತಿ
- ತಾರಾಗಣ: ಸಂಚಾರಿ ವಿಜಯ್, ಮಾತಂಗಿ ಪ್ರಸನ್ನ, ಅಚ್ಯುತ್‌ಕುಮಾರ್, ರಂಗಾಯಣ ರಘು

ಸಿನಿಮಾದ ಕೊನೆಯಲ್ಲೂ ಶಹಜಹಾನ್ ಇನ್ನಿಲ್ಲವಾಗುವುದು ಪ್ರೇಕ್ಷಕನಿಗೆ ಕಾಕತಾಳೀಯವೆನಿಸದೆ ಇರದು.

ವಕೀಲೆ ಶಾರದಾ (ಮಾತಂಗಿ ಪ್ರಸನ್ನ), 'ಸಿಂಗಂ' ಇನ್‌ಸ್ಪೆಕ್ಟರ್ ಬೋರೇಗೌಡ (ಅಚ್ಯುತ್‌ಕುಮಾರ), ಲಾಕಪ್ ಕಳ್ಳ ವಿನಯ್ ಮಲ್ಯ (ಅರವಿಂದ್ ಕುಪ್ಲೀಕರ್), ಅಯ್ಯಪ್ಪ ಮಾಲಾಧಾರಿ ತನಿಖಾಧಿಕಾರಿ (ರಂಗಾಯಣ ರಘು), ಹೆಡ್ ಕಾನ್‌ಸ್ಟೆಬಲ್ ದೊಡ್ಡಪ್ಪ, ಕಾನ್‌ಸ್ಟೆಬಲ್ ಪಾತ್ರಗಳು ನಾಯಕನ ಪಾತ್ರದಷ್ಟೇ ತೂಕವಾಗಿವೆ. ಎಲ್ಲರೂ ತಮ್ಮ ಪಾತ್ರಗಳನ್ನು ಅವಾಹಿಸಿಕೊಂಡು ನಟಿಸಿದ್ದಾರೆ.

ಹಾಡಾಗಿರುವ ಕನಕದಾಸರ ಕೀರ್ತನೆ, ಬಸವಣ್ಣನ ವಚನದ ಆಲಾಪ ಬದುಕಿನ ದರ್ಶನ ಮಾಡಿಸುವಂತಿವೆ. ವಾಸು ದೀಕ್ಷಿತ್ ಸಂಗೀತ ನಿರ್ದೇಶನ ಹಾಗೂ ಪೂರ್ಣಚಂದ್ರ ತೇಜಸ್ವಿ ಹಿನ್ನೆಲೆ ಸಂಗೀತ ಕಥೆಗೆ ಮೆರುಗು ತಂದಿದೆ. ಮಧ್ಯಮ ವರ್ಗದ ಬದುಕನ್ನು ಪರಿಣಾಮಕಾರಿಯಾಗಿ ಕಟ್ಟಿಕೊಡುವ ಜೊತೆಗೆ, ಕಥೆಗೆ ವ್ಯಾಲ್ಯೂ ಆ್ಯಡ್ ಎನಿಸುವಂತಹ ಛಾಯಾಗ್ರಹಣ ಅದ್ವೈತ್ ಗುರುಮೂರ್ತಿ ಅವರದು. ಯಾವುದೂ ಅತಿ–ಕಡಿಮೆ ಎನಿಸದಂತೆ ಸುರೇಶ್ ಆರ್ಮುಗಂ ದೃಶ್ಯಗಳನ್ನು ಸಂಯೋಜಿಸಿದ್ದಾರೆ.

- ಓದೇಶ ಸಕಲೇಶಪುರ



ಕೋವಿಡ್ ಕಾಲದಲ್ಲಿ 'ಪಾಸಿಟಿವ್' ಎನ್ನುವ ಪದ ನೆಗೆಟಿವ್ ಆಗಿ ಕಾಡುತ್ತಿರುವ ದಿನಗಳಲ್ಲಿ ಜಾಹೀರಾತು ಪ್ರಪಂಚದಲ್ಲಿ ಬದಲಾಗುತ್ತಿರುವ ಹೆಣ್ಣಿನ ಸ್ಥಾನಮಾನಗಳು ಒಂದರ್ಥದಲ್ಲಿ 'ಪಾಸಿಟಿವ್' ಆಗಿ ಕಾಣುತ್ತಿವೆ.

ಜಾಹೀರಾತು ಪ್ರಪಂಚವೂ, ಅವಳ ವ್ಯಕ್ತಿತ್ವವೂ...

ಮಂಜುಶ್ರೀ ಎಂ. ಕಡಕೋಳ

ನೂರು ರನ್ ಪೂರೈಸಲು ಇನ್ನೊಂದೇ ರನ್ ಬಾಕಿ ಇದೆ. ಎಲ್ಲರ ಚಿತ್ತವೂ ಚೆಂಡಿನತ್ತಲೇ ನೆಟ್ಟಿದೆ. ಬ್ಯಾಟಿಂಗ್ ಮಾಡುತ್ತಿದ್ದ ಅವಳು ಜೋರಾಗಿ ಬ್ಯಾಟ್ ಬೀಸಿದ್ದಷ್ಟೇ... ಎಲ್ಲರೂ ಒಂದು ಕ್ಷಣ ಉಸಿರು ಬಿಗಿಹಿಡಿದು ನೋಡುತ್ತಿದ್ದಂತೆಯೇ ಚೆಂಡು ನಿಗದಿತ ಬೌಂಡರಿ ದಾಟುತ್ತದೆ. ಇತ್ತ ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ಯುವಕನೊಬ್ಬ ಕಾವಲುಗಾರನ ಕೈಗೆ ಸಿಗದೇ ಸೀದಾ ಆಟದ ಮೈದಾನಕ್ಕೆ ನುಗ್ಗಿ ಬ್ಯಾಟಿಂಗ್ ಮಾಡುತ್ತಿದ್ದ ತನ್ನ ಸಂಗಾತಿಗೆ ಸಿಹಿ ತಿನಿಸಿ ಅವಳ ಗೆಲುವನ್ನು ಸಂಭ್ರಮಿಸುತ್ತಾನೆ...

90ರ ದಶಕದಲ್ಲಿ ಬಹುತೇಕರಿಗೆ ಪ್ರಿಯವಾಗಿದ್ದ ಕ್ಯಾಡ್‌ಬರೀಸ್ ಡೈರಿಮಿಲ್ಕ್ ಜಾಹೀರಾತಿನ ಮರುಸೃಷ್ಟಿಗೆ ಇತ್ತೀಚೆಗೆ ಹಲವರಿಂದ ಪ್ರಶಂಸೆ ಹರಿದುಬರುತ್ತಿದೆ. ಕ್ರೀಡಾಕ್ಷೇತ್ರದ ಹೆಣ್ಣುಮಕ್ಕಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಚಾಕೊಲೇಟ್ ಕಂಪನಿಯೊಂದರ ಈ ಜಾಹೀರಾತು ಕ್ರೀಡೆ ಸೇರಿದಂತೆ ಪುರುಷ ಪಾರಮ್ಯದ ಕ್ಷೇತ್ರಗಳಲ್ಲಿ ಹೆಣ್ಣುಮಕ್ಕಳು ದೃಢವಾಗಿ ಹೆಜ್ಜೆಯೂರುತ್ತಿರುವ ಕುರಿತು ಪರೋಕ್ಷವಾಗಿ ಗಮನ ಸೆಳೆಯುತ್ತಿದೆ.

ಡೈರಿಮಿಲ್ಕಿನ ಜಾಹೀರಾತಿನಂತೆಯೇ ಮತ್ತೊಂದು ಜಾಹೀರಾತು ಕೂಡಾ ಸಾಮಾಜಿಕ ಜಾಲತಾಣಗಳಲ್ಲಿ ಈಗ ಬಹು ಚರ್ಚೆಯ ವಿಷಯವಾಗಿದೆ. ಆಲಿಯಾ ಭಟ್ ನಟಿಸಿರುವ ಈ ಜಾಹೀರಾತು ವಿವಾದಕ್ಕೂ ಈಡಾಗಿದೆ.

ವರನೊಂದಿಗೆ ವಿವಾಹದ ಮಂಟಪದಲ್ಲಿ ಕುಳಿತ ವಧು ಹೇಳ್ತಾಳೆ...'ಅಜ್ಜಿ ಬಾಲ್ಯದಿಂದಲೇ ಹೇಳ್ತಾ ಇದ್ದಾಳೆ ನೀನು ಗಂಡನ ಮನೆಗೆ ಹೋದ ಮೇಲೆ ನಿನ್ನ ನೆನಪು ತುಂಬಾ ಬರುತ್ತೆ ಅಂತ. ಅಂದರೆ ಈ ಮನೆ ನನ್ನದಲ್ವಾ? ಅಪ್ಪ ಅಂತೂ ಬಿಡಿ. ನಾನು ಕೇಳಿದ್ದಕ್ಕೆಲ್ಲ ಇಲ್ಲ ಅನ್ನುವ ಮಾತೇ ಇಲ್ಲ. ಆದರೆ, ಎಲ್ಲರೂ ಹೇಳ್ತಾ ಇದ್ದರು ಅವಳು ಪರರ ಸೊತ್ತು. ಅವಳಿಗೆ ಅಷ್ಟೊಂದು ಏಕೆ ಮುದ್ದುಮಾಡಿ ಹಾಳು ಮಾಡ್ತೀಯಾ ಅಂತ. ಆದರೆ ಅಪ್ಪ ಅದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ. ಹಾಗಂತ ನೀನು ಪರಕೀಯಳೂ ಅಲ್ಲ, ಪರರ ಸೊತ್ತೂ ಅಲ್ಲ ಅಂತ ಅಪ್ಪ ಹೇಳಲೇ ಇಲ್ಲ. ಅಮ್ಮ ನನ್ನನ್ನು ಹಕ್ಕಿ ಅಂತ ಕರೀತಾಳೆ. ಅವಳು ಹೇಳ್ತಾಳೆ ಇನ್ಮೇಲೆ ನಿನ್ನ ಊಟ-ವಸತಿ ಬೇರೆ ಕಡೆ ಇದೆ ಅಂತ. ಆದರೆ, ಹಕ್ಕಿಗೆ ಹಾರಾಡಲು ಇಡೀ ಆಕಾಶವೇ ಇರುತ್ತೆ ಅಲ್ವಾ? ಬೇರೆ ಆಗೋದು, ಪರಕೀಯ ಅನಿಸೋದು, ಮತ್ತೊಬ್ಬರ ಕೈಗೆ ಒಪ್ಪಿಸೋದು. ನಾನೇನು ದಾನ ಮಾಡುವ ವಸ್ತುವೇ? ಯಾಕೆ ಕೇವಲ ಕನ್ಯಾದಾನ?...

ಆಲಿಯಾ ಅಭಿನಯದ ಈ ಜಾಹೀರಾತು 'ಕನ್ಯಾದಾನ'ದ ಕುರಿತು ವಿಭಿನ್ನವಾಗಿ ಬೆಳಕು ಚೆಲ್ಲುತ್ತದೆ. ವಿವಾಹದ ಸಂದರ್ಭದಲ್ಲಿ 'ಕನ್ಯಾದಾನ'ವೇ ಏಕೆ ಎಂದು ಪ್ರಶ್ನಿಸುವ ಆಲಿಯಾಗೆ ಉತ್ತರವೆಂಬಂತೆ ಆಕೆಯ ಅತ್ತೆ ತನ್ನ ಮಗನ ಕೈಯನ್ನೂ ಸೊಸೆಯ ಕೈಯೊಂದಿಗೆ ಜೋಡಿಸಿ, ಹೆಣ್ಣಿನ ಮನೆಯವರಿಗೆ ಒಪ್ಪಿಸುವ ದೃಶ್ಯ ಪ್ರೇಕ್ಷಕರ ಗಮನ ಸೆಳೆಯುತ್ತಿದೆ.

ಮಹಿಳೆಯ ವ್ಯಕ್ತಿತ್ವದ ಪ್ರಸ್ತುತಿ

ಉತ್ಪನ್ನವೊಂದನ್ನು ಬಿಕರಿ ಮಾಡಲು ಜಾಹೀರಾತು ಕಂಪನಿಗಳು ಹೆಣ್ಣನ್ನು ಈ ಹಿಂದೆ ಚಿತ್ರಿಸುತ್ತಿದ್ದ ರೀತಿಗೂ ಪ್ರಸ್ತುತ ಚಿತ್ರಿಸುತ್ತಿರುವ ರೀತಿಗೂ ಈಗ ಅಗಾಧ ವ್ಯತ್ಯಾಸವಾಗಿದೆ. ಈ ಹಿಂದೆ ಗಂಡಸರ ಒಳಉಡುಪು, ಶೇವಿಂಗ್ ಕ್ರೀಂ- ಸೆಟ್‌ಗಳ, ವಿಟಮಿನ್ ಗುಳಿಗೆಗಳ ಜಾಹೀರಾತಿನಲ್ಲಿ ಪುರುಷ ರೂಪದರ್ಶಿಯ ಜತೆಗೆ ಬಳಕುವ ಹೆಣ್ಣೂ ಇರಬೇಕಾಗುತ್ತಿತ್ತು. (ಕೆಲವು ಜಾಹೀರಾತುಗಳಲ್ಲಿ ಅದು ಈಗಲೂ ಇದೆ) ಹೆಣ್ಣನ್ನು ತಾಯಿ, ಮಗಳು, ಪತ್ನಿ ಇಲ್ಲವೇ ಪ್ರೇಯಸಿ ಈ ತಥಾಕಥಿತ ಪಾತ್ರಗಳಲ್ಲಷ್ಟೇ ತೋರಿಸಲಾಗುತ್ತಿತ್ತು. ಆದರೆ, ಇತ್ತೀಚಿನ ವರ್ಷಗಳ ಜಾಹೀರಾತುಗಳಲ್ಲಿ ಮಹಿಳೆಯ ವ್ಯಕ್ತಿತ್ವ, ಉದ್ಯೋಗ, ನೋವು-ನಲಿವು ಕುರಿತೂ ಪ್ರಸ್ತುತಪಡಿಸುತ್ತಿರುವುದು ಆಶಾದಾಯಕ ಸಂಗತಿ.

ಮಹಿಳಾ ಸಬಲೀಕರಣದ ಸೂಕ್ಷ್ಮ ಎಳೆಯನ್ನಿಟ್ಟುಕೊಂಡು ಆಕೆಯ ವ್ಯಕ್ತಿತ್ವದ ದೃಢತೆಯನ್ನು ಸಾರುವ ಹಲವು ಜಾಹೀರಾತುಗಳು ಪ್ರೇಕ್ಷಕರಲ್ಲಿ ಸಣ್ಣಮಟ್ಟದಲ್ಲಿಯಾದರೂ ಚಿಂತನೆಗೆ ಹಚ್ಚುತ್ತಿವೆ. ಸಮಾಜದಲ್ಲಿ ಕೆಲ ಕೆಲಸಗಳನ್ನು ಗಂಡಷ್ಟೇ ಅಥವಾ ಹೆಣ್ಣಷ್ಟೇ ಮಾಡಬಹುದು ಎನ್ನುವ ಮಿಥ್ಯೆಯನ್ನು ಒಡೆದು ಕಟ್ಟುತ್ತಿವೆ. ಆ ಮೂಲಕ ಲಿಂಗಸೂಕ್ಷ್ಮತೆಯ ಸಂದೇಶವನ್ನು ಈ ಜಾಹೀರಾತುಗಳು ಬಲುಸೂಕ್ಷ್ಮವಾಗಿಯೇ ರವಾನಿಸುತ್ತಿವೆ.

ಉದಾಹರಣೆಗೆ ಜಾಹೀರಾತೊಂದರಲ್ಲಿ ಮಧ್ಯರಾತ್ರಿ ಕೆಟ್ಟು ನಿಲ್ಲುವ ಕಾರಿನ ಟೈರ್ ಅನ್ನು ಬಾಲಕಿಯೊಬ್ಬಳು ಬದಲಿಸುವುದು. ಟ್ರಾಫಿಕ್‌ನಲ್ಲಿ ತೃತೀಯ ಲಿಂಗಿಯೊಬ್ಬರು ನೀಡುವ ಟೀ ಕುಡಿದು 'ಸದಾ ಸುಖಿಯಾಗಿರು' ಎಂದು ಹಾರೈಸುವ ಅಜ್ಜಿ, ಅಡುಗೆ ಮನೆಯಿಂದ ಬರುವಾಗ ಕಾಲು ಜಾರಿ ಸೊಸೆ, ಮಾವನ ಮೈಮೇಲೆ ಸಾರು ಚೆಲ್ಲಿದಾಗ ಸಿಟ್ಟಿಗೆದ್ದು ಕುರ್ಚಿಯಿಂದ ಮೇಲೆಳುವ ಆತ, ಕಾಲಿನ ನೋವಿಗೆ ಮುಲಾಮು ತಂದುಕೊಡುವುದು, ಈ ಹಿಂದೆ ಸ್ಯಾನಿಟರಿ ನ್ಯಾಪಕಿನ್ ಜಾಹೀರಾತುಗಳಲ್ಲಿ ತೋರಿಸುತ್ತಿದ್ದ ನೀಲಿ ಬಣ್ಣದ ಜಾಗಕ್ಕೆ ಮುಟ್ಟಿನ ಕೆಂಪು ಬಣ್ಣವನ್ನೇ ಬಳಸುತ್ತಿರುವುದು, ಮುಂಜಾನೆ ಹೆಂಡತಿಗಿಂತ ಮುಂಚೆಯೇ ಎದ್ದು ಕಾಫಿ ಮಾಡಿಕೊಡುವ ಗಂಡ, ತಾಯಿ ಇಲ್ಲದ ಮಗಳಿಗೆ ತಂದೆಯೇ ಜಡೆ ಹೆಣೆಯುವುದು, ಅಡುಗೆ ಮಾಡಿಕೊಡುವುದು... ಹೀಗೆ ಇತ್ತೀಚಿನ ವರ್ಷಗಳಲ್ಲಿನ ಹಲವು ಜಾಹೀರಾತುಗಳು ಸಮಾಜದಲ್ಲಿ ಬದಲಾಗುತ್ತಿರುವ ಮತ್ತು ಬದಲಾಗಬೇಕಾಗಿರುವ ಲಿಂಗಪಲ್ಲಟಗಳ ಚಿತ್ರಣ ನೀಡುತ್ತಿವೆ. ಕೋವಿಡ್ ಕಾಲದಲ್ಲಿ 'ಪಾಸಿಟಿವ್' ಎನ್ನುವ ಪದ ನೆಗೆಟಿವ್ ಆಗಿ ಕಾಡುತ್ತಿರುವ ದಿನಗಳಲ್ಲಿ ಜಾಹೀರಾತು ಲೋಕದಲ್ಲಿ ಬದಲಾಗುತ್ತಿರುವ ಹೆಣ್ಣಿನ ಚಿತ್ರಣ ಒಂದರ್ಥದಲ್ಲಿ 'ಪಾಸಿಟಿವ್' ಆಗಿ ಕಾಣುತ್ತಿದೆ.

ಜಾಹೀರಾತುಗಳ ಅಂತಿಮ ಧ್ಯೇಯ ಗ್ರಾಹಕರಿಗೆ ತಮ್ಮ ಉತ್ಪನ್ನಗಳನ್ನು ಬಿಕರಿ ಮಾಡುವುದೇ ಆಗಿದ್ದರೂ ಸಮಾಜದಲ್ಲಿ ಸ್ತ್ರೀವಾದಿ ದೃಷ್ಟಿಕೋನದ ಅವಶ್ಯಕತೆಯನ್ನು ಮನಗಾಣಿಸುವುದನ್ನು ಅಲ್ಲಗಳೆಯಲಾಗದು. ಸಮ ಸಮಾಜದ ನಿರ್ಮಾಣದಲ್ಲಿ ಹೆಣ್ಣು-ಗಂಡು ಜೊತೆಯಾಗಿ ಹೆಜ್ಜೆ ಹಾಕಬೇಕೆನ್ನುವ ಸಂದೇಶವನ್ನು ಕೆಲ ಜಾಹೀರಾತುಗಳು ನೀಡುತ್ತಿರುವುದು ಸ್ವಾಗತಾರ್ಹ.

ಸ್ಥಿರಮಾದರಿಯ ಸಡಿಲೀಕರಣ

ತಮ್ಮ ಉತ್ಪನ್ನಗಳಿಗೆ ಯಾರು ಗ್ರಾಹಕರು ಎನ್ನುವುದನ್ನು ಅರಿತಿರುವ ಕಂಪನಿಗಳು, ಅವುಗಳನ್ನು ಬಳಸುವವರ ಮನಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡೇ ಜಾಹೀರಾತುಗಳನ್ನು ಜಾಣ್ಮೆಯಿಂದ ಕಟ್ಟಿಕೊಡುತ್ತವೆ. ಲಿಂಗ, ಜಾತಿ, ವರ್ಗ, ವರ್ಣ, ಪ್ರಾದೇಶಿಕತೆಯನ್ನು ಇಟ್ಟುಕೊಂಡೇ ಸ್ಥಿರಮಾದರಿಯ ಮಹಿಳಾ ಪಾತ್ರಗಳನ್ನು ಕೆಲವು ಜಾಹೀರಾತುಗಳು ಸಡಿಲಗೊಳಿಸುತ್ತಿವೆ. ಗಂಡನೊಬ್ಬ ಹೆಂಡತಿಗೆ ಕಾಫಿ ಮಾಡಿಕೊಡುವ ಜಾಹೀರಾತು ಗ್ರಾಮೀಣಮಟ್ಟದಲ್ಲಿ ಬೀರುವ ಪರಿಣಾಮವೇ ಬೇರೆ. ಮುಕ್ತ ವಾತಾವರಣಕ್ಕೆ ತೆರೆದುಕೊಳ್ಳಲಾರದ ಸಮಾಜದ ಕೆಲವರ್ಗದ ಮೇಲೆ ಇಂಥ ಜಾಹೀರಾತುಗಳು ತುಸು ಮಟ್ಟಿಗಾದರೂ ಪ್ರಭಾವ ಬೀರುವ ಸಾಧ್ಯತೆ ಇದೆ. ಲಿಂಗಸೂಕ್ಷ್ಮತೆಯಂಥ ಸಂಗತಿಗಳನ್ನು ವಿದ್ಯಾರ್ಥಿಗಳಿಗೆ ತರಗತಿಯಲ್ಲಿ ತಿಳಿಸಿ ತರಬೇತಿ ಕೊಡುವುದಕ್ಕೂ ಜಾಹೀರಾತಿನಂಥ ದೃಶ್ಯಮಾಧ್ಯಮದ ಮೂಲಕ ಹೇಳುವುದಕ್ಕೂ ಅಗಾಧ ವ್ಯತ್ಯಾಸವಿದೆ.

ಡಾ. ಕೆ.ವಿ.ನೇತ್ರಾವತಿ

ಉಪನ್ಯಾಸಕಿ ಮತ್ತು ಮಹಿಳಾ ಅಧ್ಯಯನದ ಸಂಶೋಧಕಿ

ಮಹಿಳಾ ಪ್ರಜ್ಞೆಯ ಫಲಿತ

ಇಂಥ ಜಾಹೀರಾತುಗಳನ್ನು ರೂಪಿಸುವಂಥವರು ಸಾಮಾನ್ಯವಾಗಿ ಮಹಿಳೆಯರೇ ಆಗಿರುತ್ತಾರೆ. ಹೆಣ್ಣುಮಕ್ಕಳು ಒಂದು ಕ್ಷೇತ್ರದಲ್ಲಿ ಪ್ರವೇಶ ಮಾಡಿದಾಗ ಅದುವರೆಗೆ ಆ ಕ್ಷೇತ್ರದಲ್ಲಿನ ಪೂರ್ವಗ್ರಹಗಳನ್ನು ಒಡೆಯಲು ಸಾಧ್ಯವಾಗುತ್ತಿದೆ. ಮಹಿಳಾ ಪ್ರಜ್ಞೆಯನ್ನು ರೂಪಿಸಿಕೊಂಡವರು (ಸ್ತ್ರೀ/ಪುರುಷ) ಇಂಥ ಜಾಹೀರಾತುಗಳನ್ನು ರೂಪಿಸಿದಾಗ ಅದುವರೆಗೆ ಸ್ಥಾಪಿತವಾಗಿದ್ದ ಗ್ರಹಿಕೆಗಳನ್ನು ಮುರಿದು ಕಟ್ಟುವ ಪ್ರಕ್ರಿಯೆ ನಡೆಯುತ್ತಿರುತ್ತದೆ. ಇಂಥ ಸಂದರ್ಭದಲ್ಲಿ ಸಾಮಾಜಿಕ-ಸಾಂಸ್ಕೃತಿಕ ದೃಷ್ಟಿಕೋನದ ಪಲ್ಲಟವೂ ಆಗುತ್ತಿರುತ್ತದೆ. ಇಂಥ ಜಾಹೀರಾತುಗಳಿಗೆ ಪ್ರೇಕ್ಷಕರ ಹೇಗೆ ಪ್ರತಿಕ್ರಿಯಿಸುತ್ತಾರೆ ಎನ್ನುವುದೂ ಮುಖ್ಯ. ಈ ಹಿಂದೆ ಜಾಹೀರಾತು ಕಂಪನಿಗಳು ತಮ್ಮ ಉತ್ಪನ್ನದ ಮಾರಾಟದತ್ತ ಮಾತ್ರ ಗಮನಿಕರಿಸುತ್ತಿದ್ದವು. ಆದರೆ, ಇತ್ತೀಚೆಗೆ ಸಾಮಾಜಿಕ ಜವಾಬ್ದಾರಿಯ ಸಂದೇಶ ಬಿತ್ತರಿಸುವ ಕಾರ್ಯವನ್ನೂ ಮಾಡುತ್ತಿವೆ.

ಡಾ. ಶೈಲಜ ಹಿರೇಮಠ

ಮಹಿಳಾ ವಿಭಾಗದ ಮುಖ್ಯಸ್ಥೆ, ಹಂಪಿ ಕನ್ನಡ ವಿಶ್ವವಿದ್ಯಾಲಯ

ಫ್ಯಾಷನ್

ಬ್ಲೇಜರ್ ಜೊತೆ ಆಕರ್ಷಕ ಸ್ಟೋಲ್, ಬ್ಯಾಗ್

ರೇಷ್ಮಾ

ಇತ್ತೀಚೆಗೆ ಕಚೇರಿ ಫ್ಯಾಷನ್‌ನಲ್ಲಿ ಬ್ಲೇಜರ್ ಟ್ರೆಂಡ್ ಹೆಚ್ಚು ಸದ್ದು ಮಾಡುತ್ತಿದೆ. ಬಾಲಿವುಡ್ ನಟಿಯರಾದ ದೀಪಿಕಾ ಪಡುಕೋಣೆ, ಕರೀನಾ ಕಪೂರ್ ಮೊದಲಾದವರು ಸಾರ್ವಜನಿಕವಾಗಿ ಕಾಣಿಸಿಕೊಳ್ಳುವಾಗ ಬ್ಲೇಜರ್ ಧರಿಸಿ, ಯುವತಿಯರಲ್ಲೂ ಈ ಫ್ಯಾಷನ್ ಬಗ್ಗೆ ಆಸಕ್ತಿ ಮೂಡಿಸಿದ್ದಾರೆ. ಶರ್ಟ್ ಅಥವಾ ಟೀ ಶರ್ಟ್ ಮೇಲೆ ಧರಿಸುವ ಬ್ಲೇಜರ್ ಅಂದವನ್ನು ಹೆಚ್ಚಿಸುವುದರಲ್ಲಿ ಅನುಮಾನವಿಲ್ಲ. ಅದರೊಂದಿಗೆ ಈಗ ಬ್ಲೇಜರ್‌ನಲ್ಲಿ ಹೊಸ ಹೊಸ ವಿನ್ಯಾಸವನ್ನು ಅಳವಡಿಸಿಕೊಳ್ಳಲಾಗಿದೆ. ಫ್ಯಾಷನ್ ಲೋಕದಲ್ಲೂ ಬ್ಲೇಜರ್ ಟ್ರೆಂಡ್ ಹೆಚ್ಚು ಸದ್ದು ಮಾಡುತ್ತಿದ್ದು ಕಚೇರಿ ಕೆಲಸ ಮಾಡುವವರಿಗೆ ಫ್ಯಾಷನ್‌ನೊಂದಿಗೆ ಆಫೀಶಿಯಲ್ ನೋಟ ಕೂಡ ಸಿಗುವಂತೆ ಮಾಡುತ್ತದೆ.

ಹಿಂದೆಲ್ಲಾ ಶಾರ್ಟ್ ಸ್ಕರ್ಟ್ ಅಥವಾ ಫಾರ್ಮಲ್ ಪ್ಯಾಂಟ್ ಜೊತೆಗೆ ಹೆಣ್ಣುಮಕ್ಕಳು ಹೆಚ್ಚಾಗಿ ಬ್ಲೇಜರ್ ಧರಿಸುತ್ತಿದ್ದರು. ಈಗ ಜೀನ್ಸ್ ಟಾಪ್, ಪೆನ್ಸಿಲ್ ಪ್ಯಾಂಟ್ ಟಾಪ್, ಜೆಗ್ಗಿಂಗ್ಸ್ ಪ್ಯಾಂಟ್ ಟಾಪ್ ಜೊತೆಗೂ ಬ್ಲೇಜರ್ ಧರಿಸಬಹುದಾಗಿದೆ.

ಬಣ್ಣ ಹಾಗೂ ಚಿತ್ತಾರ: ಹಿಂದೆ ಬ್ಲೇಜರ್ ಎಂದರೆ ಕಪ್ಪು ಬಣ್ಣ, ನೀಲಿ ಹೀಗೆ ಒಂದೆರಡು ಬಣ್ಣದಲ್ಲೇ ಇರುತ್ತಿದ್ದವು. ಈಗ ಎಲ್ಲಾ ಬಣ್ಣ ಹಾಗೂ ಹೂವಿನ ಚಿತ್ತಾರ, ಗೊಂಬೆ ಚಿತ್ತಾರ... ಹೀಗೆ ಹೆಂಗಳೆಯರು ಮೆಚ್ಚುವ ರೀತಿಯಲ್ಲಿ ಬ್ಲೇಜರ್‌ಗಳು ಫ್ಯಾಷನ್ ಮಾರುಕಟ್ಟೆಯನ್ನು ಅಲಂಕರಿಸಿವೆ.

ಬ್ಲೇಜರ್‌ನೊಂದಿಗೆ ಬ್ಯಾಗ್

ಬ್ಲೇಜರ್ ಧರಿಸಿದಾಗ ಒಂದು ಕ್ಲಾಸಿ ಲುಕ್ ಸಿಗಬೇಕು ಎಂದರೆ ಅದರೊಂದಿಗೆ ಹ್ಯಾಂಡ್ ಬ್ಯಾಗ್ ಕೂಡ ಹಾಕಿಕೊಳ್ಳಬೇಕು. ಬ್ಲೇಜರ್ ಬಣ್ಣದ್ದೇ ಬ್ಯಾಗ್‌ಗಿಂತ ಅದಕ್ಕೆ ತದ್ವಿರುದ್ಧ ಬಣ್ಣದ ಖರೀದಿಸಿ. ಇದು ಸ್ಟೈಲಿಷ್ ನೋಟ ಸಿಗುವಂತೆ ಮಾಡುವುದು ಸುಳ್ಳಲ್ಲ. ಉದ್ದನೆಯ ಬ್ಯಾಗ್‌ಗಿಂತ ಗಿಡ್ಡನೆಯ ಬ್ಯಾಗ್ ಚೆನ್ನಾಗಿ ಕಾಣುತ್ತದೆ. ಇದರೊಂದಿಗೆ ಸ್ಲಿಂಗ್ ಬ್ಯಾಗ್ ಕೂಡ ಬ್ಲೇಜರ್ ಫ್ಯಾಷನ್‌ಗೆ ಹೆಚ್ಚು ಹೊಂದಿಕೆಯಾಗುತ್ತದೆ.

ಚೈನ್ ವಾಚ್

ಬ್ಲೇಜರ್ ಹಾಕಿಕೊಂಡಾಗ ಬೆಲ್ಟ್ ಇರುವ ವಾಚ್ ಧರಿಸುವುದಕ್ಕಿಂತ ಚೈನ್ ವಾಚ್ ಧರಿಸುವುದು ಉತ್ತಮ. ಬೆಳ್ಳಿ ಅಥವಾ ಚಿನ್ನದ ಬಣ್ಣದ ಚೈನ್ ಇರುವ ವಾಚ್ ಬ್ಲೇಜರ್‌ನೊಂದಿಗೆ ಹೆಚ್ಚು ಹೊಂದಿಕೊಳ್ಳುತ್ತದೆ.

ಚಪ್ಪಲಿಗಳು

ಬ್ಲೇಜರ್ ಜೊತೆಗೆ ಸ್ಯಾಂಡಲ್, ಶೂ, ಎತ್ತರದ ಹಿಮ್ಮಡಿಯ ಶೂ ಎಲ್ಲವೂ ಹೊಂದುತ್ತವೆ. ಆದರೆ ನೀವು ಯಾವ ಬಗೆಯ ಪ್ಯಾಂಟ್ ಧರಿಸಿದ್ದೀರಿ ಎಂಬುದರ ಮೇಲೆ ನಿಮ್ಮ ಚಪ್ಪಲಿಯನ್ನು ನಿರ್ಧರಿಸುವುದು ಮುಖ್ಯ. ಫಾರ್ಮಲ್ ಪ್ಯಾಂಟ್ ಜೊತೆ ಬ್ಲೇಜರ್ ಧರಿಸಿದ್ದರೆ ಶೂ ಧರಿಸುವುದು ಸೂಕ್ತ. ಜೀನ್ಸ್ ಜೊತೆ ಬ್ಲೇಜರ್ ಧರಿಸಿದ್ದರೆ ಶೂ ಹಾಕಿದಾಗ ಹೆಚ್ಚು ಸ್ಟೈಲಿಶ್ ಆಗಿ ಕಾಣಬಹುದು. ಇನ್ನು ಪೆನ್ಸಿಲ್ ಪ್ಯಾಂಟ್ ಜೊತೆ ಹೀಲ್ಸ್ ಹಾಕುವುದರಿಂದ ಅಂದವನ್ನು ಹೆಚ್ಚಿಸಿಕೊಳ್ಳಬಹುದು.

ನೆಕ್ಲೇಸ್

ಕತ್ತಿಗೆ ಗಿಡ್ಡನೆಯ ನೆಕ್ಲೇಸ್ ಧರಿಸುವುದರಿಂದ ಹೆಚ್ಚು ಸುಂದರವಾಗಿ ಕಾಣಬಹುದು. ಒಂದೇ ಎಳೆ ಅಥವಾ ಎರಡು ಎಳೆಯ ಪೆಂಡೆಂಟ್ ಇರುವ ನೆಕ್ಲೇಸ್ ಧರಿಸುವುದು ಹೆಚ್ಚು ಸೂಕ್ತ. ಮುತ್ತಿನ ಅಥವಾ ಹವಳದ ಗಿಡ್ಡನೆಯ ನೆಕ್ಲೇಸ್ ಅನ್ನೂ ಕೂಡ ಧರಿಸುವ ಮೂಲಕ ಅಂದವನ್ನು ಹೆಚ್ಚಿಸಿಕೊಳ್ಳಬಹುದು.

ಸ್ಟೋಲ್



ಬ್ಲೇಜರ್ ಜೊತೆ ಸ್ಟೋಲ್ ಅನ್ನು ಕೂಡ ಮ್ಯಾಚಿಂಗ್ ಮಾಡಿಕೊಳ್ಳಬಹುದು. ಹತ್ತಿ, ಉಣ್ಣೆಯ ವಿವಿಧ ವಿನ್ಯಾಸವಿರುವ ಸ್ಟೋಲ್‌ಗಳು ಬ್ಲೇಜರ್‌ಗೆ ಹೆಚ್ಚು ಹೊಂದುತ್ತವೆ.

ಮಸಾಲೆ ಸ್ವೀಟ್ ಕಾರ್ನ್ ಬೇಬಿಕಾರ್ನ್ ಮಂಚೂರಿಯನ್

ನಳ ಪಾಕ

ರಂಜಿನಿ ಕಾಂಬ್ಳಿ

ಮಸಾಲೆ ಸ್ವೀಟ್ ಕಾರ್ನ್

ಬೇಕಾಗುವ ಸಾಮಗ್ರಿಗಳು: ಸ್ವೀಟ್ ಕಾರ್ನ್ – 1 ಕಪ್, ನಿಂಬೆಹಣ್ಣು – ಅರ್ಧ, ಕೊತ್ತಂಬರಿ ಸೊಪ್ಪು – ಸ್ವಲ್ಪ, ಬೆಣ್ಣೆ – 1 ಚಮಚ, ಖಾರದಪುಡಿ – ಕಾಲು ಚಮಚ, ಚಾಟ್ ಮಸಾಲೆ ಪುಡಿ – ಕಾಲು ಚಮಚ, ಉಪ್ಪು – ರುಚಿಗೆ, ಕಾಳುಮೆಣಸು – ಚಿಟಿಕೆ

ತಯಾರಿಸುವ ವಿಧಾನ: ಕುದಿಯುತ್ತಿರುವ ನೀರಿಗೆ ಸ್ವೀಟ್ ಕಾರ್ನ್ ಹಾಕಿ ಇನ್ನಷ್ಟು ಕುದಿಸಿ. ಚೆನ್ನಾಗಿ ಬೆಂದ ಮೇಲೆ ನೀರು ಬಸಿದುಕೊಂಡು ಒಂದು ಪಾತ್ರೆಯಲ್ಲಿ ತೆಗೆದಿಡಿ. ಬಿಸಿಯಿರುವಾಗಲೇ ಇದಕ್ಕೆ ಬೆಣ್ಣೆ, ಖಾರದಪುಡಿ, ಚಾಟ್ ಮಸಾಲೆ ಪುಡಿ, ಕೊತ್ತಂಬರಿ ಸೊಪ್ಪು, ಉಪ್ಪು, ನಿಂಬೆರಸ, ಕಾಳುಮೆಣಸಿನ ಪುಡಿ ಸೇರಿಸಿ ಚೆನ್ನಾಗಿ ಕಲೆಸಿದರೆ ಮಸಾಲೆ ಸ್ವೀಟ್ ಕಾರ್ನ್ ತಿನ್ನಲು ಸಿದ್ಧ.

ಪ್ರಜಾವಾಣಿ ನೋಡಿಯೊ — ರೆಸಿಪಿ ವಿಡಿಯೊಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಬೇಬಿಕಾರ್ನ್ ಮಂಚೂರಿಯನ್

ಬೇಕಾಗುವ ಸಾಮಗ್ರಿಗಳು: ಬೇಬಿಕಾರ್ನ್ – 200 ಗ್ರಾಂ, ಕಾರ್ನ್‌ಫ್ಲೋರ್ – ಕಾಲು ಕಪ್, ಮೈದಾ – ಕಾಲು ಕಪ್, ಖಾರದಪುಡಿ – 1 ಟೀ ಚಮಚ, ಉಪ್ಪು – ರುಚಿಗೆ, ಟೊಮೆಟೊ ಸಾಸ್ – 3 ಚಮಚ, ವಿನೆಗರ್ – 1 ಚಮಚ, ಚಿಲ್ಲಿ ಸಾಸ್ – 1 ಚಮಚ, ಸೋಯಾ ಸಾಸ್ – 2 ಚಮಚ, ಈರುಳ್ಳಿ – 2 ಸಣ್ಣಗೆ ಹೆಚ್ಚಿದ್ದು, ಕಾಳುಮೆಣಸಿನ ಪುಡಿ – 1 ಚಮಚ, ಶುಂಠಿ – 1 ಚಮಚ, ಬೆಳ್ಳುಳ್ಳಿ – 1 ಚಮಚ, ಹಸಿಮೆಣಸು – 1, ಕ್ಯಾಪ್ಸಿಕಂ – 1, ಎಣ್ಣೆ – ಕರಿಯಲು

ತಯಾರಿಸುವ ವಿಧಾನ: ಮೊದಲು ಸ್ವಚ್ಛ ಮಾಡಿಟ್ಟುಕೊಂಡ ಬೇಬಿಕಾರ್ನ್ ಅನ್ನು ಕತ್ತರಿಸಿಕೊಳ್ಳಿ. ಕಪ್‌ವೊಂದಕ್ಕೆ ಕಾರ್ನ್‌ಫ್ಲೋರ್, ಮೈದಾ, ಖಾರದಪುಡಿ, ಉಪ್ಪನ್ನು ಸೇರಿ ಚೆನ್ನಾಗಿ ಕಲೆಸಿ. ಅದಕ್ಕೆ ಸ್ವಲ್ಪ ನೀರು ಸೇರಿಸಿ ಹಿಟ್ಟಿನ ಹದಕ್ಕೆ ಕಲೆಸಿಕೊಳ್ಳಿ. ಈ ಹಿಟ್ಟು ಅತಿ ದಪ್ಪವೂ ಇರಬಾರದು, ತೆಳ್ಳಗೂ ಇರಬಾರದು. ಇದಕ್ಕೆ ಕತ್ತರಿಸಿಕೊಂಡ ಬೇಬಿಕಾರ್ನ್ ಸೇರಿಸಿ ಚೆನ್ನಾಗಿ ಕಲೆಸಿ. ಎಣ್ಣೆ ಕಾಯಲು ಇಟ್ಟು ಬಿಸಿಯಾದ ಮೇಲೆ ಬೇಬಿಕಾರ್ನ್ ಹಾಕಿ ಹೊಂಬಣ್ಣ ಬರುವವರೆಗೂ ಹುರಿದುಕೊಳ್ಳಿ. ಪ್ಯಾನ್‌ವೊಂದರಲ್ಲಿ ಎಣ್ಣೆ ಬಿಸಿ ಮಾಡಿ ಅದಕ್ಕೆ ಶುಂಠಿ-ಬೆಳ್ಳುಳ್ಳಿ ಹಾಕಿ ಕೈಯಾಡಿಸಿ, ಅದಕ್ಕೆ ಈರುಳ್ಳಿ, ಹಸಿಮೆಣಸು ಸೇರಿಸಿ ದೊಡ್ಡ ಉರಿಯಲ್ಲಿ ಅರ್ಧ ನಿಮಿಷ ಹುರಿದುಕೊಳ್ಳಿ. ಅದಕ್ಕೆ ಕ್ಯಾಪ್ಸಿಕಂ, ರುಚಿಗೆ ತಕ್ಕಷ್ಟು ಉಪ್ಪು, ಸಾಸ್, ವಿನೆಗರ್, ಕಾಳುಮೆಣಸಿನ ಪುಡಿ ಸೇರಿಸಿ ಮಿಶ್ರಣ ಮಾಡಿ. ನಂತರ ಸ್ಟೌವ್ ಉರಿ ಜಾಸ್ತಿ ಮಾಡಿಕೊಂಡು ಬೇಬಿಕಾರ್ನ್ ಸೇರಿಸಿ ಚೆನ್ನಾಗಿ ಕೈಯಾಡಿಸಿ.

ಲೇಖಕಿ: 'ವೈಷ್ಣವಿ ಚಾನೆಲ್' ಯೂಟ್ಯೂಬ್ ಚಾನೆಲ್‌ನ ನಿರ್ವಾಹಕಿ

ದಾಂಪತ್ಯದಲ್ಲಿ ವೈವಿಧ್ಯತೆಯ ಹುಡುಕಾಟ

ಏನಾದ್ರೂ ಕೇಳ್ಬೋದು



ನಡಹಳ್ಳಿ ವಸಂತ್

• **ಮದುವೆಯಾಗಿ 6 ವರ್ಷಗಳಾಗಿವೆ. ನಾವಿಬ್ಬರೂ ಲೈಂಗಿಕ ಜೀವನವನ್ನು ಆನಂದಿಸುತ್ತಿದ್ದೇವೆ. ಸಂಗಾತಿಯನ್ನು ಬದಲಾಯಿಸಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿದ್ದೇವೆ. ನನ್ನ ಉತ್ತಮ ಗೆಳೆಯ ಮತ್ತು ಅವನ ಪತ್ನಿಯೂ ಸಮ್ಮತಿ ಸೂಚಿಸಿದ್ದಾರೆ. ಯಾವುದೇ ತಪ್ಪಿತಸ್ಥ ಭಾವನೆಗಳು ಕಾಡುತ್ತಿಲ್ಲ. ನಾವು ನಾಲ್ಕು ಜನ ಇದರಲ್ಲಿ ಮುಂದುವರೆಯಬಹುದಾ?**

ಹೆಸರು, ಊರು ತಿಳಿಸಿಲ್ಲ.

ದಾಂಪತ್ಯದಂತಹ ದೀರ್ಘ ಕಾಲದ ಸಂಬಂಧದಲ್ಲಿ ಲೈಂಗಿಕ ಆಕರ್ಷಣೆ ಉಳಿಸಿಕೊಳ್ಳಲು ವೈವಿಧ್ಯತೆಯನ್ನು ನಿರೀಕ್ಷಿಸುವುದು ಸಹಜ. ನೀವು ವೈವಿಧ್ಯತೆಗಾಗಿ ಆಯ್ದುಕೊಳ್ಳುವ ಮಾರ್ಗಗಳು ನಿಮ್ಮಿಬ್ಬರ ಮನಸ್ಥಿತಿ, ಬದ್ಧತೆ, ಕೌಟುಂಬಿಕ ಸಾಮಾಜಿಕ ಸ್ಥಿತಿಗತಿಗಳಿಗೆ ಸೂಕ್ತವೇ? ನಿಮ್ಮ ಅದಲುಬದಲಿನ ಪ್ರಯತ್ನ ಗುಟ್ಟಾಗಿ ಉಳಿಯದಿದ್ದರೆ ನಂತರದ ಕೌಟುಂಬಿಕ, ಸಾಮಾಜಿಕ ಪರಿಣಾಮಗಳನ್ನು ಎದುರಿಸಲು ಸಿದ್ಧರಿದ್ದೀರಾ? ಹೊಸ ಪ್ರಯೋಗದಲ್ಲಿ ಒಬ್ಬರಿಗೆ ತೃಪ್ತಿಯಾಗದಿದ್ದರೆ ಅಥವಾ ಲೈಂಗಿಕತೆಯನ್ನು ಮೀರಿದ ಆಕರ್ಷಣೆ ಮೂಡಿದರೆ ಆಗೇನು ಮಾಡುತ್ತೀರಿ? ಲೈಂಗಿಕ ತೃಪ್ತಿಯನ್ನು ದಾಂಪತ್ಯದ ಹೊರಗೆ ಹುಡುಕಿಕೊಳ್ಳುವುದಕ್ಕೆ ಅವಕಾಶವಿದೆ ಎಂದಾದರೆ ಅದನ್ನು ಒಬ್ಬರೇ ಮತ್ತೊಬ್ಬರಿಗೆ ತಿಳಿಯದಂತೆ ಬಳಸಿದರೆ ಏನಾಗಬಹುದು? ಇಂತಹ ಅದಲುಬದಲಿನಲ್ಲೂ ಏಕತಾನತೆ ಮೂಡಿದರೆ ಮತ್ತೆ ಹೊಸಬರನ್ನು ಹುಡುಕುತ್ತೀರಾ? ವೈವಿಧ್ಯತೆಯನ್ನು ಕಂಡುಕೊಳ್ಳಲು ಇದು ಉತ್ತಮ ಮಾರ್ಗ ಎಂದು ಮೂವತ್ತು ವರ್ಷಗಳ ನಂತರ ನಿಮ್ಮ ಮಕ್ಕಳಿಗೆ ಸಲಹೆ ಕೊಡಲು ಸಿದ್ಧರಿದ್ದೀರಾ? ಲೈಂಗಿಕತೆಯ ಹೊರತಾಗಿ ನಿಮ್ಮಿಬ್ಬರ ಸಂಬಂಧದವನ್ನು ಹೇಗೆ ಅರ್ಥಮಾಡಿಕೊಂಡಿದ್ದೀರಿ? ಈ ಎಲ್ಲಾ ಪ್ರಶ್ನೆಗಳಿಗೆ ಇಬ್ಬರೂ ಚರ್ಚಿಸಿ ಉತ್ತರ ಹುಡುಕಿಕೊಳ್ಳಿ. ಒಂದೇ ಸಂಗಾತಿಯೊಡನೆ ವೈವಿಧ್ಯಮಯ ಲೈಂಗಿಕ ಸುಖವನ್ನು ಹೊಂದಬೇಕೆಂದಿದ್ದರೆ ತಜ್ಞ ದಾಂಪತ್ಯ ಚಿಕಿತ್ಸಕರ ಸಹಾಯ ಪಡೆಯಿರಿ.

• **ಮದುವೆಯಾಗಿ 15 ವರ್ಷಗಳಾಗಿವೆ. ಏಳುಬೀಳಿನ ನಡುವೆ ಸಂಸಾರ ಸಾಗುತ್ತಿದೆ. ಇಬ್ಬರು ಮಕ್ಕಳಿದ್ದಾರೆ. ಆಗಾಗ ನಡೆಯುವ ಲೈಂಗಿಕಕ್ರಿಯೆಗೆ ಮೊದಲು ನಿರಾಕರಿಸಿದರೂ ನಂತರ ಸಹಕರಿಸುತ್ತಾಳೆ. ಇತ್ತೀಚಿನ ದಿನಗಳಲ್ಲಿ ನಾನು ವ್ಯವಹಾರದ ನಿಮಿತ್ತ ಹೊರಗೆ ಹೋದಾಗ ಪುರುಷರೊಬ್ಬರು ಮನೆಗೆ ಬರುತ್ತಾರೆ ಮತ್ತು ಕೆಲವೊಮ್ಮೆ ರಾತ್ರಿ ಉಳಿದುಕೊಂಡಿದ್ದಾರೆ ಎಂದು ಮಕ್ಕಳು ಹೇಳುತ್ತಾರೆ. ಪತ್ನಿಯನ್ನು ಅನುಮಾನದಿಂದ ಪ್ರಶ್ನಿಸಿದರೆ ಮಕ್ಕಳ ಮೇಲೆ ಪ್ರಮಾಣ ಮಾಡಿ ನಿರಾಕರಿಸುತ್ತಾಳೆ. ಕಟ್ಟಡದಲ್ಲಿನ ಸಿಸಿಟಿವಿ ಕ್ಯಾಮರಾ ಮೂಲಕ ಪುರಾವೆ ಹುಡುಕಬಹುದಾದರೂ ಮನೆಯೊಳಗೆ ನಡೆಯುವುದನ್ನು ತಿಳಿಯುವುದು ಹೇಗೆ? ಅವಳ ನಡತೆಯನ್ನು ಪರೀಕ್ಷಿಸುವುದು ಮತ್ತು ವೈಜ್ಞಾನಿಕ ಪುರಾವೆ ಪಡೆಯುವುದು ಹೇಗೆ? ನನ್ನ ತಲೆಯಲ್ಲಿ ತುಂಬಿರುವ ಅನುಮಾನದ ಹುತ್ತವನ್ನು ತೆಗೆದು ಹಾಕುವುದು ಹೇಗೆ?**

ಹೆಸರು, ಊರು ತಿಳಿಸಿಲ್ಲ.

ಪತ್ನಿಯ ವರ್ತನೆಯಿಂದ ನಿಮಗೆ ಅನುಮಾನಗಳು ಮೂಡುವುದು ಸಹಜ. ಇಂತಹ ಅನುಮಾನಗಳು ಆಣೆ, ಪ್ರಮಾಣಗಳಿಂದ ಹೇಗೆ ಪರಿಹಾರವಾಗುತ್ತವೆ? ವೈಜ್ಞಾನಿಕ ಪುರಾವೆ ಹುಡುಕುತ್ತಾ ಪತ್ತೇದಾರಿ ಕೆಲಸ ಮಾಡುವುದು ಸಂಬಂಧಗಳಿಗೆ ಹೇಗೆ ಸಹಾಯ ಮಾಡಬಲ್ಲದು? ಬದಲಾಗಿ ಇಬ್ಬರ ಬೇಸರವೂ ಹೆಚ್ಚಾಗಿ ಸಂಬಂಧ ಹದಗೆಡುವ ಸಾಧ್ಯತೆಗಳೇ ಹೆಚ್ಚು. ಪತ್ರದ ಧ್ವನಿಯನ್ನು ನೋಡಿದರೆ ಪತಿ-ಪತ್ನಿಯರಲ್ಲಿ ಪೂರ್ಣ ನಂಬಿಕೆ ಉಳಿದಂತೆ ಕಾಣುವುದಿಲ್ಲ. ನಿಮ್ಮ ಅನುಮಾನ, ನೋವು, ಮಾನಸಿಕ ಹಿಂಸೆಗಳನ್ನು ಕುರಿತು ಪತ್ನಿಗೆ ಹೇಳಿ. ಮನೆಗೆ ಬರುವವರು ಯಾರು ಮತ್ತು ಅವರು ನೀವಿಲ್ಲದಾಗ ಉಳಿದುಕೊಳ್ಳುವುದು ಏಕೆ ಮುಂತಾದ ಎಲ್ಲಾ ಪ್ರಶ್ನೆಗಳಿಗೆ ಅವಳಿಂದ ಉತ್ತರವನ್ನು ನಿರೀಕ್ಷಿಸುವುದಾಗಿ ತಿಳಿಸಿ. ಆಣೆ, ಪ್ರಮಾಣ, ಆರೋಪ, ನಿರಾಕರಣೆ, ದೂಷಣೆ, ವಾಗ್ವಾದ ಇವುಗಳಿಂದ ನಂಬಿಕೆಯನ್ನು ಮೂಡಿಸಿಕೊಳ್ಳುವುದು ಅಸಾಧ್ಯ. ಅಗತ್ಯವಿದ್ದರೆ ತಜ್ಞ ದಾಂಪತ್ಯ ಚಿಕಿತ್ಸಕರ ಸಹಾಯ ಪಡೆಯಿರಿ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಉತ್ತರಿಸಲಿದ್ದಾರೆ.

bhoomika@prajavani.co.in

ಪ್ರಧಾನಿ ನರೇಂದ್ರ ಮೋದಿ ಜತೆಗಿನ ಸಭೆಯಲ್ಲಿ ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಪ್ರಸ್ತಾವ

‘ಭಾರತವು ಪ್ರಜಾಸತ್ತಾತ್ಮಕ ನೀತಿ ರಕ್ಷಿಸಬೇಕು’

ವಾಷಿಂಗ್ಟನ್ (ಪಿಟಿಐ): ‘ಭಾರತ ಮತ್ತು ಅಮೆರಿಕವು ತಮ್ಮ ಪ್ರಜಾಸತ್ತಾತ್ಮಕ ನೀತಿಗಳು ಮತ್ತು ಸಂಸ್ಥೆಗಳನ್ನು ರಕ್ಷಿಸಿಕೊಳ್ಳಬೇಕು’ ಎಂದು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ಪ್ರಧಾನಿ ನರೇಂದ್ರ ಮೋದಿಗೆ ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ನಡೆದ ಸಭೆಯಲ್ಲಿ ಅವರು ಈ ಮಾತು ಹೇಳಿದ್ದಾರೆ. ‘ವಿಶ್ವದ ಎಲ್ಲೆಡೆ ಪ್ರಜಾಪ್ರಭುತ್ವಕ್ಕೆ ಅಪಾಯವಿದೆ. ಈ ಅಪಾಯವನ್ನು ತಡೆಗಟ್ಟಲು, ನಮ್ಮ ನಮ್ಮ ದೇಶಗಳಲ್ಲಿ ಪ್ರಜಾಸತ್ತಾತ್ಮಕ ನೀತಿಗಳು ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಗಳನ್ನು ರಕ್ಷಿಸಿಕೊಳ್ಳುವ ತುರ್ತು ಅಗತ್ಯವಿದೆ’ ಎಂದು ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಹ್ಯಾರಿಸ್ ಅವರು ಹವಾಮಾನ ವೈಪರೀತ್ಯ, ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶ ಮತ್ತು ಅಫ್ಗಾನಿಸ್ತಾನದಲ್ಲಿನ ಈಚಿನ ಬೆಳವಣಿಗೆಗಳ ಬಗ್ಗೆ ಚರ್ಚಿಸಿದ್ದಾರೆ.

‘ನಮ್ಮ ನಮ್ಮ ದೇಶಗಳಲ್ಲಿ ಪ್ರಜಾಪ್ರಭುತ್ವವನ್ನು ಬಲಪಡಿಸಲು ನಾವೆಲ್ಲಾ ಏನು ಮಾಡಬೇಕು ಎಂಬುದನ್ನು ಗಂಭೀರವಾಗಿ ಪರಿಗಣಿಸಬೇಕು. ನಮ್ಮ ಜನರ ಹಿತಾಸಕ್ತಿಗಾಗಿ ಇದನ್ನು ನಾವು ಮಾಡಲೇಬೇಕಿದೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

‘ಪ್ರಜಾಪ್ರಭುತ್ವದ ಬಗ್ಗೆ ಭಾರತೀಯರ ಬದ್ಧತೆ ಎಂಥದ್ದು ಎಂಬುದನ್ನು ಸ್ವತಃ ನನ್ನ ಕುಟುಂಬದವರನ್ನು ನೋಡಿ, ಅರ್ಥೈಸಿಕೊಂಡಿದ್ದೇನೆ. ಪ್ರಜಾಸತ್ತಾತ್ಮಕ ನೀತಿಗಳು ಮತ್ತು ಸಂಸ್ಥೆಗಳನ್ನು ಕಾಪಾಡಿಕೊಳ್ಳಲು ಏನೆಲ್ಲಾ ಮಾಡಬೇಕು ಎಂಬುದು ನನಗೆ ಗೊತ್ತಿದೆ’ ಎಂದು ಅವರು ಹೇಳಿದ್ದಾರೆ. ಹ್ಯಾರಿಸ್ ಅವರ ತಾಯಿ ಶ್ಯಾಮಲಾ ಗೋಪಾಲನ್ ಅವರು ಚೆನ್ನೈನಲ್ಲಿ ನಾಗರಿಕ ಹಕ್ಕುಗಳ ಹೋರಾಟಗಾರರಾಗಿದ್ದರು.

ಪ್ರಧಾನಿ ನರೇಂದ್ರ ಮೋದಿ ಮತ್ತು ಕಮಲಾ ಹ್ಯಾರಿಸ್ ಮಾತುಕತೆ –ಪಿಟಿಐ ಚಿತ್ರ

ಕಮಲಾಗೆ ಮೋದಿ ಉಡುಗೊರೆ

ಪ್ರಧಾನಿ ಮೋದಿ ಅವರು ಅಮೆರಿಕದ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರಿಗೆ, ಅವರ ತಾತ ಪಿ.ವಿ.ಗೋಪಾಲನ್ ಅವರಿಗೆ ಸಂಬಂಧಿಸಿದ ಸರ್ಕಾರಿ ಅಧಿಸೂಚನೆಗಳ ಪ್ರತಿಗಳನ್ನು ಉಡುಗೊರೆಯಾಗಿ ನೀಡಿದರು. ಜತೆಗೆ ಪ್ರಸಿದ್ಧವಾದ ಮತ್ತು ಕೈಯಲ್ಲಿ ತಯಾರಿಸಿದ ‘ಗುಲಾಬಿ ಮೀನಾಕರಿ’ ಚದುರಂಗದ ಸೆಟ್ ಅನ್ನು ಉಡುಗೊರೆಯಾಗಿ ನೀಡಿದರು.

ಕಮಲಾ ಅವರ ತಾತ ಗೋಪಾಲನ್ ಅವರು ಸರ್ಕಾರಿ ನೌಕರರಾಗಿದ್ದರು. ಹೀಗಾಗಿ ಅವರಿಗೆ ಸಂಬಂಧಿಸಿದ ಸರ್ಕಾರಿ ದಾಖಲೆಗಳ ಪ್ರತಿಗಳನ್ನು ಕಮಲಾ ಅವರಿಗೆ ಉಡುಗೊರೆಯಾಗಿ ನೀಡಲಾಗಿದೆ. ಗುಲಾಬಿ ಮೀನಾಕರಿ ಚದುರಂಗದ ಸೆಟ್ ಅನ್ನು ವಾರಾಣಸಿಯಲ್ಲಿ ತಯಾರಿಸಲಾಗುತ್ತದೆ. ಭಿನ್ನ ಬಣ್ಣದ ಈ ಚದುರಂಗದ ಸೆಟ್ ವಿಶಿಷ್ಟ ವಾದುದು. ಹೀಗಾಗಿ ಅದನ್ನೂ ಕಮಲಾ ಅವರಿಗೆ ಉಡುಗೊರೆ ನೀಡಲಾಗಿದೆ ಎಂದು ಮೂಲಗಳು ಹೇಳಿವೆ.

2020ರ ಪ್ರಜಾಪ್ರಭುತ್ವ ಸೂಚಿಯಲ್ಲಿ ಭಾರತವು 51ನೇ ಸ್ಥಾನದಿಂದ 53ನೇ ಸ್ಥಾನಕ್ಕೆ ಕುಸಿದಿತ್ತು. ಭಾರತವು ಪ್ರಜಾಸತ್ತಾತ್ಮಕ ನೀತಿಗಳು ಮತ್ತು ಸಂಸ್ಥೆಗಳನ್ನು ರಕ್ಷಿಸಬೇಕು ಎಂಬ ಕಮಲಾ ಅವರ ಹೇಳಿಕೆ ಬಗ್ಗೆ ಕೇಳಲಾದ ಪ್ರಶ್ನೆಗೆ ವಿದೇಶಾಂಗ ಕಾರ್ಯದರ್ಶಿ ಹರ್ಷವರ್ಧನ್ ಶೃಂಗ್ಲಾ ಅವರು, ‘ಭಾರತ ಮತ್ತು ಅಮೆರಿಕವು ತಮ್ಮ ಪ್ರಜಾಪ್ರಭುತ್ವವನ್ನು ಉತ್ತಮ ಮಟ್ಟದಲ್ಲಿ ಕಾಯ್ದುಕೊಳ್ಳುತ್ತಿವೆ ಎಂದು ಅಮೆರಿಕದ ಕಾಂಗ್ರೆಸ್ ಪ್ರಶಂಸೆ ನೀಡಿದೆ. ಸಭೆಯಲ್ಲಿ ನಡೆದದ್ದು ಇದೇ ಚರ್ಚೆ, ಮಾಧ್ಯಮಗಳಿಗೆ ಅಲ್ಲಿ ಪ್ರವೇಶವಿರಲಿಲ್ಲ’ ಎಂದು ಅವರು ಹೇಳಿದ್ದಾರೆ.

ಕೋವಿಡ್ ಲಸಿಕೆ ತಯಾರಿಕೆಯಲ್ಲಿ ಭಾರತವು ವಹಿಸಿರುವ ಮಹತ್ವದ ಪಾತ್ರವನ್ನು ಹ್ಯಾರಿಸ್ ಶ್ಲಾಘಿಸಿದ್ದಾರೆ. ಈ ಹಿಂದೆ, ಮೋದಿ ಅವರ ಜತೆ ಫೋನ್‌ನಲ್ಲಿ ನಡೆಸಿದ ಮಾತುಕತೆಯನ್ನು ಅವರು ಈ ಸಭೆಯಲ್ಲಿ ಪ್ರಸ್ತಾಪಿಸಿದ್ದಾರೆ. ಹಿಂದೂ ಮಹಾಸಾಗರ-ಪೆಸಿಫಿಕ್ ಪ್ರದೇಶದ ವಿಚಾರದಲ್ಲಿ ಭಾರತ ಮತ್ತು ಅಮೆರಿಕ ಒಟ್ಟಿಗಿರಬೇಕಾದ ಅಗತ್ಯದ ಬಗ್ಗೆ ಅವರು ಮಾತನಾಡಿದ್ದಾರೆ.

ಮೋದಿ- ಆಸ್ಟ್ರೇಲಿಯಾದ ಪ್ರಧಾನಿ ಮಾರಿಸನ್ ಸಭೆ

‘ಭಾರತ ಮತ್ತು ಆಸ್ಟ್ರೇಲಿಯಾವು ಕಡಿಮೆ ವಾಯುಮಾಲಿನ್ಯ ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಹಭಾಗಿತ್ವಕ್ಕೆ ಒಪ್ಪಿಕೊಂಡಿವೆ’ ಎಂದು ಆಸ್ಟ್ರೇಲಿಯಾ ಪ್ರಧಾನಿ ಸ್ಕಾಟ್ ಮಾರಿಸನ್ ಅವರು ಹೇಳಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಗುರುವಾರ ಸಂಜೆ ನಡೆದ ಸಭೆಯ ನಂತರ ಅವರು ಈ ಮಾತು ಹೇಳಿದ್ದಾರೆ. ‘ನನ್ನ ಆತ್ಮೀಯ ಗೆಳೆಯ ಮತ್ತು ಭಾರತದ ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಈಗಷ್ಟೇ ಮಾತುಕತೆ ಮುಗಿಸಿಬಂದಿದ್ದೇನೆ. ನಾವು ಈ ಹಿಂದೆ ಒಟ್ಟಾಗಿ ಕೆಲಸ ಮಾಡಿದ್ದೇವೆ. ಇವತ್ತಿನ ಸಭೆಯಲ್ಲಿ ಅತ್ಯಂತ ಮಹತ್ವದ ಕಾರ್ಯಕ್ರಮಗಳ ಬಗ್ಗೆ ಎರಡೂ ದೇಶಗಳು ಒಪ್ಪಿಗೆ ಸೂಚಿಸಿವೆ. ಅತ್ಯಂತ ಅಗ್ಗದ ಸೌರಶಕ್ತಿ ಕಾರ್ಯಕ್ರಮದಲ್ಲಿ ಸಹಭಾಗಿತ್ವಕ್ಕೂ ಒಪ್ಪಿಕೊಳ್ಳಲಾಗಿದೆ’ ಎಂದು ಅವರು ಮಾಹಿತಿ ನೀಡಿದ್ದಾರೆ.

ಹವಾಮಾನ ವೈಪರೀತ್ಯವನ್ನು ತಡೆಗಟ್ಟಲು ಬೇರೆ ದೇಶಗಳಿಗೂ ನೆರವಾಗಬೇಕಿದೆ. ಈ ದಿಸೆಯಲ್ಲಿ ಅತ್ಯಂತ ಕಡಿಮೆ ವಾಯುಮಾಲಿನ್ಯದ ಜಲಜನಕದ ಸೆಲ್ ತಂತ್ರಜ್ಞಾನವನ್ನು ಭಾರತದೊಂದಿಗೆ ಹಂಚಿಕೊಳ್ಳಲು ಸಿದ್ಧರಿದ್ದೇವೆ ಎಂದು ಅವರು ಹೇಳಿದ್ದಾರೆ.

ಮುಕ್ತ ಸಮುದ್ರಯಾನಕ್ಕೆ ಒತ್ತು :ಪ್ರಧಾನಿ ನರೇಂದ್ರ ಮೋದಿ ಮತ್ತು ಜಪಾನ್ ಪ್ರಧಾನಿ ಯೊಶಿಹಿಡೆ ಸುಗಾ ಅವರು ಗುರುವಾರ ಮಾತುಕತೆ ನಡೆಸಿದ್ದಾರೆ. ಹಿಂದೂಮಹಾಸಾಗರ-ಪೆಸಿಫಿಕ್ ಪ್ರದೇಶದಲ್ಲಿ ಮುಕ್ತ ಸಮುದ್ರಯಾನದ ಅವಕಾಶವನ್ನು ರಕ್ಷಿಸಿಕೊಳ್ಳಬೇಕು ಎಂದು ಇಬ್ಬರೂ ನಾಯಕರು ಸಭೆಯಲ್ಲಿ ಪ್ರತಿಪಾದಿಸಿದ್ದಾರೆ.

ಈ ಪ್ರದೇಶದಲ್ಲಿ ಯಾವುದೇ ದೇಶವು ಆರ್ಥಿಕ ಏಕಸ್ವಾಮ್ಯ ಮತ್ತು ಏಕಪಕ್ಷೀಯ ನಿರ್ಧಾರ ತೆಗೆದುಕೊಳ್ಳುವುದನ್ನು ನಾವು ವಿರೋಧಿಸುತ್ತೇವೆ ಎಂದು ಇಬ್ಬರೂ ನಾಯಕರು ಹೇಳಿದ್ದಾರೆ. ಈ ನಿಟ್ಟಿನಲ್ಲಿ ರಕ್ಷಣಾ ಸಹಕಾರ ಮತ್ತು ರಕ್ಷಣಾ ತಂತ್ರಜ್ಞಾನ ಹಂಚಿಕೆಗೆ ಎರಡೂ ದೇಶಗಳು ಒಪ್ಪಿಕೊಂಡಿವೆ ಎಂದು ಭಾರತದ ವಿದೇಶಾಂಗ ಸಚಿವಾಲಯವು ಮಾಹಿತಿ ನೀಡಿದೆ.

ಅಮೆರಿಕದ ಅಧ್ಯಕ್ಷ ಬೈಡನ್‌ಗೆ ರೈತರ ಮನವಿ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಜತೆ ಮಾತುಕತೆ ನಡೆಸುವಾಗ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು, ಕೇಂದ್ರ ಸರ್ಕಾರದ ಮೂರು ಕೃಷಿ ಕಾಯ್ದೆಗಳ ಬಗ್ಗೆ ಪ್ರಸ್ತಾಪಿಸಬೇಕು ಎಂದು ಪ್ರತಿಭಟನೆನಿರತ ರೈತರು ಮನವಿ ಮಾಡಿದ್ದಾರೆ.

‘ಭಾರತದ ರೈತರಾದ ನಾವು, ಮೋದಿ ಅವರ ಸರ್ಕಾರ ಜಾರಿಗೆ ತಂದಿರುವ ಮೂರು ಕೃಷಿ ಕಾಯ್ದೆಗಳ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದೇವೆ. ಪ್ರತಿಭಟನೆ ಆರಂಭವಾದಾಗಿನಿಂದ ಈವರೆಗೆ 700ಕ್ಕೂ ಹೆಚ್ಚು ರೈತರು ಪ್ರತಿಭಟನೆಯಲ್ಲಿ ಸತ್ತಿದ್ದಾರೆ. ನಮ್ಮನ್ನು ರಕ್ಷಿಸಲು ಈ ಕಾಯ್ದೆಗಳನ್ನು ರದ್ದುಪಡಿಸಬೇಕು. ಮೋದಿ ಅವರ ಜತೆಗೆ ನಡೆಸುವ ಸಭೆಯಲ್ಲಿ ಈ ಬಗ್ಗೆ ಗಮನ ನೀಡಿ’ ಎಂದು ಭಾರತೀಯ ಕಿಸಾನ್ ಯೂನಿಯನ್ ನಾಯಕ ರಾಕೇಶ್ ಟಿಕಾಯತ್ ಅವರು ಟ್ವೀಟ್ ಮಾಡಿದ್ದಾರೆ. ಟ್ವೀಟ್ ಅನ್ನು ಜೋ ಬೈಡನ್ ಅವರಿಗೆ ಟ್ಯಾಗ್ ಮಾಡಿದ್ದಾರೆ.

ಅಲ್ಲದೆ, ಸೆಪ್ಟೆಂಬರ್ 25ರಂದು ಮೋದಿ ಅವರು ಭಾಗವಹಿಸಲಿರುವ ಕಾರ್ಯಕ್ರಮದ ವೇಳೆ, ಅಮೆರಿಕದಲ್ಲಿರುವ ಭಾರತೀಯರು ರೈತರ ಪರವಾಗಿ ಪ್ರತಿಭಟನೆ ನಡೆಸಬೇಕು ಎಂದು ರಾಕೇಶ್ ಟಿಕಾಯತ್ ಮನವಿ ಮಾಡಿಕೊಂಡಿದ್ದಾರೆ.

ರೈತರ ಪ್ರತಿಭಟನೆ ಆರಂಭವಾಗಿ ಇದೇ 27ಕ್ಕೆ 10 ತಿಂಗಳಾಗಲಿದೆ. ಅಂದು ರೈತರು ಭಾರತ್ ಬಂದ್‌ಗೆ ಕರೆ ನೀಡಿದ್ದಾರೆ.

ಸುದ್ದಿ 2 ನಿಮಿಷ

ಮದ್ರಾಸ್ ಹೈಕೋರ್ಟ್‌ನ ‘ಅನಗತ್ಯ’ ಅಭಿಪ್ರಾಯ ರದ್ದುಪಡಿಸಿದ ‘ಸುಪ್ರೀಂ’

ನವದೆಹಲಿ: ವೈದ್ಯಕೀಯ ಕಾಲೇಜುಗಳ ಅಖಿಲ ಭಾರತ ಕೋಟಾದಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗಗಳಿಗೆ (ಇಡಬ್ಲ್ಯುಎಸ್) ಶೇ 10ರಷ್ಟು ಮೀಸಲಾತಿ ನೀಡುವ ಮುನ್ನ ಸುಪ್ರೀಂ ಕೋರ್ಟ್‌ನ ಅನುಮತಿಯನ್ನು ಕೇಂದ್ರವು ಪಡೆದುಕೊಳ್ಳಬೇಕು ಎಂದು ಮದ್ರಾಸ್ ಹೈಕೋರ್ಟ್ ನೀಡಿದ್ದ ನಿರ್ದೇಶನವನ್ನು ಸುಪ್ರೀಂ ಕೋರ್ಟ್ ಶುಕ್ರವಾರ ರದ್ದುಪಡಿಸಿದೆ.

ಹೈಕೋರ್ಟ್ ಆಗಸ್ಟ್ 25ರಂದು ನೀಡಿದ್ದ ಪೂರ್ಣ ಆದೇಶವನ್ನು ರದ್ದು ಮಾಡುವುದಿಲ್ಲ. ಮೀಸಲಾತಿ ನೀಡಿಕೆಗೆ ಮುನ್ನ ಸುಪ್ರೀಂ ಕೋರ್ಟ್‌ನ ಅನುಮತಿ ಪಡೆದುಕೊಳ್ಳಬೇಕು ಎಂಬ ಅಂಶವನ್ನು ಮಾತ್ರ ರದ್ದು ಮಾಡಲಾಗಿದೆ ಎಂದು ನ್ಯಾಯಮೂರ್ತಿಗಳಾದ ಡಿ.ವೈ.ಚಂದ್ರಚೂಡ್ ಮತ್ತು ಬಿ.ವಿ. ನಾಗರತ್ನ ಅವರ ಪೀಠವು ಸ್ಪಷ್ಟಪಡಿಸಿದೆ.

ತಮಿಳುನಾಡಿನ ಆಡಳಿತಾರೂಢ ಡಿಎಂಕೆ ಸಲ್ಲಿಸಿದ್ದ ನ್ಯಾಯಾಂಗ ನಿಂದನೆ ಅರ್ಜಿಯ ವಿಚಾರಣೆಯಲ್ಲಿ ಹೈಕೋರ್ಟ್ ಈ ಅಭಿಪ್ರಾಯ ವ್ಯಕ್ತ ಪಡಿ ಸುವ ಅಗತ್ಯ ಇರಲಿಲ್ಲ. ಹೈಕೋರ್ಟ್ ವ್ಯಾಪ್ತಿ ಮೀರಿ ವರ್ತಿಸಿದೆ. ನ್ಯಾಯಾಂಗ ನಿಂದನೆಯ ಅರ್ಜಿ ಪರಿಶೀಲಿಸುವಾಗ ಆದೇಶದ ಪಾಲನೆ ಆಗಿದೆಯೇ ಇಲ್ಲವೇ ಎಂಬುದನ್ನು ಮಾತ್ರ ನೋಡಬೇಕು ಎಂದು ಪೀಠವು ಸ್ಪಷ್ಟಪಡಿಸಿದೆ.

ಗೂಗಲ್ ಪರ ಆದೇಶ ಹೊರಡಿಸಲು ದೆಹಲಿ ಹೈಕೋರ್ಟ್ ನಕಾರ

ನವದೆಹಲಿ: ತನ್ನ ವಿರುದ್ಧ ತನಿಖೆ ನಡೆಸುತ್ತಿರುವ ಭಾರತೀಯ ಸ್ಪರ್ಧಾ ಆಯೋಗ (ಸಿಸಿಐ) ತನಿಖೆಯ ವರದಿಯನ್ನು ಸೋರಿಕೆ ಮಾಡುವುದಕ್ಕೆ ತಡೆ ನೀಡಬೇಕು ಎಂದು ಗೂಗಲ್ ಸಂಸ್ಥೆ ಸಲ್ಲಿಸಿದ್ದ ಅರ್ಜಿಗೆ ಸಂಬಂಧಿಸಿ ಯಾವುದೇ ಆದೇಶ ನೀಡಲು ದೆಹಲಿ ಹೈಕೋರ್ಟ್ ನಿರಾಕರಿಸಿದೆ.

ಸಿಸಿಐನ ಮಹಾ ನಿರ್ದೇಶಕರು ನೀಡಿದ ವರದಿಯನ್ನು ಪರಿಶೀಲಿಸದೇ ಮಾಹಿತಿ ಸೋರಿಕೆ ಮಾಡದಂತೆ ಹೇಗೆ ಆದೇಶ ನೀಡುವುದು ಎಂದು ನ್ಯಾಯಮೂರ್ತಿ ರೇಖಾ ಪಳ್ಳಿ ಅವರಿದ್ದ ಪೀಠ ಗೂಗಲ್ ಸಂಸ್ಥೆಯನ್ನು ಪ್ರಶ್ನಿಸಿದೆ. ಈ ಅರ್ಜಿ ವಿಚಾರಣೆಯನ್ನು ಸೆ.27ಕ್ಕೆ ಕಾಯ್ದಿರಿಸಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಜಾತಿಗಣತಿಗೆ ಆಗ್ರಹ: ಬಿಜೆಪಿ ಆಕ್ರೋಶ

ನವದೆಹಲಿ (ಪಿಟಿಐ): ಜಾತಿ ಗಣತಿಗೆ ಒತ್ತಾಯಿಸುತ್ತಿರುವ ರಾಜಕೀಯ ಪಕ್ಷಗಳು ತಮ್ಮ ತಮ್ಮ ಪಕ್ಷ ಸಂಘಟನೆಯಲ್ಲಿ ಯಾವೆಲ್ಲ ವರ್ಗಗಳಿಗೆ ಪ್ರಾತಿನಿಧ್ಯ ಕೊಟ್ಟಿವೆ ಮತ್ತು ಆ ಪಕ್ಷಗಳಿಂದ ಆಯ್ಕೆಯಾದ ಜನಪ್ರತಿನಿಧಿಗಳಲ್ಲಿ ಎಲ್ಲ ವರ್ಗಗಳನ್ನು ಪ್ರತಿನಿಧಿಸುವವರು ಇದ್ದಾರೆಯೇ ಎಂದು ಬಿಜೆಪಿ ಪ್ರಶ್ನಿಸಿದೆ. ಜಾತಿ ಗಣತಿ ಸಾಧ್ಯವಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಗುರುವಾರವಷ್ಟೇ ಹೇಳಿದೆ.

ಹಲವು ಪಕ್ಷಗಳು, ಮುಖ್ಯವಾಗಿ ಪ್ರಾದೇಶಿಕ ಪಕ್ಷಗಳು ಜಾತಿ ಗಣತಿಗೆ ಒತ್ತಾಯಿಸುತ್ತಿವೆ. ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟದಲ್ಲಿ ಇರುವ ಕೆಲವು ಪಕ್ಷಗಳೂ ಜಾತಿ ಗಣತಿ ಬೇಕು ಎನ್ನುತ್ತಿವೆ. ಆದರೆ, ಬಿಜೆಪಿ ಭಿನ್ನ ನಿಲುವು ತಾಳಿದೆ.

ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಅವರು ಸಮಾಜವಾದಿ ಪಕ್ಷ, ರಾಷ್ಟ್ರೀಯ ಜನತಾ ದಳ, ಬಹುಜನ ಸಮಾಜ ಪಕ್ಷವನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಈ ಪಕ್ಷಗಳ ನಾಯಕರು ತಮ್ಮನ್ನು ಬಡವರು ಮತ್ತು ಶೋಷಿತ ಸಮುದಾಯಗಳ ನಾಯಕರು ಎಂದು ಬಿಂಬಿಸಿಕೊಳ್ಳುತ್ತಾರೆ. ಆದರೆ, ತಮ್ಮ ಕುಟುಂಬವನ್ನು ಮಾತ್ರ ಅವರು ಬೆಳೆಸುತ್ತಾರೆ ಎಂದು ತ್ರಿವೇದಿ ಆರೋಪಿಸಿದ್ದಾರೆ.

ಸಮಾಜವಾದಿ ಪಕ್ಷದ ನಾಯಕ ಮುಲಾಯಂ ಸಿಂಗ್ ಅವರನ್ನು ಮಣ್ಣಿನ ಮಗ ಎನ್ನಲಾಗುತ್ತಿದೆ. ಆದರೆ, ಅವರು ತಮ್ಮ ಮಗನನ್ನೇ ಮುನ್ನೆಲೆಗೆ ತಂದರು. ಮಾಯಾವತಿ ಅವರನ್ನು ಬೆಂಬಲಿರು ‘ಸಹೋದರಿ’ ಎಂದು ಕರೆಯುತ್ತಾರೆ. ಆದರೆ, ಅವರು ತಮ್ಮ ಸಹೋದರನನ್ನು ಬೆಳೆಸಿದರು. ಆರ್‌ಜೆಡಿ ಕೂಡ ವಂಶಾಡಳಿತವನ್ನೇ ನಡೆಸುತ್ತಿದೆ ಎಂದು ತ್ರಿವೇದಿ ದೂರಿದ್ದಾರೆ. ‘ಎಲ್ಲರ ಜತೆಗೆ ಎಲ್ಲರ ವಿಕಾಸ ಎಂಬುದೇ ಕೇಂದ್ರ ಸರ್ಕಾರ ಮತ್ತು ಬಿಜೆಪಿಯ ನಿಲುವು. ಕೇಂದ್ರ ಸಚಿವ ಸಂಪುಟದ ವಿಸ್ತರಣೆ ಮತ್ತು ಪಕ್ಷದ ಕಾರ್ಯನಿರ್ವಹಣೆಯಲ್ಲಿಯೂ ಅದನ್ನು ಕಾಣಬಹುದು’ ಎಂದರು.

ಹಿಂದುಳಿದವರ ಬಗ್ಗೆ ಬಿಜೆಪಿ–ಆರ್‌ಎಸ್‌ಎಸ್‌ಗೆ ಅಸಡ್ಡೆ: ಲಾಲು

ಪಟ್ನಾ (ಪಿಟಿಐ): ಹಿಂದುಳಿದ ವರ್ಗಗಳ ಜಾತಿ ಜನಗಣತಿ ನಡೆಸುವುದಿಲ್ಲ ಎಂದು ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ತಿಳಿಸಿರುವುದಕ್ಕೆ, ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಅಧ್ಯಕ್ಷ ಲಾಲು ಪ್ರಸಾದ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ಹಾಗೂ ಆರ್‌ಎಸ್‌ಎಸ್, ಹಿಂದುಳಿದ ಹಾಗೂ ಅತೀ ಹಿಂದುಳಿದ ವರ್ಗದವರನ್ನು ಕಡೆಗಣಿಸುತ್ತಿವೆ ಎಂದು ಟ್ವೀಟ್ ಮೂಲಕ ಕಿಡಿ ಕಾರಿದ್ದಾರೆ.

ಜೈಲಿನಲ್ಲಿದ್ದ ಲಾಲು ಪ್ರಸಾದ್ ಜಾಮೀನಿನ ಮೇಲೆ ಹೊರಬಂದಿದ್ದು ದೆಹಲಿಯಲ್ಲಿದ್ದಾರೆ.

‘ಎಲ್ಲ ವಿಧವಾದ ಪಕ್ಷಿಗಳು, ಪ್ರಾಣಿಗಳು, ಗಿಡ–ಮರಗಳ ಗಣತಿಯನ್ನು ಮಾಡುತ್ತಾರೆ. ಆದರೆ, ಇತರ ಹಿಂದುಳಿದ ಹಾಗೂ ಅತೀ ಹಿಂದುಳಿದ ವರ್ಗದವರ ಗಣತಿ ಮಾತ್ರ ಆಗುವುದಿಲ್ಲ! ಬಿಜೆಪಿ–ಆರ್‌ಎಸ್‌ಎಸ್‌ಗೆ ಹಿಂದುಳಿದವರ ಬಗ್ಗೆ ಏಕೆ ಇಷ್ಟು ಅಸಡ್ಡೆ? ಜಾತಿ ಜನಗಣತಿಯಿಂದ ಎಲ್ಲರಿಗೂ ಪ್ರಯೋಜನವಾಗುತ್ತಿತ್ತು. ಅದು, ಆಯಾ ಜಾತಿಯ ಜನರ ಚಿತ್ರಣವನ್ನು ಹೇಳುತ್ತಿತ್ತು’ ಎಂದು ಹಿಂದಿಯಲ್ಲಿ ಟ್ವೀಟ್ ಮಾಡಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರನ್ನು ಇತ್ತೀಚೆಗೆ ಭೇಟಿ ಮಾಡಿದ್ದ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ನೇತೃತ್ವದ ನಿಯೋಗವು, ಹಿಂದುಳಿದ ವರ್ಗಗಳ ಜನಗಣತಿ ನಡೆಸಬೇಕು ಎಂದು ಮನವಿ ಮಾಡಿತ್ತು. ಲಾಲು ಪ್ರಸಾದ್ ಅವರ ಪುತ್ರ, ಬಿಹಾರ ವಿಧಾನಸಭೆ ವಿರೋಧ ಪಕ್ಷದ ನಾಯಕ ತೇಜಸ್ವಿ ಯಾದವ್ ಕೂಡ ನಿಯೋಗದಲ್ಲಿದ್ದರು.

ಎನ್‌ಡಿಎ ಪರೀಕ್ಷೆ: ಮಹಿಳೆಯರಿಗೆ ಅವಕಾಶ ನೀಡಿದ ಯುಪಿಎಸ್‌ಸಿ

ನವದೆಹಲಿ (ಪಿಟಿಐ): ರಾಷ್ಟ್ರೀಯ ರಕ್ಷಣಾ ಅಕಾಡೆಮಿ (ಎನ್‌ಡಿಎ) ಹಾಗೂ ನೌಕಾ ಅಕಾಡೆಮಿ ಪ್ರವೇಶ ಪರೀಕ್ಷೆ ಬರೆಯಲು ಅವಿವಾಹಿತ ಮಹಿಳೆಯರಿಗೆ ಕೇಂದ್ರ ಲೋಕಸೇವಾ ಆಯೋಗ (ಯುಪಿಎಸ್‌ಸಿ) ಶುಕ್ರವಾರ ಅನುಮತಿ ನೀಡಿದೆ.



ಅರ್ಜಿಯನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. upsconline.nic.in ವೆಬ್‌ಸೈಟ್ ನಲ್ಲಿ ಅರ್ಜಿ ನಮೂನೆ ಹಾಗೂ ವಿವರಗಳು ಲಭ್ಯ ಇದ್ದು, ಅಕ್ಟೋಬರ್ 8ರ ಸಂಜೆ 6ರವರೆಗೆ ಅರ್ಜಿ ಸಲ್ಲಿಸಬಹುದು. ಮಹಿಳಾ ಅಭ್ಯರ್ಥಿಗಳು ಅರ್ಜಿ ಶುಲ್ಕ ನೀಡ ಬೇಕಿಲ್ಲ. ನವೆಂಬರ್ 14ರಂದು ಪರೀಕ್ಷೆ ನಡೆಯಲಿದೆ ಎಂದು ಆಯೋಗದ ಪ್ರಕಟಣೆ ತಿಳಿಸಿದೆ.

ಎನ್‌ಡಿಎಗೆ ಮಹಿಳೆಯರ ಪ್ರವೇಶದ ಅಧಿಸೂಚನೆಯನ್ನು 2022ರ ಮೇ ತಿಂಗಳಲ್ಲಿ ಹೊರಡಿಸಲಾಗುವುದು ಎಂದು ಕೇಂದ್ರ ಸರ್ಕಾರವು ಕೋರ್ಟ್‌ಗೆ ತಿಳಿಸಿತ್ತು. ಆದರೆ, ಇದನ್ನು ನ್ಯಾಯಮೂರ್ತಿ ಎಸ್.ಕೆ.ಕೌಲ್ ನೇತೃತ್ವದ ಪೀಠ ಒಪ್ಪಿಕೊಂಡಿರಲಿಲ್ಲ.

ಮಹಿಳೆಯರ ಹಕ್ಕನ್ನು ಮೊಟಕು ಮಾಡುವುದು ಸಾಧ್ಯವಿಲ್ಲ ಎಂದಿದ್ದ ಪೀಠ, ಈ ವರ್ಷದಿಂದಲೇ ಮಹಿಳೆಯರಿಗೂ ಪರೀಕ್ಷೆ ಬರೆಯಲು ಅನುಮತಿ ನೀಡುವಂತೆ ಸೂಚಿಸಿ ಮಧ್ಯಂತರ ಆದೇಶ ನೀಡಿತ್ತು.

ಮಕ್ಕಳ ರಕ್ಷಣಾ ನಿರ್ದೇಶನಾಲಯ
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು(ನ)ಜಿಲ್ಲೆ
ಡಾ|| ಎಂ.ಹೆಚ್. ಮರೀಗೌಡ ರಸ್ತೆ, ಕಿದ್ವಾಯಿ ಆಸ್ಪತ್ರೆ ಪಕ್ಕ, ಬೆಂಗಳೂರು–29
ದೂ: 080–26569344 | ಮೊಬೈಲ್: 9986264898 | https//icps.karnataka.gov.in
ಸಂಖ್ಯೆ: ಸ.ಶಿ.ಮಂ.ಬೆಂ(ನ). ಪ್ರಚಾರ.ನಿವಾಸಿ/2021–22 ದಿನಾಂಕ:09.09.2021

ತಂದೆ ತಾಯಿಯ ಪತ್ತೆಗೆ ನೆರವು ನೀಡಿ

ಮಗುವಿನ ಹೆಸರು: ಲಕ್ಷ್ಮೀ. ವಯಸ್ಸು: 08 ತಿಂಗಳು. ತಂದೆ ಅಥವಾ ತಾಯಿಯ ಹೆಸರು: ಗೊತ್ತಿಲ್ಲ. ಹುಟ್ಟಿದ ಸ್ಥಳ: ಗೊತ್ತಿಲ್ಲ. ಎತ್ತರ: 70 ಸೆಂ.ಮೀ. ದೇಹದ ಬಣ್ಣ: ಸಾಧಾರಣ ಬಿಳುಪು. ಗುರುತಿಸುವ ಚಹರೆ: ಇಲ್ಲ. ಮಾನಸಿಕ & ದೈಹಿಕ ಸ್ಥಿತಿ: ಸಾಧಾರಣ. ಮಗುವನ್ನು ದಿನಾಂಕ: 18.08.2021 ರಂದು ಸೋಲದೇವನಹಳ್ಳಿ ಪೊಲೀಸ್ ಠಾಣಾ ಸಿಬ್ಬಂದಿ ಸರ್ಕಾರಿ ಶಿಶುಮಂದಿರ ಸಂಸ್ಥೆಗೆ ಪಾಲನೆ ಪೋಷಣೆಗೆಂದು ದಾಖಲಿಸಿರುತ್ತಾರೆ. ಮಗುವಿನ ತಂದೆ–ತಾಯಿಯ ಬಗ್ಗೆ ತಿಳಿದವರು ಮೇಲ್ಕಂಡ ವಿಳಾಸ ಮತ್ತು ಫೋನ್ ನಂಬರನ್ನು ಸಂಪರ್ಕಿಸಬಹುದು.

ಸಹಿ/– ಅಧೀಕ್ಷಕರು
ಶಿಶುಮಂದಿರ, ಮ&ಮ.ಅ.ಇ.ಬೆಂ(ನ)ಜಿಲ್ಲೆ
ವಾಸಾಸಂಇ/ಬೆಂನ/ಜಿಎ/1634/2021–22

ನಗರಸಭಾ ಕಾರ್ಯಾಲಯ, ಕೋಲಾರ
ಸಂಖ್ಯೆ: ನಸಕೋ/ತಾಂತ್ರಿಕ/ಟೆಂಡರ್/ಸಿಆರ್/43/2021–22 ದಿನಾಂಕ:20.09.2021

ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ–1&2 ರ ನಿಬಂಧನೆಗಳಿಗೆ ಒಳಪಟ್ಟು)

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000 ರ ಪ್ರಕಾರ ಅನುದಾನಗಳಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಏಕ/ದ್ವಿ ಲಕೋಟೆ ಪದ್ಧತಿಯಲ್ಲಿ ಈ ಕೆಳಗೆ ನಮೂದಿಸಿರುವ ಇಂಡೆಂಟ್ ಸಂಖ್ಯೆ ಕಾಮಗಾರಿಗೆ ಅರ್ಹ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಇಲಾಖಾ ವೆಬ್‌ಸೈಟ್‌ನಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ.

ಕ್ರ. ಸಂ.	ಕಾಮಗಾರಿಯ ವಿವರ	ಟೆಂಡರಿಗಿಟ್ಟ ಮೊತ್ತ (ರೂ.ಗಳಲ್ಲಿ)	ಕಾಲಾವಧಿ
2021–22ನಗರಸಭೆ ನಿಧಿ			
1	DMA/2021-22/WS/WORK_INDENT120454	44,63,264.00	3 ತಿಂಗಳು
2	DMA/2021-22/WS/WORK_INDENT120455	22,31,450.00	12 ತಿಂಗಳು
3	DMA/2021-22/WS/WORK_INDENT120456	2,89,520.50	1 ತಿಂಗಳು
4	DMA/2021-22/WS/WORK_INDENT120458	2,97,015.00	1 ತಿಂಗಳು
5	DMA/2021-22/WS/WORK_INDENT120460	1,84,473.14	1 ತಿಂಗಳು
6	DMA/2021-22/OW/WORK_INDENT118529/Call-2	8,90,491.75	2 ತಿಂಗಳು
7	DMA/2021-22/WS/WORK_INDENT119256/Call-2	15,91,313.50	2 ತಿಂಗಳು
2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನ			
1	DMA/2021-22/WS/WORK_INDENT120462	27,26,146.16	3 ತಿಂಗಳು
ಕೊಳವೆ ಬಾವಿಗಳ ದುರಸ್ಥಿ ಕಾರ್ಯಗಳ ವಾರ್ಷಿಕ ನಿರ್ವಹಣೆ			
1	DMA/2021-22/WS/WORK_INDENT119471/Call-2	43,29,296.68	1 ವರ್ಷ
2	DMA/2021-22/WS/WORK_INDENT119472/Call-2	42,53,192.68	1 ವರ್ಷ
3	DMA/2021-22/WS/WORK_INDENT119473/Call-2	36,56,788.68	1 ವರ್ಷ
4	DMA/2021-22/WS/WORK_INDENT119474/Call-2	37,71,608.68	1 ವರ್ಷ
5	DMA/2021-22/WS/WORK_INDENT119476/Call-2	35,29,199.68	1 ವರ್ಷ

1) ಖಾಲಿ ಟೆಂಡರ್ ಫಾರಂಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪ್ರಕಾರ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿ ಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ದಿನಾಂಕ:07.10.2021ರ ಸಂಜೆ 5.30 ಗಂಟೆವರೆಗೆ. 2) ಟೆಂಡರ್‌ನ್ನು ತೆರೆಯುವ ದಿನಾಂಕ:11.10.2021 ರ ಬೆಳಗ್ಗೆ 10.30 ಗಂಟೆಗೆ.

ಸೂಚನೆ:– ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿಯಲ್ಲಿ ಸಂಪರ್ಕಿಸಬಹುದು ಹಾಗೂ ವೆಬ್‌ಸೈಟ್ http://eproc.karnataka.gov.in ನಲ್ಲಿ ವೀಕ್ಷಿಸಬಹುದು.

ಸಹಿ/– ಅಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಉಪಾಧ್ಯಕ್ಷರು, ನಗರಸಭೆ, ಕೋಲಾರ
ಸಹಿ/– ಸ್ಥಾಯಿ ಸಮಿತಿ ಅಧ್ಯಕ್ಷರು ನಗರಸಭೆ, ಕೋಲಾರ
ಸಹಿ/– ಪೌರಾಯುಕ್ತರು ನಗರಸಭೆ, ಕೋಲಾರ
ವಾಸಾಸಂಇ/ಕೋಲಾರ/ಜಿಎ/216/2021–22

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ರಾಮ, ಕೃಷ್ಣ, ಶಿವ ಭಾರತದ ಮುಸ್ಲಿಮರ ಪೂರ್ವಜರು: ಶುಕ್ಲಾ

ಬಲ್ಲಿಯಾ(ಉತ್ತರ ಪ್ರದೇಶ/ಪಿಟಿಐ): ‘ರಾಮ, ಕೃಷ್ಣ ಮತ್ತು ಶಿವ ಭಾರತದ ಮುಸ್ಲಿಮರ ಪೂರ್ವಜರಾಗಿದ್ದು, ಈ ಸಮುದಾಯದವರು ಭಾರತೀಯ ಸಂಸ್ಕೃತಿಗೆ ತಲೆಬಾಗಬೇಕು‘ ಎಂದು ಉತ್ತರಪ್ರದೇಶದ ಸಂಸದೀಯ ವ್ಯವಹಾರಗಳ ಸಚಿವ ಆನಂದ್ ಸ್ವರೂಪ್ ಶುಕ್ಲಾ ಹೇಳಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ನೇತೃತ್ವದ ಸರ್ಕಾರದ ಸಾಧನೆಗಳ ಕುರಿತು ಮಾಹಿತಿ ನೀಡುವುದಕ್ಕಾಗಿ ಗುರುವಾರ ನಡೆಸಿದ ಸುದ್ದಿಗೋಷ್ಠಿಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

‘ಪ್ರಧಾನಿ ನರೇಂದ್ರ ಮೋದಿ, ಯೋಗಿ ಆದಿತ್ಯನಾಥ್ ‘ಭಾರತೀಯ ಸಂಸ್ಕೃತಿ ಮತ್ತು ಹಿಂದುತ್ವದ ಧ್ವಜವನ್ನು ಹಾರಿಸುವ ಮೂಲಕ ದೇಶದಲ್ಲಿ ಇಸ್ಲಾಮಿಕ್ ರಾಜ್ಯ ರಚಿಸಬೇಕೆಂಬ ಉದ್ದೇಶದ ಮನೋಭಾವದವರನ್ನು ಹಿಮ್ಮೆಟ್ಟಿಸಿದ್ದಾರೆ‘ ಎಂದು ಹೇಳಿದ್ದಾರೆ.

‘ಶ್ರೀರಾಮ, ಕೃಷ್ಣ ಮತ್ತು ಶಂಕರ (ಶಿವ) ಭಾರತದಲ್ಲಿರುವ ಮುಸ್ಲಿಮರ ಪೂರ್ವಜರು. ಆದ್ದರಿಂದ ಮುಸ್ಲಿಮರು ಭಾರತೀಯ ಸಂಸ್ಕೃತಿಗೆ ತಲೆಬಾಗಬೇಕು‘ ಎಂದು ಹೇಳಿದ್ದಾರೆ.

ಎಐಎಂಐಎಂ ನಾಯಕ ಒವೈಸಿ ವಿರುದ್ಧ ವಾಗ್ದಾಳಿ ನಡೆಸಿದ ಶುಕ್ಲಾ, ‘ಇವರ ಪೂರ್ವಿಕರು ದೇಶದಿಂದ ಹೈದರಾ ಬಾದ್ ಅನ್ನು ಪ್ರತ್ಯೇಕಿಸಲು ಪ್ರಯತ್ನಿಸಿದ್ದರು. ಆದರೆ ಅದು ಯಶಸ್ವಿಯಾಗಲಿಲ್ಲ‘ ಎಂದು ಹೇಳಿದರು.

ಶಾಸನಸಭೆ ಕಲಾಪದ ಗುಣಮಟ್ಟದ ಬಗ್ಗೆ ಲೋಕಸಭಾಧ್ಯಕ್ಷ ಓಂ ಬಿರ್ಲಾ ಅಭಿಮತ

‘ಚರ್ಚೆ, ಭಿನ್ನಮತ ಇರಲಿ; ಘನತೆಯೂ ಇರಲಿ’

ಬೆಂಗಳೂರು: ‘ಸಂಸತ್ತು ಮತ್ತು ವಿಧಾನಮಂಡಲಗಳಲ್ಲಿ ವಿರೋಧ, ಭಿನ್ನಮತ, ತರ್ಕ, ವಾಗ್ವಾದ, ಚರ್ಚೆ ಎಲ್ಲವೂ ಇರಬೇಕು. ಅದುವೇ ಪ್ರಜಾಪ್ರಭುತ್ವದ ಅಂತಃಸತ್ವ. ಆದರೆ, ಕಲಾಪಗಳಿಗೆ ಅಡ್ಡಿಪಡಿಸುವುದು ಜನತೆಯ ಆಶೋತ್ತರಗಳಿಗೆ ಮಾಡುವ ಅಪಚಾರ’ ಎಂದು ಲೋಕಸಭಾಧ್ಯಕ್ಷ ಓಂ ಬಿರ್ಲಾ ವ್ಯಾಖ್ಯಾನಿಸಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಶುಕ್ರವಾರ ವಿಧಾನಸಭೆಯಲ್ಲಿ ಏರ್ಪಡಿಸಿದ್ದ ‘ಪ್ರಜಾಪ್ರಭುತ್ವ: ಸಂಸದೀಯ ಮೌಲ್ಯಗಳ ರಕ್ಷಣೆ’ ವಿಷಯ ಮೇಲೆ ಅವರು ಮಾತನಾಡಿದರು.

‘ಕಲಾಪಗಳು ನಿಯಮಗಳಿಗೆ ಅನುಗುಣವಾಗಿ ಗೌರವ, ಘನತೆಯಿಂದ ನಡೆದಾಗ ಪ್ರಜಾಪ್ರಭುತ್ವ ಹೆಚ್ಚು ಪರಿಪಕ್ವತೆಯತ್ತ ಮುನ್ನಡೆಯಲು ಸಾಧ್ಯ. ಸದಸ್ಯರು ಶಿಸ್ತಿನ ನಡವಳಿಕೆಯಿಂದ ಸಭೆಯ ಘನತೆ ಎತ್ತಿ ಹಿಡಿಯಬೇಕು. ಖಾಸಗಿ ಜೀವನದಲ್ಲೂ ಅವರ ನಡತೆಗಳು ಮತ್ತು ವ್ಯವಹಾರಗಳು ಉತ್ತಮವಾಗಿದ್ದಾಗ ಸದನದ ಘನತೆ ಹೆಚ್ಚಿಸಲು ಸಾಧ್ಯ’ ಎಂದು ಅವರು ಅಭಿಪ್ರಾಯ ಪಟ್ಟರು.

ಕಲಾಪದ ವೇಳೆ ಉಂಟಾಗುವ ಅಡಚಣೆಗಳಿಂದ ಸಾರ್ವಜನಿಕ ಹಿತಾಸಕ್ತಿಯ ಸಮಸ್ಯೆಗಳ ಬಗ್ಗೆ ಸದನದಲ್ಲಿ ಪ್ರಸ್ತಾಪಿಸಲು ಇರುವ ಅವಕಾಶಗಳನ್ನು ಕಸಿದುಕೊಳ್ಳುತ್ತವೆ. ಚರ್ಚೆಗಳಲ್ಲಿ ಎಲ್ಲರೂ ಪರಸ್ಪರ ಸೌಜನ್ಯ ಮತ್ತು ಗೌರವವನ್ನು ಕಾಪಾಡಿಕೊಳ್ಳಬೇಕು. ಸದೃಢ ಪ್ರಜಾಪ್ರಭುತ್ವಕ್ಕಾಗಿ ಸಂಸದೀಯ ವ್ಯವಸ್ಥೆಯಲ್ಲಿ ನಂಬಿಕೆ ಉಳಿಸಿಕೊಳ್ಳುವುದು ಅಗತ್ಯ. ಈ ದಿಸೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳು ವಿಸ್ತೃತ ಚರ್ಚೆ ನಡೆಸಬೇಕು ಎಂದು ಓಂ ಬಿರ್ಲಾ ಸಲಹೆ ನೀಡಿದರು.

ಲೋಕಸಭಾಧ್ಯಕ್ಷ ಓಂ ಬಿರ್ಲಾ ಅವರು ಶಾಸಕ ಬಿ.ಎಸ್‌.ಯಡಿಯೂರಪ್ಪ ಅವರಿಗೆ ಅತ್ಯುತ್ತಮ ಶಾಸಕ ಪ್ರಶಸ್ತಿ ಪ್ರದಾನ ಮಾಡಿದರು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಇದ್ದಾರೆ.

ಭಾಷಣದ ಪ್ರಮುಖ ಅಂಶಗಳು:

- ಭಾರತ ಬಹುಪಕ್ಷಗಳ ಸಂಸದೀಯ ವ್ಯವಸ್ಥೆ ಅಳವಡಿಸಿಕೊಂಡಿದೆ. ವಿಭಿನ್ನ ವಿಚಾರಧಾರೆಗಳು, ಸಿದ್ಧಾಂತಗಳನ್ನು ಒಳಗೊಂಡ ದೇಶ. ಪ್ರಜಾಪ್ರಭುತ್ವದ ಸಂಸ್ಥೆಗಳ ಮೂಲಕ ಜನರ ಸೇವೆಯಲ್ಲಿ ಎಲ್ಲ ವಿಚಾರ ಧಾರೆಯವರೂ ಕೆಲಸ ಮಾಡಲು ಸಾಧ್ಯ.
- ಈವರೆಗೆ ಅನುಸರಿಸಿದ ಸಂಸದೀಯ ವ್ಯವಸ್ಥೆಯ ಪಾಲನೆಯಲ್ಲಿ ಪ್ರಜಾತಂತ್ರದ ಮೌಲ್ಯಗಳನ್ನು ಕಾಪಾಡುವಲ್ಲಿ, ಪ್ರಜಾತಂತ್ರದ ಸಂಸ್ಥೆಗಳನ್ನು ಹೆಚ್ಚು ಜವಾಬ್ದಾರಿಯುತಗೊಳಿಸುವಲ್ಲಿ ಎಷ್ಟರ ಮಟ್ಟಿಗೆ ಯಶಸ್ವಿಯಾಗಿದ್ದೇವೆ ಎಂಬ ಚಿಂತನೆ ಆಗಬೇಕು.
- ನಮ್ಮ ಪ್ರಜಾಪ್ರಭುತ್ವ ಜನಕೇಂದ್ರಿತವಾಗಿದ್ದು, ಇದರ ನಿರ್ಮಾತೃಗಳು ಸಂವಿಧಾನ ರೂಪಿಸುವಾಗ ಜನರ ಹಿತವನ್ನೇ ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡಿದ್ದರು.

ಬಿಎಸ್‌ವೈಗೆ ‘ಅತ್ಯುತ್ತಮ ಶಾಸಕ’ ಪ್ರಶಸ್ತಿ

ಬೆಂಗಳೂರು: ಬಿಜೆಪಿ ಶಾಸಕ ಬಿ.ಎಸ್.ಯಡಿಯೂರಪ್ಪ ಅವರಿಗೆ ಈ ಸಾಲಿನ ‘ಅತ್ಯುತ್ತಮ ಶಾಸಕ’ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಲೋಕಸಭಾಧ್ಯಕ್ಷ ಓಂ ಬಿರ್ಲಾ ವಿಧಾನಸಭೆಯಲ್ಲಿ ಶುಕ್ರವಾರ ಸ್ವಾತಂತ್ರ್ಯದ ಅಮೃತಮಹೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಿದರು. ಪ್ರಶಸ್ತಿಯು ಬೆಳ್ಳಿಯ ಫಲಕವನ್ನು ಒಳಗೊಂಡಿದೆ.

‘ಇದೇ ಮೊದಲ ಬಾರಿ ಈ ಪ್ರಶಸ್ತಿ ನೀಡಲಾಗುತ್ತಿದ್ದು, ಇನ್ನು ಮುಂದೆ ಪ್ರತಿ ವರ್ಷವೂ ಒಬ್ಬ ಶಾಸಕರಿಗೆ ಪ್ರಶಸ್ತಿ ನೀಡಲಾಗುವುದು. ಲೋಕಸಭೆ ಮತ್ತು ಅನೇಕ ರಾಜ್ಯಗಳಲ್ಲಿ ಈ ರೀತಿ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿ ಆಯ್ಕೆಗೆ ಸಮಿತಿ ರಚಿಸಲಾಗಿತ್ತು. ಇದರಲ್ಲಿ, ಕಾನೂನು ಸಂಸದೀಯ ವ್ಯವಹಾರ ಸಚಿವ ಜೆ.ಸಿ. ಮಾಧುಸ್ವಾಮಿ, ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಮತ್ತು ಹಿರಿಯ ಶಾಸಕ ಆರ್.ವಿ.ದೇಶಪಾಂಡೆ ಸದಸ್ಯರಾಗಿದ್ದರು’ ಎಂದು ಕಾಗೇರಿ ಹೇಳಿದರು.

‘ಪ್ರಜಾಪ್ರಭುತ್ವದ ದೇಗುಲದಲ್ಲಿ ಜನರ ಆಶೋತ್ತರಗಳ ಈಡೇರಿಕೆಯ ದೊಡ್ಡ ಜವಾಬ್ದಾರಿಯ ಅರಿವಿನೊಂದಿಗೆ, ಶಾಸಕಾಂಗದ ಕರ್ತವ್ಯಗಳನ್ನು ನಿರ್ವಹಿಸಲು ಪ್ರಾಮಾಣಿಕವಾಗಿ ಪ್ರಯತ್ನಿಸಿದ್ದೇನೆ. ಪ್ರಥಮ ಬಾರಿಗೆ ನೀಡಲಾದ ಅತ್ಯುತ್ತಮ ಶಾಸಕ ಪ್ರಶಸ್ತಿಯನ್ನು ಅತ್ಯಂತ ವಿನೀತ ಭಾವದಿಂದ ಸ್ವೀಕರಿಸಿದ್ದೇನೆ’ ಎಂದು ಯಡಿಯೂರಪ್ಪ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್ ಬಹಿಷ್ಕಾರ: ಹಿಂದಿಗೆ ವಿರೋಧ

ಓಂ ಬಿರ್ಲಾ ಅವರ ಭಾಷಣಕ್ಕೆ ಕಾಂಗ್ರೆಸ್ ಬಹಿಷ್ಕಾರ ಹಾಕಿತ್ತು. ಆದರೆ, ಜೆಡಿಎಸ್ ಸದಸ್ಯರು ಭಾಗವಹಿಸಿದ್ದರು. ವಿಧಾನಸಭೆಯೊಳಗೆ ಭಾಷಣ ಮಾಡಲು ಅವಕಾಶ ನೀಡಿದ್ದನ್ನು ವಿರೋಧಿಸಿ ಕಾಂಗ್ರೆಸ್ ಸದಸ್ಯರು ಕಲಾಪದಿಂದ ಹೊರಗುಳಿದು ಪ್ರತಿಭಟನೆ ತೋರಿದರು. ಈ ಬಗ್ಗೆ ಬೇಸರ ವ್ಯಕ್ತಪಡಿಸಿದ ಸಭಾಧ್ಯಕ್ಷ ಕಾಗೇರಿ, ‘ಕಾಂಗ್ರೆಸ್ ಸದಸ್ಯರಿಗೆ ಆಹ್ವಾನ ನೀಡಿದ್ದೆವು. ಅವರದೇ ಕಾರಣಗಳಿಗೆ ಬಂದಿಲ್ಲ. ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು’ ಎಂಬ ಆಶಯ ವ್ಯಕ್ತಪಡಿಸಿದರು. ಓಂ ಬಿರ್ಲಾ ಹಿಂದಿಯಲ್ಲಿ ಭಾಷಣ ಓದಿದ್ದನ್ನು ಪ್ರತಿಭಟಿಸಿ ಜೆಡಿಎಸ್‌ನ ಕೆ.ಅನ್ನದಾನಿ ಕನ್ನಡ ಬಾವುಟ ಪ್ರದರ್ಶಿಸಿ ವಿರೋಧ ವ್ಯಕ್ತಪಡಿಸಿದರು.

ಮಹಾನಗರ ಪಾಲಿಕೆ, ಕಲಬುರಗಿ
ದೂರವಾಣಿ : 08472/ 278675, ಫ್ಯಾಕ್ಸ : 08472/ 260776
ಇ ಮೇಲ್ -itstaff_ulb_gulbarga@yahoo.com
No: KMP/EE/TS-01/MGNVY/2021-22/2234 ದಿನಾಂಕ: 24.09.2021

ತಿದ್ದುಪಡಿ ಟೆಂಡರ್ ಪ್ರಕಟಣೆ

ಈ ಕಛೇರಿಯ ಟೆಂಡರ್ ಪ್ರಕಟಣೆ ಸಂಖ್ಯೆ: No:KMP/EE/TS-01/MGNVY/2021-22 ದಿನಾಂಕ: 09.09.2021 ರಂದು 2019–20 ರಿಂದ 2023–24ರ ಸಾಲಿನ ಮಹಾತ್ಮಗಾಂಧಿ ನಗರ ವಿಕಾಸ ಯೋಜನೆ 24.10% ಅನುದಾನದಲ್ಲಿ ಕರೆಯಲಾದ ಟೆಂಡರ್ ಪ್ರಕಟಣೆಯಲ್ಲಿ ಯೋಜನೆ ಕಾಮಗಾರಿಯ ಹೆಸರು : Foundation Training for IAS Civil Service Pre-Examination coaching for the aspirants of Kalaburagi ಎಂದಾಗಿದ್ದು, ಇದನ್ನು Providing UPSC and KPSC training to Schedule caste and Schedule tribe under 40% individual benefit programme (Foundation training for IAS civil service Pre-Examination coaching for the aspirants of Kalaburagi city) ಎಂದು ತಿದ್ದುಪಡಿ ಮಾಡಿಕೊಂಡು ಓದಿಕೊಳ್ಳಲು ತಿಳಿಸಿದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/633/ಎಂ.ಸಿ&ಎ/2021–22

ಎಬಿಸಿ ಅಧ್ಯಕ್ಷರಾಗಿ ದೇವವ್ರತ ಮುಖರ್ಜಿ ಅವಿರೋಧ ಆಯ್ಕೆ

ಬೆಂಗಳೂರು: ಆಡಿಟ್ ಬ್ಯೂರೊ ಆಫ್ ಸರ್ಕ್ಯುಲೇಶನ್ (ಎಬಿಸಿ) ಸಂಸ್ಥೆಯ 2021–22ನೇ ಸಾಲಿನ ಅಧ್ಯಕ್ಷರಾಗಿ ಯುನೈಟೆಟ್ ಬ್ರೆವರೀಸ್ ಲಿಮಿಟೆಡ್‌ನ ಮುಖ್ಯ ಮಾರುಕಟ್ಟೆ ಅಧಿಕಾರಿ ದೇವವ್ರತ ಮುಖರ್ಜಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ದೇವವ್ರತ ಮುಖರ್ಜಿ

ಉದ್ಯಮಿಯಾಗಿ 27 ವರ್ಷ ಅನುಭವ ಇರುವ ಅವರು, ಯುನಿಲಿವರ್ ಇಂಡಿಯಾ ಮೂಲಕ ವೃತ್ತಿಯನ್ನು ಆರಂಭಿಸಿದ್ದರು. 1998ರಲ್ಲಿ ಕೋಕೊ ಕೋಲಾ ಸಂಸ್ಥೆ ಸೇರಿದ ಅವರು, ಭಾರತ, ಕೊರಿಯಾ ಹಾಗೂ ನೈರುತ್ಯ ಏಷ್ಯಾದಲ್ಲಿ ಆ ಸಂಸ್ಥೆಯ ಹಲವು ಹುದ್ದೆಗಳನ್ನು ನಿಭಾಯಿಸಿದ್ದಾರೆ. 2018ರಲ್ಲಿ ಹಿಂದೂಸ್ತಾನ್ ಟೈಮ್ಸ್ ಸಮೂಹವನ್ನು ಸೇರಿದ ಅವರು, ಕಾರ್ಯನಿರ್ವಾಹಕ ನಿರ್ದೇಶಕರಾಗಿ ಗಮನಾರ್ಹ ಕೆಲಸ ಮಾಡಿದ್ದಾರೆ. 2019ರಲ್ಲಿ ಯುನೈಟೆಡ್ ಬ್ರೆವರೀಸ್ ಸಮೂಹವನ್ನು ಸೇರಿದ್ದಾರೆ. ಆನಂದ್ ಬಜಾರ್ ಪತ್ರಿಕಾ ಸಮೂಹ ಮಂಡಳಿಯ ಸ್ವತಂತ್ರ ನಿರ್ದೇಶಕರಾಗಿಯೂ ಕೆಲಸ ಮಾಡಿದ್ದಾರೆ.

ಪ್ರತಾಪ್ ಪವಾರ್ (ಸಕಾಳ್ ಪೇಪರ್ಸ್) ಉಪಾಧ್ಯಕ್ಷರಾಗಿ ಹಾಗೂ ಹೊರ್ಮುಜ್ಡ್ ಮಸಾನಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

2021–22 ಸಾಲಿನ ಎಬಿಸಿಯ ಆಡಳಿತ ಮಂಡಳಿ ಸದಸ್ಯರ ವಿವರ ಇಂತಿದೆ. **ಜಾಹೀರಾತುದಾರರ ಪ್ರತಿನಿಧಿಗಳು:** ದೇವವ್ರತ ಮುಖರ್ಜಿ (ಅಧ್ಯಕ್ಷ), ಕರುಣೇಶ್ ಬಜಾಜ್ (ಐಟಿಸಿ ಲಿ.), ಅನಿರುದ್ಧ ಹಲ್ದಾರ್ (ಟಿವಿಎಸ್ ಮೋಟಾರ್ ಕಂಪನಿ ಲಿಮಿಟೆಡ್), ಶಶಾಂಕ್ ಶ್ರೀವಾತ್ಸವ್ (ಮಾರುತಿ ಸುಜುಕಿ ಇಂಡಿಯಾ ಲಿಮಿಟೆಡ್) **ಪ್ರಕಾಶಕರ ಪ್ರತಿನಿಧಿಗಳು:** ಪ್ರತಾಪ್ ಪವಾರ್–ಉಪಾಧ್ಯಕ್ಷ, ರಿಯಾದ್ ಮ್ಯಾಥ್ಯು (ಮಲಯಾಳ ಮನೋರಮಾ ಕಂ. ಲಿ.)– ಗೌರವ ಕಾರ್ಯದರ್ಶಿ, ದೇವೇಂದ್ರ ವಿ. ದಾರ್ಡಾ (ಲೋಕಮತ್ ಮೀಡಿಯಾ ಪ್ರೈ.ಲಿ), ಹೊರ್ಮಸ್ಜಿ ಎನ್. ಕ್ಯಾಮಾ (ದಿ ಬಾಂಬೆ ಸಮಾಚಾರ್ ಪ್ರೈ.ಲಿ), ಶೈಲೇಶ್ ಗುಪ್ತಾ (ಜಾಗರಣ್ ಪ್ರಕಾಶನ್ ಲಿ.), ಪ್ರವೀಣ್ ಸೋಮೇಶ್ವರ್ (ಹಿಂದೂಸ್ತಾನ್ ಟೈಮ್ಸ್ ಮೀಡಿಯಾ ಲಿ), ಮೋಹಿತ್ ಜೈನ್ (ಬೆನೆಟ್ ಎಂಡ್ ಕೋಲಮನ್ ಆಂಡ್ ಕಂಪನಿ ಲಿ.), ಧ್ರುವ ಮುಖರ್ಜಿ (ಎಬಿಪಿ ಪ್ರೈ.ಲಿ) **ಜಾಹೀರಾತು ಸಂಸ್ಥೆಗಳ ಪ್ರತಿನಿಧಿಗಳು:** ವಿಕ್ರಂ ಸಖುಜಾ (ಮ್ಯಾಡಿಸನ್ ಕಮ್ಯುನಿಕೇಶನ್ಸ್ ಪ್ರೈ. ಲಿ)– ಗೌರವ ಖಜಾಂಚಿ, ಶಶಿಧರ ಸಿನ್ಹಾ (ಐಪಿಜಿ ಮೀಡಿಯಾ ಬ್ರಾಂಡ್ಸ್, ಮೀಡಿಯಾ ಬ್ರಾಂಡ್ಸ್ ಪ್ರೈ.ಲಿ), ಶ್ರೀನಿವಾಸನ್ ಕೆ.ಸ್ವಾಮಿ (ಆರ್‌ಕೆ ಸ್ವಾಮಿ ಬಿಬಿಡಿಒ ಪ್ರೈ.ಲಿ), ಆಶಿಶ್ ಭಾಸಿನ್ (ಡೆನ್ತ್ಸು ಏಜೀಸ್ ನೆಟ್‌ವರ್ಕ್ ಕಮ್ಯುನಿಕೇಶನ್ಸ್ ಪ್ರೈ.ಲಿ)

ಚೆನ್ನೈಗೆ ಮಣಿದ ಬೆಂಗಳೂರು

ನಾಯಕ ಕೊಹ್ಲಿ, ಕನ್ನಡಿಗ ದೇವದತ್ತ ಪಡಿಕ್ಕಲ್ ಶತಕದ ಜೊತೆಯಾಟ ವ್ಯರ್ಥ

ಶಾರ್ಜಾ (ಪಿಟಿಐ): ಉತ್ತಮ ಆರಂಭ ಕಂಡರೂ ನಂತರ ಕುಸಿತಕ್ಕೆ ಒಳಗಾಗಿ ಸಾಧಾರಣ ಮೊತ್ತ ಕಲೆ ಹಾಕಿದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಸತತ ಎರಡನೇ ಸೋಲು ಕಂಡಿತು. ಶುಕ್ರವಾರ ನಡೆದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ಆರು ವಿಕೆಟ್‌ಗಳಿಂದ ವಿರಾಟ್ ಕೊಹ್ಲಿ ಬಳಗವನ್ನು ಮಣಿಸಿತು.

157 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಚೆನ್ನೈ ಇನ್ನೂ 11 ಎಸೆತ ಬಾಕಿ ಇರುವಾಗ ದಡ ಸೇರಿತು. ಋತುರಾಜ್ ಗಾಯಕವಾಡ್ ಮತ್ತು ಫಫ್ ಡು ಪ್ಲೆಸಿ ಮೊದಲ ವಿಕೆಟ್‌ಗೆ 71 ರನ್ ಸೇರಿಸಿ ಉತ್ತಮ ಆರಂಭ ಒದಗಿಸಿದರು. ಮೋಯಿನ್ ಅಲಿ ಮತ್ತು ಅಂಬಟಿ ರಾಯುಡು ತಾಳ್ಮೆಯ ಬ್ಯಾಟಿಂಗ್ ಮಾಡಿದರು. ಅಜೇಯರಾಗಿ ಉಳಿದ ಸುರೇಶ್ ರೈನಾ ಮತ್ತು ಮಹೇಂದ್ರ ಸಿಂಗ್ ಧೋನಿ ಸುಲಭ ಜಯಕ್ಕೆ ಕಾರಣರಾದರು. ಈ ಜಯದೊಂದಿಗೆ ತಂಡ ಪಾಯಿಂಟ್ ಪಟ್ಟಿಯಲ್ಲಿ ಮತ್ತೆ ಅಗ್ರ ಸ್ಥಾನಕ್ಕೇರಿತು.

ಕೊಹ್ಲಿ–ದೇವದತ್ತ ಶತಕದ ಜೊತೆಯಾಟ: ಮೊದಲ ವಿಕೆಟ್‌ಗೆ ಅಮೋಘ ಜೊತೆಯಾಟವಾಡಿದ ನಾಯಕ ವಿರಾಟ್ ಕೊಹ್ಲಿ ಮತ್ತು ಕನ್ನಡಿಗ ದೇವದತ್ತ ಪಡಿಕ್ಕಲ್ ಅರ್ಧಶತಕಗಳ ಮೂಲಕ ಮಿಂಚಿದರು. ಅವರಿಬ್ಬರು 80 ಎಸೆತಗಳಲ್ಲಿ 111 ರನ್ ಸೇರಿಸಿ ಇನಿಂಗ್ಸ್‌ಗೆ ಭದ್ರ ಬುನಾದಿ ಹಾಕಿದರು. ಮೋಹಕ ಹೊಡೆತಗಳ ಮೂಲಕ ಕೊಹ್ಲಿ 53 ರನ್ ಗಳಿಸಿದರೆ, ಸೊಗಸಾಗಿ ಬ್ಯಾಟ್ ಬೀಸಿದ ಪಡಿಕ್ಕಲ್ ಮೂರು ಸಿಕ್ಸರ್ ಮತ್ತು ಐದು ಬೌಂಡರಿ ಸಿಡಿಸಿ 70 ರನ್ ಗಳಿಸಿದರು.

ಡಿವಿಲಿಯರ್ಸ್ ಒಂದು ಸಿಕ್ಸರ್ ಸಿಡಿಸಿದರು. ಆದರೆ ನಂತರ ಧೋನಿ ಬಳಸಿದ ತಂತ್ರಕ್ಕೆ ಬಲಿಯಾದರು. 11 ಎಸೆತಗಳಲ್ಲಿ 12 ರನ್ ಗಳಿಸಿದ ಡಿವಿಲಿಯರ್ಸ್ ಅವರು ಶಾರ್ದೂಲ್ ಠಾಕೂರ್‌ಗೆ ವಿಕೆಟ್ ಒಪ್ಪಿಸಿದರು. ಗ್ಲೆನ್ ಮ್ಯಾಕ್ಸ್‌ವೆಲ್ ಕೂಡ ನಿರೀಕ್ಷೆ ಹುಸಿಗೊಳಿಸಿದರು. ಒಂದು ಸಿಕ್ಸರ್ ಸಿಡಿಸಿದರೂ ಒಂಬತ್ತು ಎಸೆತಗಳಲ್ಲಿ ಅವರು ಗಳಿಸಿದ್ದು 11 ರನ್ ಮಾತ್ರ. ಅಂತಿಮ ಓವರ್‌ಗಳಲ್ಲಿ ಚೆನ್ನೈ ಬೌಲರ್‌ಗಳು ಹಿಡಿತ ಇನ್ನಷ್ಟು ಬಿಗಿಗೊಳಿಸಿದರು.

ಮರಳು ಗಾಳಿ; ಪಂದ್ಯಕ್ಕೆ ಅಡ್ಡಿ: ಮರಳಿನಿಂದ ಕೂಡಿದ ಗಾಳಿ ಬೀಸಿದ ಕಾರಣ ಪಂದ್ಯದ ಆರಂಭಕ್ಕೆ ಅಡ್ಡಿಯಾಯಿತು. ಮೊದಲು 10 ನಿಮಿಷ ತಡವಾಗಿ ಟಾಸ್ ಹಾಕುವುದಾಗಿ ಘೋಷಿಸಲಾಗಿತ್ತು. ನಂತರ ಪಂದ್ಯವನ್ನೂ ತಡವಾಗಿ ಆರಂಭಿಸಲಾಯಿತು.

ಟಿಮ್ ಡೇವಿಡ್ ಪದಾರ್ಪಣೆ: ಸಿಂಗಪುರ ರಾಷ್ಟ್ರೀಯ ತಂಡದ ಸ್ಫೋಟಕ ಬ್ಯಾಟ್ಸ್‌ಮನ್ ಟಿಮ್ ಡೇವಿಡ್ ಅವರು ಐಪಿಎಲ್‌ಗೆ ಶುಕ್ರವಾರ ಪದಾರ್ಪಣೆ ಮಾಡಿದರು. ಈ ಮೂಲಕ ಟೂರ್ನಿಯಲ್ಲಿ ಆಡಿದ ಆ ದೇಶದ ಮೊದಲ ಆಟಗಾರ ಎನಿಸಿಕೊಂಡರು. ಆರ್‌ಸಿಬಿ ಇನಿಂಗ್ಸ್‌ನ ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅವರು ತಮ್ಮ ಸಹಜ ಶೈಲಿಯ ಬ್ಯಾಟಿಂಗ್ ಪ್ರದರ್ಶಿಸುವಲ್ಲಿ ವಿಫಲರಾದರು. ಮೂರು ಎಸೆತಗಳಲ್ಲಿ ಒಂದು ರನ್ ಗಳಿಸಿದರು. ಕೈಲ್ ಜೆಮೀಸನ್ ಬದಲಿಗೆ ಅವರನ್ನು ಕರೆಸಿಕೊಂಡ ತಂಡ ಸಚಿನ್ ಬೇಬಿ ಬದಲಿಗೆ ಸೈನಿಗೆ ಅವಕಾಶ ನೀಡಿತ್ತು.

ಅರ್ಧಶತಕದ ಜೊತೆಯಾಟ ಆಡಿದ ಋತುರಾಜ್ ಗಾಯಕವಾಡ್ (ಎಡ) ಮತ್ತು ಫಫ್ ಡು ಪ್ಲೆಸಿ –ಪಿಟಿಐ ಚಿತ್ರ

ಸ್ಕೋರ್ ಕಾರ್ಡ್

ರಾಯಲ್ ಚಾಲೆಂಜರ್ಸ್ ಬೆಂಗಳೂರು 6ಕ್ಕೆ 156 (20 ಓವರ್)
ವಿರಾಟ್ ಕೊಹ್ಲಿ ಸಿ ಜಡೇಜ ಬಿ ಬ್ರಾವೊ 53 (41 ಎ, 4x6, 6x1), ದೇವದತ್ತ ಸಿ ರಾಯುಡು ಬಿ ಠಾಕೂರ್ 70 (50 ಎ, 4x5, 6x3), ಡಿವಿಲಿಯರ್ಸ್ ಸಿ ರೈನಾ ಬಿ ಠಾಕೂರ್ 12 (11 ಎ, 6x1), ಮ್ಯಾಕ್ಸ್‌ವೆಲ್ ಸಿ ಜಡೇಜ ಬಿ ಬ್ರಾವೊ 11 (9 ಎ, 6x1), ಡೇವಿಡ್ ಸಿ ರೈನಾ ಬಿ ಚಾಹರ್ 1 (3 ಎ), ಹರ್ಷಲ್ ಸಿ ರೈನಾ ಬಿ ಬ್ರಾವೊ 3 (5 ಎ), ಹಸರಂಗ ಔಟಾಗದೆ 1 (1 ಎ)
ಇತರೆ (ಲೆಗ್ ಬೈ 3, ವೈಡ್ 2) 5
ವಿಕೆಟ್ ಪತನ: 1-111 (ವಿರಾಟ್ ಕೊಹ್ಲಿ, 13.2), 2-140 (ಎಬಿ ಡಿವಿಲಿಯರ್ಸ್, 16.5), 3-140 (ದೇವದತ್ತ ಪಡಿಕ್ಕಲ್, 16.6), 4-150 (ಟಿಮ್ ಡೇವಿಡ್, 18.2), 5-154 (ಗ್ಲೆನ್ ಮ್ಯಾಕ್ಸ್‌ವೆಲ್, 19.2), 6-156 (ಹರ್ಷಲ್ ಪಟೇಲ್, 19.6)
ಬೌಲಿಂಗ್: ದೀಪಕ್ ಚಾಹರ್ 4-0-35-1, ಜೋಶ್ ಹ್ಯಾಜಲ್‌ವುಡ್ 4-0-34-0, ಶಾರ್ದೂಲ್ ಠಾಕೂರ್ 4-0-29-2, ರವೀಂದ್ರ ಜಡೇಜ 4-0-31-0, ಡ್ವೇನ್ ಬ್ರಾವೊ 4-0-24-3

ಚೆನ್ನೈ ಸೂಪರ್ ಕಿಂಗ್ಸ್ 4ಕ್ಕೆ 157 (18.1 ಓವರ್)
ಋತುರಾಜ್ ಸಿ ಕೊಹ್ಲಿ ಬಿ ಚಾಹಲ್ 38 (26ಎ, 4X4, 6X1), ಡುಪ್ಲೆಸಿ ಸಿ ಸೈನಿ ಬಿ ಮ್ಯಾಕ್ಸ್‌ವೆಲ್ 31 (26ಎ, 4X2, 6X2), ಮೊಯಿನ್ ಸಿ ಕೊಹ್ಲಿ ಬಿ ಹರ್ಷಲ್ 23 (18ಎ, 6X2), ರಾಯುಡು ಸಿ ಡಿವಿಲಿಯರ್ಸ್ ಬಿ ಹರ್ಷಲ್ 32 (22ಎ, 4X3, 6X1), ರೈನಾ ಔಟಾಗದೆ 17 (10ಎ, 4X2, 6X1) , ಧೋನಿ ಔಟಾಗದೆ 11 (9ಎ, 4X2)
ಇತರೆ (ಲೆಗ್ ಬೈ 1, ನೋಬಾಲ್ 2, ವೈಡ್ 2) 5
ವಿಕೆಟ್ ಪತನ: 1-71 (ಋತುರಾಜ್ ಗಾಯಕವಾಡ, 8.2), 2-71 (ಫಫ್ ಡುಪ್ಲೆಸಿ, 9.1), 3-118 (ಮೊಯಿನ್ ಅಲಿ, 13.6), 4-133 (ಅಂಬಟಿ ರಾಯುಡು, 15.4).
ಬೌಲಿಂಗ್: ಮೊಹಮ್ಮದ್ ಸಿರಾಜ್ 3-0-23-0, ನವದೀಪ್ ಸೈನಿ 2-0-25-0, ವನಿಂದು ಹಸರಂಗ 4-0-40-0, ಹರ್ಷಲ್ ಪಟೇಲ್ 3.1-0-25-2, ಯಜುವೇಂದ್ರ ಚಾಹಲ್ 4-0-26-1, ಗ್ಲೆನ್ ಮ್ಯಾಕ್ಸ್‌ವೆಲ್ 2-0-17-1

ಫಲಿತಾಂಶ: ಚೆನ್ನೈಸೂಪರ್ ಕಿಂಗ್ಸ್‌ಗೆ 6 ವಿಕೆಟ್‌ಗಳ ಜಯ

ರಾಹುಲ್ ಬಳಗಕ್ಕೆ ಸ್ಥಿರತೆ ಕಾಪಾಡುವ ಸವಾಲು; ಕೇನ್ ಪಡೆಗೆ ಜಯದ ಕನಸು

ಪಂಜಾಬ್–ಹೈದರಾಬಾದ್ ಮುಖಾಮುಖಿ

ಶಾರ್ಜಾ (ಪಿಟಿಐ): ಗೆಲುವಿನತ್ತ ಹೆಜ್ಜೆ ಹಾಕಿದ್ದರೂ ಕೊನೆಯ ಓವರ್‌ಗಳಲ್ಲಿ ಮುಗ್ಗರಿಸಿ ಸೋಲೊಪ್ಪಿಕೊಂಡಿರುವ ಪಂಜಾಬ್ ಕಿಂಗ್ಸ್ ತಂಡ ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಕ್ರಿಕೆಟ್ ಟೂರ್ನಿಯಲ್ಲಿ ಶನಿವಾರ ಸನ್‌ರೈಸರ್ಸ್ ಹೈದರಾಬಾದ್ ವಿರುದ್ಧ ಸೆಣಸಲಿದೆ. ಆಡಿದ ಎಂಟು ಪಂದ್ಯಗಳ ಪೈಕಿ ಏಳನ್ನು ಸೋತಿರುವ ಸನ್‌ರೈಸರ್ಸ್ ಗೆಲುವಿನ ಹಾದಿಗೆ ಮರಳಲು ಸರ್ವ ಪ್ರಯತ್ನವನ್ನೂ ಮಾಡಲಿದೆ.

ಆರಂಭದ ಕೆಲವು ಪಂದ್ಯಗಳ ನಂತರ ಹೈದರಾಬಾದ್ ಸತತವಾಗಿ ಪಾಯಿಂಟ್ ಪಟ್ಟಿಯಲ್ಲಿ ಕೊನೆಯ ಸ್ಥಾನದಲ್ಲೇ ಉಳಿದಿದೆ. ಒಂಬತ್ತು ಪಂದ್ಯಗಳ ಪೈಕಿ ಮೂರನ್ನಷ್ಟೇ ಗೆದ್ದಿರುವ ಪಂಜಾಬ್ ಕಿಂಗ್ಸ್ ಕೊನೆಯಿಂದ ಎರಡನೇ ಸ್ಥಾನದಲ್ಲಿದೆ. ಆದ್ದರಿಂದ ಇವೆರಡೂ ನೊಂದಿರುವ ತಂಡಗಳು. ಹೀಗಾಗಿ ಎರಡೂ ಕಡೆಯವರಿಗೆ ಮರುಜೀವ ಪಡೆದುಕೊಳ್ಳಲು ಜಯ ಅನಿವಾರ್ಯವಾಗಿದೆ.

ಹಿಂದಿನ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್‌ಗೆ ಮಣಿಯುವ ಮೂಲಕ ಸನ್‌ರೈಸರ್ಸ್ ತಂಡದ ಪ್ಲೇ ಆಫ್ ಹಂತಕ್ಕೇರುವ ಕನಸು ಕಮರಿ ಹೋಗಿದೆ. ಕೊನೆಯ ಹಂತದಲ್ಲಿ ಮುಗ್ಗರಿಸುವುದು ಪಂಜಾಬ್ ಕಿಂಗ್ಸ್‌ಗೆ ಪರಿಪಾಠದಂತಾಗಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದು ತಂಡದ ಮುಂದಿರುವ ಬಹುದೊಡ್ಡ ಸವಾಲು. ಭಾರತದ ವಿದೇಶದ ಅತ್ಯುತ್ತಮ ಆಟಗಾರರನ್ನು ಹೊಂದಿದ್ದರೂ ತಂಡಕ್ಕೆ ಸೋಲಿನ ಸುಳಿಯಲ್ಲಿ ಸಿಲುಕುವುದು ಸಾಮಾನ್ಯವಾಗಿದೆ.

ನಾಯಕರು ಮತ್ತು ಕೋಚ್‌ಗಳನ್ನು ಪದೇ ಪದೇ ಬದಲಿಸುತ್ತಿರುವುದರಿಂದ ತಂಡಕ್ಕೆ ಸ್ಥಿರತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂಬ ಮಾತು ಕೂಡ ಕೇಳಿಬಂದಿದೆ. ತಂಡ ಕಣಕ್ಕೆ ಇಳಿಸುವ 11 ಆಟಗಾರರ ಆಯ್ಕೆಯಲ್ಲೂ ಎಡವುತ್ತಿದೆ ಎಂದು ಮಾಜಿ ಪೋಷಕ ವೀರೇಂದ್ರ ಸೆಹ್ವಾಗ್ ಅವರೇ ಹೇಳಿಕೊಂಡಿದ್ದಾರೆ. ಐಪಿಎಲ್‌ನ ಅತ್ಯುತ್ತಮ ಆರಂಭಿಕ ಜೋಡಿಗಳಲ್ಲಿ ಒಂದು ಎಂದು ಹೇಳಲಾಗುವ ಕೆ.ಎಲ್. ರಾಹುಲ್ ಮತ್ತು ಮಯಂಕ್ ಅಗರವಾಲ್ ಉತ್ತಮ ಲಯದಲ್ಲಿದ್ದಾರೆ. ರಾಜಸ್ಥಾನ್ ಎದುರಿನ ಕಳೆದ ಪಂದ್ಯದಲ್ಲಿ ಇವರಿಬ್ಬರು 71 ಎಸೆತಗಳಲ್ಲಿ 120 ರನ್ ಕಲೆಹಾಕಿದ್ದರು.

41ರ ಹರೆಯದಲ್ಲೂ ಸ್ಫೋಟಕ ಬ್ಯಾಟಿಂಗ್ ಮಾಡಬಲ್ಲ ಕ್ರಿಸ್ ಗೇಲ್ ಅವರನ್ನು ಹಿಂದಿನ ಪಂದ್ಯದಲ್ಲಿ ಅಂತಿಮ 11ರಿಂದ ಕೈಬಿಡಲಾಗಿತ್ತು. ಟೂರ್ನಿಯ ಮೊದಲ ಹಂತದಲ್ಲಿ ಅಮೋಘ ಆಟವಾಡಿದ ನಿಕೋಲಸ್ ಪೂರನ್ ಹಿಂದಿನ ಪಂದ್ಯದಲ್ಲಿ ಉತ್ತಮ ಬ್ಯಾಟಿಂಗ್ ಮೂಲಕ ಭರವಸೆ ಮೂಡಿಸಿದ್ದಾರೆ. ಮೊಹಮ್ಮದ್ ಶಮಿ ಅವರನ್ನು ಒಳಗೊಂಡ ಬೌಲಿಂಗ್ ವಿಭಾಗ ಬಲಿಷ್ಠವಾಗಿದೆ.

ಮುಂದಿನ ಪಂದ್ಯಗಳಲ್ಲಿ ಉತ್ತಮ ಸಾಮರ್ಥ್ಯ ತೋರಿ ಈ ಬಾರಿಯ ಟೂರ್ನಿಗೆ ವಿದಾಯ ಹೇಳುವುದಷ್ಟೇ ಸನ್‌ರೈಸರ್ಸ್‌ಗೆ ಉಳಿದಿರುವ ದಾರಿ. ಕೇನ್ ವಿಲಿಯಮ್ಸನ್, ಮನೀಷ್ ಪಾಂಡೆ, ವೃದ್ಧಿಮಾನ್ ಸಹಾ, ರಶೀದ್ ಖಾನ್, ಖಲೀಲ್ ಅಹಮ್ಮದ್, ಭುವನೇಶ್ವರ್ ಕುಮಾರ್ ಮುಂತಾದವರು ಈ ಕನಸು ನನಸು ಮಾಡಲು ಸಮರ್ಥರಾಗುವರೇ ಎಂಬುದನ್ನು ಕಾದುನೋಡಬೇಕು.

ಕೆ.ಎಲ್.ರಾಹುಲ್ – ಪಿಟಿಐ ಚಿತ್ರ

ಡೆಲ್ಲಿ–ರಾಜಸ್ಥಾನ ಹಣಾಹಣಿ

ಶನಿವಾರ ಎರಡು ಪಂದ್ಯಗಳು ನಡೆಯಲಿದ್ದು ಮೊದಲ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಮತ್ತು ರಾಜಸ್ಥಾನ ರಾಯಲ್ಸ್ ತಂಡಗಳು ಸೆಣಸಲಿವೆ. ರಿಷಭ್ ಪಂತ ನಾಯಕತ್ವದ ಡೆಲ್ಲಿ ಕ್ಯಾಪಿಟಲ್ಸ್ ಮೊದಲ ಹಂತದಲ್ಲಿ ಅಮೋಘ ಸಾಮರ್ಥ್ಯ ತೋರಿತ್ತು. ಎರಡನೇ ಹಂತದ ಮೊದಲ ಪಂದ್ಯದಲ್ಲೂ ಅದೇ ಲಯದಲ್ಲಿ ಆಡಿ ಎಂಟು ವಿಕೆಟ್‌ಗಳ ಜಯ ಸಾಧಿಸಿತ್ತು. ಈ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದೆ.

ಮೊದಲ ಹಂತದಲ್ಲಿ ಸೋಲು–ಗೆಲುವಿನ ಹಾವು–ಏಣಿ ಆಟವಾಡಿದ್ದ ರಾಜಸ್ಥಾನ್ ಎರಡನೇ ಹಂತದ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ ರೋಚಕ ಎರಡು ರನ್‌ಗಳ ಜಯ ಗಳಿಸುವ ಮೂಲಕ ಭರವಸೆಯ ಪಥದಲ್ಲಿದೆ.



ಪಂಜಾಬ್ – ಹೈದರಾಬಾದ್

ಗರಿಷ್ಠ ಮೊತ್ತ
ಹೈದರಾಬಾದ್ 212
ಪಂಜಾಬ್ 211

ಕನಿಷ್ಠ ಮೊತ್ತ
ಪಂಜಾಬ್ 119
ಹೈದರಾಬಾದ್ 114

ಆರಂಭ: ಮಧ್ಯಾಹ್ನ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಡೆಲ್ಲಿ – ರಾಜಸ್ಥಾನ

ಗರಿಷ್ಠ ಮೊತ್ತ
ರಾಜಸ್ಥಾನ 201
ಡೆಲ್ಲಿ 196

ಕನಿಷ್ಠ ಮೊತ್ತ
ರಾಜಸ್ಥಾನ 115
ಡೆಲ್ಲಿ 60

ಆರಂಭ: ರಾತ್ರಿ 3.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್

ಆರೆಂಜ್ ಕ್ಯಾಪ್ (ಹೆಚ್ಚು ರನ್ ಗಳಿಸಿದವರು)

ಆಟಗಾರ	ತಂಡ	ರನ್
ಶಿಖರ್ ಧವನ್	ಡೆಲ್ಲಿ	422
ಕೆ.ಎಲ್.ರಾಹುಲ್	ಪಂಜಾಬ್	380
ಡುಪ್ಲೆಸಿ	ಚೆನ್ನೈ	351

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್ ಗಳಿಸಿದವರು)

ಆಟಗಾರ	ತಂಡ	ವಿಕೆಟ್
ಹರ್ಷಲ್	ಆರ್‌ಸಿಬಿ	19
ಆವೇಶ್ ಖಾನ್	ಡೆಲ್ಲಿ	14
ಕ್ರಿಸ್ ಮೊರಿಸ್	ರಾಜಸ್ತಾನ್	14

ಪಾಯಿಂಟ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಟೈ	ಅಂಕ
ಚೆನ್ನೈ ಸೂಪರ್ ಕಿಂಗ್ಸ್	9	7	2	00	00	14
ಡೆಲ್ಲಿ ಕ್ಯಾಪಿಟಲ್ಸ್	9	7	2	00	00	14
ಬೆಂಗಳೂರು	9	5	4	00	00	10
ಕೋಲ್ಕತ್ತ ನೈಟ್ ರೈಡರ್ಸ್	9	4	5	00	00	8
ರಾಜಸ್ಥಾನ್ ರಾಯಲ್ಸ್	8	4	4	00	00	8
ಮುಂಬೈ ಇಂಡಿಯನ್ಸ್	9	4	5	00	00	8
ಪಂಜಾಬ್	9	3	6	00	00	6
ಹೈದರಾಬಾದ್	8	1	7	00	00	2

* ಶುಕ್ರವಾರದ ಪಂದ್ಯದ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಬಹು ಮಾಧ್ಯಮ ಪ್ರಜಾವಾಣಿ LIVE www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ

ಇಂದು

ಜಸ್ಟ್ ಮ್ಯೂಸಿಕ್
ಎ.ಆರ್.ರೆಹಮಾನ್ ಮೆಚ್ಚಿದ ಮೇವುಂಡಿ!!
https://bit.ly/39ByWl2

ಪಾಡ್‌ಕಾಸ್ಟ್: ಪ್ರತೀ ದಿನ: ಬೆಳಿಗ್ಗೆ 7 **ವಚನವಾಣಿ**, ಬೆ. 7.30 **ದಿನದ ಸೂಕ್ತಿ**, ಬೆಳಿಗ್ಗೆ 8, ಮಧ್ಯಾಹ್ನ 2, ರಾತ್ರಿ 8 **ಪ್ರಜಾವಾಣಿ ವಾರ್ತೆ ಬುಲೆಟಿನ್**, ಬೆಳಿಗ್ಗೆ 9.30 **ಸಂಪಾದಕೀಯ**, ಬೆಳಿಗ್ಗೆ 9 **ಪ್ರಚಲಿತ**
ಪ್ರಜಾವಾಣಿ ಕನ್ನಡ ಧ್ವನಿ

ನಾಳೆ

ಕ್ಲಬ್ ಹೌಸ್
ನಗು ನಗ್ತಾ...
ಕಂಗ್ಲಿಷ್, ಇಂಗ್ಲಿಷ್ ಮತ್ತು ಕನ್ನಡ
ಎಂ.ಎಸ್. ನರಸಿಂಹಮೂರ್ತಿ, ಹಾಸ್ಯ ಲೇಖಕ, ಕಿರುತೆರೆ ಸಾಹಿತಿ. **ಎಚ್. ಡುಂಡಿರಾಜ್,** ಚುಟುಕು ಕವಿ, ಕುಟುಕು ವಾಗ್ಮಿ. **ಮನು ಹಂದಾಡಿ,** ನಗೆ ಭಾಷಣಕಾರ, ಕಲಾವಿದ, ಶಿಕ್ಷಕ. **ಸಂಧ್ಯಾ ಶೆಣೈ ಉಡುಪಿ,** ಹಾಸ್ಯ ಭಾಷಣಕಾರ್ತಿ. **ಅಸಾದುಲ್ಲಾ ಬೇಗ್,** ಶಾಯರಿ ಕವಿ
ಪ್ರಜಾವಾಣಿ ಆಲದಮರ
10.30 ರಿಂದ 12.30

ಪವಿತ್ರಾಗೆ ಸೈಕಲ್ ಕೊಡುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ವಂತ ಸೈಕಲ್ ಇಲ್ಲದೇ ಇದ್ದರೂ ರಾಷ್ಟ್ರಮಟ್ಟದಲ್ಲಿ ಸಾಧನೆ ಮಾಡಿರುವ ಪವಿತ್ರಾ ಕುರ್ತಕೋಟಿ ಅವರಿಗೆ ಶುಕ್ರವಾರ ಸಂಭ್ರಮದ ದಿನ. ವಿಧಾನಸೌಧದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಸೈಕಲ್ ಕೊಡುಗೆಯಾಗಿ ಪಡೆದ ಅವರಿಗೆ ಕನಸು ನನಸಾದ ಖುಷಿ.

ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕಿನ ಕಡಕೋಳ ಗ್ರಾಮದ ನಿವಾಸಿ ಅಶೋಕ್ ಮತ್ತು ರೇಣುಕಾ ದಂಪತಿ ಮಗಳಾದ ಪವಿತ್ರಾ ಐದನೇ ತರಗತಿಯಿಂದ ಸೈಕ್ಲಿಂಗ್ ಕ್ರೀಡಾನಿಲಯದಲ್ಲಿ ಕಲಿಯುತ್ತಿದ್ದಾರೆ. ಈಗ ವಿಡಿಎಫ್‌ಟಿ ಬಾಲಕಿಯರ ಕಾಲೇಜಿನಲ್ಲಿ ಪಿಯುಸಿ ವಿದ್ಯಾರ್ಥಿನಿ. ತಂದೆ ರೈತ ಕಾರ್ಮಿಕ, ತಾಯಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿ ಊಟದ ಅಡುಗೆ ಸಹಾಯಕಿ. ಸೈಕ್ಲಿಂಗ್ ಕ್ರೀಡಾನಿಲಯದಲ್ಲಿದ್ದು ಕಲಿತರೂ ಗುಣಮಟ್ಟದ ಸ್ವಂತ ಸೈಕಲ್ ಇಲ್ಲದ ಕಾರಣ ವೈಯಕ್ತಿಕ ಅಭ್ಯಾಸ ಕಷ್ಟಕರವಾಗಿತ್ತು. ಕ್ರೀಡಾ ಪೋಷಕರ ನೆರವಿನಿಂದ ಸ್ಪರ್ಧೆಗಳಿಗೆ ಹೋಗುತ್ತಿದ್ದರು.

ಈ ನಡುವೆ ವಾಹಿನಿಯೊಂದರಲ್ಲಿ ಮುಖ್ಯಮಂತ್ರಿಗಳು ನೇರಪ್ರಸಾರದಲ್ಲಿದ್ದಾಗ ಕರೆ ಮಾಡಿದ ಪವಿತ್ರಾ ಸಂಕಟ ತೋಡಿಕೊಂಡಿದ್ದರು. ಗುಣಮಟ್ಟದ ಸೈಕಲ್ ಕೊಡುವುದಾಗಿ ಮುಖ್ಯಮಂತ್ರಿ ಭರವಸೆ ನೀಡಿದ್ದರು. ಇದರ ಹಿನ್ನೆಲೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣಗೌಡ, ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರು ಎಂಬಸಿ ಗ್ರೂಪ್, ಬ್ಲಾಸಂ ಆಸ್ಪತ್ರೆ ಮತ್ತು ಮಧುಸೂದನ್ ಅವರ ನೆರವಿನೊಂದಿಗೆ ಸೈಕಲ್ ವ್ಯವಸ್ಥೆ ಮಾಡಿದ್ದರು.

ಕೆನಡಾದಿಂದ ತರಿಸಿಕೊಂಡಿರುವ ₹ 5 ಲಕ್ಷ ಬೆಲೆಯ ಆ್ಯರ್ಗನ್-8 ಇ-119 ಸೈಕಲ್ ಶುಕ್ರವಾರ ಅವರಿಗೆ ಹಸ್ತಾಂತರಿಸಲಾಯಿತು. ಪಂಜಾಬ್‌ನ ಪಟಿಯಾಲದಲ್ಲಿ ನಡೆಯಲಿರುವ ರಾಷ್ಟ್ರೀಯ ಶಿಬಿರದಲ್ಲಿ ಅವರು ಈ ಸೈಕಲ್ ಬಳಸಲಿದ್ದಾರೆ.

ಹೊಸ ಸೈಕಲ್‌ನೊಂದಿಗೆ ಪವಿತ್ರಾ ಕುರ್ತಕೋಟಿ –ಪ್ರಜಾವಾಣಿ ಚಿತ್ರ

ಕೋಲ್ಕತ್ತ ರೇಸ್

ಕೆವಾಲೊ ವೆಲೋಸ್ ಗೆಲ್ಲುವ ನಿರೀಕ್ಷೆ

ಕೋಲ್ಕತ್ತ ಮಾನ್ಸೂನ್ ಸ್ಪ್ರಿಂಟ್ ಶನಿವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಕೆವಾಲೊ ವೆಲೋಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆ ಇದೆ. ಮಧ್ಯಾಹ್ನ 1.45ಕ್ಕೆ ಪ್ರಾರಂಭವಾಗಲಿರುದ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಶಿವಾಲಿಕ್ ಸ್ಟಾರ್ 6, ಟಾಹೊ 7, ರೋಮನ್ 2
2ನೇ ರೇಸ್: ಕ್ಲಿಯರ್ ವಿಷನ್ 1, ಡೋತ್ರಾಕಿ 6, ಅಡೊರಿಂಡ 2
3ನೇ ರೇಸ್: ರಾಬಿನ್ಸನ್ ಕ್ರೂಸೊ 1, ಅಪ್ರೆಸಿಯೇಟ್ 2, ಶಾಪಿಫೈ 3
4ನೇ ರೇಸ್: ಡೇರಿಂಗ್ ಹಾರ್ಟ್ 1, ಅಡೋರ್ನಿಕ 10, ಇಂಟಲೆಕ್ಶನ್ 2
5ನೇ ರೇಸ್: ರೆಸೊಲ್ಯೂಟ್ 4, ಜಸ್ಟಿಫೈಡ್ 5, ನೈಟ್ ಸೀಕ್ರೆಟ್ 6
6ನೇ ರೇಸ್: ಕೆವಾಲೊ ವೆಲೋಸ್ 1, ಪ್ರಿನ್ಸ್ ಸತ್ತುಮ 3, ಆವ್‌ಸಮ್ ಓನ್ 4
7ನೇ ರೇಸ್: ನೋವ 3, ಈಸ್ಟ್ ಸೈಡ್ 1, ಅಶ್ವಮೇಘ್ 7.

ಉತ್ತಮ ಬೆಟ್: ಕ್ಲಿಯರ್ ವಿಷನ್

ಜಾಕ್‌ಪಾಟ್	ಮಿನಿ ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	4,5,6,7	2,3,4	5,6,7

ಆಸ್ಟ್ರೇಲಿಯಾಗೆ ಜಯ

ಮಕಾಯ, ಆಸ್ಟ್ರೇಲಿಯಾ (ಪಿಟಿಐ): ಅನುಭವಿ ಬೌಲರ್ ಜೂಲನ್ ಗೋಸ್ವಾಮಿ, ಕೊನೆಯ ಓವರ್‌ನಲ್ಲಿ ಎದುರಾಳಿ ಬ್ಯಾಟರ್‌ಗಳನ್ನು ನಿಯಂತ್ರಿಸುವಲ್ಲಿ ವಿಫಲರಾದರು. ಗೆಲುವಿನತ್ತ ದಾಪುಗಾಲು ಹಾಕಿದ್ದ ಭಾರತ ಮಹಿಳಾ ತಂಡ ಸೋಲಿನ ಸುಳಿಯಲ್ಲಿ ಸಿಲುಕಿತು.

ಭಾರತ ಎದುರಿನ ಮೂರು ಪಂದ್ಯಗಳ ಏಕದಿನ ಸರಣಿಯ ಎರಡನೇ ಪಂದ್ಯದಲ್ಲಿ ಆಸ್ಟ್ರೇಲಿಯಾ ಐದು ವಿಕೆಟ್‌ಗಳಿಂದ ಜಯಭೇರಿ ಮೊಳಗಿಸಿತು. ಈ ಮೂಲಕ ಸರಣಿಯನ್ನು ತನ್ನದಾಗಿಸಿಕೊಂಡಿತು. ಆರಂಭಿಕ ಬ್ಯಾಟರ್ ಬೇತ್ ಮೂನಿ (ಔಟಾಗದೆ 125; 133 ಎ, 12 ಬೌಂಡರಿ), ತಹಲಿಯಾ ಮೆಗ್ರಾ (74; 77 ಎ, 9 ಬೌಂ) ತಂಡದ ಜಯಕ್ಕೆ ಕಾರಣರಾದರು. ಕೊನೆಯ ಓವರ್‌ನಲ್ಲಿ ಆಸ್ಟ್ರೇಲಿಯಾ ಗೆಲುವಿಗೆ 13 ರನ್ ಬೇಕಾಗಿತ್ತು. ಜೂಲನ್ ಗೋಸ್ವಾಮಿ ಎರಡು ನೋಬಾಲ್ ಹಾಕುವುದರೊಂದಿಗೆ ಗೆಲುವಿನ 'ಕಾಣಿಕೆ' ನೀಡಿದರು. ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (86; 94 ಎಸೆತ, 11 ಬೌಂಡರಿ) ಮತ್ತು ರಿಚಾ ಘೋಷ್ ಅವರ ಅಮೋಘ ಆಟದ ನೆರವಿನಿಂದ ಭಾರತ ಏಳು ವಿಕೆಟ್‌ಗಳಿಗೆ 274 ರನ್ ಕಲೆ ಹಾಕಿತು.

ಭಾರತ: 50 ಓವರ್‌ಗಳಲ್ಲಿ 7ಕ್ಕೆ 274 (ಸ್ಮೃತಿ ಮಂದಾನ 86, ಶಫಾಲಿ ವರ್ಮಾ 22, ರಿಚಾ ಘೋಷ್ 44, ದೀಪ್ತಿ ಶರ್ಮಾ 23, ಪೂಜಾ ವಸ್ತ್ರಕಾರ್ 29, ಜೂಲನ್ ಗೋಸ್ವಾಮಿ ಔಟಾಗದೆ 28; ತಹಲಿಯಾ ಮೆಗ್ರಾ 45ಕ್ಕೆ3, ಸೋಫಿ ಮೋಲಿನೆಕ್ಸ್ 28ಕ್ಕೆ2); ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 5ಕ್ಕೆ 275 (ಬೇತ್ ಮೂನಿ ಔಟಾಗದೆ 125, ತಹಲಿಯಾ ಮೆಗ್ರಾ 74, ಕ್ಯಾರಿ ಔಟಾಗದೆ 39; ಮೇಘನಾ ಸಿಂಗ್ 38ಕ್ಕೆ1. ಫಲಿತಾಂಶ: ಆಸ್ಟ್ರೇಲಿಯಾಗೆ 5 ವಿಕೆಟ್ ಜಯ; ಸರಣಿಯಲ್ಲಿ 2-0 ಮುನ್ನಡೆ.

ಬೇತ್ ಮೂನಿ –ಎಎಫ್‌ಪಿ ಚಿತ್ರ

ಪ್ರಜಾವಾಣಿ
ಪ್ರಶ್ನೆಯ ಗುಟ್ಟು ಮಾಡಿರಿ ರಟ್ಟು
ಗಲಿಬಿಲಿ ಪ್ರಶ್ನೆ ನಮ್ಮದು, ಚುರುಕು ಉತ್ತರ ನಿಮ್ಮದು
ಗಡಿಬಿಡಿ ಆಗದೆ ಸರಿಯಾದ ಉತ್ತರವನ್ನು www.bit.ly/pvgutturattuಗೆ ಇಂದು ಸಂಜೆ 6ರ ಒಳಗೆ ಕಳುಹಿಸಿ ಆಕರ್ಷಕ ಬಹುಮಾನ ಗೆಲ್ಲಿ!

ಪ್ರಶ್ನೆ 1: ಮೂರು ಕೋಳಿಗಳು ಮೂರು ದಿನಕ್ಕೆ ಮೂರು ಮೊಟ್ಟೆ ಇಟ್ಟರೆ, ಮುನ್ನೂರು ಕೋಳಿಗಳು ಮೂರು ದಿನಕ್ಕೆ ಎಷ್ಟು ಮೊಟ್ಟೆ ಇಡುತ್ತವೆ?
ಪ್ರಶ್ನೆ 2: ಗುಂಡನ ವಯಸ್ಸು ತನ್ನ ಕೊನೆಯ ಹುಟ್ಟುಹಬ್ಬದಂದು 13 ಮತ್ತು ಮುಂದಿನ ಹುಟ್ಟುಹಬ್ಬದಂದು 15 ಆಗಿರುತ್ತದೆ. ಹೇಗೆ?

ಹಿಂದಿನ ಪ್ರಶ್ನೆಗೆ ಉತ್ತರ: 1) ಅಂಗಡಿಯವನು 2) ರಾಶಿ

ಕೃಷಿ ಇಲಾಖೆ

ಶ್ರೀ ಬಸವರಾಜ ಎಸ್. ಬೊಮ್ಮಾಯಿ
ಸನ್ಮಾನ್ಯ ಮುಖ್ಯಮಂತ್ರಿಗಳು

ರೈತರ ಮಕ್ಕಳಿಗೆ ಉನ್ನತ ಶಿಕ್ಷಣ
ಮುಖ್ಯಮಂತ್ರಿ ರೈತ ವಿದ್ಯಾನಿಧಿ
2021-22ನೇ ಸಾಲಿನ ಶೈಕ್ಷಣಿಕ ವರ್ಷದ ಶಿಷ್ಯವೇತನ ನೋಂದಣಿಗಾಗಿ ಆಹ್ವಾನ
ಜಾಲತಾಣ https://ssp.postmatric.karnataka.gov.in/

ಅರ್ಜಿ ಸಲ್ಲಿಕೆ ಹಂತಗಳು
1 ಮೊದಲನೇ ಹಂತ ವಿದ್ಯಾರ್ಥಿಗಳ ಖಾತೆ ಸೃಜನೆ.
2 ಎರಡನೇ ಹಂತ ವಿದ್ಯಾರ್ಥಿಗಳ ವೈಯಕ್ತಿಕ ಹಾಗೂ ಶೈಕ್ಷಣಿಕ ವಿವರಗಳನ್ನು ದಾಖಲಿಸುವುದು.
2021-22ನೇ ಶೈಕ್ಷಣಿಕ ವರ್ಷದ ದಾಖಲಾತಿ ಪೂರ್ಣಗೊಂಡ ನಂತರ ಎರಡನೇ ಹಂತದಲ್ಲಿ ಮಾಹಿತಿ ನಮೂದು ಪ್ರಕ್ರಿಯೆ ಪೂರ್ಣಗೊಳಸುವುದು.

'ಮುಖ್ಯಮಂತ್ರಿ ರೈತ ವಿದ್ಯಾನಿಧಿ' ಕಾರ್ಯಕ್ರಮದಡಿ ನೀಡಲಾಗುವ ವಾರ್ಷಿಕ ಶಿಷ್ಯವೇತನದ ವಿವರ

ಕ್ರ. ಸಂ.	ಕೋರ್ಸ್‌ಗಳು	ವಿದ್ಯಾರ್ಥಿಗಳು/ ಹುಡುಗರು	ವಿದ್ಯಾರ್ಥಿನಿಯರು/ ಅನ್ಯಲಿಂಗದವರು
1	ಪಿ.ಯು.ಸಿ. / ಐ.ಟಿ.ಐ. / ಡಿಪ್ಲೊಮಾ	ರೂ. 2,500	ರೂ. 3,000
2	ಬಿ.ಎ. / ಬಿ.ಎಸ್‌ಸಿ / ಬಿ.ಕಾಂ ಇನ್ನಿತರೆ ಪದವಿ ಕೋರ್ಸ್‌ಗಳು	ರೂ. 5,000	ರೂ. 5,500
3	ಎಲ್.ಎಲ್.ಬಿ. / ಪ್ಯಾರಾಮೆಡಿಕಲ್ / ಬಿ.ಫಾರ್ಮ್ / ನರ್ಸಿಂಗ್ ಇನ್ನಿತರೆ ವೃತ್ತಿಪರ ಕೋರ್ಸ್‌ಗಳು	ರೂ. 7,500	ರೂ. 8,000
4	ಎಂ.ಬಿ.ಬಿ.ಎಸ್. / ಬಿ.ಇ. / ಬಿ.ಟೆಕ್ ಮತ್ತು ಎಲ್ಲಾ ಸ್ನಾತಕೋತ್ತರ ಕೋರ್ಸ್‌ಗಳು	ರೂ. 10,000	ರೂ. 11,000

ಅರ್ಹತೆ:
- ವಿದ್ಯಾರ್ಥಿಯು ರೈತರ ಮಕ್ಕಳಾಗಿರಬೇಕು. ವಿದ್ಯಾರ್ಥಿಯ ತಂದೆ ಅಥವಾ ತಾಯಿಯು ರೈತರ ಗುರುತಿನ ಸಂಖ್ಯೆ(FID) ಹೊಂದಿರಬೇಕು.
- 2021-22ನೇ ಸಾಲಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಹೊಂದಿರಬೇಕು.

ವಿಶೇಷ ಸೂಚನೆ: ಪುನರಾವರ್ತಿತ ವಿದ್ಯಾರ್ಥಿಗಳು (Repeaters) ಅರ್ಹರಿರುವುದಿಲ್ಲ.

"ನಮ್ಮ ವೈವಿಧ್ಯಮಯ ಸಂಸ್ಕೃತಿಯ ಶ್ರೇಷ್ಠ ಪರಂಪರೆಯನ್ನು ಗೌರವಿಸುವುದು ಮತ್ತು ರಕ್ಷಿಸುವುದು"
– ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ.

ಈಜು ಚಾಂಪಿಯನ್‌ಷಿಪ್: ಮತ್ಸ್ಯ, ಡಾಲ್ಫಿನ್ ಪಾರಮ್ಯ

ಧೀನಿಧಿ, ತನಿಶಿ ಕೂಟ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾಲ್ಫಿನ್ ಅಕ್ವಾಟಿಕ್ಸ್‌ನ ಧೀನಿಧಿ ದೇಸಿಂಗು ಹಾಗೂ ತನಿಶಿ ಗುಪ್ತಾ ಅವರು ರಾಜ್ಯ ಈಜುಸಂಸ್ಥೆ ಆಶ್ರಯದ ಈಜು ಚಾಂಪಿಯನ್‌ಷಿಪ್‌ನ ಕ್ರಮವಾಗಿ ಬಾಲಕಿಯರ 200 ಮೀಟರ್ಸ್ ಮೆಡ್ಲೆ ಹಾಗೂ 50 ಮೀಟರ್ಸ್ ಬಟರ್‌ಫ್ಲೈ ವಿಭಾಗದ ಮೂರನೇ ಗುಂಪಿನ ಸ್ಪರ್ಧೆಯಲ್ಲಿ ಎರಡನೇ ದಿನ ಕೂಟ ದಾಖಲೆ ಬರೆದರು.

ಬಸವನಗುಡಿ ಈಜುಕೇಂದ್ರದಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ ಧೀನಿಧಿ 2 ನಿಮಿಷ 33.84 ಸೆಕೆಂಡುಗಳಲ್ಲಿ ಗುರಿ ಮುಟ್ಟಿ ಚಿನ್ನ ಗಳಿಸಿದರು. ಅವರು ಬಾಲಕಿಯರ 100 ಮೀ. ಫ್ರೀಸ್ಟೈಲ್‌ನಲ್ಲೂ 1ನಿಮಿಷ 2.30 ಸೆಕೆಂಡುಗಳ ಸಾಧನೆಯೊಂದಿಗೆ ಕೂಟ ದಾಖಲೆ ಬರೆದರು. ಬಾಲಕಿಯರ 50 ಮೀ. ಬಟರ್‌ಫ್ಲೈನಲ್ಲಿ ತನಿಶಿ 30.82 ಸೆಕೆಂಡುಗಳಲ್ಲಿ ಗುರಿ ತಲುಪಿ ಚಿನ್ನಕ್ಕೆ ಮುತ್ತಿಟ್ಟರು.

ಡೈವಿಂಗ್‌ನ ಪ್ಲಾಟ್‌ಫಾರ್ಮ್ ಪುರುಷರ ಮುಕ್ತ ವಿಭಾಗದಲ್ಲಿ ಎಂಇಜಿಯ ರಾಜದ್ವೀಪ್ ದಾಸ್ ಚಿನ್ನದ ಪದಕ ಗೆದ್ದರೆ, ಬಾಲಕರ ಗುಂಪು 1, 2 ಮತ್ತು ಮೂರರ ವಿಭಾಗದಲ್ಲಿ ಡಾಲ್ಫಿನ್ ಈಜು ಕೇಂದ್ರದ ಕ್ರಮವಾಗಿ ರೋಹನ್ ಆರಾಧ್ಯ, ಆರ್ಯನ್ ಮೊಸೆಸ್ ವ್ಯಾಸ್ ಹಾಗೂ ಎಸ್. ಸೋಹನ್ ಸೂರಿ ಅಗ್ರಸ್ಥಾನ ಗಳಿಸಿದರು. ಬಾಲಕಿಯರ ಗುಂಪು ಮೂರರ ವಿಭಾಗದಲ್ಲಿ ಡಾಲ್ಫಿನ್‌ನ ಚೈತ್ರಾ ಎಸ್. ಪ್ರಸಾದ್ ಚಿನ್ನ ತಮ್ಮದಾಗಿಸಿಕೊಂಡರು.

ಎರಡನೇ ದಿನದ ಫಲಿತಾಂಶಗಳು: ಬಾಲಕರು: 200 ಮೀ. ಮೆಡ್ಲೆ: ಗುಂಪು 3: ದ್ರುಪದ್ ರಾಮಕೃಷ್ಣ (ಬಸವನಗುಡಿ)-1, ಕಾಲ: 2:47.48; ನೈತಿಕ್ ಎನ್ (ಡಾಲ್ಫಿನ್)-2, ರಿಷಿತ್ ರಂಗನ್ (ಬಿಎಸಿ)-3; ಗುಂಪು 4: ಅಥರ್ವ್ ಪಾಲ್ ಸಿಂಗ್ ರಾಥೋಡ್ (ಗೋಲ್ಡನ್ ಫಿನ್ಸ್)-1, ಕಾಲ:2:56.17; ದರ್ಶವೀರಸಿಂಗ್ ಜಬ್ಬಿ (ಡಾಲ್ಫಿನ್)-2, ವೈಭವ್ ಪ್ರತಾಪ್ ಎನ್. (ಡಿಕೆವಿ)-3; ಗುಂಪು 5: ಜಾಸ್ ಸಿಂಗ್ (ಮತ್ಸ್ಯ)-1, ಕಾಲ:2:57.83, ಎಸ್. ಸೋಮಶೇಖರ್ (ಗೋಲ್ಡನ್ ಫಿನ್ಸ್) -2, ಅರ್ಜುನ್ ರಾಘವನ್ (ಡಾಲ್ಫಿನ್)-3. 50 ಮೀ. ಬ್ಯಾಕ್‌ಸ್ಟ್ರೋಕ್: ಗುಂಪು 3: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)-1, ಕಾಲ: 32.88 ಸೆ; ಆಡ್ರಿಯನ್ ನೀಲ್ ಸೆರಾವೊ (ಜಿಎಎಫ್‌ಆರ್‌ಎವೈ)-2, ಶಾನ್ ಡಾಮಿನಿಕ್ (ಸ್ವಿಮ್‌ಲೈಫ್)-3. ಗುಂಪು 4: ಶರಣ್ ಶ್ರೀಧರ್ (ಮತ್ಸ್ಯ)-1, ಕಾಲ: 36.26; ಅದ್ವೈತ್ ವಿ.ಎಮ್. (ಬಿಎಸಿ)-2, ಚಿನ್ಮಯ್ ವಿ. (ಜೀ ಸ್ವಿಮ್)-3. ಗುಂಪು 5: ಜಾಸ್ ಸಿಂಗ್ (ಮತ್ಸ್ಯ)-1, ಕಾಲ: 38.10 ಸೆ., ಕ್ರಿಶ್ ಎಸ್. (ಬಿಎಸಿ)-2, ಅರ್ಜುನ್ ರಾಘವನ್ (ಡಾಲ್ಫಿನ್)-3. 100 ಮೀ. ಬ್ರೆಸ್ಟ್‌ಸ್ಟ್ರೋಕ್: ಗುಂಪು 3: ಯಶ್ ಎಚ್. ಪಾಲ್ (ಬಿಎಸಿ)-1, ಕಾಲ: 1:25.47, ರಕ್ಷಣ್ ಪಿ. (ಡಾಲ್ಫಿನ್)-2, ಆಡ್ರಿಯನ್ ನೀಲ್ ಸೆರಾವೊ(ಜಿಎಎಫ್‌ಆರ್‌ಎವೈ)-3. ಗುಂಪು 4: ರೇಯಾನ್ಷಕಾಂತಿ ವೈ. (ಬಿಎಸಿ)-1, ಕಾಲ; 1:30.68, ಅಥರ್ವ್ ಪಾಲ್ ಸಿಂಗ್ ರಾಥೋಡ್ (ಗೋಲ್ಡನ್ ಫಿನ್ಸ್)-2, ವೈಭವ್ ಪ್ರತಾಪ್ ಎನ್. (ಡಿಕೆವಿ)-3. ಗುಂಪು 5: ಜಾಸ್ ಸಿಂಗ್ (ಮತ್ಸ್ಯ)-1, ಕಾಲ:1:35.01, ಅರ್ಜುನ್ ರಾಘವನ್ (ಡಾಲ್ಫಿನ್)-2, ಅದ್ವೈತ್ ದಳವಿ-3. 50 ಮೀ. ಬಟರ್‌ಫ್ಲೈ: ಗುಂಪು 3: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)-1, ಕಾಲ: 31.40, ರಿಷಿತ್ ರಂಗನ್ (ಬಿಎಸಿ)-2, ಅಕ್ಷಜ್ ಪಿ. (ವಿಜಯನಗರ)-3. ಗುಂಪು 4: ಶರಣ್ ಶ್ರೀಧರ್ (ಮತ್ಸ್ಯ)-1, ಕಾಲ: 34.02, ರೇಯಾನ್ಷಕಾಂತಿ ವೈ. (ಬಿಎಸಿ)-2, ದರ್ಶವೀರಸಿಂಗ್ ಜಬ್ಬಿ (ಡಾಲ್ಫಿನ್)-3. ಗುಂಪು 5: ಅರ್ಜುನ್ ರಾಘವನ್ (ಡಾಲ್ಫಿನ್)-1, ಕಾಲ; 38.87, ಕ್ರಿಶ್ ಎಸ್. (ಬಿಎಸಿ)-2, ವೇದಾಂತ್ ಮಿಸಾಳೆ (ಸ್ವಿಮರ್ಸ್ ಕ್ಲಬ್ ಬೆಳಗಾವಿ)-3. 100 ಮೀ. ಫ್ರೀಸ್ಟೈಲ್: ಗುಂಪು 3: ಅಕ್ಷಜ್ ಠಾಕೂರಿಯಾ (ಡಾಲ್ಫಿನ್)-1, ಕಾಲ:1:06.44, ರಿಷಿತ್ ರಂಗನ್ (ಬಿಎಸಿ)-2, ದ್ರುಪದ್ ರಾಮಕೃಷ್ಣ (ಬಿಎಸಿ)-3. ಗುಂಪು 4: ಶರಣ್ ಶ್ರೀಧರ್ (ಮತ್ಸ್ಯ)-1, ಕಾಲ:1:09.27, ಸಮರ್ಥ್ ಗೌಡ ಆರ್. (ಸ್ವಿಮ್‌ಲೈಫ್)-2, ಸುಚೇತ್ ಎಸ್. (ಎಂ.ಪಿ. ಅಕ್ವಾಟಿಕ್ಸ್)-3. ಗುಂಪು 5: ಜಾಸ್ ಸಿಂಗ್ (ಮತ್ಸ್ಯ)-1 ಕಾಲ: 1:13.13, ಎಸ್. ಸೋಮಶೇಖರ್ (ಗೋಲ್ಡನ್ ಫಿನ್ಸ್)-2, ಕ್ರಿಶ್ ಎಸ್. (ಬಿಎಸಿ)-3.

ತನಿಶಿ ಗುಪ್ತಾ ಈಜಿದ ಪರಿ– ಪ್ರಜಾವಾಣಿ ಚಿತ್ರ

ಬಾಲಕಿಯರು: 200 ಮೀ. ಮೆಡ್ಲೆ: ಗುಂಪು 3: ಧೀನಿಧಿ ದೇಶಿಂಗು (ಡಾಲ್ಫಿನ್)-1, ಕಾಲ: 2:33.84(ಕೂಟ ದಾಖಲೆ), ತನಿಶಿ ಗುಪ್ತಾ (ಡಾಲ್ಫಿನ್)-2, ನಯಿಷಾ (ಜಿ ಸ್ವಿಮ್)-3. ಗುಂಪು 4: ಅಲಿಸ್ಸಾ ಸ್ವೀಡಾಲ್ ರೆಗೊ-1, ಕಾಲ: 3:04.81, ವರ್ಷಾ ಬಿ-2, ಶೆಲಿನ್ ಸುನಿಲ್-3 (ಮೂವರು ಡಾಲ್ಫಿನ್). ಗುಂಪು 5: ಧೃತಿ ಕರಿಬಸವೇಶ್ವರ (ಜಿ ಸ್ವಿಮ್)-1 ಕಾಲ: 3:23.62, ಸಿರಿ ಪ್ರೀತಮ್ (ಏಕಲವ್ಯ)-2, ರಿಷ್ಮಿಕಾ (ಬಿಎಸಿ)-2. 50 ಮೀ. ಬ್ಯಾಕ್‌ಸ್ಟ್ರೋಕ್: ಗುಂಪು 3: ನಯಿಶಾ (ಜೀ ಸ್ವಿಮ್)-1, ಕಾಲ: 36.24, ತಾನಿಯಾ ಎಂ.ಎನ್ (ಜಿಎಎಫ್‌ಆರ್‌ಎವೈ)-2, ಅನ್ವಾ ಚಕ್ರವರ್ತಿ (ಡಾಲ್ಫಿನ್)-3. ಗುಂಪು 4: ಶೆಲಿನ್ ಸುನಿಲ್ (ಡಾಲ್ಫಿನ್ಸ್)-1, ಕಾಲ: 42.33, ಆದ್ಯಾ ಗಿರೀಶ್ (ಎಂಪಿ)-2, ಧನ್ಯಾ ನಟರಾಜ್ ನಾಯ್ಕ (ಮತ್ಸ್ಯ)-3. ಗುಂಪು 5: ವಿಭಾ ರೆಡ್ಡಿ -1, ಕಾಲ: 44.02, ಜನನಿ ವೆಂಕಟೇಶ್ವರ ಪೆರುಮಾಳ್-2 (ಇಬ್ಬರೂ ಡಾಲ್ಫಿನ್ಸ್), ಅರುಣಾ ಪವನ್ ಆಳ್ವಾ (ಗೋಲ್ಡನ್ ಫಿನ್ಸ್)-3. 100 ಮೀ. ಫ್ರೀಸ್ಟೈಲ್: ಗುಂಪು 3: ಧೀನಿಧಿ ದೇಶಿಂಗು-1, ಕಾಲ: 1:02.30 (ಕೂಟ ದಾಖಲೆ), ತನಿಶಿ ಗುಪ್ತಾ (ಇಬ್ಬರೂ ಡಾಲ್ಫಿನ್ಸ್)-2, ಸಂಜನಾ ಪಿ. (ಜಿಎಎಫ್‌ಆರ್‌ಎವೈ)-3. ಗುಂಪು 4: ಅಲಿಸ್ಸಾ ಸ್ವೀಡಲ್ ರೆಗೊ (ಡಾಲ್ಫಿನ್)-1, ಕಾಲ: 1:09.57, ತ್ರಿಶಾ ಸಿಂಧು ಎಸ್. (ಡಿಕೆವಿ)-2, ವರ್ಷಾ ಬಿ. (ಡಾಲ್ಫಿನ್)-3. ಗುಂಪು 5: ಅರುಣಾ ಪವನ್ ಆಳ್ವಾ (ಗೋಲ್ಡನ್ ಫಿನ್ಸ್)-1, ಕಾಲ: 1:22.75, ಧೃತಿ ಕರಿಬಸವೇಶ್ವರ (ಜೀ ಸ್ವಿಮ್)-2, ಜನನಿ ವೆಂಕಟೇಶ್ವರ ಪೆರುಮಾಳ್ (ಡಾಲ್ಫಿನ್)-3.

ಅಕ್ಟೋಬರ್‌ನಲ್ಲಿ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್

ಬೆಂಗಳೂರು: ಅಕ್ಟೋಬರ್ ಮೂರನೇ ವಾರದಲ್ಲಿ ರಾಜ್ಯ ಜೂನಿಯರ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್ ನಗರದಲ್ಲಿ ನಡೆಯಲಿದೆ.

18 ವರ್ಷದೊಳಗಿನ ಬಾಲಕ ಮತ್ತು ಬಾಲಕಿಯರ ತಂಡಗಳು ಟೂರ್ನಿಯಲ್ಲಿ ಸ್ಪರ್ಧಿಸಲಿವೆ. 2003ರ ಜನವರಿ 1ರ ನಂತರ ಜನಿಸಿದ ಆಟಗಾರರು ಭಾಗವಹಿಸಲು ಅರ್ಹರಾಗಿದ್ದಾರೆ. ಕಂಠೀರವ ಕ್ರೀಡಾಂಗಣದಲ್ಲಿ ಟೂರ್ನಿ ನಡೆಯಲಿದೆ ಎಂದು ರಾಜ್ಯ ಬ್ಯಾಸ್ಕೆಟ್ ಬಾಲ್ ಸಂಸ್ಥೆ ಪ್ರಕಟಣೆಯಲ್ಲಿ ತಿಳಿಸಿದೆ.

‘ಮಾಜಿ ಕ್ರಿಕೆಟಿಗರಿಗೆ ಪಿಂಚಣಿ ಶೀಘ್ರ ಜಾರಿ’

ನವದೆಹಲಿ (ಪಿಟಿಐ): ಮಾಜಿ ಕ್ರಿಕೆಟಿಗರಿಗೆ ಪಿಂಚಣಿ ನೀಡುವ ಯೋಜನೆಯನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ ಶೀಘ್ರವೇ ಜಾರಿಗೆ ತರಲಿದೆ ಎಂದು ಮಂಡಳಿಯ ಅಪೆಕ್ಸ್ ಸಮಿತಿಯಲ್ಲಿ ಭಾರತ ಕ್ರಿಕೆಟರ್ಸ್ ಸಂಸ್ಥೆಯನ್ನು (ಐಸಿಎ) ಪ್ರತಿನಿಧಿಸುತ್ತಿರುವ ಮಾಜಿ ಆಟಗಾರ ಅನ್ಶುಮನ್ ಗಾಯಕವಾಡ್ ಶುಕ್ರವಾರ ತಿಳಿಸಿದ್ದಾರೆ.

25ಕ್ಕೂ ಹೆಚ್ಚು ಪ್ರಥಮ ದರ್ಜೆ ಪಂದ್ಯ ಆಡಿದವರಿಗೆ, ಮಾಜಿ ಕ್ರಿಕೆಟಿಗರ ಪತ್ನಿಯರಿಗೆ, ಮಹಿಳಾ ಕ್ರಿಕೆಟಿಗರಿಗೆ ಪಿಂಚಣಿ ನೀಡಬೇಕು ಎಂದು ಐಸಿಎ ಒತ್ತಾಯಿಸುತ್ತಿದೆ. ಈಚೆಗೆ ನಡೆದ ಅಪೆಕ್ಸ್ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿದೆ. ಮುಂದಿನ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳುವ ಸಾಧ್ಯತೆ ಇದೆ ಎಂದು ಗಾಯಕವಾಡ್ ತಿಳಿಸಿದ್ದಾರೆ.



ಹೆಚ್ಚುವರಿ ಪೌಷ್ಟಿಕಾಂಶಕ್ಕೆ ಮಕ್ಕಳ ಡಬ್ಬಿಯಲ್ಲಿರಲಿ ಹಣ್ಣು

ಅಮೃತಾ

ವರ್ಷಗಳ ನಂತರ ಮಕ್ಕಳು ಬೆನ್ನಿಗೆ ಬ್ಯಾಗ್ ಏರಿಸಿ ಶಾಲೆಯತ್ತ ಮುಖ ಮಾಡಿದ್ದಾರೆ. ಮನೆಯಲ್ಲೇ ಇಡೀ ದಿನ ಕಾಲ ಕಳೆಯುವಾಗ ಅಮ್ಮನ ಬೆನ್ನು ಬಿದ್ದು ನಾಲಿಗೆ ಬಯಸಿದ ತಿನಿಸುಗಳನ್ನು ಮಾಡಿಸಿಕೊಂಡು ತಿಂದವರಿಗೆ ಈಗ ಶಾಲೆಯಲ್ಲೂ ಆಗಾಗ ತಿನ್ನಬೇಕೆಂಬ ಆಸೆಯಾಗುವುದು ಸಹಜವೇ. ಆರನೇ, ಏಳನೇ ತರಗತಿ ಮಕ್ಕಳೆಂದರೆ ಆಟವಾಡುವ, ಆಟವಾಡಿ ಹಸಿವಾದಾಗ ತಿನ್ನುವ ವಯಸ್ಸು. ಇಂತಹ ಮಕ್ಕಳ ಶೈಕ್ಷಣಿಕ ಸಾಧನೆ ಅವರು ತಿನ್ನುವ ಆಹಾರ, ಅದರಲ್ಲಿರುವ ಪೌಷ್ಟಿಕಾಂಶಗಳನ್ನೂ ಅವಲಂಬಿಸಿದೆ.

ಬೆಳಗಿನ ಉಪಾಹಾರ, ಆರೋಗ್ಯಕರ ಸ್ನ್ಯಾಕ್ಸ್ ಜೊತೆಗೆ ಎಲ್ಲಾ ವಯಸ್ಸಿನ ಮಕ್ಕಳಿಗೆ ಮಧ್ಯಾಹ್ನ ಒಳ್ಳೆಯ ಊಟ ಕೂಡ ಅಗತ್ಯ. ಹೆಚ್ಚಿನ ಮಕ್ಕಳು ಅರ್ಧ ದಿನದ ತರಗತಿ ಮುಗಿಸಿ ಬರುತ್ತಿದ್ದರೂ, ಕೆಲವರು ಮಧ್ಯಾಹ್ನ 3 ಗಂಟೆಯವರೆಗೂ ತರಗತಿಯಲ್ಲಿರುತ್ತಾರೆ. ಹೀಗಾಗಿ ಅಂಥವರಿಗೆ ಹೆಚ್ಚು ಶಕ್ತಿ, ಉತ್ಸಾಹ ಭರಿಸುವ ಊಟದ ಡಬ್ಬಿ ಅವಶ್ಯಕ. ಅದರ ಜೊತೆ ಕೆಲವು ಸ್ನ್ಯಾಕ್ಸ್, ಹಣ್ಣು, ಒಣ ಹಣ್ಣುಗಳನ್ನು ಕಟ್ಟಿಕೊಟ್ಟರೆ ಪಾಠದ ಕಡೆ ಲಕ್ಷ್ಯ ವಹಿಸಲು ಸಹಕಾರಿ.

ಹಣ್ಣುಗಳು

ನಿಮ್ಮ ಮಕ್ಕಳು ಹಣ್ಣುಗಳ ಸೇವನೆಯನ್ನು ಇಷ್ಟಪಟ್ಟರೆ ಸದ್ಯ ಮಾರುಕಟ್ಟೆಯಲ್ಲಿ ಸ್ಥಳೀಯವಾಗಿ ದೊರಕುವ ಹಣ್ಣುಗಳನ್ನು ಬ್ಯಾಗ್‌ಗೆ ಹಾಕಿಕೊಡಿ. ಸ್ಥಳೀಯ ಬಾಳೆಹಣ್ಣಿನ ಜೊತೆ ಮೋಸಂಬಿ, ಸೇಬು ಈಗ ಮಾರುಕಟ್ಟೆಗೆ ಹೆಚ್ಚಿನ ಪ್ರಮಾಣದಲ್ಲಿ ಬರುತ್ತಿವೆ. ಬಾಳೆಹಣ್ಣಿನಲ್ಲಿರುವ ಪೊಟ್ಯಾಶಿಯಂ ಬಹು ಬೇಗ ಶಕ್ತಿಯನ್ನು ತುಂಬುತ್ತದೆ. ಈ ಹಣ್ಣುಗಳಲ್ಲಿರುವ ವಿಟಮಿನ್, ಆ್ಯಂಟಿಆಕ್ಸಿಡೆಂಟ್‌ಗಳು ಪಾಠದ ಮೇಲೆ ಗಮನ ಕೇಂದ್ರೀಕರಿಸಲು ಸಹಾಯ ಮಾಡುವವು. ಜೊತೆಗೆ ಸ್ಮರಣ ಶಕ್ತಿ ಹೆಚ್ಚಿಸುತ್ತವೆ ಎನ್ನುತ್ತಾರೆ ತಜ್ಞರು.

ಈ ಹಣ್ಣುಗಳನ್ನು ಬ್ಯಾಗ್‌ನಲ್ಲಿ ಒಯ್ಯುವುದೂ ಸುಲಭ.

ಇನ್ನೆರಡು ತಿಂಗಳು ಕಳೆದರೆ ಕಿತ್ತಳೆ ಹಣ್ಣುಗಳೂ ಬರಲಾರಂಭಿಸುತ್ತವೆ. ಇದರಿಂದ ವಿಟಮಿನ್ ಸಿ ದೇಹಕ್ಕೆ ಸೇರುವುದಲ್ಲದೇ ರೋಗ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳಬಹುದು. ಈ ಕೋವಿಡ್ ಸಂದರ್ಭದಲ್ಲಂತೂ ಮಕ್ಕಳಿಗೆ ಇದು ಹೆಚ್ಚು ಮುಖ್ಯ. ಹಾಗೆಯೇ ಶೀತ, ಫ್ಲೂನಂತಹ ಸಮಸ್ಯೆಗಳನ್ನೂ ಈ ಸೂಕ್ಷ್ಮ ಪೌಷ್ಟಿಕಾಂಶಗಳಿಂದ ಎದುರಿಸಬಹುದು.

ಈ ಕಾಲದಲ್ಲಿ ಸ್ಥಳೀಯವಾಗಿ ಕಿತ್ತಳೆ ಹಣ್ಣು ಸಿಗದಿದ್ದರೂ ಬೆಂಗಳೂರಿನಂತಹ ದೊಡ್ಡ ನಗರಗಳಲ್ಲಿ ವಿದೇಶಿ ಕಿತ್ತಳೆ ಹಣ್ಣುಗಳು ಸಿಗುತ್ತವೆ. ಅವುಗಳ ದರ ಕೈಗೆಟುಕದಿದ್ದರೆ ಸಕ್ಕರೆ ಮತ್ತು ಪ್ರಿಸರ್ವೇಟಿವ್ ಸೇರಿಸದ, ಶೇಕಡಾ ನೂರರಷ್ಟು ಕಿತ್ತಳೆ ರಸವಿರುವ ಟೆಟ್ರಾ ಪ್ಯಾಕ್ ಮಕ್ಕಳಿಗೆ ನೀಡಬಹುದು.

ಮಕ್ಕಳಿಗೆ ಚಿಪ್ಸ್, ಕುರ್‌ಕುರೆಯಂತಹ ಅನಾರೋಗ್ಯಕರ ತಿನಿಸನ್ನು ಕೊಡುವುದಕ್ಕಿಂತ ಒಣ ಹಣ್ಣುಗಳನ್ನು ಕೊಡಿ. ಒಣ ದ್ರಾಕ್ಷಿ, ಬಾದಾಮಿ ಹಾಗೂ ವಾಲ್‌ನಟ್ ಸೇರಿಸಿ ಕೊಟ್ಟರೆ ಪೌಷ್ಟಿಕಾಂಶಗಳು ಹೇರಳವಾಗಿ ಸಿಗುತ್ತವೆ. ವಾಲ್‌ನಟ್‌ನಲ್ಲಿರುವ ಒಮೆಗಾದಂತಹ ಉತ್ತಮ ಕೊಬ್ಬು ಮಕ್ಕಳಿಗೆ ಹೊಟ್ಟೆ ತುಂಬಿದಂತಹ ಅನುಭವ ನೀಡುತ್ತದೆ. ರಕ್ತದಲ್ಲಿನ ಸಕ್ಕರೆ ಅಂಶವೂ ಒಮ್ಮೆಲೇ ಏರಿಳಿತ ಆಗುವುದನ್ನು ತಡೆಯುತ್ತದೆ. ಇದರಿಂದ ಹೇರಳ ನಾರಿನಾಂಶವೂ ಸಿಗುತ್ತದೆ. ❖

ಬೆಣ್ಣೆಯಂತಹ ತ್ವಚೆಗೆ ಬೇಕು ತೇವಾಂಶ

ಸೌಂದರ್ಯ

ಚಳಿಗಾಲಕ್ಕೆ ನಿಮ್ಮ ಸೌಂದರ್ಯವರ್ಧಕಗಳ ಪೆಟ್ಟಿಗೆ ಕೊಂಚವಾದರೂ ಬದಲಾವಣೆ ಕಂಡಿದೆಯಾ? ಏಕೆಂದರೆ ಮಳೆ ಆಗಾಗ ಸುರಿಯುತ್ತಿದ್ದರೂ ಚಳಿಗಾಲ ಕಾಲಿಡಲು ಇನ್ನೇನು ಹೆಚ್ಚು ದಿನಗಳು ಬೇಕಿಲ್ಲ. ಚಳಿಯ ದಿನಗಳೆಂದರೆ ಕಡಿಮೆ ಉಷ್ಣಾಂಶ, ಕಡಿಮೆ ಉಷ್ಣಾಂಶವೆಂದರೆ ಕಡಿಮೆಯಾಗುವ ತೇವಾಂಶ. ಅಂದರೆ ಒಣಹವೆ ನಿಮ್ಮ ಬೆಣ್ಣೆಯಂತಹ ತ್ವಚೆಯನ್ನು ಒರಟಾಗಿ ಪರಿವರ್ತಿಸಿಬಿಡುತ್ತದೆ. ಕಳೆದ ಬೇಸಿಗೆ, ನಂತರ ಆರಂಭವಾದ ಮಳೆಗಾಲದಲ್ಲಿ ಚರ್ಮದ ಆರೋಗ್ಯ ಕಾಪಾಡಲು ನೀವೇನು ಮಾಡುತ್ತಿದ್ದೀರೋ ಅಂತಹ ವಿಧಾನಗಳು ಚಳಿಗಾಲದಲ್ಲಿ ಪ್ರಯೋಜನಕ್ಕೆ ಬರುವುದಿಲ್ಲ. ಹಿಂದಿನ ಕೆಲವು ಅಭ್ಯಾಸಗಳನ್ನು ಬಿಡಬೇಕಾಗುತ್ತದೆ.

ಮುಖ ತೊಳೆಯುವುದು ಕಡಿಮೆ ಮಾಡಿ

ನಿಮ್ಮ ತ್ವಚೆಯ ವಿಧಕ್ಕೆ ಅನುಗುಣವಾಗಿ ಚಳಿಗಾಲದಲ್ಲಿ ಮುಖ ತೊಳೆಯುವ ಅಭ್ಯಾಸವನ್ನು ರೂಢಿಸಿಕೊಳ್ಳಬೇಕು. ಅಂದರೆ ಒಣ ಚರ್ಮದವರಾದರೆ ಪದೆ ಪದೆ ಮುಖ ತೊಳೆಯುವುದು ಬೇಡ ಎನ್ನುತ್ತಾರೆ ತಜ್ಞರು. ಆದರೆ ಎಣ್ಣೆ ತ್ವಚೆಯಿದ್ದರೆ ಬೆಳಿಗ್ಗೆ ಮತ್ತು ಸಂಜೆ ಮುಖವನ್ನು ತೊಳೆಯಬಹುದು. ಜೊತೆಗೆ ಒಂದಿಷ್ಟು ಮುಂಜಾಗ್ರತೆ ವಹಿಸಿ. ಅಂದರೆ ದಿನಕ್ಕೆ ಒಂದು ಸಲ ಮಾತ್ರ ಫೇಸ್‌ವಾಷ್, ಕ್ಲೆನ್ಸರ್ ಬಳಸಬಹುದು. ಇನ್ನೊಂದು ಸಲ ತೊಳೆಯುವಾಗ ತಣ್ಣೀರು ಬಳಸಿ, ಸಾಕು.

ವಾರಕ್ಕೊಮ್ಮೆ ಮಾತ್ರ ಸ್ಕ್ರಬ್

ಹಾಗೆಯೇ ತ್ವಚೆಯ ಮೇಲಿನ ಸತ್ತ ಸರ್ಮದ ಪದರ ತೆಗೆಯಲು ಸ್ಕ್ರಬ್ ಬಳಸುವ ರೂಢಿಯಿದ್ದರೆ ವಾರಕ್ಕೆ ಒಮ್ಮೆ ಮಾತ್ರ ಬಳಸಬಹುದು; ಅದೂ ತೀಕ್ಷ್ಣವಲ್ಲದ ಸ್ಕ್ರಬ್. ಇಲ್ಲದಿದ್ದರೆ ತ್ವಚೆಯ ರಂಧ್ರಗಳು ತೆರೆದುಕೊಳ್ಳುತ್ತವೆ. ಹಾಗೆಯೇ ಆಲ್ಕೋಹಾಲ್ ರಹಿತ ಟೋನರ್‌ನಿಂದ ತ್ವಚೆಯನ್ನು ನಿಧಾನವಾಗಿ ಉಜ್ಜಿ ಶುಚಿಗೊಳಿಸಬಹುದು.

ಮೊಡವೆ ಏಳುವ ಸಮಸ್ಯೆಯಿದ್ದರೆ ಈ ಸ್ಕ್ರಬ್ ಹಾಗೂ ಟೋನರ್ ಬಳಕೆ ಬಿಡುವುದು ಒಳ್ಳೆಯದು. ಮುಖದ ಚರ್ಮವನ್ನು ಪದೆ ಪದೆ ಕ್ರೀಮ್‌ನಿಂದ ಉಜ್ಜಿ ಸತ್ತ ಪದರ ತೆಗೆಯುತ್ತಿದ್ದರೆ ಮೊಡವೆ ಏಳುವುದು ಹೆಚ್ಚು.

ಮಾಯಿಶ್ಚರೈಸರ್ ಬಳಕೆ

ಹಾಗೆಯೇ ಬೇಸಿಗೆಯಲ್ಲಿ ಫೋಮ್ ಮತ್ತು ಜೆಲ್ ಇರುವ ಕ್ಲೆನ್ಸರ್ ಬಳಸುತ್ತಿದ್ದರೆ, ಚಳಿಗಾಲಕ್ಕೆ ಹೆಚ್ಚು ತೇವಾಂಶಯುಕ್ತ ಕ್ರೀಮ್ ಅಥವಾ ಲೋಷನ್ ಬಳಸಿ. ಮಾಯಿಶ್ಚರೈಸರ್ ಹೆಚ್ಚು ತೇವಾಂಶ ಹಿಡಿದುಕೊಳ್ಳುವ ಸಾಮರ್ಥ್ಯವಿದ್ದರೆ ಸೂಕ್ತ. ಈಗಂತೂ ಹೈಲುರೋನಿಕ್ ಆ್ಯಸಿಡ್ ಇರುವ ಕ್ರೀಮ್ ಮಾರುಕಟ್ಟೆಯಲ್ಲಿ ಲಭ್ಯ. ಇದು ತ್ವಚೆಯ ತೇವಾಂಶವನ್ನು ಹೆಚ್ಚು ಕಾಲ ಹಿಡಿದಿಟ್ಟುಕೊಂಡು ಮೃದುವಾಗಿರುವಂತೆ ನೋಡಿಕೊಳ್ಳುತ್ತದೆ.

ಚಳಿಗಾಲ ಯಾವಾಗ ಶುರುವಾಗಬಹುದು ಎಂದು ಕಾಯುತ್ತ ಕೂರುವುದಕ್ಕಿಂತ ನಿಮ್ಮ ತ್ವಚೆಯ ಮೇಲಾಗುವ ಬದಲಾವಣೆಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಂತಹ ಅಭ್ಯಾಸಗಳನ್ನು ಶುರು ಮಾಡಲು ಅನುಕೂಲ. ಒಣ ಹಾಗೂ ಒಡೆದ ಚರ್ಮ ಕಾಣಿಸಿಕೊಂಡರೆ ಕೂಡಲೇ ಇಂತಹ ಆರೈಕೆಗಳನ್ನು ಶುರು ಮಾಡಿ. ಅದಕ್ಕೂ ಮುನ್ನವೇ ಮುಖ ತೊಳೆದಾಗ ತ್ವಚೆ ಬಿಗಿ ಎನಿಸಿದರೆ ಕೂಡ ವಾತಾವರಣದ ಚಳಿಯಿಂದ ಹೀಗಾಗುತ್ತಿದೆ ಎಂದು ತಿಳಿದುಕೊಳ್ಳಬಹುದು.

ಚಳಿಗಾಲದಲ್ಲೂ ಕೆಲವೊಮ್ಮೆ ಬಿಸಿಲು ಅತಿಯಾಗಬಹುದು. ಸಾಮಾನ್ಯವಾಗಿ ಇದು ಅಕ್ಟೋಬರ್‌ನಲ್ಲಿ ಕೆಲವು ವಾರಗಳ ಕಾಲವಿರುತ್ತದೆ. ಆಗ ನಿಮ್ಮ ಅಭ್ಯಾಸವನ್ನು ಬೇಸಿಗೆಯ ತ್ವಚೆ ಆರೈಕೆಗೆ ಬದಲಾಯಿಸಬಹುದು. ❖

ಹಾರರ್ ಪ್ರೇಮಕಥೆಯ 'ಮೂರು ಮತ್ತೊಂದು'

ವಿಪ್ರ ಪ್ರೊಡಕ್ಷನ್ಸ್ ಲಾಂಛನದಲ್ಲಿ ವೀಣಾ ಅವರು ನಿರ್ಮಿಸುತ್ತಿರುವ 'ಮೂರು ಮತ್ತೊಂದು' ಎನ್ನುವ ಹಾರರ್ ಹಿನ್ನೆಲೆಯ ಚಿತ್ರ ಶೀಘ್ರ ತೆರೆ ಕಾಣಲಿದೆ.

ಚಿತ್ರದ ಶೇ 70ರಷ್ಟು ಭಾಗ ಚಿತ್ರೀಕರಣ ಮುಗಿದಿದೆ. 4 ಹಾಡುಗಳು ಮತ್ತು ಕ್ಲೈಮಾಕ್ಸ್ ಚಿತ್ರೀಕರಣ ನಡೆಯಬೇಕಿದೆ. ಚಿಕ್ಕಮಗಳೂರು, ಸಕಲೇಶಪುರ, ಕುಶಾಲನಗರ, ಹಾಸನ ಸುತ್ತಮುತ್ತ ಚಿತ್ರೀಕರಣ ನಡೆದಿದೆ. ಪ್ರಶಾಂತ್ ಅಂಕಪುರ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸುತ್ತಿದ್ದಾರೆ. ಈ ಚಿತ್ರದಲ್ಲಿ ಸಸ್ಪೆನ್ಸ್, ಹಾಸ್ಯ, ಪ್ರೇಮ ವಿಷಯ ಒಳಗೊಂಡಿದೆ.

ಮೂರು ಮತ್ತೊಂದು ಅಂದರೆ ಮೂವರ ನಡುವೆ ಬರುವ ಮತ್ತೊಬ್ಬ ವ್ಯಕ್ತಿ ಯಾರು ಅನ್ನುವುದೇ ಚಿತ್ರದ ಕುತೂಹಲ. ಈ ಚಿತ್ರದ ನಾಯಕಿ ಮಮತಾ ನೃತ್ಯ ನಾಟಕ, ಸಂಗೀತದ ಬಗ್ಗೆ ಆಸಕ್ತಿ ಹೊಂದಿದ್ದು, ಮೊದಲ ಬಾರಿಗೆ ನಿರ್ದೇಶಕರು ಅವಕಾಶ ನೀಡಿದ್ದಾರೆ. ಧಾರಾವಾಹಿಗಳಲ್ಲಿ ಅಭಿನಯಿಸಿರುವ ರಾಜ್ ಮಣೀಶ್ ಈ ಚಿತ್ರದ ನಾಯಕ, ಉಳಿದ ತಾರಾಗಣದಲ್ಲಿ ಜೂನಿಯರ್ ನರಸಿಂಹರಾಜು, ಮಂಡ್ಯ ಆನಂದ್, ಜಗದೀಶ್ ಮುಂತಾದವರು ನಟಿಸಿದ್ದಾರೆ. ಈ ಚಿತ್ರಕ್ಕೆ ಸುರೇಶ್ ಬಾಬು ಅವರ ಛಾಯಾಗ್ರಹಣ, ಪಳನಿ ಸೇನಾಪತಿ ಅವರ ಸಂಗೀತ, ಕುಶಾಲ್ ಬರಗೂರು ಅವರ ಸಾಹಿತ್ಯ ಹಾಗೂ ಸಂಭಾಷಣೆ, ಹ್ಯಾರಿಸ್ ಜಾನಿ ಸಾಹಸ, ಕಲೈಮಾಸ್ಟರ್ ಅವರ ನೃತ್ಯ ನಿರ್ದೇಶನ ಇದೆ. ❖

ಅ. 8ಕ್ಕೆ 'ಬಾಬು ಮಾರ್ಲಿ' ತೆರೆಗೆ

ಸಿನಿಹನಿ

ಮೀನಾಕ್ಷಿ ದೀಕ್ಷಿತ್, ಅವಿನಾಶ್ ಸಂಪತ್

'ಬಾಬು ಮಾರ್ಲಿ' ಚಿತ್ರ ಅಕ್ಟೋಬರ್ 8ಕ್ಕೆ ಚಿತ್ರಮಂದಿರಗಳಲ್ಲಿ ಬಿಡುಗಡೆಯಾಗಲಿದೆ. ಕ್ರೀಡಾ ವಿಷಯ ಆಧಾರಿತ ಚಿತ್ರವಿದು.

ವಾಲಿಬಾಲ್ ಆಟಗಾರನೊಬ್ಬನ ಜೀವನದಲ್ಲಿ ನಡೆದ ಘಟನೆಗಳನ್ನಾಧರಿಸಿ ನಿರ್ಮಾಣವಾಗಿರುವ ಚಿತ್ರವಿದು.

ಅವಿನಾಶ್ ಸಂಪತ್ ಈ ಚಿತ್ರದ ನಾಯಕ. ವಾಲಿಬಾಲ್ ಆಟಗಾರ ಬಾಬು ಹೆಸರಿನ ಪಾತ್ರದಲ್ಲಿ ಅವರು ಕಾಣಿಸಿಕೊಂಡಿದ್ದಾರೆ. ಬಾಲಿವುಡ್ ಬೆಡಗಿ ಮೀನಾಕ್ಷಿ ದೀಕ್ಷಿತ್ ನಾಯಕಿ.

ಬಾಬು ಕಾಲಕ್ರಮೇಣ ಮಾದಕದ್ರವ್ಯ ವ್ಯಸನಿಯಾಗುತ್ತಾನೆ. ನಂತರ ಅವನ ಜೀವನದ ಹಾದಿಯೇ ಬೇರೆಯಾಗುತ್ತದೆ. ಆನಂತರ ಸ್ನೇಹದ ಸುಳಿಯಲ್ಲಿ ಸಿಲುಕುವ ನಾಯಕ ಮೊದಲಿನಂತಾಗುತ್ತಾನೆ. ಆಟದಲ್ಲಿ ಉತ್ತಮ ಹೆಸರು ಗಳಿಸುತ್ತಾನೆ. ಇದೇ ಚಿತ್ರದ ಪ್ರಮುಖ ಕಥಾವಸ್ತು. ಬರೀ ಕ್ರೀಡೆ ಅಷ್ಟೇ ಅಲ್ಲ. ಪ್ರೇಮಕಥೆಯೂ ಈ ಚಿತ್ರದಲ್ಲಿದೆ. ಇದೊಂದು ಯುವಜನತೆಯ ಮನಸ್ಸಿಗೆ ಹೇಳಿ ಮಾಡಿಸಿದ ಕಥಾವಸ್ತು ಎಂದಿದೆ ಚಿತ್ರತಂಡ.

ಊಟಿ, ಬೆಂಗಳೂರಿನಲ್ಲಿ 45 ದಿನಗಳ ಕಾಲ ಚಿತ್ರೀಕರಣ ನಡೆದಿದೆ. ಮಾಹಿ ಜಿ.ವೈ.ಕೆ ಈ ಚಿತ್ರದ ನಿರ್ದೇಶಕರು. ಇವರೇ ಕಥೆ ಚಿತ್ರಕಥೆ ಬರೆದಿದ್ದಾರೆ. ಜಗನ್ಮೋಹನ್ ಫಿಲಂಸ್ ಲಾಂಛನದಲ್ಲಿ ಜಗನ್ಮೋಹನ ರಾವ್ ಈ ಚಿತ್ರ ನಿರ್ಮಾಣ ಮಾಡಿದ್ದಾರೆ. ಕೃತಿಕಾ ಈ ಚಿತ್ರದ ಸಹ ನಿರ್ಮಾಪಕರು.

ತ್ರಿವೇಣಿ (ಟಗರು ಸರೋಜ), ಸಾರಿಕಾ, ಕಿಲ್ಲರ್ ವೆಂಕಟೇಶ್, ಅಶೋಕ್, ಶಿಲ್ಪ, ಪೂಜಾ ಈ ಚಿತ್ರದಲ್ಲಿದ್ದಾರೆ. ಐದು ಹಾಡುಗಳಿವೆ. ಎಂ.ಸಿ.ಬಿಜು, ರಾಹುಲ್ ಡಿಟೊ ಹಾಗೂ ಎಸ್ ಐ ಡಿ ಸಂಗೀತ ಸಂಯೋಜನೆ ಮಾಡಿದ್ದಾರೆ. ಪ್ರಖ್ಯಾತ್ ನಾರಾಯಣ್ ಛಾಯಾಗ್ರಹಣ, ಬಿಪಿನ್ ಪಾಲ್ ಸಾಮುಯಲ್, ವಿಷ್ಣು ಮಾನಿಕ್, ಜಾರ್ಜ್ ಸಂಕಲನ ಹಾಗೂ ನೀರ್ಜಾ ರಾಕಿಲ್ ಕಲಾ ನಿರ್ದೇಶನ ಈ ಚಿತ್ರಕ್ಕಿದೆ. ರಾಮಕೃಷ್ಣ ರಣಗಟ್ಟಿ ಸಂಭಾಷಣೆ ಬರೆದಿದ್ದಾರೆ. ❖

ಜಾಹೀರಾತು

ಪಿ ಸಿ ಓ ಡಿ

ಡಾ॥ ಶ್ರೀಕಾಂತ್ ಮೋರ್ಲಾವರ್
ಸಿಎಂಡಿ, ಹೋಮಿಯೋಕೇರ್ ಇಂಟರ್‌ನ್ಯಾಷನಲ್

ಪಿ ಸಿ ಓ ಡಿ ಈ ಕಾಲದ ಸ್ತ್ರೀಯರನ್ನು ಕಾಡುತ್ತಿರುವ ಸಮಸ್ಯೆಯಾಗಿದೆ. ಪ್ರಸ್ತುತ ಆಧುನಿಕ ಜೀವನಶೈಲಿಯಿಂದಾಗಿ ಮಾನವನ ಜೀವನದಲ್ಲಿ ಹಾಗೆಯೇ ಜೀವನ ವಿಧಾನಗಳಲ್ಲಿ, ಆಹಾರ ಪದ್ಧತಿಗಳಲ್ಲಿ ಬದಲಾವಣೆಗಳಾಗುತ್ತಿದ್ದು, ಇದು ಬಹಳಷ್ಟು ಹಾನಿಕಾರಕ ಪರಿಣಾಮವನ್ನು ಮಾನವನ ದೇಹದಲ್ಲಿ ಉಂಟುಮಾಡುತ್ತಿದೆ. ಮಹಿಳೆಯರಲ್ಲಿ ಹೆಚ್ಚಾಗಿ ಕಾಡುತ್ತಿರುವ ಸಮಸ್ಯೆಗಳಲ್ಲಿ ಪಿ ಸಿ ಓ ಡಿ ಕೂಡ ಒಂದು. ಈ ಸಮಸ್ಯೆ ಅಂದಾಜು 25 ರಿಂದ 30 ವಯಸ್ಸಿನ ಸ್ತ್ರೀಯರಲ್ಲಿ ಸಾಮನ್ಯವಾಗಿ ಕಾಣಿಸಿಕೊಳ್ಳುತ್ತದೆ. ಅನೇಕ ಸ್ತ್ರೀಯರಲ್ಲಿ ಆಹಾರ ಪದ್ಧತಿಯಲ್ಲಿ ಯಾವುದೇ ವ್ಯತ್ಯಾಸವಿಲ್ಲದಿದ್ದರು ಅಧಿಕ ತೂಕ, ಕೂದಲು ಉದುರುವಿಕೆ ಮೊಡವೆ ಗಂಡಸರಿಗೆ ಇರುವಂತೆ ಕೂದಲು ಬರುವುದು ಮೊದಲಾದ ಸಮಸ್ಯೆಗಳನ್ನು ಕಾಣಬಹುದಾಗಿದೆ.

ಕಾರಣಗಳು:

ಅಪರಿಪಕ್ವವಾದ ಅಂಡಾಣು ಗರ್ಭಾಶಯದ ಎರಡು ಬದಿಯಲ್ಲಿರುವ ಅಂಡಕೋಶದ ಮೇಲೆ ನೀರಿನ ಗುಳ್ಳೆಯಂತೆ ಇರುವುದನ್ನು ಪಿ ಸಿ ಓ ಡಿ ಎಂದು ಕರೆಯುತ್ತಾರೆ.

ಸಾಮನ್ಯವಾಗಿ ಮಹಿಳೆಯರಲ್ಲಿ 28–30 ದಿನಗಳ ಅವಧಿಗೊಮ್ಮೆ ಋತುಸ್ರಾವಾಗುತ್ತದೆ. ಮುಟ್ಟಾದ 11–14ನೇ ದಿನಗಳ ಮಧ್ಯೆ ಯಾವುದಾದರು ಅಂಡಕೋಶದಿಂದ ಅಂಡಾಣು ಬಿಡುಗಡೆಯಾಗುತ್ತದೆ. ಹೀಗೆ ಪ್ರತಿ ತಿಂಗಳು ಬಲ ಅಥವಾ ಎಡ ಅಂಡಾಶಯದಿಂದ ಒಂದು ಅಂಡಾಣು ಬಿಡುಗಡೆಯಾಗುತ್ತಿರುತ್ತದೆ ಹಾಗೂ ಗರ್ಭ ಧರಿಸಲು ಸಿದ್ದವಾಗಿರುತ್ತದೆ. ಆದರೆ ಯಾರಲ್ಲಿ ಪಿ ಸಿ ಓ ಡಿ ಸಮಸ್ಯೆ ಇರುತ್ತದೆಯೇ ಅವರಲ್ಲಿ ಅಂಡಕೋಶದಿಂದ ಬಿಡುಗಡೆಯಾಗದೇ ಅಲ್ಲಿಯೇ ಅಪರಿಪಕ್ವವಾದ ಅಂಡಾಣುಗಳು ನೀರಿನ ಗುಳ್ಳೆಯಂತೆ ಅಂಡ ಕೋಶದ ಒಳಪದರದ ಮೇಲೆ ಉಳಿದು ಹೋಗುತ್ತವೆ.

ಕಾರಣಗಳು :

- ❖ ಹಾರ್ಮೋನ್‌ಗಳ ಅಸಮತೋಲನ.
- ❖ ಸರಿಯಾದ ಜೀವನ ಶೈಲಿ ಇಲ್ಲದಿರುವುದು.
- ❖ ಅಧಿಕ ಮಾನಸಿಕ ಒತ್ತಡ .
- ❖ ಶಾರೀರಿಕ ವ್ಯಾಯಾಮದ ಕೊರತೆ.
- ❖ ಆಧುನಿಕ ಆಹಾರ ಪದ್ಧತಿ.

ಅನುವಂಶಿಕ ಕಾರಣಗಳು

- ❖ ಈ ಸಮಸ್ಯೆಗೆ ಖಚಿತವಾದ ಕಾರಣಗಳು ಇಲ್ಲಿಯವರೆಗೂ ತಿಳಿದು ಬಂದಿಲ್ಲ.
- ❖ ರಕ್ತದಲ್ಲಿ ಇನ್ಸುಲಿನ್ ಅಂಶವು ಹೆಚ್ಚಾಗಿ ಅದು ಟೆಸ್ಟೋಸ್ಟಿರಾನ್ ಅನ್ನುವ ಹಾರ್ಮೋನ್ ಅನ್ನು ಬಿಡುಗಡೆ ಮಾಡುತ್ತದೆ ಇದು ಸ್ಥೂಲ ಕಾಯಕ್ಕೆ ಕಾರಣವಾಗಿ ಪಿ ಸಿ ಓ ಡಿ ಬರುತ್ತದೆ.

ಲಕ್ಷಣಗಳು :

- ❐ ಹೆಚ್ಚಿದ ಆಂಡ್ರೋಜನ್ ಹಾರ್ಮೋನ್‌ಗಳ ಕಾರಣದಿಂದ ದೇಹದ ತೂಕದಲ್ಲಿ ಹೆಚ್ಚಳ, ಅನಿಯಮಿತ ಋತುಸ್ರಾವ ಬಂಜೆತನ ಉಂಟಾಗುತ್ತದೆ ಹಾಗೂ ಅಂಡಾಣು ಬಿಡುಗಡೆಗೆ ಅಡ್ಡಿಯಾಗಬಹುದು.
- ❐ ಮುಟ್ಟಿನ ವಿಳಂಬ, ಮುಟ್ಟಾಗದೆ ಇರುವುದು, ಅತಿ ಕಡಿಮೆ ಅಥವಾ ಯಾವಾಗಲಾದರೊಮ್ಮೆ ಅತಿಯಾದ ಋತುಸ್ರಾವ ಉಂಟಾಗಬಹುದು.
- ❐ ಬಂಜೆತನ : ಗರ್ಭಧರಿಸಲು ಸಾಧ್ಯವಾಗದಿರುವುದು.
- ❐ ಬೊಜ್ಜು ಶೇ: 80 ರಷ್ಟು ಮಹಿಳೆಯರಲ್ಲಿ ಕಾಣಿಸಿಕೊಳ್ಳಬಹುದು
- ❐ ರೋಮಗಳು ಬೆಳೆಯುವುದು, ಮುಖ, ಎದೆ, ಹೊಟ್ಟೆ ಹಾಗೂ ತೊಡೆಯ ಭಾಗಗಳಲ್ಲಿ ಅತಿಯಾಗಿ ರೋಮಗಳು ಕಾಣಿಸಿಕೊಳ್ಳುವುದು.
- ❐ ಬಹುತೇಕ ಶೇ: 70 ರಷ್ಟು ಮಹಿಳೆಯರಲ್ಲಿ ಕೂದಲುಗಳ ಬೆಳವಣಿಗೆ ವಿಭಿನ್ನವಾಗಿರುತ್ತದೆ.
- ❐ ಕೂದಲು ಉದುರುವುದು.
- ❐ ಅತಿಯಾದ ಮೊಡವೆಗಳು ಹಾಗೂ ಸಾಮಾನ್ಯ ಚಿಕಿತ್ಸೆಗೆ ಗುಣವಾಗದಿರುವುದು.
- ❐ ಮುಖದ ಮೇಲೆ ದಪ್ಪಗಿನ ಮೊಡವೆಯ ಕಲೆಗಳು ಕಪ್ಪಾದ ಚರ್ಮ.
- ❐ ಸುಸ್ತಾಗುವಿಕೆ, ಕೆಲಸದಲ್ಲಿ ಆಸಕ್ತಿ ಇಲ್ಲದಿರುವುದು.
- ❐ ಭಾವನೆಗಳ ಏರುಪೇರು, ಬೇಗ ಕೋಪ ಬರುವುದು ದೊಡ್ಡ ಗಾತ್ರದ ಅಂಡಾಶಯಗಳು ಮತ್ತು ಅಂಡಾಶಯದ ಮೇಲೆ ಹಲವಾರು ಗುಳ್ಳೆಗಳು.
- ❐ ಋತುಚಕ್ರದ ದಿನಗಳಲ್ಲಿ ಋತುಸ್ರಾವದ ದಿನಗಳಲ್ಲಿ ಅತಿ ತೀವ್ರವಾದ ನೋವು ಕಾಣಿಸಿಕೊಳ್ಳುವುದು.

ಹೋಮಿಯೋಕೇರ್ ಇಂಟರ್‌ನ್ಯಾಷನಲ್
ವರ್ಲ್ಡ್-ಕ್ಲಾಸ್ ಹೋಮಿಯೋಪತಿ

ಪರಿಣಾಮಗಳು :

- ● ಬಂಜೆತನ ಗರ್ಭಧರಿಸಲು ಸಾಧ್ಯವಾಗದಿರುವುದು.
- ● ಮಧುಮೇಹ, ಹೃದಯ ಸಂಬಂಧಿ ಕಾಯಿಲೆಗಳು.
- ● ಕೊಲೆಸ್ಟ್ರಾಲ್ ಸಮಸ್ಯೆಗಳು ಅಧಿಕ ರಕ್ತದ ಹರಿವು.
- ● ಗರ್ಭಕೋಶದ ಕ್ಯಾನ್ಸರ್
- ● ಬೊಜ್ಜು.
- ● ಎಂಡೋಮೆಟ್ರಿಯಮ್, ಕ್ಯಾನ್ಸರ್, ಖಿನ್ನತೆ, ಮನಸ್ಥಿತಿಗಳ ಬದಲಾವಣೆ ಹಗಲು ನಿದ್ರೆ, ಗೊರಕೆ ಇತ್ಯಾದಿ.

ಪತ್ತೆ ಹಚ್ಚುವ ವಿಧಾನಗಳು

- ● ಲಕ್ಷಣಗಳನ್ನು ವಿವರವಾಗಿ ತಿಳಿದುಕೊಳ್ಳುವುದರ ಮೂಲಕ
- ● ರಕ್ತ ಪರೀಕ್ಷೆ ವರದಿ
- ● ಹಾರ್ಮೋನುಗಳ ಪರೀಕ್ಷಾ ವರದಿ
- ● ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಇತ್ಯಾದಿ.

ಮುಂಜಾಗ್ರತಾ ಕ್ರಮಗಳು

- ● ಹಣ್ಣು, ತರಕಾರಿ ಹಾಗೆಯೇ ಸಂಪೂರ್ಣ ಪೋಷಕಾಂಶಗಳಿರುವ ಆಹಾರದ ಸೇವನೆ.
- ● ಅತಿ ಹೆಚ್ಚು ಸಕ್ಕರೆ ಉಪ್ಪು ಕೆಫೀನ್ ಆಲ್ಕೋಹಾಲ್ ಇರುವ ವಸ್ತುಗಳ ಸೇವನೆ ಬಿಡಬೇಕು.
- ● ಧೂಮಪಾನ ವರ್ಜ್ಯ.
- ● ನಿಯಮಿತ ಆಹಾರ ಸೇವನೆ.
- ● ಅಧಿಕ ಒತ್ತಡವನ್ನು ಕಡಿಮೆ ಒಡಿಕೊಳ್ಳುವುದು.
- ● ಸರಿಯಾದ ವ್ಯಾಯಾಮ ಮಾಡುವುದು, ಯೋಗ ಪ್ರಾಣಾಯಾಮ ಮೊದಲಾದವುಗಳನ್ನು ಮಾಡುವುದು.
- ● ತೂಕ ಕಡಿಮೆ ಮಾಡುವುದು ಅಥವಾ ನಿಯಂತ್ರಣದಲ್ಲಿಡುವುದು.
- ● ಕೊಬ್ಬಿನ ಆಹಾರ ಸೇವನೆ ಮಾಡಬಾರದು. ಇದರಿಂದ ಡಯಾಬಿಟೀಸ್, ರಕ್ತದೊತ್ತಡದಂತಹ ಸಮಸ್ಯೆಗಳನ್ನು ದೂರ ಮಾಡಬಹುದು.
- ● ನಿಯಮಿತವಾಗಿ ನಿದ್ರೆ ಹಾಗೂ ನೀರನ್ನು ಹೆಚ್ಚಿನ ಪ್ರಮಾಣದಲ್ಲಿ ಕುಡಿಯಬೇಕು. ತಕ್ಕ ಸಮಯಕ್ಕೆ ಪರೀಕ್ಷಿಸಿ ಕೊಂಡು ಅಗತ್ಯವಿರುವ ಚಿಕಿತ್ಸೆಯನ್ನು ಪಡೆದುಕೊಳ್ಳಬೇಕು.

ಹೋಮಿಯೋಕೇರ್ ಚಿಕಿತ್ಸೆ :

ಹೋಮಿಯೋಕೇರ್‌ನಲ್ಲಿ ವ್ಯಕ್ತಿಯ ಮಾನಸಿಕ ಶಾರೀರಿಕ ಪರಿಸ್ಥಿತಿಗಳನ್ನು ಕೂಲಂಕುಷವಾಗಿ ಪರೀಕ್ಷಿಸಿ ಚಿಕಿತ್ಸೆಯನ್ನು ನೀಡಲಾಗುವುದು. ಇಲ್ಲಿನ ಕಾನ್ಸ್ಟಿಟ್ಯೂಷನಲ್ ಚಿಕಿತ್ಸೆಯು ವ್ಯಕ್ತಿಯ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸಲು ಕೂಡಾ ಸಹಾಯಕಾರಿಯಾಗಿದೆ. ಇಲ್ಲಿ ರೋಗಿಯ ಹಿಂದಿನ ಚಿಕಿತ್ಸೆಯ ಬಗ್ಗೆ ವಿವರ ಕುಟುಂಬದ ಹಿನ್ನಲೆ ಹಾಗೆ ಇನ್ನಿತರ ಮಾಹಿತಿಯ ಜೊತೆಗೆ ಒಂದು ಸೂಕ್ತವಾದ ಚಿಕಿತ್ಸೆಯನ್ನು ನೀಡಲಾಗುತ್ತದೆ. ಚಿಕಿತ್ಸೆಯ ಅವಧಿ ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗಬಹುದು. ಈ ಬಗ್ಗೆ ಮಾಹಿತಿಯನ್ನು ನಮ್ಮ ಕ್ಲಿನಿಕ್‌ಗಳಲ್ಲಿ ನೀಡಲಾಗುತ್ತದೆ ಹಾಗೂ ಚಿಕಿತ್ಸೆಯ ವಿವರಗಳನ್ನು ತಿಳಿಸಲಾಗುತ್ತದೆ.

ವಿವರಗಳಿಗೆ ಹೋಮಿಯೋಕೇರ್ ಇಂಟರ್‌ನ್ಯಾಷನಲ್
ಉಚಿತ ಸಮಾಲೋಚನೆಗಾಗಿ 9550001133
Toll Free Num: 18001081212

ಶಾಖೆಗಳು: ಕರ್ನಾಟಕ: ಬೆಂಗಳೂರು (ಜಯನಗರ, ಮಲ್ಲೇಶ್ವರಂ, ಇಂದಿರಾನಗರ, ಎಚ್‌ಎಸ್‌ಆರ್ ಲೇಔಟ್), ಮೈಸೂರು, ಹುಬ್ಬಳ್ಳಿ, ಮಂಗಳೂರು, ಬಳ್ಳಾರಿ, ದಾವಣಗೆರೆ, ಬೆಳಗಾವಿ, ಬಿಜಾಪುರ, ಬೀದರ್, ಗುಲ್ಬರ್ಗ, ಶಿವಮೊಗ್ಗ, ತುಮಕೂರು, ಹಾಸನ.
ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಪುದುಚೆರಿ

ಉಡುಪಿನ ಮೇಲೆ ಹಣ್ಣು, ತರಕಾರಿ ವಿನ್ಯಾಸ

ಗೋಪಿ

ಚಿಣ್ಣರು ಬಣ್ಣ ಬಣ್ಣದ ಫ್ರಾಕ್, ಅಂಗಿ- ಚೆಡ್ಡಿ ಧರಿಸಿ ಓಡಾಡುವಾಗ ಅವರನ್ನು ನೋಡುವುದಕ್ಕೆ ಎರಡು ಕಂಗಳು ಸಾಲವು. ಆ ಉಡುಪಿನ ಮೇಲೆ ಹಣ್ಣು, ತರಕಾರಿಗಳ ವಿನ್ಯಾಸವಿದ್ದರಂತೂ ಆ ಪುಟಾಣಿಗಳೂ ಪದೆ ಪದೆ ತಮ್ಮ ಉಡುಪನ್ನು ನೋಡಿಕೊಂಡು ಖುಷಿಪಡುತ್ತವೆ; ಅದೇ ಅಂಗಿಯನ್ನು ತೊಡಿಸಬೇಕೆಂದು ಹಟವನ್ನೂ ಹಿಡಿಯುತ್ತವೆ. ಇಂತಹ ಹಣ್ಣು- ತರಕಾರಿ ಚಿತ್ರಗಳಿರುವ ಉಡುಪನ್ನು ಈಗ ದೊಡ್ಡವರೂ ಧರಿಸುವುದು ಟ್ರೆಂಡ್ ಆಗಿದೆ.

ಮನೆಯಲ್ಲಿ ಧರಿಸುವ ಪೈಜಾಮ, ನೈಟ್‌ಗೌನ್ ಮೇಲೆ ಇಂತಹ ವಿನ್ಯಾಸಗಳಿರುವುದು ಅಪರೂಪವೇನಲ್ಲ. ಆದರೆ ಈ ರೀತಿಯ ಆಕರ್ಷಕ ಹಣ್ಣುಗಳ- ತರಕಾರಿಗಳ ಚಿತ್ರಗಳಿರುವ ಶರ್ಟ್, ಟೀ ಶರ್ಟ್, ಜಂಪ್‌ಸ್ಯೂಟ್, ಸ್ಕರ್ಟ್, ಟಾಪ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಆನ್‌ಲೈನ್‌ನಲ್ಲೂ ಬೇಕಾದಷ್ಟು ಉಡುಪುಗಳು ಲಭ್ಯ.

‘ಆರಂಭದಲ್ಲಿ ಇಂತಹ ವಿನ್ಯಾಸಗಳಿರುವ ಉಡುಪು ಧರಿಸಿ ಹೊರಟರೆ ಹಲವರ ಹಾಸ್ಯಭರಿತ ನೋಟ ಎದುರಿಸಿದ್ದೇನೆ’ ಎನ್ನುತ್ತಾಳೆ ಸ್ನಾತಕೋತ್ತರ ಪದವಿ ಓದುತ್ತಿರುವ ಯುವತಿ ಕೃತಿ. ಬದನೆಕಾಯಿ ಚಿತ್ರವಿರುವ ಟಾಪ್ ಧರಿಸಿ ಹೊರಗೆ ಹೋದಾಗ ಹಲವರು ಹಿಂದಿರುಗಿ ನೋಡಿ ನಕ್ಕಿದ್ದರು ಎನ್ನುವ ಆಕೆ, ಈಗ ಯಾವುದೇ ಮುಜುಗರವಿಲ್ಲದೇ ಧರಿಸಿ ಓಡಾಡುವುದಾಗಿ ಹೇಳುತ್ತಾಳೆ.

ಚಿಣ್ಣರ ಉಡುಪಿನ ಮೇಲೆ ಬೊಂಬೆಗಳು, ಹೂವಿನ ಚಿತ್ತಾರವಿರುವುದು ಸಾಮಾನ್ಯ. ಇದರೊಂದಿಗೆ ಅವರ ಡ್ರೆಸ್‌ನ ಮೇಲೆ ತರಕಾರಿ, ಹಣ್ಣುಗಳು ಮೂಡುತ್ತಿವೆ. ಈ ಟ್ರೆಂಡ್ ಅನ್ನು ಈಗ ದೊಡ್ಡವರ ಉಡುಪಿನಲ್ಲೂ ಕಾಣಬಹುದು. ಹಣ್ಣುಗಳ- ತರಕಾರಿಗಳ ಚಿತ್ರಗಳಿರುವ ಶರ್ಟ್, ಟೀ ಶರ್ಟ್, ಜಂಪ್‌ಸ್ಯೂಟ್, ಸ್ಕರ್ಟ್, ಟಾಪ್‌ಗಳು ಫ್ಯಾಷನ್ ಮಾರುಕಟ್ಟೆಯನ್ನು ಅಲಂಕರಿಸಿವೆ.

ಬಾಳೆಹಣ್ಣು, ಸೇಬು, ಕಿತ್ತಳೆ, ಒಡೆದ ಮೊಟ್ಟೆ, ಮೀನು, ಅಣಬೆ ಮೊದಲಾದ ಪ್ರಿಂಟ್ ಇರುವ ಉಡುಪುಗಳು ಆಹಾರಪ್ರಿಯರನ್ನು ಆಕರ್ಷಿಸುತ್ತಿವೆ. ಇಂತಹ ವಿನ್ಯಾಸಗಳನ್ನು ಭಾರತೀಯ ವಿನ್ಯಾಸಗಾರರು ಸೀರೆಗಳಂತಹ ಸಾಂಪ್ರದಾಯಿಕ ಉಡುಪಿನ ಮೇಲೂ ಮೂಡಿಸುತ್ತಿದ್ದಾರೆ. ಕಾಟನ್ ಹಾಗೂ ಲಿನನ್ ಸೀರೆಗಳ ಮೇಲೆ ಮೀನಿನ ವಿನ್ಯಾಸದಲ್ಲಿ ಕಸೂತಿ ಮಾಡುವ ಟ್ರೆಂಡ್ ಜಾಸ್ತಿಯಾಗಿದೆ. ಹಾಗೆಯೇ ತರಕಾರಿಗಳ ಪ್ರಿಂಟ್‌ಗಳನ್ನು ಮಾಡಿದ ಬಟ್ಟೆ ಕೂಡ ಲಭ್ಯ. ಡಿಸೈನರ್ ರವಿಕೆಯ ಬೆನ್ನಿನ ಭಾಗದಲ್ಲೂ ಒಂದು ಹಣ್ಣಿನ ಅಥವಾ ತರಕಾರಿಯ ವಿನ್ಯಾಸ ಮೂಡಿಸುವುದು ಹೆಚ್ಚಾಗಿದೆ. ಇಂತಹ ರವಿಕೆಗಳ ಖರೀದಿಗೆ ಆನ್‌ಲೈನ್‌ನಲ್ಲಿ ಹೆಚ್ಚು ಬೇಡಿಕೆಯಿದೆ.

ಈ ಫ್ಯಾಷನ್ ವಿಷಯದಲ್ಲಿ ಪುರುಷರೇನೂ ಕಮ್ಮಿಯಿಲ್ಲ. ಈಗಾಗಲೇ ಹಣ್ಣು, ತರಕಾರಿ ವಿನ್ಯಾಸವಿರುವ ಟೀ ಶರ್ಟ್‌ಗಳು ಮಳಿಗೆಯಲ್ಲಿ ಲಭ್ಯ. ಅವುಗಳ ಜೊತೆಗೆ ಇತ್ತೀಚೆಗೆ ಈ ವಿನ್ಯಾಸವಿರುವ ಶರ್ಟ್‌ಗಳೂ ಬಂದಿವೆ.

ಯಾರು ಯಾವ ರೀತಿಯ ಹಣ್ಣು, ತರಕಾರಿ ಅಥವಾ ಮಾಂಸಾಹಾರ ಇಷ್ಟಪಡುತ್ತಾರೆ ಎಂಬುದನ್ನು ಅವರು ಧರಿಸಿದ ಉಡುಪುಗಳ ವಿನ್ಯಾಸದ ಮೇಲೇ ಕಂಡು ಹಿಡಿಯಬಹುದು. ಮೊದಲು ಹೂವು, ಬಳ್ಳಿಯ ವಿನ್ಯಾಸ ಹೆಚ್ಚಾಗಿ ಕಂಡುಬರುತ್ತಿತ್ತು, ಈಗೇನಿದ್ದರೂ ಕಾಯಿ, ಹಣ್ಣುಗಳ ಕಾಲ. ❖

ತ್ವಚೆಯ ಅಂದಕ್ಕೆ ಡರ್ಮಾ ರೋಲರ್

ಮನಸ್ವಿ

ಹೆಣ್ಣುಮಕ್ಕಳಿಗೆ ತಮ್ಮ ಸೌಂದರ್ಯದ ಮೇಲೆ ಅಪರಿಮಿತ ಕಾಳಜಿ. ತಮ್ಮ ತ್ವಚೆಯ ಅಂದವನ್ನು ಕಾಪಾಡಿಕೊಳ್ಳುವ ಸಲುವಾಗಿ ಅವರು ಹಲವು ಮಾರ್ಗಗಳನ್ನು ಅನುಸರಿಸುತ್ತಾರೆ. ಚರ್ಮದ ಕಾಂತಿ ಹೆಚ್ಚಿಸಿಕೊಳ್ಳುವ ಸಲುವಾಗಿ ಗೂಗಲ್, ಯೂಟ್ಯೂಬ್ ಮೊರೆ ಹೋಗಿ ಅಲ್ಲಿ ನೀಡುವ ವಿಧಾನವನ್ನು ಅನುಸರಿಸುತ್ತಾರೆ. ಇದರೊಂದಿಗೆ ಇತ್ತೀಚೆಗೆ ಹೆಣ್ಣುಮಕ್ಕಳ ಅಂದವನ್ನು ಹೆಚ್ಚಿಸುವ ಸಲುವಾಗಿ ಕೆಲವು ಉಪಕರಣಗಳೂ ಮಾರುಕಟ್ಟೆಯಲ್ಲಿ ಲಭ್ಯವಿವೆ. ಈ ಸಾಧನಗಳನ್ನು ಸರಿಯಾದ ಕ್ರಮದಲ್ಲಿ ಅನುಸರಿಸುವ ಮೂಲಕ ತ್ವಚೆ ಸದಾ ಕಾಂತಿಯುತವಾಗಿ ಹೊಳೆಯುವಂತೆ ಮಾಡಿಕೊಳ್ಳಬಹುದು. ಅಂತಹ ಉಪಕರಣಗಳಲ್ಲಿ ಡರ್ಮಾ ರೋಲರ್ ಕೂಡ ಒಂದು.

ಡರ್ಮಾ ರೋಲರ್ ಎಂದರೇನು?

ಸೌಂದರ್ಯವರ್ಧಕ ಸಾಧನಗಳಿಗೆ ಆನ್‌ಲೈನ್ ತಡಕಾಡುವಾಗ ಡರ್ಮಾ ರೋಲರ್ ಅನ್ನು ಕೂಡ ನೋಡಿರಬಹುದು. ಹಾಗಾದ್ರೆ ಡರ್ಮಾ ರೋಲರ್ ಎಂದರೇನು, ಇದರ ಬಳಕೆ ಹೇಗೆ ಎಂಬ ಬಗ್ಗೆ ನಿಮ್ಮಲ್ಲಿ ಪ್ರಶ್ನೆ ಮೂಡಿರಬಹುದು. ಡರ್ಮಾ ರೋಲರ್ ಎಂದರೆ ಕೈಯಲ್ಲಿ ಹಿಡಿದುಕೊಳ್ಳಬಹುದಾದ ಒಂದು ಚಿಕ್ಕ ಸಾಧನ. ಇದು ರೋಲರ್ ಅನ್ನು ಹೊಂದಿದ್ದು ರೋಲರ್‌ನಲ್ಲಿ ಸಣ್ಣ ಸಣ್ಣ ಮುಳ್ಳುಗಳಿರುತ್ತವೆ. ಈ ಸಾಧನದಿಂದ ಹಲವು ಉಪಯೋಗಗಳಿವೆ. ಅದರಲ್ಲಿ ಪ್ರಮುಖವಾದುದು ಪಿಗ್ಮಂಟೇಷನ್ ಸಮಸ್ಯೆ ನಿವಾರಣೆ. ಇದರ ಬಳಕೆಯಿಂದ ಪಿಗ್ಮಂಟೇಷನ್ ನಿವಾರಣೆಯಾಗುವುದಲ್ಲದೇ ಮುಖದ ತ್ವಚೆಯ ಕಾಂತಿಯೂ ಹೆಚ್ಚುತ್ತದೆ.

ಹಲವರು ಡರ್ಮಾ ರೋಲರ್ ಸಹಾಯದಿಂದ ಚರ್ಮದಲ್ಲಿ ಮೂಡುವ ನೆರಿಗೆಗಳು, ಮೊಡವೆ ಕಲೆಗಳು ಹಾಗೂ ಹೈಪರ್ ಪಿಗ್ಮೆಂಟೇಶನ್ ನಿವಾರಣೆಗೆ ಬಳಸುತ್ತಾರೆ. ಆದರೆ ಅವರು ನಿರೀಕ್ಷಿಸಿದ ರೀತಿಯಲ್ಲಿ ಫಲಿತಾಂಶ ಸಿಗದೇ ಇರಬಹುದು. ಅವರು ರೋಲರ್ ಅನ್ನು ಸರಿಯಾದ ಕ್ರಮದಲ್ಲಿ ಬಳಸದೇ ಇರುವುದು ಇದಕ್ಕೆ ಕಾರಣವಿರಬಹುದು. ರೋಲರ್ ಬಳಕೆಯಿಂದ ಉತ್ತಮ ಫಲಿತಾಂಶ ನಿರೀಕ್ಷಿಸಲು ಅದನ್ನು ಸರಿಯಾಗಿ ಬಳಸುವ ಕ್ರಮವನ್ನು ತಿಳಿದುಕೊಂಡಿರಬೇಕು.

ಬಳಕೆ ಹಾಗೂ ಉಪಯೋಗ

- ಡರ್ಮಾ ರೋಲರ್ ತೆಗೆದುಕೊಂಡು ಕೆನ್ನೆ, ತುಟಿ, ಗಲ್ಲ, ಹಣೆ ಹಾಗೂ ಕುತ್ತಿಗೆಯ ಮೇಲೆ ಉದ್ದಕ್ಕೆ, ಅಡ್ಡವಾಗಿ ನಿಧಾನಕ್ಕೆ ಸುತ್ತುವರಿಸಬೇಕು. ಇದನ್ನು ರಭಸವಾಗಿ ಮಾಡಬಾರದು.
- ಈ ರೋಲರ್ ಬಳಕೆಯನ್ನು ನಿಯಮಿತವಾಗಿ ಮಾಡುವುದರಿಂದ ಉತ್ತಮ ಫಲಿತಾಂಶ ನಿರೀಕ್ಷಿಸಬಹುದು.
- ಮುಖಕ್ಕೆ ರಾಸಾಯನಿಕ ಅಂಶ ರಹಿತ ಕ್ರೀಮ್ ಹಚ್ಚಿಕೊಂಡು ನಂತರ ರೋಲರ್ ಸಹಾಯದಿಂದ ರೋಲ್ ಮಾಡುವುದರಿಂದ ಒಣಚರ್ಮ ನಿವಾರಣೆಯಾಗುತ್ತದೆ. ಇದರಿಂದ ಚರ್ಮದಲ್ಲಿನ ಕಲ್ಮಶಗಳು ಸ್ವಚ್ಛವಾಗುತ್ತವೆ.
- ಇದನ್ನು ಮುಖದ ಚರ್ಮದಲ್ಲಿ ಬಳಸುವುದರಿಂದ ರಕ್ತ ಸಂಚಾರವು ಸುಗಮವಾಗಿ ಕಾಂತಿ ಹೆಚ್ಚುತ್ತದೆ.

ಕೂದಲಿನ ಅಂದಕ್ಕೂ

ಡರ್ಮಾ ರೋಲರ್‌ಗಳನ್ನು ಕೂದಲಿಗೂ ಬಳಸಬಹುದು. ಇದನ್ನು ನೆತ್ತಿಯ ಮೇಲೆ ಇಟ್ಟು ತಿರುಗಿಸುವುದರಿಂದ ಕೂದಲಿನ ಕಿರುಚೀಲಗಳಿವೆ ಎಣ್ಣೆಯ ಅಂಶ ನೇರವಾಗಿ ತಾಗಲು ಸಹಾಯವಾಗುತ್ತದೆ. ಜೊತೆಗೆ ಸೂರ್ಯನ ಬೆಳಕು, ಜಲಸಂಚಯನ ಹಾಗೂ ಪೋಷಕಾಂಶಗಳು ಸುಲಭವಾಗಿ ಬೇರನ್ನು ತಲುಪಲು ಸಹಾಯ ಮಾಡುತ್ತದೆ. ❖

ಮನೆಯಲ್ಲೇ ತಯಾರಿಸಬಹುದು ರುಚಿಕರ ಸಾಸ್

ಆಹಾರ

ಸಾಸ್ ಯಾರಿಗೆ ತಾನೇ ಪ್ರಿಯವಲ್ಲ ಹೇಳಿ! ಆದರೆ ಅಂಗಡಿ, ಸೂಪರ್ ಬಾಝಾರ್‌ನಲ್ಲಿ ಶೆಲ್ಫ್‌ನಲ್ಲಿ ಜೋಡಿಸಿಟ್ಟಿರುವ ಸಾಸ್ ಬಾಟಲ್, ಜಾರ್‌ಗಳನ್ನು ಖರೀದಿಸುವಾಗ ಹಲವರು ಅದರಲ್ಲಿ ಬಳಸಿರುವ ಪದಾರ್ಥಗಳ ಮೇಲೆ ಗಮನವಿಟ್ಟು ನೋಡುವ ದೃಶ್ಯ ಸಾಮಾನ್ಯ. ಇದಕ್ಕೆ ಕಾರಣ ಅದಕ್ಕೆ ಸೇರಿಸಿರುವ ಸಕ್ಕರೆ ಪ್ರಮಾಣ. ಜೊತೆಗೆ ಕೆಲವೊಮ್ಮೆ ಕೊಬ್ಬಿರುವ ಎಣ್ಣೆ ಹೆಚ್ಚಿನ ಪ್ರಮಾಣದಲ್ಲಿರುತ್ತದೆ. ಇದು ನಿಮ್ಮ ದೇಹಕ್ಕೆ ಹೆಚ್ಚುವರಿ ಕೊಬ್ಬನ್ನು ಸೇರಿಸುವುದಲ್ಲದೇ, ಅನಾರೋಗ್ಯಕ್ಕೆ ದಾರಿ ಮಾಡಿಕೊಡುತ್ತದೆ. ಹೀಗಾಗಿ, ಈ ಸಕ್ಕರೆರಹಿತ, ಕೊಬ್ಬುರಹಿತ ಸಾಸ್ ಅನ್ನು ನೀವೇ ಮನೆಯಲ್ಲಿ ತಯಾರಿಸಿಕೊಂಡು ಆಸ್ವಾದಿಸಬಹುದು. ಅದು ಹೇಗೆ ಎನ್ನುತ್ತೀರಾ? ಕೇವಲ ಮೂರೇ ಮೂರು ಪದಾರ್ಥಗಳು- ಟೊಮೆಟೊ, ಈರುಳ್ಳಿ ಮತ್ತು ಬೆಳ್ಳುಳ್ಳಿ. ಇವನ್ನೇ ಬಳಸಿ ಪರಿಮಳ ಬೀರುವ, ಆರೋಗ್ಯಕರ ಸಾಸ್ ಅನ್ನು ತಯಾರಿಸಬಹುದು.

ಮನೆಯಲ್ಲಿ ತಯಾರಿಸಿದ ಸಾಸ್ ಅಪ್ಪಟ ವೇಗಾನ್, ಜೊತೆಗೆ ರುಚಿಕರ ಕೂಡ. ತಾಜಾ ಆಗಿರುವುದರಿಂದ ನೀವು ಖಂಡಿತ ಇದನ್ನು ಆಸ್ವಾದಿಸುತ್ತೀರಾ.

ಮೊದಲು ಪ್ಯಾನ್ ಅನ್ನು ಸ್ಟವ್ ಮೇಲಿಡಿ. ಉರಿ ಕಡಿಮೆ ಇರಲಿ. ಬಿಸಿಯಾದಾಗ ಹೆಚ್ಚಿದ ಎರಡು ಈರುಳ್ಳಿ ಹಾಕಿ ಕೈಯಾಡಿಸಿ. ಬೇಕಿದ್ದರೆ ನಿಮಗಿಷ್ಟವಾದ ಅಡುಗೆ ಎಣ್ಣೆಯನ್ನು ಸ್ವಲ್ಪ ಸೇರಿಸಿ. ನಂತರ ಒಂದು ಗೆಡ್ಡೆ ಸುಲಿದ ಬೆಳ್ಳುಳ್ಳಿ ಸೇರಿಸಿ, ಕಂದು ಬಣ್ಣ ಬರುವವರೆಗೆ ಹುರಿಯಿರಿ. ಸುಮಾರು ಐದು ನಿಮಿಷಗಳ ಕಾಲ ಹುರಿದ ನಂತರ ಸಣ್ಣಗೆ ಹೆಚ್ಚಿದ ನಾಲ್ಕು ಟೊಮೆಟೊ ಸೇರಿಸಿ. 15- 20 ನಿಮಿಷಗಳ ಕಾಲ ಬೇಯಿಸಿ. ಆಗಾಗ ತಿರುವಿ ಹಾಕಿ. ಇದಕ್ಕೆ ರುಚಿಗೆ ತಕ್ಕಷ್ಟು ಉಪ್ಪು, ಮೆಣಸಿನ ಪುಡಿ ಒಂದು ಚಮಚ ಸೇರಿಸಿ.

ಈಗ ಸುಮಾರು ಎರಡು ಕಪ್ ಟೊಮೆಟೊ ಸಾಸ್ ಸಿದ್ಧ.

ನಿಮಗೆ ಬೇಕಾದಂತೆ ಸಾಸ್ ತಯಾರಿಸುವ ಕೆಲವು ವಿಧಾನಗಳು ಅತ್ಯಂತ ಸುಲಭ ಕೂಡ. ತಾಜಾ ಟೊಮೆಟೊವನ್ನು ಜಜ್ಜಿದ ನಂತರ ಸೇರಿಸಿದರೆ ಚೆನ್ನಾಗಿ ಮಿಶ್ರಣವಾಗುತ್ತದೆ. ಇದಕ್ಕೆ ಕಾಳು ಮೆಣಸಿನ ಪುಡಿ, ಒಣಮೆಣಸಿನಕಾಯಿ ಫ್ಲೇಕ್ಸ್ ಕೂಡ ಸೇರಿಸಬಹುದು. ತಾಜಾ ಅಥವಾ ಒಣಗಿದ ಬೇಸಿಲ್ ಎಲೆ, ಒರೆಗಾನೊ ಕೂಡ ಸೇರಿಸಬಹುದು. ಎಣ್ಣೆಯ ಬದಲು ಬೆಣ್ಣೆ ಹಾಕಬಹುದು. ಹಾಗೆಯೇ ತುರಿದ ಚೀಸ್, ಕ್ರೀಮ್, ತುರಿದ ಕ್ಯಾರೆಟ್, ಅಣಬೆ ಹಾಕಿ ಹೊಸ ರುಚಿ ನೋಡಬಹುದು.

ಸಣ್ಣ ಉರಿಯಲ್ಲಿ ನಿಧಾನವಾಗಿ ಬೇಯಿಸಿದರೆ ಮಂದವಾದ ಸಾಸ್ ತಯಾರಿಸಬಹುದು.

ಇನ್ನು ಈ ಸಾಸ್ ಅನ್ನು 4-5 ದಿನಗಳ ಕಾಲ ಹೊರಗಡೆ ಇಟ್ಟರೂ ಕೆಡುವುದಿಲ್ಲ. ಫ್ರಿಜ್‌ನಲ್ಲಿಟ್ಟರೆ ಆರು ತಿಂಗಳ ಕಾಲ ರುಚಿ ಕೆಡದೆ ಹಾಗೇ ಇರುತ್ತದೆ. ಸಾಸ್ ಪೂರ್ತಿ ತಣ್ಣಗಾದ ನಂತರ ಬಾಟಲ್‌ಗೆ ಸೇರಿಸುವುದನ್ನು ಮರೆಯಬೇಡಿ. ❖

ಸಾಮಾಜಿಕ ತಾಣದಲ್ಲಿ ಚರ್ಚೆಗೆ ಗ್ರಾಸವಾದ ಸುಹಾನಾ ಫೋಟೊ!

ಬಾಲಿವುಡ್

ಬಾಲಿವುಡ್‌ನ ಜನಪ್ರಿಯ ನಟ ಶಾರುಖ್ ಖಾನ್ ಅವರ ಮಗಳು ಸುಹಾನಾ ಖಾನ್ ಚಿತ್ರರಂಗ ಪ್ರವೇಶಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ.

ಬಾಲಿವುಡ್‌ನ ಮುಂದಿನ ಪೀಳಿಗೆ ಎಂದು ಕರೆಸಿಕೊಳ್ಳುತ್ತಿರುವ ತಂಡದಲ್ಲಿ ಸುಹಾನಾ ಖಾನ್ ಕೂಡ ಇದ್ದು, ಸೂಕ್ತ ವೇದಿಕೆಯ ಮೂಲಕ ಶಾರುಖ್ ಖಾನ್ ಅವರನ್ನು ಬಾಲಿವುಡ್‌ಗೆ ಪರಿಚಯಿಸಲಿದ್ದಾರೆ ಎಂಬ ಮಾತುಗಳು ಬಿ-ಟೌನ್‌ನಲ್ಲಿ ಕೇಳಿಬಂದಿದೆ.

ಈ ಮಧ್ಯೆ, ಸುಹಾನಾ ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಪೋಸ್ಟ್ ಮಾಡಿರುವ ಫೋಟೊ ಮತ್ತು ಅದರಲ್ಲಿ ಬಳಸಿರುವ ಎಮೋಜಿ ಒಂದು ಚರ್ಚೆಗೆ ಗ್ರಾಸವಾಗಿದೆ.

ಸುಹಾನಾ ತಾಯಿ ಗೌರಿ ಖಾನ್ ಕ್ಲಿಕ್ ಮಾಡಿರುವ ಫೋಟೊ ಇದಾಗಿದ್ದು, ಅದರ ಅಡಿಬರಹದಲ್ಲಿ ಸುಹಾನಾ ಕೋಪದ ಎಮೋಜಿ ಬಳಸಿ ಪೋಸ್ಟ್ ಮಾಡಿದ್ದಾರೆ.

ಸುಹಾನಾ ಖಾನ್‌ಗೆ ಇನ್‌ಸ್ಟಾಗ್ರಾಂನಲ್ಲಿ 20 ಲಕ್ಷಕ್ಕೂ ಅಧಿಕ ಫಾಲೋವರ್ಸ್ ಇದ್ದಾರೆ. ಜತೆಗೆ ಅವರ ಅಭಿಮಾನಿಗಳು ಕೂಡ ಸುಹಾನಾ ಫೋಟೊವನ್ನು ಇಷ್ಟಪಟ್ಟಿದ್ದಾರೆ. ❖

ಪ್ರಜಾವಾಣಿ ವಾರೆವ್ಹಾ ವಾರಾಂತ್ಯ

ಸೂಪರ್ ಬ್ರ್ಯಾಂಡ್‌ಗಳ ಬಂಪರ್ ಕೊಡುಗೆಗಳು ಇದೀಗ ನಿಮಗಾಗಿ!

ಇನ್ನಷ್ಟು ಆಕರ್ಷಕ ಕೊಡುಗೆಗಳಿಗೆ ಇಲ್ಲಿ ಸ್ಕ್ಯಾನ್ ಮಾಡಿ

ಕೂಪನ್ ಪಾರ್ಟನರ್: COUPON DUNIA

200ಕ್ಕೂ ಹೆಚ್ಚು ಕೊಡುಗೆಗಳು

Oven Story: ₹249ಗಿಂತ ಹೆಚ್ಚಿನ ಆರ್ಡರ್ ಮೇಲೆ ₹125 ರಿಯಾಯಿತಿ
Faasos: ₹199ಗಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ 40% ವರೆಗೆ ರಿಯಾಯಿತಿ
Bewakoof: ಕನಿಷ್ಠ ₹449ರ ಖರೀದಿಗೆ 15% ರಿಯಾಯಿತಿ
HEALTHKART: ₹1899 ಮತ್ತು ಅದಕ್ಕಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ ಫ್ಲಾಟ್ ₹200 ರಿಯಾಯಿತಿ
McDelivery: ₹100 ಕ್ಕಿಂತ ಹೆಚ್ಚಿನ ಆರ್ಡರ್‌ಗಳ ಮೇಲೆ ಚಿಕ್ಕ ಫ್ರೈಸ್ ಉಚಿತ
Domino's Pizza: ಪಿಜ್ಜಾ ಆರ್ಡರ್‌ಗಳ ಮೇಲೆ 50%ವರೆಗೆ ರಿಯಾಯಿತಿ
udemy: ಹೊಸ ಬಳಕೆದಾರರಿಗೆ ಕೋರ್ಸ್‌ಗಳ ಮೇಲೆ 75%ವರೆಗೆ ರಿಯಾಯಿತಿ
MUSCLEBLAZE: ಮಸಲ್ ಬ್ಲೇಜ್ ವೇ ಪ್ರೋಟೀನ್ ಮೇಲೆ 30%ವರೆಗೆ ರಿಯಾಯಿತಿ
OYO: ಎಲ್ಲಾ ಓಯೋ ಪ್ರಾಪರ್ಟಿಗಳ ಮೇಲೆ 60% ರಿಯಾಯಿತಿ ಮತ್ತು 30% ಓಯೋ ಮನಿ ವಾಪಸ್ ಪಡೆಯಿರಿ
goibibo: ಸ್ಥಳೀಯ ವಿಮಾನಗಳಲ್ಲಿ ₹1500 ವರೆಗೆ ರಿಯಾಯಿತಿ
THE MAN COMPANY: ವೆಬ್‌ಸೈಟ್‌ನಲ್ಲಿ 20% ರಿಯಾಯಿತಿ
rapido BIKE TAXI: ಹೊಸ ಬಳಕೆದಾರರಿಗೆ ಬೈಕ್ ಟ್ಯಾಕ್ಸಿಗಳ ಮೇಲೆ ಫ್ಲಾಟ್ ₹25 ರಿಯಾಯಿತಿ

* ಷರತ್ತುಗಳು ಅನ್ವಯ